# ಮುನ್ನುಡಿ

ಈ ಮ್ಯಾನುವಲ್ ನಿಮ್ಮ ವಾಹನದ ಒಂದು ಅತೀ ಮುಖ್ಯ ಭಾಗವಾಗಿದೆ ಮತ್ತು ವಾಹನವನ್ನು ಮರುಮಾರಾಟ ಮಾಡುವಾಗ ಅಥವಾ ಹೊಸ ಮಾಲೀಕ ಅಥವಾ ಚಾಲಕನಿಗೆ ವರ್ಗಾಯಿಸುವಾಗ ಅದರಲ್ಲಿರಬೇಕು. ದಯವಿಟ್ಟು ನಿಮ್ಮ ಹೊಸ ಮಾರುತಿ ಸುಜುಕಿಯನ್ನು ಚಲಾಯಿಸುವ ಮೊದಲು ಈ ಮ್ಯಾನುವಲ್ ಅನ್ನು ಜಾಗರೂಕವಾಗಿ ಓದಿ. ಆಗಾಗ ಮ್ಯಾನುವಲ್ ಅನ್ನು ಮರಳಿ ಓದಿ. ಸುರಕ್ಷೆ, ಚಾಲನೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನು ಇದು ಹೊಂದಿದೆ. ಮ್ಯಾನುವಲ್ ನಲ್ಲಿ ವಿವರಿಸಿರುವಂತೆ ನಾಲ್ಕು ಉಚಿತ ತಪಾಸಣಾ ಸರ್ವಿಸ್ ಗಳನ್ನು ಪಡೆಯಲು ನಿಮಗೆ ಆಹ್ವಾನವಿದೆ. ನಾಲ್ಕು ಉಚಿತ ತಪಾಸಣಾ ಕೂಪನ್ ಗಳನ್ನು ಈ ಮ್ಯಾನುವಲ್ ಗೆ ಜೋಡಿಸಲಾಗಿದೆ. ನೀವು ನಿಮ್ಮ ಮಾರುತಿ ಸುಜುಕಿಯನ್ನು ಯಾವುದೇ ಸರ್ವಿಸ್ ಗಾಗಿ ತೆಗೆದುಕೊಂಡು ಹೋದಾಗ ದಯವಿಟ್ಟು ಈ ಮ್ಯಾನುವಲ್ ಅನ್ನು ನಿಮ್ಮ ಡೀಲರ್ ಗೆ ತೋರಿಸಿ.

ನಿಮ್ಮ ವಾಹನದ ಬಾಳ್ವಿಕೆಯನ್ನು ಧೀರ್ಘಗೊಳಿಸಲು ಮತ್ತು ನಿರ್ವಹಣಾ ವೆಚ್ಚವನ್ನು ಕಡಿತಗೊಳಿಸಲು, ಕಾಲ ಕಾಲಕ್ಕೆ ನಿರ್ವಹಣೆಯನ್ನು “ಕಾಲಕಾಲದ ನಿರ್ವಹಣಾ ವೇಳಾಪಟ್ಟಿ”ಗೆ ಅನುಗುಣವಾಗಿ ಈ ಮ್ಯಾನುವಲ್ ನ “ತಪಾಸಣಾ ಮತ್ತು ನಿರ್ವಹಣಾ” ವಿಭಾಗದಲ್ಲಿ ವಿವರಿಸಿದಂತೆ ನಡೆಸಬೇಕು. ನಿಮ್ಮ ತೃಪ್ತಿ ಮತ್ತು ಸುರಕ್ಷೆಗಾಗಿ ಸಮಸ್ಯೆ ಮತ್ತು ಅವಘಡಗಳನ್ನು ತಡೆಯುವುದು ಅತ್ಯಗತ್ಯ.

ನಿತ್ಯದ ತಪಾಸಣೆ ಮತ್ತು ಆರೈಕೆಯನ್ನು “ನಿತ್ಯ ತಪಾಸಣಾ ಪರಿಶೀಲನಾ ಪಟ್ಟಿ”ಗೆ ತಕ್ಕಂತೆ ಈ ಮ್ಯಾನುವಲ್ ನ “ತಪಾಸಣಾ ಮತ್ತು ನಿರ್ವಹಣಾ” ವಿಭಾಗದಲ್ಲಿ ವಿವರಿಸಿದಂತೆ ನಡೆಸಬೇಕು. ವಾಹನದ ಧೀರ್ಘ ಬಾಳಿಕೆ ಮತ್ತು ಸುರಕ್ಷಿತ ಚಾಲನೆಗೆ ಇದು ಅತ್ಯಗತ್ಯ.

ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ಭೂಮಿಯ ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ವಿಶ್ವಾಸ ಹೊಂದಿದೆ.

ಅಂತಿಮವಾಗಿ, ಪ್ರತೀ ವಾಹನದ ಮಾಲೀಕನೂ ಬಳಸಿದ ಇಂಜಿನ್ ಆಯಿಲ್, ಕೂಲಂಟ್ ಮತ್ತು ಇತರ ಫ್ಲೂಯಿಡ್ ಗಳು, ಬ್ಯಾಟರಿಗಳು ಮತ್ತು ಟೈರ್ ಗಳು ಇತ್ಯಾದಿಗಳನ್ನು ನವೀಕರಿಸುವುದು, ಮಾರಾಟ ಮಾಡುವುದು ಅಥವಾ ಸರಿಯಾಗಿ, ಸೂಕ್ತವೆನಿಸಿದಂತೆ ವಿಲೇವಾರಿ ಮಾಡಬೇಕು ಎಂದು ಪ್ರೋತ್ಸಾಹಿಸುತ್ತೇವೆ.

**ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್**

ಈ ಮ್ಯಾನುವಲ್ ನಲ್ಲಿರುವ ಎಲ್ಲಾ ಮಾಹಿತಿಗಳು ಪ್ರಕಟಣೆಯ ಸಂದರ್ಭದಲ್ಲಿ ಲಭ್ಯವಿರುವ ಇತ್ತೀಚೆಗಿನ ಉತ್ಪನ್ನ ಮಾಹಿತಿಯನ್ನು ಆಧರಿಸಿದೆ. ಸುಧಾರಣೆಗಳು ಮತ್ತು ಇತರ ಬದಲಾವಣೆಗಳ ಕಾರಣದಿಂದ, ಈ ಮ್ಯಾನುವಲ್ ಮತ್ತು ನಿಮ್ಮ ವಾಹನದ ಮಾಹಿತಿಯ ನಡುವೆ ಸ್ವಲ್ಪ ವ್ಯತ್ಯಾಸಗಳು ಕಾಣಬಹುದು. ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ಯಾವುದೇ ಸಂದರ್ಭದಲ್ಲಿ ಬೇಕಾದರೂ ಉತ್ಪಾದನಾ ಬದಲಾವಣೆಗಳನ್ನು, ಪೂರ್ವಸೂಚನೆ ಕೊಡದೆ ಮತ್ತು ಅಂತಹ ಬದಲಾವಣೆಗಳನ್ನೇ ಈಗಾಗಲೇ ತಯಾರಿಸಿದ ಮತ್ತು ಮಾರಾಟ ಮಾಡಿರುವ ವಾಹನಗಳಲ್ಲೂ ಮಾಡುವ ಬದ್ಧತೆಯನ್ನು ಹೊಂದಿರದೆಯೇ, ಕೈಗೊಳ್ಳುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ಈ ವಾಹನವು ಇತರ ದೇಶಗಳ ಮಾನದಂಡಗಳು ಅಥವಾ ನಿಯಂತ್ರಣಗಳಿಗೆ ಬದ್ಧವಾಗದೆ ಇರಬಹುದು. ಈ ವಾಹನವನ್ನು ಇತರ ಯಾವುದೇ ದೇಶದಲ್ಲಿ ನೋಂದಣಿ ಮಾಡಿಕೊಳ್ಳಲು ಪ್ರಯತ್ನಿಸುವ ಮೊದಲು, ಎಲ್ಲಾ ಅನ್ವಯಿಸುವ ನಿಯಂತ್ರಣಗಳನ್ನು ಪರಿಶೀಲಿಸಿ ಮತ್ತು ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಿ.



77PH0-74E

# ಪ್ರಮುಖ

**ಎಚ್ಚರಿಕೆ** / **ಜಾಗ್ರತೆ** / ***ಸೂಚನೆ*** / *ಗಮನಿಸಿ*

ದಯವಿಟ್ಟು ಈ ಮ್ಯಾನುವಲ್ ಅನ್ನು ಓದಿ ಮತ್ತು ಇದರ ಸೂಚನೆಗಳನ್ನು ಜಾಗರೂಕವಾಗಿ ಪಾಲಿಸಿ. ವಿಶೇಷ ಮಾಹಿತಿಗಳಿಗೆ ಒತ್ತು ನೀಡಲು, ⚠ ಚಿಹ್ನೆ ಮತ್ತು **ಎಚ್ಚರಿಕೆ, ಜಾಗ್ರತೆ,** ***ಸೂಚನೆ*** ಮತ್ತು *ಗಮನಿಸಿ* ಮೊದಲಾದ ವಿಶೇಷ ಅರ್ಥವಿರುವ ಶಬ್ದಗಳಲ್ಲಿ ವಿವರಿಸಲಾಗಿದೆ. ಈ ವಿಶೇಷ ಶಬ್ದಗಳಲ್ಲಿ ಪ್ರಮುಖವಾಗಿ ತಿಳಿಸಲಾದ ಸಂದೇಶಗಳ ಮೇಲೆ ಹೆಚ್ಚು ಗಮನವನ್ನು ನೀಡಿ:

| ⚠ ಎಚ್ಚರಿಕೆ |
| --- |
| ಮರಣ ಅಥವಾ ಗಂಭೀರ ಗಾಯಗಳು ಸಂಭವಿಸುವ ಸಾಧ್ಯತೆಯಿರುವ ಅಪಾಯವನ್ನು ಸೂಚಿಸುತ್ತದೆ. |

| ⚠ *ಜಾಗ್ರತೆ* |
| --- |
| ಸಣ್ಣ ಅಥವಾ ಸಾಮಾನ್ಯ ಗಾಯಗಳು ಸಂಭವಿಸುವ ಸಾಧ್ಯತೆಯಿರುವ ಅಪಾಯವನ್ನು ಸೂಚಿಸುತ್ತದೆ. |

| *ಸೂಚನೆ* |
| --- |
| ವಾಹನಕ್ಕೆ ಹಾನಿ ಸಂಭವಿಸುವ ಸಾಧ್ಯತೆಯಿರುವ ಅಪಾಯವನ್ನು ಸೂಚಿಸುತ್ತದೆ. |

*ಸೂಚನೆ:*
*ನಿರ್ವಹಣೆಯನ್ನು ಸರಳ ಮಾಡುವ ಅಥವಾ ಸೂಚನೆಗಳನ್ನು ಸ್ಪಷ್ಟಪಡಿಸುವ ವಿಶೇಷ ಮಾಹಿತಿಯನ್ನು ಸೂಚಿಸುತ್ತದೆ.*



75F135

ಈ ಮ್ಯಾನುವಲ್ ನಲ್ಲಿ ಸ್ಲಾಷ್ ಜೊತೆಗೆ ಕೊಡಲಾಗಿರುವ ವೃತ್ತದ ಅರ್ಥ- "ಇದನ್ನು ಮಾಡಬೇಡಿ" ಅಥವಾ "ಇದು ಆಗಲು ಬಿಡಬೇಡಿ".

# ಬದಲಾವಣೆ ಎಚ್ಚರಿಕೆ

| ⚠ ಎಚ್ಚರಿಕೆ |
| --- |
| ನಿಮ್ಮ ವಾಹನಕ್ಕೆ ಬದಲಾವಣೆ ತರಬೇಡಿ. ಬದಲಾವಣೆ ಮಾಡುವುದು ಸುರಕ್ಷೆ, ನಿಯಂತ್ರಣ, ಕಾರ್ಯವೈಖರಿ ಅಥವಾ ಬಾಳ್ವಿಕೆಗೆ ಅಪಾಯ ತರುವ ಪರಿಣಾಮ ಉಂಟು ಮಾಡಬಹುದು ಮತ್ತು ಸರ್ಕಾರಿ ನಿಯಂತ್ರಣಗಳ ಉಲ್ಲಂಘನೆಗೆ ಕಾರಣವಾಗಬಹುದು. ಹೆಚ್ಚುವರಿಯಾಗಿ, ಬದಲಾವಣೆಯಿಂದ ಆಗುವ ಹಾನಿ ಅಥವಾ ಕಾರ್ಯವೈಖರಿ ಸಮಸ್ಯೆಗಳು ವಾರಂಟಿ ಅಡಿಯಲ್ಲಿ ರಕ್ಷಣೆಗೆ ಅರ್ಹವಾಗುವುದಿಲ್ಲ. |

| *ಸೂಚನೆ* |
| --- |
| ಮೊಬೈಲ್ ಸಂಪರ್ಕ ಸಲಕರಣೆಗಳಾದ ಸೆಲ್ಯುಲರ್ ಟೆಲಿಫೋನ್ ಗಳು ಅಥವಾ ಸಿಬಿ (ಸಿಟಿಜನ್ಸ್ ಬ್ಯಾಂಡ್) ರೇಡಿಯೋಗಳ ಅಸಮರ್ಪಕವಾದ ಜೋಡಣೆಯಿಂದ ನಿಮ್ಮ ವಾಹನದ ಇಗ್ನಿಷನ್ ವ್ಯವಸ್ಥೆಗೆ ಎಲೆಕ್ಟ್ರಾನಿಕ್ ಮಧ್ಯಪ್ರವೇಶಗಳಾಗಿ, ವಾಹನದ ಕಾರ್ಯವೈಖರಿಯಲ್ಲಿ ಸಮಸ್ಯೆಯಾಗುವ ಸಾಧ್ಯತೆಯಿದೆ. ನಿಮ್ಮ ಅಧಿಕೃತ ಮಾರುತಿ ಸುಜುಕಿ ವಾಣಿಜ್ಯ ಡೀಲರ್ ನನ್ನು ಸಂಪರ್ಕಿಸಿ ಅಂತಹ ಮೊಬೈಲ್ ಸಂಪರ್ಕ ಸಲಕರಣೆಗಳನ್ನು ಜೋಡಿಸಲು ಸಲಹೆಗಳನ್ನು ಪಡೆಯಿರಿ. |

| *ಸೂಚನೆ* |
| --- |
| ಮಾರುತಿ ಸುಜುಕಿ ಶಿಫಾರಸು ಮಾಡಿರದ ಕಡಿಮೆ ಗುಣಮಟ್ಟದ ಫ್ಯೂಯೆಲ್ ಮತ್ತು/ಅಥವಾ ಲುಬ್ರಿಕಂಟ್ ಗಳನ್ನು ಬಳಸುವುದರಿಂದ ಗಂಭೀರ ಅಪಾಯ ಸಂಭವಿಸಬಹುದು. |

## ವಾರಂಟಿ ಪಾಲಿಸಿ

ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ (ಇಲ್ಲಿಂದ ಮುಂದೆ ಮಾರುತಿ ಸುಜುಕಿ ಎಂದೇ ಉಲ್ಲೇಖಿಸಲಾಗುವುದು), ಭಾರತದಲ್ಲಿ ಮಾರುತಿ ಸುಜುಕಿಯಿಂದ ಮತ್ತು ಅಧಿಕೃತ ಮಾರುತಿ ಸುಜುಕಿ ಡೀಲರ್ ಮಾರಾಟ ಮಾಡುವ ಮೂಲಕ ವಿತರಣೆಯಾಗುವ ಪ್ರತೀ ಹೊಸ ಮಾರುತಿ ಸುಜುಕಿ ವಾಹನ ಸಾಮಾನ್ಯ ಬಳಕೆ ಮತ್ತು ಸರ್ವಿಸ್ ಅಡಿಯಲ್ಲಿ ಮೆಟೀರಿಯಲ್ ನಲ್ಲಿ ಇರಬಹುದಾದ ಧೋಷಗಳಿಂದ ಮುಕ್ತವಾಗಿರುತ್ತದೆ ಮತ್ತು ಕಾರ್ಯಕೌಶಲ್ಯವು ಈ ಕೆಳಗಿನ ನಿಯಮಗಳು ಮತ್ತು ಷರತ್ತುಗಳನ್ನು ಅನ್ವಯಿಸಿರುತ್ತದೆ ಎಂದು ವಾರಂಟಿ ನೀಡುತ್ತದೆ:

**(1) ಅರ್ಹತೆ:**
ಈ ವಾರಂಟಿಗೆ ಅರ್ಹತೆ ಪಡೆಯಬೇಕೆಂದಿದ್ದಲ್ಲಿ ಮಾರುತಿ ಸುಜುಕಿ ವಾಹನವನ್ನು ಮಾರುತಿ ಸುಜುಕಿ ಅಧಿಕೃತ ಡೀಲರ್ ಮತ್ತು ವ್ಯವಸ್ಥೆ ವಿತರಿಸಿರಬೇಕು, ಮಾರುತಿ ಸುಜುಕಿ ಅಧಿಕೃತ ಕಾರ್ಯಾಕಾರದಲ್ಲಿ ಸರ್ವಿಸ್ ಮಾಡಿರಬೇಕು.

**(2) ನಿಯಮ:**
**ಮೊದಲ ಮಾಲೀಕನಿಗೆ ವಾಹನವನ್ನು ವಿತರಣೆ ಮಾಡಿದ ದಿನದಿಂದ ಇಪ್ಪತ್ತನಾಲ್ಕು (24) ತಿಂಗಳುಗಳು ಅಥವಾ 72,000 ಕಿಲೋಮೀಟರ್ ಗಳು (ಯಾವುದು ಮೊದಲು ಆಗುತ್ತದೋ ಅದು).**

**(3) ಮಾರುತಿ ಸುಜುಕಿ ವಾರಂಟಿ ಬದ್ಧತೆಗಳು:**
ಮೇಲೆ ತಿಳಿಸಿರುವ ಕಾಲಾವಧಿಯಲ್ಲಿ ಮಾರುತಿ ಸುಜುಕಿ ವಾಹನದಲ್ಲಿ ಯಾವುದೇ ದೋಷಗಳು ಕಂಡುಬಂದಲ್ಲಿ, ಮಾರುತಿ ಸುಜುಕಿಯ ಕೇವಲ ಒಂದೇ ಬದ್ಧತೆಯೆಂದರೆ, ತನ್ನದೇ ನಿರ್ಧಾರದಲ್ಲಿ, ಅಂತಹ ಧೋಷವು ತಯಾರಿಯ ಸಂದರ್ಭದಲ್ಲಿ ಧೋಷದ ಮೆಟೀರಿಯಲ್ ಅಥವಾ ಕಾರ್ಯಕೌಶಲ್ಯದಿಂದ ಆಗಿದೆ ಎನ್ನುವುದನ್ನು ಮಾರುತಿ ಸುಜುಕಿ ಒಪ್ಪಿಕೊಂಡಲ್ಲಿ, ದೋಷವೆಂದು ಕಂಡು ಬಂದಿರುವ ಯಾವುದೇ ಭಾಗವನ್ನು ಹೊಸ ಭಾಗ ಅಥವಾ ಸಮಾನ ಬೆಲೆಯ ಭಾಗವನ್ನು ಮಾಲೀಕರಿಗೆ ಉಚಿತವಾಗಿ ಭಾಗ ಮತ್ತು ಕೆಲಸವನ್ನು ಮಾಡಿಕೊಟ್ಟು ರಿಪೇರಿ ಮಾಡುವುದು ಅಥವಾ ಬದಲಿಸುವುದು. ಅಂತಹ ದೋಷಪೂರ್ಣ ಭಾಗಗಳು, ಅವುಗಳನ್ನು ಬದಲಿಸಲಾಗಿದ್ದಲ್ಲಿ, ಮಾರುತಿ ಸುಜುಕಿಯ ಆಸ್ತಿಯಾಗುತ್ತವೆ. ಈ ವಾರಂಟಿಯ ಅಡಿಯಲ್ಲಿ ಬಾರದೆ ಇರುವ ಯಾವುದೇ ರಿಪೇರಿ ಅಥವಾ ಬದಲಿಗೆ ಮಾಲೀಕನು ಜವಾಬ್ದಾರನಾಗಿರುತ್ತಾನೆ. ಮಾರುತಿ ಸುಜುಕಿಯ ನಿರ್ಧಾರವು ಅಂತಿಮ ಮತ್ತು ಅನ್ವಯಿಸುತ್ತದೆ.

**(4) ಮಿತಿ:**
ಈ ವಾರಂಟಿ ಅನ್ವಯಿಸುವುದಿಲ್ಲ:

1) ನಾಲ್ಕು ಉಚಿತ ಸರ್ವಿಸ್ ಗಳನ್ನು ಹೊರತುಪಡಿಸಿ ಸಾಮಾನ್ಯ ನಿರ್ವಹಣಾ ಸರ್ವಿಸ್ ಗಳ ಅಗತ್ಯವಿದೆ, ಮಿತಿಯಿಲ್ಲದ್ದೂ ಸೇರಿ, ಆಯಿಲ್ ಮತ್ತು ಫ್ಲೂಯಿಡ್ ಬದಲಾವಣೆಗಳು, ಉಪಭೋಗಿಗಳು, ಹೆಡ್ ಲೈಟ್ ಗುರಿ, ಫಾಸ್ಟನರ್ ಮರಳಿ ಬಿಗಿಮಾಡುವುದು, ವೀಲ್ ಬ್ಯಾಲೆನ್ಸಿಂಗ್, ವೀಲ್ ಸಾಲು ಜೋಡಣೆ ಮತ್ತು ಟೈರ್ ರೊಟೇಶನ್, ಇಂಜೆಕ್ಟರ್ ಗಳನ್ನುಸ್ವಚ್ಛಗೊಳಿಸುವುದು,ಕಾರ್ಬರೇಟರ್ ಹೊಂದಿಸುವುದು, ಇಗ್ನಿಷನ್ ಟೈಮಿಂಗ್, ಕ್ಲಚ್ ಮತ್ತು ವಾಲ್ವ್ ಕ್ಲಿಯರೆನ್ಸ್ ಇತ್ಯಾದಿ.
2) ಲಿಮಿಟೇಶನ್ ಹೊರತುಪಡಿಸಿ ಸೇರಿದಂತೆ ಸಾಮಾನ್ಯ ಸವೆದ ಭಾಗಗಳು, ಬಲ್ಬ್ ಗಳು, ಟೈರ್ ಗಳು ಮತ್ತು ಟ್ಯೂಬ್ ಗಳು, ಸ್ಪಾರ್ಕ್ ಪ್ಲಗ್ ಗಳು, ಬೆಲ್ಟ್ ಗಳು, ಹೋಸ್ ಗಳು, ಫಿಲ್ಟರ್ ಗಳು, ವೈಪರ್ ಬ್ಲೇಡ್ ಗಳು, ಬುಷ್ ಗಳು, ಕಾಂಟಾಕ್ಟ್ ಪಾಯಿಂಟ್ ಗಳು, ಫ್ಯೂಸ್ ಗಳು, ಕ್ಲಚ್ ಡಿಸ್ಕ್, ಬ್ರೇಕ್ ಶೂಗಳು, ಬ್ರೇಕ್ ಪ್ಯಾಡ್ ಗಳು, ಕೇಬಲ್ ಮತ್ತು ಎಲ್ಲಾ ರಬ್ಬರ್ ಭಾಗಗಳು (ಆಯಿಲ್ ಸೀಲ್ ಮತ್ತು ಗ್ಲಾಸ್ ರನ್ ಹೊರತುಪಡಿಸಿ).
3) ಸ್ಪರ್ಧೆಗೆ, ರಾಲಿಗಳಿಗೆ ಅಥವಾ ರೇಸಿಂಗ್ ಗೆ ಬಳಸಿದ ಯಾವುದೇ ವಾಹನ.
4) ಅಪಘಾತ ಅಥವಾ ಢಿಕ್ಕಿಯ ಕಾರಣದಿಂದ ಬರುವ ಯಾವುದೇ ರಿಪೇರಿಗಳು ಅಥವಾ ಬದಲಿ.
5) ದುರ್ಬಳಕೆ, ಅಲಕ್ಷ್ಯ, ಅಸಹಜ ಬಳಕೆ, ಅಜಾಗರೂಕತೆ, ದಾಂಧಲೆ, ಕಳ್ಳತನ, ಗಲಭೆ, ಬೆಂಕಿ, ಪ್ರವಾಹದಿಂದ- ಭಾಗಗಳ ಒಳಗೆ ನೀರು ಪ್ರವೇಶಿಸಿ ಇಂಜಿನ್ ಕಟ್ಟಿಕೊಳ್ಳುವುದು, ಹೈಡ್ರೋಸ್ಟಾಟಿಕ್ ಲಾಕ್ ಇತ್ಯಾದಿಗೆ ಮಿತಿಗೊಳ್ಳದೆ ಅಥವಾ ಬಾಡಿ/ ಭಾಗಗಳಿಗೆ ಹೊರಗಿನ ಹಾನಿಗಳಿಂದಾಗಿ ಯಾವುದೇ ದೋಷ/ ಹಾನಿಯಾದಲ್ಲಿ.
6) ಮಾಲೀಕರ ಮ್ಯಾನುವಲ್‌ನಲ್ಲಿ ನಿರ್ದೇಶಿಸಲಾಗಿರುವುದಕ್ಕಿಂತ ಭಿನ್ನವಾದಂತಹ ಕಲಬೆರಕೆ ಇಂಧನ, ಲುಬ್ರಿಕೆಂಟ್‌ಗಳು, ಆಯಿಲ್, ಕೂಲಂಟ್, ಫ್ಲೂಯಿಡ್‌ಗಳು / ಪಾಲಿಶಿಂಗ್ ಉತ್ಪನ್ನಗಳು ಮತ್ತು ಇಂಧನ / ಲುಬ್ರಿಕಂಟ್ / ಆಯಿಲ್, ಕೂಲಂಟ್ / ಫ್ಲೂಯಿಡ್‌ಗಳು ಇತ್ಯಾದಿಗಳ ಬಳಕೆಯ ಕಾರಣದಿಂದ ಯಾವುದೇ ಹಾನಿಯಾದಲ್ಲಿ.
7) ಯಾವುದೇ ವಾಹನವನ್ನು ಮಾಡಿಫೈ ಮಾಡಿದ್ದಲ್ಲಿ ಅಥವಾ ಬದಲಿಸಿದ್ದಲ್ಲಿ, ಲಿಮಿಟೇಶನ್ ಇಲ್ಲದ್ದು ಸೇರಿ, ಕಾರ್ಯ ವೈಖರಿ ಹೆಚ್ಚಿಸುವ ಅಕ್ಸಸರಿಗಳ ಅಳವಡಿಕೆ, ಬೆಳಕಿನ ವ್ಯವಸ್ಥೆಯನ್ನು ಹೆಚ್ಚು ಪ್ರಖರಗೊಳಿಸುವುದು, ಇತರ ಬದಲಾವಣೆಗಳು ಮತ್ತು ಹೊರಗಿನ/ಸಂಬಂಧಿತ ಕಾರಣಗಳು.
8) ಮಾರುತಿ ಸುಜುಕಿ (ನಾನ್-ಎಂಎಸ್‌ಜಿಎ, ನಾನ್-ಎಂಎಸ್‌ಜಿಪಿ) ಅಂಗೀಕರಿಸದೆ ಇರುವ ಯಾವುದೇ ಭಾಗಗಳು ಅಥವಾ ಅಕ್ಸಸರಿಗಳನ್ನು ಯಾವುದೇ ವಾಹನದಲ್ಲಿ ಬಳಸಿದಲ್ಲಿ.
9) ಮಾರುತಿ ಸುಜುಕಿ ಮಾಲೀಕರ ಮ್ಯಾನುವಲ್ ನಲ್ಲಿ ಹೇಳಲಾಗಿರುವ ಚಾಲನಾ ಸೂಚನೆಗಳಿಗೆ ತಕ್ಕಂತೆ ಕಾರ್ಯನಿರ್ವಹಿಸದೆ ಇರುವ ಯಾವುದೇ ವಾಹನ.

10) ಮಾರುತಿ ಸುಜುಕಿ ಮಾಲೀಕರ ಮ್ಯಾನುವಲ್ ಮತ್ತು ಸರ್ವಿಸ್ ಕರಪತ್ರದಲ್ಲಿ ಹೇಳಲಾಗಿರುವ ಚಾಲನಾ ಸೂಚನೆಗಳಿಗೆ ತಕ್ಕಂತೆ ಕಾರ್ಯನಿರ್ವಹಿಸದೆ ಇರುವ ಯಾವುದೇ ವಾಹನ.

11) ಮಾರುತಿ ಸುಜುಕಿ ಅಧಿಕೃತ ಕಾರ್ಯಾಗಾರವನ್ನು ಹೊರತುಪಡಿಸಿದ ಸ್ಥಳಗಳಲ್ಲಿ ಜೋಡಣೆಗೊಂಡ, ಕಳಚಲಾಗಿರುವ, ಹೊಂದಿಸಲಾಗಿರುವ ಅಥವಾ ರಿಪೇರಿ ಮಾಡಲಾಗಿರುವ ಯಾವುದೇ ವಾಹನ.

12) ವಾಹನವನ್ನು ಯಾವ ಕಾರಣಕ್ಕೆ ವಿನ್ಯಾಸ ಮಾಡಲಾಗಿದೆಯೋ ಅದನ್ನು ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಬಳಕೆಯಾದ ಯಾವುದೇ ವಾಹನ.

13) ಯಾವುದೇ ಹಾನಿ ಅಥವಾ ಕೆಟ್ಟು ಹೋಗುವುದಕ್ಕೆ ಕಾರಣವಾಗಿ ಗಾಳಿಯಿಂದಾದ ನಷ್ಟ, ಔದ್ಯಮಿಕ ನಷ್ಟ, ಆಸಿಡ್ ಮಳೆ, ಆಲಿಕಲ್ಲು ಅಥವಾ ಆಲಿಕಲ್ಲು ಮಳೆ, ಗಾಳಿ ಮಳೆ, ಮಿಂಚು, ಪಕ್ಷಿಗಳ ಹಿಕ್ಕೆ, ಇಲಿಗಳು ಕಚ್ಚುವುದು/ ಇಲಿ ಕಡಿತ ಅಥವಾ ಇತರ ಅಂತಹ ಕಾರಣಗಳಿಂದಾಗಿ ವಾಹನಗಳಿಗೆ ಹಾನಿಯಾದಲ್ಲಿ.

14) ವಾಹನದ ಕಾರ್ಯ ಕೌಶಲ್ಯಕ್ಕೆ ತೊಂದರೆಯಾಗದಂತೆ ಹೆಚ್ಚು ಪ್ರಮುಖವಲ್ಲದ ಧೋಷಗಳು, ಮಿತಿಗಳಿಲ್ಲದವೂ ಸೇರಿ, ಧ್ವನಿ, ಕಂಪನ ಮತ್ತು ಫ್ಲೂಯಿಡ್ ಸೀಪ್.

15) ಯಾವುದೇ ಪ್ರಾಕೃತಿಕ ಸವೆತ ಮತ್ತು ಮುರತವು ಮಿತಿಗಳ ಹೊರತುಪಡಿಸಿರುವುದು ಸೇರಿದಂತೆ, ಹಳತಾಗಿರುವುದು, ಸವೆತ &ಮುರಿತ ಅಥವಾ ಬಣ್ಣಕಳೆದು ಹೋಗಿರುವುದು, ಮಾಸುವುದು, ವಿರೂಪತೆ ಅಥವಾ ಮಂದವಾಗುವುದು ಮತ್ತು ಫ್ಯಾಬ್ರಿಕ್ ಬಣ್ಣ ಹೋಗುವುದು ಇತ್ಯಾದಿಯಿಂದಾಗಿ ಕೆಟ್ಟುಹೋಗುವುದು.

16) ಅಡುಗೆ ಗ್ಯಾಸ್/ಎಲ್ ಪಿಜಿ ಸಿಲಿಂಡರ್ ಅಳವಡಿಕೆ ಮತ್ತು ಬಳಕೆ.

17) V-ಬೆಲ್ಟ್ ಗಳು, ಹೋಸ್ ಗಳು ಮತ್ತು ಗ್ಯಾಸ್ ಸೋರಿಕೆಗಳು.

18) ಎಲ್ ಪಿಜಿ/ ಸಿಎನ್ ಜಿ ಕಿಟ್ ಗಳಿಂದ ರಿಟ್ರೋಫಿಟ್ ಆಗಿರುವ ಯಾವುದೇ ವಾಹನ.

19) ಮರು ಬಣ್ಣ ಬಳಿಯುವುದರಲ್ಲಿ ಪ್ಯಾಚ್‌ವರ್ಕ್, ಬಾಡಿ ವರ್ಕ್ ಮತ್ತು ಮೌಲ್ಡಿಂಗ್‌ಗಳು ಮತ್ತು ಇಂಟೀರಿಯರ್ ಟ್ರಿಮ್‌ಗಳು ಸೇರಿದಂತೆ.

20) ಕೊರೆತ, ಬಾಡಿ ಭಾಗಗಳ ತುಕ್ಕು ಹಿಡಿಯುವುದು ಮತ್ತು ಅಥವಾ ಭಾಗಗಳು.

21) ಅನಧಿಕೃತವಾಗಿ ಓಡೋಮೀಟರ್ ಬದಲಿಸಲಾಗಿರುವ ಯಾವುದೇ ವಾಹನ ಅಥವಾ ಓಡೋಮೀಟರ್ ರೀಡಿಂಗ್ ಸುಧಾರಿಸಲಾಗಿರುವ / ತಿರುಚಲಾಗಿರುವ/ ಅಥವಾ ಸರ್ವಿಸ್ ರೆಕಾರ್ಡ್‌ಗಳನ್ನು ಹೊಂದಿಸಲಾಗದೆ ಇರುವುದು.

22) ದೋಷವಾಗಿದೆ ಎನ್ನುವ ಮಾಹಿತಿ ಇದ್ದ ಹೊರತಾಗಿಯೂ ವಾಹನಕ್ಕೆ ರಿಪೇರಿ ಮಾಡದೆ ಅಥವಾ ವಾಹನದ ಮಾಲೀಕನಿಗೆ/ ಬಳಕೆದಾರನು ಗಮನ ಕೊಡದೆ ಆಗಿರುವ ಹಾನಿಗಳು.

23) ವಾಹನವನ್ನು ಬಳಸದೆ ಧೀರ್ಘ ಕಾಲದ ಅವಧಿಯವರೆಗೆ ಪಾರ್ಕಿಂಗ್‌ನಲ್ಲಿಯೇ ಇಟ್ಟ ಕಾರಣ ಬ್ಯಾಟರಿ/ಟೈರ್ ಸೇರಿದಂತೆ ವಾಹನಕ್ಕೆ ಆಗಿರುವ ಹಾನಿಗಳು.

### (5) ವಾರಂಟಿ ವಿಸ್ತರಣೆ:

ವಾರಂಟಿ ಎಂದರೆ ಮಾರುತಿ ಸುಜುಕಿ ವಾಹನಗಳಿಗಾಗಿ ಮಾರುತಿ ಸುಜುಕಿ ಲಿಖಿತವಾಗಿ ಕೊಟ್ಟಿರುವ ವಿವರವಾಗಿದೆ ಮತ್ತು ಯಾವುದೇ ಡೀಲರ್ ಅಥವಾ ಅದರ ಅಥವಾ ಆತನ ಏಜೆಂಟ್ ಅಥವಾ ಉದ್ಯೋಗಿಗೆ ಈ ವಾರಂಟಿಯನ್ನು ವಿಸ್ತರಿಸಲು ಅಥವಾ ಹೆಚ್ಚು ಮಾಡುವ ಅಧಿಕಾರವಿರುವುದಿಲ್ಲ ಮತ್ತು ಯಾವುದೇ ಡೀಲರ್ ಅಥವಾ ಅದರ ಅಥವಾ ಆತನ ಏಜೆಂಟ್ ಅಥವಾ ಉದ್ಯೋಗಿಗೆ ಮಾರುತಿ ಸುಜುಕಿ ಪರವಾಗಿ ಯಾವುದೇ ಬಾಯಿ ಮಾತಿನ ವಾರಂಟಿಯನ್ನು ನೀಡುವ ಅಧಿಕಾರವಿರುವುದಿಲ್ಲ. ಅಥವಾ ಮಾರುತಿ ಸುಜುಕಿಯ ಪರವಾಗಿ ಪ್ರತಿನಿಧಿಸಲು ಅಥವಾ ಭರವಸೆ ನೀಡುವಂತಿಲ್ಲ.

ಮಾರುತಿ ಸುಜುಕಿ ಯಾವುದೇ ಸುಧಾರಣೆಗಳು ಅಥವಾ ಬದಲಾವಣೆಯನ್ನು ಯಾವುದೇ ಮಾಡೆಲ್ ನ ವಿನ್ಯಾಸಕ್ಕೆ ಯಾವುದೇ ಸಮಯದಲ್ಲೂ ಮಾಡಬಹುದು ಮತ್ತು ಈ ಹಿಂದೆಯೇ ಮಾರಿದ ಯುನಿಟ್ ಗಳಲ್ಲೂ ಅದೇ ಬದಲಾವಣೆಗಳನ್ನು ಮಾಡಬೇಕಾದ ಬದ್ಧತೆಯನ್ನು ಹೊಂದಿರುವುದಿಲ್ಲ.

### (6) ವಾರಂಟಿ ಸರ್ವಿಸ್:

ವಾರಂಟಿ ಸರ್ವಿಸ್ ಗಳನ್ನು ಪಡೆದುಕೊಳ್ಳಲು, ಸಂಪೂರ್ಣ ವಾಹನವನ್ನು ಮಾಲೀಕರ ವೆಚ್ಚದಲ್ಲಿ ಯಾವುದೇ ಅಧಿಕೃತ ಮಾರುತಿ ಸುಜುಕಿ ಕಾರ್ಯಾಗಾರಕ್ಕೆ ಕೊಟ್ಟಿರಬೇಕು.

ವಾಃನವನ್ನು ಸರ್ವಿಸ್‌ಗೆ ಕೊಡುವ ಸಂದರ್ಭದಲ್ಲಿ ವಾಹನದಲ್ಲಿ ಜೋಡಿಸಲಾಗಿರುವ ವಸ್ತುಗಳು ಅಥವಾ ಸಲಕರಣೆಗಳಿಗೆ ಗ್ರಾಹಕನು ಜವಾಬ್ದಾರನಾಗಿರುತ್ತಾನೆ ಮತ್ತು ಯಾವುದೇ ಪರಿಸ್ಥಿತಿಯಲ್ಲಿಯೂ ಯಾವುದೇ ರೀತಿಯ ಕ್ಲೇಮ್ ಅನ್ನು ಮಾಡುವ ಅವಕಾಶವಿರುವುದಿಲ್ಲ.

### (7) ಮಾಲೀಕರ ವಾರಂಟಿ ಜವಾಬ್ದಾರಿಗಳು:

ಇದು ಪ್ರತೀ ಮಾಲೀಕರ ಜವಾಬ್ದಾರಿಯೂ ಆಗಿರುತ್ತದೆ:

- ಮಾರುತಿ ಸುಜುಕಿ ಅಧಿಕೃತ ಕಾರ್ಯಾಗಾರ ತಮ್ಮದೇ ವೆಚ್ಚದಲ್ಲಿ ಕಾರ್ಯ ನಿರ್ವಹಿಸಿದ ಮಾರುತಿ ಸುಜುಕಿ "ಮಾಲೀಕರ" ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್ ಮತ್ತು ನಿರ್ವಹಣೆಯಲ್ಲಿ ಸೂಚಿಸಿರುವ ಎಲ್ಲಾ ಸರ್ವಿಸ್ ತಪಾಸಣೆಗಳು ಅಂತಹ ಸರ್ವಿಸ್ ತಪಾಸಣೆಗಳು ನಡೆದಿರುವುದಕ್ಕೆ ಸಾಕ್ಷ್ಯಗಳಾಗಿರುತ್ತವೆ.
- "ಮಾಲೀಕರ" ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್ ಮತ್ತು ನಿರ್ವಹಣೆಯಲ್ಲಿ ಸೂಚಿಸಿರುವ ಎಲ್ಲಾ ಸರ್ವಿಸ್ ತಪಾಸಣೆಗಳು ಅಂತಹ ಸರ್ವಿಸ್ ತಪಾಸಣೆಗಳು ಮಾರುತಿ ಸುಜುಕಿ ಅಧಿಕೃತ ಕಾರ್ಯಾಗಾರದಲ್ಲಿಯೇ ವಾಹನದಲ್ಲಿ ನಡೆದಿರುವುದಕ್ಕೆ ಗ್ರಾಹಕ ಸರ್ವಿಸ್ ಮೈಂಟೇನೆನ್ಸ್ ರೆಕಾರ್ಡ್ಸ್ ಪುಟವನ್ನು ಅಪ್‌ಡೇಟ್ ಮಾಡಿ ಮತ್ತು ನಿಭಾಯಿಸಿ.
- ಮಾರುತಿ ಸುಜುಕಿಯ "ಮಾಲೀಕರ ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್" ಅನ್ನು ಅಧಿಕೃತ ಮಾರುತಿ ಸುಜುಕಿ ಕಾರ್ಯಾಗಾರದಲ್ಲಿ ಸರ್ವಿಸ್ ತಪಾಸಣೆಗಳು ಮತ್ತು ವಾರಂಟಿ ಸರ್ವಿಸ್ ಬೇಡಿಕೆ ಇಡುವಾಗೆಲ್ಲಾ ಸಲ್ಲಿಸಬೇಕಾಗುತ್ತದೆ.

"ಮಾಲೀಕರ ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್" ಕಳೆದು ಹೋದಲ್ಲಿ ಅಥವಾ ನಾಶವಾದಲ್ಲಿ "ಮಾಲೀಕರ ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್" ಗೆ ಸಂಬಂಧಿಸಿದಂತೆ ಬದಲಿ

ವ್ಯವಸ್ಥೆಯಸೂಚನೆಗಳಿಗಾಗಿ ಮಾಲೀಕರು ವಾಹನವನ್ನು ಖರೀದಿ ಮಾಡಿರುವ ಅಧಿಕೃತ ಮಾರುತಿ ಸುಜುಕಿ ಡೀಲರ್ ರನ್ನು ಸಂಪರ್ಕಿಸಬೇಕು.

**(8) ಅನುಗತ ಹಾನಿಗೆ ಸಂಬಂಧಿಸಿ ಹಕ್ಕುತ್ಯಾಗ:**

ವಾಹನದ ಕಳವು, ಸಮಯದ ನಷ್ಟ, ಅನನುಕೂಲ ಅಥವಾ ಇತರ ಯಾವುದೇ ಪರೋಕ್ಷ ಆಕಸ್ಮಿಕ ಅಥವಾ ಯಾವುದೇ ಧೋಷದಿಂದಾಗಿ ಮಾಲೀಕರಿಗೆ ಲಭ್ಯವಾಗದೆ ಆಗಿರುವ ಕಾಕತಾಳೀಯ ಹಾನಿಗಳು ಆದಲ್ಲಿ ಮಾರುತಿ ಸುಜುಕಿ ಆ ಬಗ್ಗೆ ವಾರಂಟಿ ಅವಧಿಯಲ್ಲಿ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ.

**(9) ಮಾಲೀಕರ ಬದಲಾವಣೆ:**

ವಾಹನದ ಮಾಲೀಕತ್ವ ಬದಲಾದಲ್ಲಿ ಉಳಿದ ವಾರಂಟಿ ಅವಧಿಯು ಹೊಸ ಮಾಲೀಕರಿಗೆ ಹೋಗುತ್ತದೆ.

# ಎಮಿಶನ್ ವಾರಂಟಿ ನೀತಿ

ಎಮಿಶನ್ ವಾರಂಟಿಯನ್ನು ಮಾರುತಿ ಸುಜುಕಿ ಎಲ್ಲಾ ಮಾರುತಿ ಸುಜುಕಿ ವಾಹನಗಳಿಗೆ (ನಿತ್ಯದ ವಾರಂಟಿಯನ್ನು ಹೊರತುಪಡಿಸಿ ಮತ್ತು ನಿತ್ಯದ ಉತ್ಪನ್ನಕ್ಕೆ ಸಮಾಂತರವಾಗಿರುತ್ತದೆ) ನಾಲ್ಕು ಮಹಾನಗರಗಳಲ್ಲಿ (ನವದೆಹಲಿ, ಕೋಲ್ಕತ್ತಾ, ಮುಂಬೈ ಮತ್ತು ಚೆನ್ನೈ) ಮಾತ್ರ 2001 ಜುಲೈ 1 ರಿಂದ ಅನ್ವಯಿಸುವಂತೆ ಒದಗಿಸುತ್ತದೆ.

## ನಿಯಮಗಳು:

ಎಮಿಶನ್ ವಾರಂಟಿಯು ವಾಹನವನ್ನು ಮೊದಲ ಮಾಲೀಕರಿಗೆ ಡೆಲಿವರಿ ಮಾಡಿದ 80,000 ಕಿಮೀಗಳಿಗೆ ಅಥವಾ 3 ವರ್ಷಗಳಿಗೆ ಅನ್ವಯಿಸುತ್ತದೆ. ಉಳಿದ ವಾರಂಟಿ ನಿಯಮಗಳು ಮಾಲೀಕತ್ವದಲ್ಲಿ ಯಾವುದೇ ಬದಲಾವಣೆಯಾದಲ್ಲೂ ಮಾನ್ಯತೆಯಿರುವ ದಾಖಲೆಗಳನ್ನು ಮುಂದಿಡುವ ಹಿನ್ನೆಲೆಯಲ್ಲಿ ಮಾನ್ಯತೆ ಹೊಂದಿರುತ್ತದೆ.

## ಷರತ್ತುಗಳು:

1. ವಾಹನವು ಕೇಂದ್ರ ಮೋಟಾರು ವಾಹನ ನಿಯಮಗಳು (ಸಿಎಂವಿಆರ್), 1989 ನಿಯಮ ಸಂಖ್ಯೆ 115ರ ಉಪನಿಯಮ (2) ದಲ್ಲಿ ಸೂಚಿಸಲಾದ ಎಮಿಶನ್ ಗುಣಮಟ್ಟವನ್ನು ತಲುಪಲು ವಿಫಲವಾದಲ್ಲಿ ಎಮಿಶನ್ ವಾರಂಟಿ ಅಡಿಯಲ್ಲಿ, ವಾರಂಟಿ ಬೇಡಿಕೆಗಳನ್ನು ಪ್ರಾಥಮಿಕ ಪರಿಶೀಲನೆಯ ನಂತರ ಪಡೆದುಕೊಳ್ಳಲಾಗುತ್ತದೆ.
2. ವಾರಂಟಿ ಬೇಡಿಕೆಗಳನ್ನು ಮಾರುತಿ ಸುಜುಕಿ ಅಥವಾ ಅದರ ಡೀಲರ್ ನಡೆಸಿದ ಪರಿಶೀಲನೆಯ ನಂತರ ಅಂಗೀಕರಿಸಲಾಗುತ್ತದೆ. ಇದು ದೃಢವಾದ ನಿರ್ಧಾರಕ್ಕೆ ಕಾರಣವಾಗುತ್ತದೆ,ಅವುಗಳೆಂದರೆ
   ಎ) ಯಾವುದೇ ಕಾರಣಕ್ಕೂ ಮೂಲ ಸೆಟ್ಟಿಂಗ್ ಗಳನ್ನು ಬದಲಿಸಲಾಗಿಲ್ಲ
   ಬಿ) ಭಾಗ (ಅನೆಕ್ಸ್ - (ಎ) ನಲ್ಲಿ ಕೊಟ್ಟಂತೆ) ದಲ್ಲಿ ಉತ್ಪಾದನಾ ದೋಷವಿರುತ್ತದೆ.
   ಸಿ) ವಾಹನದಲ್ಲಿ ಎಲ್ಲವನ್ನೂ ಉತ್ತಮ ಸ್ಥಿತಿಯಲ್ಲಿ ನಿಭಾಯಿಸಲಾಗಿದ್ದರೂ ಮತ್ತು "ಮಾಲೀಕರ ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್" ನಲ್ಲಿ ಸೂಚಿಸಿರುವ ವಿವರಗಳಂತೆ ನಿರ್ವಹಿಸಿ ಬಳಕೆಯಾಗಿದ್ದರೆ ಮತ್ತು ಬಳಸಿದ ಫ್ಯೂಯೆಲ್ ಮತ್ತು ವಿಭಿನ್ನ ಆಯಿಲ್ ಗಳು (ಇಂಜಿನ್ ಆಯಿಲ್, ಟ್ರಾನ್ಸ್ ಮಿಶನ್ ಆಯಿಲ್, ಬ್ರೇಕ್ ಆಯಿಲ್ ಇತ್ಯಾದಿ) ಸೂಚನೆಗಳಿಗೆ ತಕ್ಕಂತೆ ಇದ್ದರೂ ವಾಹನವು ಎಮಿಶನ್ ಗುಣಮಟ್ಟಗಳನ್ನು (1. ರಲ್ಲಿ ಕೊಟ್ಟಂತೆ) ತಲುಪಲು ಸಾಧ್ಯವಾಗಿಲ್ಲ.
3. ಭಾಗಗಳ ವಾರಂಟಿಯನ್ನು ನಿರ್ಧರಿಸಲು ಪರಿಶೀಲನೆಯ ವಿಧಾನವು ಮಾರುತಿ ಸುಜುಕಿಯ ಮತ್ತು ಅದರ ಡೀಲರ್ ಗಳ ಏಕಮಾತ್ರ ನಿರ್ಧಾರ ಮತ್ತು ಪರಿಶೀಲನೆಯ ಫಲಿತಾಂಶವೇ ಅಂತಿಮ ಮತ್ತು ಅನ್ವಯವಾಗುತ್ತದೆ. ಪರಿಶೀಲನೆಯ ನಂತರ ವಾರಂಟಿಯ ಷರತ್ತಿಗೆ ಅನ್ವಯವಾಗದೆ ಇದ್ದಲ್ಲಿ, ಮಾರುತಿ ಸುಜುಕಿ ಮತ್ತು ಅದರ ಡೀಲರ್ ಎಲ್ಲ ವೆಚ್ಚವನ್ನೂ ಅಥವಾ ಅಂತಹ ಪರಿಶೀಲನೆಯ ವೆಚ್ಚದ ಭಾಗವನ್ನು ಮಾಲೀಕರ ಮೇಲೆ ಹೇರಬಹುದು.
4. ಎಮಿಶನ್ ವಾರಂಟಿ ಅಡಿಯಲ್ಲಿ, ಭಾಗಗಳನ್ನು (ಅಧ್ಯಾಯ - (ಎ) ನಲ್ಲಿ ಕೊಡಲಾದ) ಉಚಿತವಾಗಿ ಬದಲಿಸಬಹುದು, ಆದರೆ ಕನ್ ಸ್ಯೂಮೇಬಲ್ ಗಳಿಗೆ ವಾಸ್ತವಿಕವಾಗಿ ಶುಲ್ಕ ವಿಧಿಸಲಾಗುವುದು.
5. ಎಮಿಶನ್ ವಾರಂಟಿ ಅಡಿಯಲ್ಲಿ ಕವರ್ ಮಾಡಲಾದ ಭಾಗವು ಅಥವಾ ಸಂಬಂಧಿತ ಭಾಗಗಳು ಬರುತ್ತಿದ್ದಲ್ಲಿ, ಸ್ವತಂತ್ರವಾಗಿ ಬದಲಿಸಲಾಗುವುದಿಲ್ಲ. ಇವು ಸಂಪೂರ್ಣ ಅಸೆಂಬ್ಲಿಯ ಅಂತರ್ಗತ ಭಾಗವಾಗಿರುವ ಹಿನ್ನೆಲೆಯಲ್ಲಿ ಸಂಪೂರ್ಣ ಅಸೆಂಬ್ಲಿಯನ್ನು ಅಥವಾ ಸಿಸ್ಟಂನ ಕೆಲವು ಭಾಗಗಳನ್ನು ಸೂಕ್ತ ರಿಪೇರಿಗಳು ಅಥವಾ ಮಾಡಿಫಿಕೇಶನ್ ಗಳ ರೀತಿ ಬಳಸಿಕೊಳ್ಳುವ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಮಾರುತಿ ಸುಜುಕಿ ಮತ್ತು ಅದರ ಡೀಲರ್ ಹೊಂದಿರುತ್ತಾರೆ.
6. ಯಾವುದೇ ಸಂಬಂಧಿತ ರಿಪೇರಿಗಳು ಅಥವಾ ಬದಲಿ ಭಾಗಗಳು ಅಗತ್ಯವೆಂದು ಎಮಿಶನ್ ವಾರಂಟಿಗೆ ಸಂಬಂಧಿಸಿ ಕಂಡು ಬಂದಲ್ಲಿ, ಅದು ಉತ್ಪನ್ನ ವಾರಂಟಿ ಅಡಿಯಲ್ಲಿ ಬಾರದೆ ಹೊರತು ವಾರಂಟಿಯ ಅಡಿಯಲ್ಲಿ ಪರಿಗಣಿಸಲಾಗುವುದಿಲ್ಲ. ಅಂತಹ ರಿಪೇರಿ ಅಥವಾ ಬದಲಿಯಲ್ಲಿ ಕನ್ ಸ್ಯೂಮೇಬಲ್ ಗಳಿಗೆ ವಾಸ್ತವಿಕವಾಗಿ ಶುಲ್ಕ ವಿಧಿಸಲಾಗುತ್ತದೆ.
7. ವಾಹನವನ್ನು ಸಮೀಪದ ಮಾರುತಿ ಸುಜುಕಿ ಡೀಲರ್ ವರ್ಕ್ ಶಾಪ್ ಗೆ ಸಾಗಾಟ ಮಾಡುವ ವೆಚ್ಚಕ್ಕೆ ಅಥವಾ ವಾರಂಟಿಗಾಗಿ ಅರ್ಜಿ ಹಾಕುವಾಗ, ಮಾರುತಿ ಸುಜುಕಿ ಡೀಲರ್ ಮಾಡುವ ರಿಪೇರಿ ಮತ್ತು / ಅಥವಾ ಪರಿಶೀಲನೆಯ ಸಮಯದಲ್ಲಿ ವಾಹನವು ಲಭ್ಯವಿಲ್ಲದೆ ಇರುವುದರಿಂದ ಆದ ನಷ್ಟಕ್ಕೆ ಮಾರುತಿ ಸುಜುಕಿ ಜವಾಬ್ದಾರನಲ್ಲ.
8. ಎಮಿಶನ್ ಗುಣಮಟ್ಟಕ್ಕೆ ಬದ್ಧವಾಗದೆ ಇರುವುದರಿಂದ ಶಾಸನಬದ್ಧ ಅಧಿಕಾರಿಗಳು ವಿಧಿಸಬಹುದಾದ ದಂಡದ ಸಂದರ್ಭದಲ್ಲಿ ಮಾರುತಿ ಸುಜುಕಿ ಜವಾಬ್ದಾರನಲ್ಲ.
9. ಮಾಲೀಕರ ಬದಲಾವಣೆಯಿಂದ, ಎಲ್ಲಾ ದಾಖಲೆಗಳನ್ನು ಹೊಂದಿದ್ದಲ್ಲಿ ಎಮಿಶನ್ ವಾರಂಟಿಗೆ ಬದಲಾವಣೆಯಾಗುವುದಿಲ್ಲ.

10. ಎಲ್ಲಾ ನಿರ್ವಹಣಾ ಕಾರ್ಯಗಳನ್ನು (ಮಾಲೀಕರ ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್ ನಲ್ಲಿ ಸೂಚಿಸಿದಂತೆ) ಪಾಲಿಸತಕ್ಕದ್ದು ಮತ್ತು ಮ್ಯಾನುವಲ್ ನಲ್ಲಿ ಎಮಿಶನ್ ವಾರಂಟಿಗಾಗಿ ದಾಖಲಿಸಬೇಕು.

11. ವೈಫಲ್ಯವನ್ನು ಪತ್ತೆ ಮಾಡಿದ ಪರೀಕ್ಷೆಯ ನಂತರದ ಅವಧಿಗೆ ಗ್ರಾಹಕರು ಮಾನ್ಯತೆ ಹೊಂದಿದ ಪಿಯುಸಿ (ಮಾಲಿನ್ಯ ನಿಯಂತ್ರಣದಲ್ಲಿ) ಪ್ರಮಾಣಪತ್ರವನ್ನು ಮುಂದಿಡಬೇಕಿದೆ. ಇದಕ್ಕೆ ರಶೀದಿಯೂ (ವಾಹನದ ಮೂಲ ಖರೀದಿಯ ದಿನದಿಂದ ವಾಹನವನ್ನು ಮಾಲೀಕರ ಮ್ಯಾನುವಲ್ ಮತ್ತು ಸರ್ವಿಸ್ ಬುಕ್ ಲೆಟ್ ಗೆ ಅನುಗುಣವಾಗಿ ನಿರ್ವಹಣೆಗೆ) ಅಗತ್ಯವಿದೆ.

### ಎಮಿಶನ್ ವಾರಂಟಿಯ ಸಿಗದೆ ಇರುವ ಸ್ಥಿತಿಗಳು ಅನ್ವಯಿಸುತ್ತವೆ

1. ಮಾನ್ಯತೆ ಹೊಂದಿದ ಪಿಯುಸಿ ಪ್ರಮಾಣಪತ್ರ ಇಲ್ಲದಿದ್ದಲ್ಲಿ.
2. ಮಾರುತಿ ಸುಜುಕಿ ಅಧಿಕೃತ ವರ್ಕ್ ಶಾಪ್ ನಲ್ಲಿ ಮಾಲೀಕರ ಮ್ಯಾನುವಲ್ ನಲ್ಲಿ ಸೂಚಿಸಿದ ಕಾಲಾವಧಿಗೆ ತಕ್ಕಂತೆ ವಾಹನವನ್ನು ಸರ್ವಿಸ್ ಮಾಡದೆ ಇದ್ದಲ್ಲಿ.
3. ವಾಹನವನ್ನು ಅಸಹಜವಾಗಿ ಬಳಸಿದ್ದಲ್ಲಿ. (ಅಪಘಾತ, ಮೋಟಾರ್ ಸ್ಪರ್ಧೆ, ರಾಲಿಗಳು ಅಥವಾ ದಾಖಲೆ ಸ್ಥಾಪಿಸುವ ಉದ್ದೇಶ ಇತ್ಯಾದಿ).
4. ನಾನ್ ಎಂಜಿಪಿ (ಮಾರುತಿ ಮಾನ್ಯತೆ ಹೊಂದಿದ ಭಾಗ) ಬಳಕೆ.
5. ಅನಧಿಕೃತ ರೀತಿಯಲ್ಲಿ ವಾಹನಕ್ಕೆ ಬದಲಿ.
6. ಓಡೋಮೀಟರ್ ಗೆ ಬದಲಾವಣೆ ತಂದು ವಾಸ್ತವಿಕ ಕಿಲೋಮೀಟರ್ ರೀಡಿಂಗ್ ಓದದೆ ಇರುವಂತೆ ಮಾಡಿರುವುದು.
7. ಕಲಬೆರಕೆಯ ಫ್ಯೂಯೆಲ್ ಮತ್ತು / ಅಥವಾ ಸೂಚಿಸದೆ ಇರುವ ಆಯಿಲ್ ಗಳ ಬಳಕೆ (ಇಂಜಿನ್ ಆಯಿಲ್, ಟ್ರಾನ್ಸ್ ಮಿಶನ್ ಆಯಿಲ್ ಮತ್ತು ಬ್ರೇಕ್ ಆಯಿಲ್ ಇತ್ಯಾದಿ).

## ಅಧ್ಯಾಯ - (ಎ)

ಎಮಿಶನ್ ವಾರಂಟಿ ಅಡಿಯಲ್ಲಿ ಕವರ್ ಆಗಿರುವ ಭಾಗಗಳು

1. ಫ್ಯೂಯೆಲ್ ಇಂಜೆಕ್ಷನ್ ಅಸೆಂಬ್ಲಿ, ಪ್ರೆಶರ್ ರೆಗ್ಯುಲೇಟರ್, ಥ್ರಾಟಲ್ ಬಾಡಿ ಅಸೆಂಬ್ಲಿ
2. ಇಲೆಕ್ಟ್ರಾನಿಕ್ ಕಂಟ್ರೋಲ್ ಮೊಡ್ಯುಲ್ (ಇಸಿಎಂ)
3. ಇನ್ಟೇಕ್ ಮ್ಯಾನಿಫೋಲ್ಡ್
4. ಇಜಿಆರ್ ವಾಲ್ವ್
5. ವಿತರಣೆ ಮತ್ತು ಆಂತರಿಕ ಭಾಗಗಳು
6. ಇಗ್ನಿಷನ್ ಕಾಯ್ಲ್
7. ಕ್ಯಾನಿಸ್ಟರ್ ಅಸೆಂಬ್ಲಿ
8. ವೇಪರ್ ಲಿಕ್ವಿಡ್ ಸಪರೇಟರ್
9. ಫ್ಯೂಯೆಲ್ ಟ್ಯಾಂಕ್ ಮತ್ತು ಫಿಲ್ಲರ್ ಕ್ಯಾಪ್
10. ಪಿಸಿವಿ (ಪಾಸಿಟಿವ್ ಕ್ರಾಂಕ್ ಕೇಸ್ ವೆಂಟಿಲೇಶನ್) ವಾಲ್ವ್
11. ಆಯಿಲ್ ಫಿಲ್ಲರ್ ಕ್ಯಾಪ್
12. ಕ್ಯಾಟಲಿಟಿಕ್ ಕನ್ವರ್ಟರ್
13. ಎಕ್ಸಾಸ್ಟ್ ಮ್ಯಾನಿಫೋಲ್ಡ್
14. ಸೆನ್ಸರ್ ಗಳನ್ನು ಆಧರಿಸಿದ ಎಲ್ಲಾ ಫ್ಯೂಯೆಲ್ ಇಂಜೆಕ್ಷನ್ ಸಿಸ್ಟಂ
15. ಹೈ ಪ್ರೆಶರ್ ಫ್ಯೂಯೆಲ್ ಪಂಪ್
16. ಗ್ಲೋ ಪ್ಲಗ್
17. ಗ್ಲೋ ಪ್ಲಗ್ ಕಂಟ್ರೋಲರ್
18. ಮ್ಯಾನಿವರ್ಟರ್

# ವಿಷಯಗಳ ಪಟ್ಟಿ


| | |
|---|---|
| ಫ್ಯೂಯೆಲ್ ಶಿಫಾರಸುಗಳು | 1 |
| ಚಾಲನೆಗೆ ಮುನ್ನ | 2 |
| ನಿಮ್ಮ ವಾಹನ ಚಾಲನೆ | 3 |
| ಚಾಲನಾ ಸಲಹೆಗಳು | 4 |
| ಇತರ ನಿಯಂತ್ರಣಗಳು ಮತ್ತು ಸಲಕರಣೆ | 5 |
| ವಾಹನಕ್ಕೆ ಭಾರ ತುಂಬುವುದು ಮತ್ತು ಎಳೆದೊಯ್ಯುವುದು | 6 |
| ತಪಾಸಣೆ ಮತ್ತು ನಿರ್ವಹಣೆ | 7 |
| ತುರ್ತು ಸರ್ವಿಸ್ | 8 |
| ದೃಶ್ಯಗೋಚರ ಆರೈಕೆ | 9 |
| ಸಾಮಾನ್ಯ ಮಾಹಿತಿ | 10 |
| ನಿರ್ದಿಷ್ಟತೆಗಳು | 11 |
| ಬಾಡಿ ಫ್ಯಾಬ್ರಿಕೇಶನ್ಗೆ ಸೂಚನೆ (ಚಾಸಿ ವೇರಿಯಂಟ್ಗೆ) | 12 |

# ಫ್ಯೂಯೆಲ್ ಶಿಫಾರಸುಗಳು



ಫ್ಯೂಯೆಲ್ ಶಿಫಾರಸುಗಳು........................................................................... 1-1

# ಫ್ಯೂಯೆಲ್ ಶಿಫಾರಸುಗಳು

## (ಪೆಟ್ರೋಲ್ ಮತ್ತು ಬೈ- ಇಂಧನ ಇಂಜಿನ್ ಮಾದರಿಯಿಂದ)

### ಪೆಟ್ರೋಲ್

ನೀವು 91 ಕ್ಕಿಂತಲೂ ಅಧಿಕ ಒಕ್ಟೇನ್ ಸಂಖ್ಯೆ (ಆರ್ಒಎನ್) ಇರುವ ಸೀಸರಹಿತ ಪೆಟ್ರೋಲ್ ಅನ್ನು ಬಳಸಬೇಕಾಗುತ್ತದೆ.

- **ಪೆಟ್ರೋಲ್/ ಎಥೆನಾಲ್ ಬ್ಲೆಂಡ್‌ಗಳು**
  ಸೀಸರಹಿತ ಪೆಟ್ರೋಲ್ ಮತ್ತು ಎಥೆನಾಲ್ನಂತಹ (ಧಾನ್ಯದ ಆಲ್ಕೋಹಾಲ್) ಬ್ಲೆಂಡ್ಗಳನ್ನು ಗ್ಯಾಸೋಹಾಲ್‌ಎಂದೂ ಕರೆಯಲಾಗುತ್ತದೆ, ಅವುಗಳು ಅದೇ ಏರಿಯಾದಲ್ಲಿ ವಾಣಿಜ್ಯವಾಗಿಯೂ ಲಭ್ಯವಿರುತ್ತವೆ. ಈ ರೀತಿಯ ಬ್ಲೆಂಡ್ಗಳನ್ನು 10% ಎಥೆನಾಲ್ಗಿಂತ ಹೆಚ್ಚು ಇಲ್ಲದೆ ಇದ್ದಲ್ಲಿ ನಿಮ್ಮ ವಾಹನದಲ್ಲಿ ಬಳಸಬಹುದು. ಈ ಪೆಟ್ರೋಲ್‌ಎಥೆನಾಲ್ ಬ್ಲೆಂಡ್ನಲ್ಲಿ ಪೆಟ್ರೋಲ್ಗೆ ಶಿಫಾರಸು ಮಾಡಲಾಗಿರುವುದಕ್ಕಿಂತ ಕಡಿಮೆ ಒಕ್ಟೇನ್ ರೇಟಿಂಗ್ ಇರುವುದಿಲ್ಲ ಎಂದು ಖಚಿತಪಡಿಸಿ.

- **ಪೆಟ್ರೋಲ್/ಮೆಥೆನಾಲ್ ಬ್ಲೆಂಡ್‌ಗಳು**
  ಸೀಸರಹಿತ ಪೆಟ್ರೋಲ್ಮತ್ತು ಮೆಥೆನಾಲ್ (ವುಡ್ ಆಲ್ಕೋಹಾಲ್) ಬ್ಲೆಂಡ್ಗಳು ಕೆಲವು ಪ್ರದೇಶಗಳಲ್ಲಿ ವಾಣಿಜ್ಯಾತ್ಮಕವಾಗಿಯೂ ಲಭ್ಯವಿವೆ. ಯಾವುದೇ ಪರಿಸ್ಥಿತಿಯಲ್ಲಿಯೂ 5% ಗಿಂತ ಹೆಚ್ಚು ಮೆಥನಾಲ್‌ಇರುವಂತಹ ಇಂಧನಗಳನ್ನು ಬಳಸಬೇಡಿ. ಅಂತಹ ಇಂಧನಗಳನ್ನು ಬಳಸುವುದರಿಂದ ಆಗುವ ಫ್ಯೂಯೆಲ್ಸಿಸ್ಟಂ ಹಾನಿ ಅಥವಾ ವಾಹನ ಕಾರ್ಯದಲ್ಲಿನ ಸಮಸ್ಯೆಗಳಿಗೆ ಮಾರುತಿ ಸುಜುಕಿ ಜವಾಬ್ದಾರರಲ್ಲ ಮತ್ತು ಹೊಸ ವಾಹನ ವಾರಂಟಿಯಲ್ಲಿ ಅದು ಅನ್ವಯವಾಗುವುದಿಲ್ಲ.
  5% ಅಥವಾ ಕಡಿಮೆ ಮೆಥನಾಲ್ ಹೊಂದಿರುವ ಫ್ಯೂಯೆಲ್‌ಗಳಲ್ಲಿ ಸಹದ್ರಾವಕಗಳು ಮತ್ತು ಕೊರೆತ ತಡೆಯುವ ಅಂಶಗಳು ಹೊಂದಿದ್ದರೆ, ಅದನ್ನು ನಿಮ್ಮ ವಾಹನದಲ್ಲಿ ಬಳಸಲು ಸೂಕ್ತವಾಗಿರುತ್ತದೆ.

*ಸೂಚನೆ:*
*ನೀವು ಪೆಟ್ರೋಲ್/ ಆಲ್ಕೋಹಾಲ್ ಬ್ಲೆಂಡ್ ಬಳಸುತ್ತಿರುವಾಗ ಇಮ್ಮ ವಾಹನದ ಚಾಲನೆಯ ದಕ್ಷತೆ ಅಥವಾ ಫ್ಯೂಯೆಲ್ ಬಳಕೆಯ ದಕ್ಷತೆಯ ಬಗ್ಗೆ ನಿಮಗೆ ತೃಪ್ತಿ ಇಲ್ಲದೆ ಇದ್ದಲ್ಲಿ, ನೀವು ಆಲ್ಕೋಹಾಲ್ ಇಲ್ಲದ ಸೀಸರಹಿತ ಪೆಟ್ರೋಲ್ಬ ಳಸಲು ಆರಂಭಿಸಬೇಕು.*

| *ಸೂಚನ* |
|---|
| **ಬಿಸಿಯಾಗಿರುವ ಹವಾಮಾನದಲ್ಲಿ ಫ್ಯೂಯೆಲ್ ವಿಸ್ತರಣೆಗೊಳ್ಳಲು ಫ್ಯೂಯೆಲ್ ಟ್ಯಾಂಕ್ನಲ್ಲಿ ಸಾಕಷ್ಟು ಗಾಳಿಯಾಡುವ ಸ್ಥಳವಿದೆ. ಫಿಲ್ಲರ್ ನಾಜಲ್ ಸ್ವಯಂಚಾಲಿತವಾಗಿ ಮುಚ್ಚಿಕೊಂಡ ನಂತರ ಅಥವಾ ಆರಂಭಿಕ ಹಂತದಲ್ಲಿ ಗಾಳಿ ಹಿಂದಕ್ಕೆ ಹರಿದ ನಂತರವೂ ನೀವು ಇಂಧನ ತುಂಬುವುದನ್ನು ನೀವು ಮುಂದುವರಿಸಿದಲ್ಲಿ, ಏರ್ ಚೇಂಬರ್ ತುಂಬಿಕೊಳ್ಳಲಿದೆ. ಈ ರೀತಿಯಲ್ಲಿ ಪೂರ್ಣವಾಗಿ ತುಂಬಿರುವಾಗ ಬಿಸಿಗೆ ತೆರೆದುಕೊಂಡಲ್ಲಿ, ವಿಸ್ತರಣೆಯ ಕಾರಣದಿಂದ ಸೋರಿಕೆಯಾಗುವ ಸಾಧ್ಯತೆ ಇರುತ್ತದೆ. ಅಂತಹ ಪೂರ್ಣ ಸೋರಿಕೆಯನ್ನು ತಡೆಯಲು, ಫಿಲ್ಲರ್ ನಾಜಲ್ ಸ್ವಯಂಚಾಲಿತವಾಗಿ ಮುಚ್ಚಿಕೊಳ್ಳುವಾಗ, ಅಥವಾ ಪರ್ಯಾಯ ಸ್ವಯಂಚಾಲಿತವಲ್ಲದ ವ್ಯವಸ್ಥೆಯನ್ನು ಬದಲಿಸುವಾಗ, ಆರಂಭದ ಹಂತದಲ್ಲಿ ತೆರಪಿನಲ್ಲಿ ಮರಳಿ ಗಾಳಿ ಹರಿದಾಡುವಾಗ ತುಂಬುವುದನ್ನು ನಿಲ್ಲಿಸಿ.** |

| *ಸೂಚನ* |
|---|
| **ಮರಳಿ ಇಂಧನ ತುಂಬಿಸುವಾಗ ಆಲ್ಕೋಹಾಲ್ ಹೊಂದಿರುವ ಇಂಧನವನ್ನು ಚೆಲ್ಲದಂತೆ ಜಾಗರೂಕತೆ ವಹಿಸಿ. ಇಂಧನವನ್ನು ವಾಹನದ ಮೇಲೆ ಚೆಲ್ಲಿದಲ್ಲಿ, ತಕ್ಷಣವೇ ಅದನ್ನು ಒರೆಸಿ. ಆಲ್ಕೋಹಾಲ್ ಹೊಂದಿರುವ ಇಂಧನವು ಹಾನಿ ತರಬಹುದು. ಅದು ಹೊಸ ವಾಹನದ ವ್ಯಾರಂಟಿಯಲ್ಲಿ ಅನ್ವಯಿಸುವುದಿಲ್ಲ.** |

## (ಬೈ ಫ್ಯೂಯೆಲ್ ಇಂಜಿನ್ಮಾಡೆಲ್ಗೆ)

### ಸಿ.ಎನ್.ಜಿ.

ಸಿ.ಎನ್.ಜಿ. (ಕಂಪ್ರೆಸ್ಡ್ನ್ಯಾಚುರಲ್ ಗ್ಯಾಸ್) ಪ್ರಧಾನವಾಗಿ ಮೀಥೇನ್ನಿಂದ ರೂಪಿಸಲ್ಪಟ್ಟಿದೆ. ಸಿ.ಎನ್.ಜಿ. ಅನ್ನು ಶುದ್ಧ ದಹನ ಇಂಧನ ಎಂದು ಪರಿಗಣಿಸಲ್ಪಟ್ಟಿದೆ. ಸಿ.ಎನ್.ಜಿ. ಕಡಿಮೆ ಸಾಂದ್ರತೆಯಿಂದಾಗಿ, 200 ಬಾರ್ಪ್ರೆಶರ್ಗೆ ಕಂಪ್ರೆಸ್ಮಾಡಿ ವಾಹನದ ಸಂಗ್ರಹ ಸಾಮರ್ಥ್ಯವನ್ನು ವರ್ಧಿಸಲಾಗುತ್ತದೆ.

| ⚠ ಜಾಗ್ರತೆ |
|---|
| **ಸಿ.ಎನ್.ಜಿ. ಸೋರಿಕೆ ಅತವಾ ಕರ್ಕಶ ಶಬ್ದ ಅಥವಾ ಯಾವುದೇ ಬಾಹ್ಯ ಹಾನಿಯು ಸಿ.ಎನ್.ಜಿ. ಪೈಪಿಂಗ್ ಅಥವಾ ಅಪಘಾತದ ವೇಳೆ ಉಂಟಾದರೆ ಆತಂಕ ಬೇಡ.**<br>• **ವಾಹನ ಸ್ಟಾಪ್ ಮಾಡಿ ಮತ್ತು ಇಂಜಿನ್ ಆಫ್ಮಾಡಿ, ಕಿಟಕಿ ಮತ್ತು ಎಲ್ಲ ಬಾಗಿಲುಗಳನ್ನು ಕೆಳಕ್ಕೆ ಇಳಿಸಿ.**<br>• **ಮ್ಯಾನ್ಯುಅಲ್‌ಶಟ್‌ಆಫ್‌ವಾಲ್ವ್‌ಮುಚ್ಚಿರುವುದನ್ನು ಖಚಿತಪಡಿಸಿ.**<br>• **ದೃಢೀಕೃತ ಮಾರುತಿ ಕಮರ್ಶಿಯಲ್ವರ್ಕ್ಶಾಪ್ಗೆ ತಕ್ಷಣವೇ ಹೆಚ್ಚಿನ ನೆರವಿಗಾಗಿ ಕರೆ ಮಾಡಿ.** |

**(ಡೀಸೆಲ್ ಇಂಜಿನ್ ಮಾಡೆಲ್‌ಗೆ ಮಾತ್ರ)**

ಸಿಟೇನ್ ನಂಬರ್ (ಸಿನ್) 51 ರ ಮೇಲೆ ಇರುವ ಡೀಸಲ್ ಫ್ಯೂಯೆಲ್ ಮತ್ತು 50 ppm (ಪಿ.ಪಿ.ಮ್) ಗಿಂತ (ಪ್ರತೀ ಮಿಲಿಯನ್ ಗೆ ಭಾಗಗಳು) ಕಡಿಮೆ ಇರುವ ಸಲ್ಫರ್ ವಸ್ತು ವಿಷಯಗಳನ್ನು ಹೊಂದಿದ ಡೀಸೆಲ್ ಫ್ಯೂಯೆಲ್ ಅನ್ನೇ ಕಡ್ಡಾಯವಾಗಿ ನೀವು ಬಳಸತಕ್ಕದ್ದು. EN590 ಗೆ ಅನುಕೂಲಕರವಾಗಿರುವ ಡೀಸೆಲ್ ಫ್ಯೂಯೆಲ್ ಬಳಸುವಂತೆ ಮಾರುತಿ ಸುಜುಕಿ ಶಿಫಾರಸು ಮಾಡುತ್ತದೆ. ಮೆರೈನ್ ಡೀಸಲ್ ಫ್ಯೂಯೆಲ್, ಹೀಟಿಂಗ್ ಆಯಿಲ್ ಗಳು ಇತ್ಯಾದಿ ಬಳಸಬೇಡಿ.

***ಸೂಚನೆ***

**ಫ್ಯೂಯೆಲ್ ಟ್ಯಾಂಕ್ ನಲ್ಲಿ ಬಿಸಿ ವಾತಾವರಣದಲ್ಲಿ ಫ್ಯೂಯೆಲ್ ವಿಸ್ತರಣೆಗೆ ಅವಕಾಶ ನೀಡಲು ಏರ್ ಸ್ಪೇಸ್ ಇದೆ. ಫಿಲ್ಲರ್ ನಾಜಲ್ ಯಾಂತ್ರಿಕವಾಗಿ ಶಟಾಫ್ ಆದ ಮೇಲೂ ಅಥವಾ ಬ್ಲೋ ಬ್ಯಾಕ್ ನಡೆದ ಮೇಲೂ, ನೀವು ಫ್ಯೂಯೆಲ್ ತುಂಬುವುದನ್ನು ಮುಂದುವರಿಸಿದಲ್ಲಿ ಏರ್ ಚೇಂಬರ್ ತುಂಬಿ ಬಿಡುತ್ತದೆ. ಪೂರ್ಣವಾಗಿ ತುಂಬಿದಾಗ ಈ ರೀತಿಯಲ್ಲಿ ಬಿಸಿಗೆ ತೆರೆದುಕೊಳ್ಳುವುದು ಫ್ಯೂಯೆಲ್ ವಿಸ್ತರಣೆಯ ಕಾರಣದಿಂದಾಗಿ ಸೋರಿಕೆಗೆ ಕಾರಣವಾಗಲಿದೆ. ಅಂತಹ ಫ್ಯೂಯೆಲ್ ಸೋರಿಕೆಯನ್ನು ತಡೆಯಲು, ಫಿಲ್ಲರ್ ನಾಜಲ್ ಯಾಂತ್ರಿಕವಾಗಿ ಶಟಾಫ್ ಆದ ಮೇಲೆ ಅಥವಾ ಪರ್ಯಾಯ ನಾನ್ ಆಟೋಮ್ಯಾಟಿಕ್ ಸಿಸ್ಟಂ ಬಳಸುವಾಗ ತುಂಬುವುದನ್ನು ಬಿಡಿ. ಆರಂಭಿಕ ಗಾಳಿ ಮರಳಿ ಬರುವುದು ನಡೆಯುತ್ತದೆ.**

***ಸೂಚನೆ***


**ಫ್ಯೂಯೆಲ್ ಮರಳಿ ತುಂಬುವಾಗ ಆಲ್ಕೋಹಾಲ್ ತುಂಬಿರುವ ಫ್ಯೂಯೆಲ್ ಅನ್ನು ಚೆಲ್ಲದೆ ಇರುವ ಬಗ್ಗೆ ಜಾಗ್ರತೆವಹಿಸಿ. ವಾಹನದ ಬಾಡಿ ಮೇಲೆ ಫ್ಯೂಯೆಲ್ ಹೀಗೆ ಚೆಲ್ಲಿದಲ್ಲಿ, ತಕ್ಷಣವೇ ಅದನ್ನು ಒರೆಸಿಬಿಡಿ. ಆಲ್ಕೋಹಾಲ್ ಹೊಂದಿರುವ ಫ್ಯೂಯೆಲ್ ಪೈಂಟ್ ಗೆ ಹಾನಿ ಮಾಡಬಹುದು. ಹೊಸ ವಾಹನ ಲಿಮಿಟೆಡ್ ವಾರಂಟಿಯಲ್ಲಿ ಅದಕ್ಕೆ ರಕ್ಷಣೆ ನೀಡಲಾಗಿಲ್ಲ.**

# ಚಾಲನೆಗೆ ಮುನ್ನ


ಕೀಗಳು .......... 2-1
ಡೋರ್ ಲಾಕ್ ಗಳು .......... 2-1
ಟೈಲ್ ಗೇಟ್ .......... 2-1
ಕನ್ನಡಿಗಳು .......... 2-3
ಮಿರರ್ ಗಳು .......... 2-3
ಸೀಟ್ ಗಳು .......... 2-3
ಸೀಟ್ ಬೆಲ್ಟ್ ಗಳು .......... 2-4
ಇನ್ ಸ್ಟ್ರುಮೆಂಟ್ ಕ್ಲಸ್ಟರ್ .......... 2-9
ಸ್ಪೀಡೋಮೀಟರ್ .......... 2-10
ಫ್ಯೂಯೆಲ್ ಗೇಜ್ .......... 2-10
ಮಾಹಿತಿ ಡಿಸ್ಪ್ ಲೇ .......... 2-10
ವಾರ್ನಿಂಗ್ ಮತ್ತು ಇಂಡಿಕೇಟರ್ ಲೈಟ್ ಗಳು .......... 2-14
ಲೈಟಿಂಗ್ ಕಂಟ್ರೋಲ್ ಲಿವರ್ .......... 2-18
ಹೆಡ್ ಲೈಟ್ ಲೆವೆಲಿಂಗ್ ಸ್ವಿಚ್ .......... 2-18
ಟರ್ನ್ ಸಿಗ್ನಲ್ ಕಂಟ್ರೋಲ್ ಲಿವರ್ .......... 2-19
ಹಜಾರ್ಡ್ ವಾರ್ನಿಂಗ್ ಸ್ವಿಚ್ .......... 2-19
ವಿಂಡ್ ಶೀಲ್ಡ್ ವೈಪರ್ ಮತ್ತು ವಾಶರ್ ಲೆವರ್ .......... 2-20
ಹಾರ್ನ್ .......... 2-21
ಸಿ.ಎನ್.ಜಿ. ಸಿಲಿಂಡರ್ ವಾರ್ನಿಂಗ್ ಲೇಬಲ್ (ಅಳವಡಿಸಿದಲ್ಲಿ) .......... 2-21
ಸಿ.ಎನ್.ಜಿ. ವಾರ್ನಿಂಗ್ ಲೇಬಲ್ (ಅಳವಡಿಸಿದಲ್ಲಿ) .......... 2-22
ಸಿ.ಎನ್.ಜಿ. ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ (ಅಳವಡಿಸಿದಲ್ಲಿ) .......... 2-22


2

## ಕೀಗಳು




51KM024

ನಿಮ್ಮ ವಾಹನವು ಸಮಾನ ಕೀಗಳ ಜೊತೆಗೆ ಬರುತ್ತದೆ. ಸ್ಪೇರ್ ಕೀಯನ್ನು ಸುರಕ್ಷಿತವಾದ ಸ್ಥಳದಲ್ಲಿಡಿ. ಒಂದು ಕೀ ವಾಹನದ ಮೇಲಿನ ಎಲ್ಲಾ ಲಾಕ್ ಗಳನ್ನೂ ತೆರೆಯಬಲ್ಲದು.


ಕೀ ಗುರುತು ಸಂಖ್ಯೆಯನ್ನು ಲೋಹದ ಟ್ಯಾಗ್ ನಲ್ಲಿ ಸ್ಟಾಂಪ್ ಮಾಡಲಾಗಿದೆ. ಈ ಟ್ಯಾಗ್ ಅನ್ನು ಕೀ ಜೊತೆಗೆ ಅಥವಾ ಕೀಗಳ ಮೇಲೆ ಕೊಡಲಾಗಿದೆ. ಟ್ಯಾಗ್ ಅನ್ನು (ಇದ್ದಲ್ಲಿ) ಸುರಕ್ಷಿತವಾದ ಸ್ಥಳದಲ್ಲಿಡಿ. ನೀವು ನಿಮ್ಮ ಕೀಗಳನ್ನು ಕಳೆದುಕೊಂಡಲ್ಲಿ, ಹೊಸ ಕೀಗಳನ್ನು ಮಾಡಲು ನಿಮಗೆ ಈ ನಂಬ್ರದ ಅಗತ್ಯವಿದೆ. ನಿಮ್ಮ ಭವಿಷ್ಯದ ಉಲ್ಲೇಖಕ್ಕಾಗಿ ಕೆಳಗಿನ ನಂಬ್ರವನ್ನು ಬರೆಯಿರಿ.

ಕೀ ನಂಬ್ರ:

## ಡೋರ್ ಲಾಕ್ ಗಳು

### ಸೈಡ್ ಡೋರ್ ಲಾಕ್ ಗಳು

#### ಡ್ರೈವರ್ ಗಳ ಡೋರ್




76MH0A001


(1) ಲಾಕ್
(2) ಅನ್ಲಾಕ್
(3) ಫ್ರಂಟ್
(4) ರೇರ್

ವಾಹನದ ಹೊರಗಿನಿಂದ ಡ್ರೈವರ್ಸ್ ಡೋರ್ ಲಾಕ್ ಮಾಡಲು:

- ಕೀಯನ್ನು ತೂರಿಸಿ ಮತ್ತು ಕೀಯ ಟಾಪ್ ಅನ್ನು ವಾಹನದ ಫ್ರಂಟ್ ಕಡೆಗೆ ತಿರುಗಿಸಿ, ಅಥವಾ
- ಲಾಕ್ ನಾಬ್ ಅನ್ನು ಕೆಳಗೆ ದೂಡಿ, ನಂತರ ಎಳೆದು ನೀವು ಡೋರ್ ಮುಚ್ಚುವಾಗ ಡೋರ್ ಹ್ಯಾಂಡಲ್ ಹಿಡಿಯಿರಿ.

ವಾಹನದ ಹೊರಗಿನಿಂದ ಡ್ರೈವರ್ಸ್ ಡೋರ್ ಅನ್ನು ಅನ್ಲಾಕ್ ಮಾಡಲು, ಕೀಯನ್ನು ತೂರಿಸಿ ಮತ್ತು ಕೀಯ ಟಾಪ್ ಅನ್ನು ವಾಹನದ ರೇರ್ ಕಡೆಗೆ ತಿರುಗಿಸಿ.


ಪ್ಯಾಸೆಂಜರ್ಸ್ ಡೋರ್ ಅನ್ನು ವಾಹನದ ಹೊರಗೆ ಲಾಕ್ ಮಾಡಲು, ಲಾಕ್ ನಾಬ್ ಅನ್ನು ಕೆಳಗೆ ದೂಡಿ, ನಂತರ ಎಳೆಯಿರಿ ಮತ್ತು ಡೋರ್ ಮುಚ್ಚುವಾಗ ಡೋರ್ ಹ್ಯಾಂಡಲ್ ಅನ್ನು ಹಿಡಿಯಿರಿ.




54G005


(1) ಲಾಕ್
(2) ಅನ್ಲಾಕ್

## ಟೈಲ್ ಗೇಟ್




77PH025

ಲಾಕ್ ಹ್ಯಾಂಡಲ್ ಗಳನ್ನು (1) ಎಳೆಯುವ ಮೂಲಕ ಟೈಲ್ ಗೇಟ್ ಅನ್ನು ತೆರೆಯಬಹುದು. ಮುಚ್ಚುವಾಗ ಅವುಗಳನ್ನು ದೃಢವಾಗಿ ಲಾಕ್ ಮಾಡಿ.




77PM201


ಟೈಲ್ ಗೇಟ್ ಚೈನ್ (2) ನೆರವಿನಿಂದ ಟೈಲ್ ಗೇಟ್ ಅನ್ನು ಇಂಟರ್ಮೀಡಿಯೇಟ್ ಪೊಸಿಷನ್ ಅಲ್ಲಿ ಲಾಕ್ ಮಾಡಬಹುದು.

*ಸೂಚನೆ*

**ಟೈಲ್ ಗೇಟ್ ಚೈನ್ (2) ಅನ್ನು ಬಳಸದೆ ಇದ್ದಾಗ ಪಿನ್ (3) ಜೊತೆಗೆ ಲಾಕ್ ಮಾಡಿ.**

**⚠ ಎಚ್ಚರಿಕೆ**

- **ಟೈಲ್ ಗೇಟ್ ತೆರೆದಿರುವಂತೆ ವಾಹನ ಚಲಾಯಿಸುವುದು/ಇಂಟರ್ಮೀಡಿಯೇಟ್ ಪೊಸಿಷನ್ ಟೈಲ್ ಗೇಟ್ ಸ್ವಿಂಗ್ ಆಗಿ ಬೇರೆ ಕಡೆಗೆ ಹೊಡೆದುಕೊಳ್ಳಬಹುದು. ಇದರಿಂದ ಗಾಯ ಅಥವಾ ಸಾವೂ ಸಂಭವಿಸಬಹುದು.**
- **ಟೈಲ್ ಗೇಟ್ ತೆರೆದಿರುವಂತೆ / ಇಂಟರ್ಮೀಡಿಯೇಟ್ ಪೊಸಿಷನ್ ಇತರ ಡ್ರೈವರ್ ಗಳನ್ನು ಟೈಲ್ ಲೈಟ್ ಗಳು ಕಾಣದಂತೆ ಅಮುಕಿ ಹಿಡಿಯುತ್ತದೆ, ಇದರಿಂದ ಅಪಘಾತಗಳು ಸಂಭವಿಸಬಹುದು. ಚಾಲನೆಗೆ ಮೊದಲು ಟೈಲ್ ಗೇಟ್ ಮುಚ್ಚಿರುವುದು ಮತ್ತು ಲಾಕ್ ಆಗಿರುವುದನ್ನು ಖಚಿತಪಡಿಸಿ.**
- **ಅಪಘಾತದ ಸಂದರ್ಭದಲ್ಲಿ ವಾಹನದಲ್ಲಿರುವ ಸರಕು ಹೊರಗೆ ತಳ್ಳಲ್ಪಡದಂತೆ ಟೈಲ್ ಗೇಟ್ ಯಾವಾಗಲೂ ಮುಚ್ಚಿರುವುದನ್ನು ಮತ್ತು ದೃಢವಾಗಿ ಲಾಕ್ ಆಗಿರುವುದನ್ನು ಖಚಿತಪಡಿಸಿ.**
- **ಇಂಟರ್ಮೀಡಿಯೇಟ್ ಪೊಸಿಷನ್ ನಲ್ಲಿ ಲಾಕ್ ಆಗಿರುವಾಗ ಟೈಲ್ ಗೇಟ್ ಮೇಲೆ ನಿಲ್ಲಬೇಡಿ, ಭಾರ ಇಡಬೇಡಿ ಅಥವಾ ಸರಕು ಇಡಬೇಡಿ.**
- **ಟೈಲ್ ಗೇಟ್ ಪೂರ್ಣ ತೆರೆದ ಸ್ಥಿತಿಯಲ್ಲಿ ಇದ್ದಾಗ, ವಾಹನದ ರೇರ್ ಲೈಟಿಂಗ್ ಡಿವೈಸ್ ಗಳಾದ ಪೊಸಿಷನ್ ಲ್ಯಾಂಪ್, ಟರ್ನ್ ಸಿಗ್ನಲ್ ಇಂಡಿಕೇಟರ್ ಮತ್ತು ಸ್ಟಾಪ್ ಲ್ಯಾಂಪ್ ಮುಚ್ಚಿ ಹೋಗುತ್ತದೆ, ಮತ್ತು ಕಾಣುವುದಿಲ್ಲ.**




77PM202


**⚠ ಎಚ್ಚರಿಕೆ**

- **ಲೋಡಿಂಗ್ ಮತ್ತು ಅನ್ಲೋಡಿಂಗ್ ಅನ್ನು ಟೈಲ್ ಗೇಟ್ (1) ಪೂರ್ಣವಾಗಿ ತೆರೆದಿರುವ ಸ್ಥಿತಿಯಲ್ಲಿ ಮಾಡಿದರೆ, ಒಂದು ಎಚ್ಚರಿಕೆ ನೀಡುವ ಟ್ರಯಾಂಗಲ್ (2) ಅನ್ನು ಇತರ ಬಳಕೆದಾರರನ್ನು ವಾಹನ ಇರುವ ಬಗ್ಗೆ ಎಚ್ಚರಿಸಲು ರಸ್ತೆಯ ಮೇಲೆ ಕಣ್ಣಿಗೆ ಕಾಣುವ ಸ್ಥಿತಿಯಲ್ಲಿ ಇಡಬೇಕಾಗುತ್ತದೆ.**

## ವಿಂಡೋಗಳು

### ಮ್ಯಾನುವಲ್ ವಿಂಡೋ ನಿಯಂತ್ರಣ


ಉದಾಹರಣೆ



60G010

ಡೋರ್ ಪ್ಯಾನಲ್ ಮೇಲೆ ಇರುವ ಹ್ಯಾಂಡಲ್ ಅನ್ನು ತಿರುಗಿಸುವ ಮೂಲಕ ಡೋರ್ ವಿಂಡೋಗಳನ್ನು ಮೇಲೆತ್ತಿ ಅಥವಾ ಕೆಳಗೆ ಮಾಡಿ.

### ರೇರ್ ವಿಂಡೋ




ಉದಾಹರಣೆ


77PH073

ವಿಂಡೋವನ್ನು ತೆರೆಯಲು, ಲಾಕ್ (1) ಅನ್ನು ದೂಡಿ ಮತ್ತು ವಿಂಡೋವನ್ನು ಜಾರಿಸಿ.

## ಕನ್ನಡಿಗಳು

### ರೇರ್ ವ್ಯೂ ಮಿರರ್ ಒಳಗೆ

ಕನ್ನಡಿಯಲ್ಲಿ ನಿಮ್ಮ ವಾಹನದ ಹಿಂದಿನ ದೃಶ್ಯವನ್ನು ನೋಡಲು ನೀವು ಒಳಗಿನ ರೇರ್ ವ್ಯೂ ಮಿರರ್ ಹೊಂದಿಸಿಕೊಳ್ಳಬಹುದು.



ಉದಾಹರಣೆ

74LHT0235


## ಹೊರಗಿನ ರೇರ್ ವ್ಯೂ ಮಿರರ್ ಗಳು

ನೀವು ಕನ್ನಡಿಗಳಲ್ಲಿ ನಿಮ್ಮ ವಾಹನದ ಬದಿಯನ್ನು ಹೊರಗಿನ ರೇರ್ ವ್ಯೂ ಮಿರರ್ ಗಳನ್ನು ಹೊಂದಿಸಿ.

**⚠ ಎಚ್ಚರಿಕೆ**

ಸೈಡ್ ಕಾನ್ವೆಕ್ಸ್ ಮಿರರ್ ನಲ್ಲಿ ಕಾಣುವ ವಾಹನದ ಗಾತ್ರ ಅಥವಾ ಅಂತರ ಅಥವಾ ಇತರ ವಸ್ತುವನ್ನು ನಿರ್ಧರಿಸುವಾಗ ಬಹಳ ಜಾಗರೂಕವಾಗಿರಿ. ವಸ್ತುಗಳು ಹೆಚ್ಚು ಸಣ್ಣದಾಗಿ ಕಾಣಿಸುತ್ತವೆ ಮತ್ತು ಫ್ಲಾಟ್ ಮಿರರ್ ನಲ್ಲಿ ಕಾಣುವುದಕ್ಕಿಂತಲೂ ಹೆಚ್ಚು ದೂರದಲ್ಲಿರುವಂತೆ ಕಾಣುತ್ತವೆ.

ಉದಾಹರಣೆ



64P0190

## ಸೀಟ್ ಗಳು


### ಸೀಟ್ ಹೊಂದಾಣಿಕೆ (ಡ್ರೈವರ್ ನ ಸೀಟು)

**⚠ ಎಚ್ಚರಿಕೆ**

ಚಾಲನೆ ಮಾಡುವಾಗ ಡ್ರೈವರ್ಸ್ ಸೀಟ್ ಹೊಂದಿಸಲು ಯಾವತ್ತೂ ಪ್ರಯತ್ನಿಸಬೇಡಿ. ಸೀಟು ಆಕಸ್ಮಿಕವಾಗಿ ಚಲಿಸುವ ಸಾಧ್ಯತೆ ಇದ್ದು, ನಿಯಂತ್ರಣ ಕಳೆದುಕೊಳ್ಳಬಹುದು. ನೀವು ಚಾಲನೆ ಮಾಡುವ ಮೊದಲೇ ಡ್ರೈವರ್ಸ್ ಸೀಟ್ ಸರಿಯಾಗಿ ಹೊಂದಿಸಿರುವುದನ್ನು ಖಚಿತಪಡಿಸಿ.

**⚠ ಎಚ್ಚರಿಕೆ**

ಸುರಕ್ಷಿತ ಸಾಧನವಾಗಿ ಸೀಟ್ ಬೆಲ್ಟ್ ಗಳ ಪರಿಣಾಮವನ್ನು ಕಡಿಮೆಗೊಳಿಸುವ ರೀತಿಯಲ್ಲಿ ಮಿತಿಮೀರಿ ಸೀಟ್ ಬೆಲ್ಟ್ ಗಳು ಸಡಿಲವಾಗುವುದನ್ನು ತಪ್ಪಿಸಲು, ಸೀಟ್ ಬೆಲ್ಟ್ ಗಳನ್ನು ಕಟ್ಟಿಕೊಳ್ಳುವ ಮೊದಲೇ ಸೀಟ್ ಗಳನ್ನು ಹೊಂದಿಸಲಾಗಿರುವುದನ್ನು ಖಚಿತಪಡಿಸಿ.




77PH087

**ಸೀಟ್ ಪೊಸಿಷನ್ ಅಜಸ್ಟ್‌ಮೆಂಟ್ ಲಿವರ್ (1)**


ಲಿವರ್ ಅನ್ನು ಮೇಲಕ್ಕೆ ಎಳೆದು ಸೀಟನ್ನು ಜಾರಿಸಿ.

ಹೊಂದಾಣಿಕೆಯ ನಂತರ, ಸೀಟನ್ನು ಮುಂದಕ್ಕೆ ಮತ್ತು ಹಿಂದಕ್ಕೆ ಚಲಿಸಲು ಪ್ರಯುತ್ನಿಸಿ ಅದನ್ನು ಭದ್ರವಾಗಿ ಸಿಕ್ಕಿಸಲಾಗಿರುವುದನ್ನು ಖಚಿತಪಡಿಸಿ.ಮುಚ್ಚಿದ ಮೇಲೆ, ಸೀಟುಗಳನ್ನು ಸ್ವಲ್ಪ ಚಲಿಸಿ ಅವು ಭದ್ರವಾಗಿ ಸಿಕ್ಕಿಸಲಾಗಿದೆ ಎಂದು ಖಚಿತಪಡಿಸಿ.

**⚠ ಜಾಗ್ರತೆ**

**ಸೀಟನ್ನು ಹೊಂದಿಸಿಕೊಳ್ಳುವಾಗ ಸೀಟಿನ ನಡುವೆ ಕೈಗಳು ಸಿಕ್ಕಿಕೊಳ್ಳದಂತೆ ಅಥವಾ ನಿಮ್ಮ ದೇಹಕ್ಕೆ ಹೊಡೆತ ಬೀಳದೆ ಇರುವಂತೆ ಜಾಗರೂಕತೆ ವಹಿಸಿ.**

## ಸೀಟ್ ಬೆಲ್ಟ್‌ಗಳು





65D231S

**⚠ ಎಚ್ಚರಿಕೆ**

**ನಿಮ್ಮ ಸೀಟ್ ಬೆಲ್ಟ್‌ಗಳನ್ನು ಸದಾ ಧರಿಸಿ ಇರಿ.**

**⚠ ಎಚ್ಚರಿಕೆ**

**ಅಪಘಾತದ ಸಂದರ್ಭದಲ್ಲಿ ಗಾಯಗಳು ಅಥವಾ ಮರಣದ ಅಪಾಯವನ್ನು ಕಡಿಮೆಗೊಳಿಸಲು, ಏರ್ ಬ್ಯಾಗ್‌ಗಳು ಸೀಟಿಂಗ್ ಪೊಸಿಷನಿಗೆ ಮೌಂಟ್ ಆಗಿದ್ದರೂ ಅಥವಾ ಆಗಿರದೆ ಇದ್ದರೂ ಸಹ, ಚಾಲಕ ಮತ್ತು ಪ್ರಯಾಣಿಕರು ಸೀಟ್ ಬೆಲ್ಟ್‌ಗಳನ್ನು ಯಾವಾಗಲೂ ಹಾಕಿಕೊಂಡಿರಬೇಕು.**





65D606


**⚠ ಎಚ್ಚರಿಕೆ**

- **ವಾಹನದ ಕಾರ್ಗೋ ಏರಿಯಾದಲ್ಲಿ ಜನರಿಗೆ ಪ್ರಯಾಣಿಸಲು ಅವಕಾಶ ಕೊಡಬೇಡಿ. ಅಪಘಾತವಾಗುವ ಸಾಧ್ಯತೆಯಿದ್ದಲ್ಲಿ, ಸೀಟ್ ಬೆಲ್ಟ್ ಅನ್ನು ಭದ್ರವಾಗಿ ಸಿಕ್ಕಿಸಿಕೊಂಡಿರದೆ ಪ್ರಯಾಣ ಮಾಡುತ್ತಿರುವ ವ್ಯಕ್ತಿಗಳಿಗೆ ಅಪಾಯವಾಗುವ ಸಾಧ್ಯತೆ ಹೆಚ್ಚಿರುತ್ತದೆ.**
- **ಸೀಟ್ ಬೆಲ್ಟ್‌ಗಳನ್ನು ಯಾವಾಗಲೂ ಈ ಕೆಳಗಿನಂತೆ ಹೊಂದಿಸಿಕೊಳ್ಳಬೇಕು:**
  - **ಬೆಲ್ಟ್‌ನ ಕೆಳಗಿನ ಭಾಗವನ್ನು ಪೆಲ್ವಿಸ್‌ನ ಕೆಳ ಭಾಗದಲ್ಲಿ ಧರಿಸಬೇಕೇ ವಿನಾ ಸೊಂಟದ ಸುತ್ತಲೂ ಧರಿಸಬಾರದು.**
  - **ಶೋಲ್ಡರ್ ಸ್ಟ್ರಾಪ್‌ಗಳನ್ನು ಬಾಹುಗಳಿಂದ ಹೊರಗೆ ಧರಿಸಬೇಕು ಮತ್ತು ತೋಳಿನ ಅಡಿಯಲ್ಲಿ ಯಾವತ್ತೂ ತೊಡಬಾರದು.**
  - **ಶೋಲ್ಡರ್ ಸ್ಟ್ರಾಪ್‌ಗಳನ್ನು ಮುಖದಿಂದ ಮತ್ತು ಕುತ್ತಿಗೆಯಿಂದ ದೂರವಿಡಬೇಕು. ಆದರೆ ನಿಮ್ಮ ಬಾಹುಗಳಿಂದ ಕೆಳಗೆ ಬೀಳುವಂತೆ ಇರಬಾರದು.**

(ಮುಂದುವರಿದಿದೆ..)




65D201




65D199

### ⚠ ಎಚ್ಚರಿಕೆ

(ಮುಂದುವರಿದಿದೆ)

- ಸೀಟ್ ಬೆಲ್ಟ್ ಗಳನ್ನು ಸ್ಟ್ರಾಪ್ಸ್ ತಿರುಚಿರುವಂತೆ ಎಂದೂ ಧರಿಸಬಾರದು ಮತ್ತು ಅನುಕೂಲವನ್ನು ನೋಡಿಕೊಂಡು ಸಾಕಷ್ಟು ಬಿಗಿಗೊಳಿಸಬೇಕು. ಆ ಮೂಲಕ ಅವುಗಳನ್ನು ಯಾವ ರಕ್ಷಣೆಗಾಗಿ ವಿನ್ಯಾಸಗೊಳಿಸಲಾಗಿದೆಯೋ ಅದು ಸಿಗುವಂತೆ ಮಾಡಬೇಕು. ಅನುಕೂಲಕರವಾಗಿ ಹೊಂದಿಸಿಕೊಂಡ ಬೆಲ್ಟಿಗೆ ಹೋಲಿಸಿದಲ್ಲಿ ಸಡಿಲವಾಗಿರುವ ಬೆಲ್ಟಿನಿಂದ ಹೆಚ್ಚು ರಕ್ಷಣೆ ಸಿಗುವುದಿಲ್ಲ.
- ಪ್ರತೀ ಸೀಟ್ ಬೆಲ್ಟನ್ನು ಸಿಕ್ಕಿಸುವ ಜಾಗದಲ್ಲಿ ಸೂಕ್ತವಾದ ಬಕಲ್ ಕ್ಯಾಚ್ ಒಳಗೆ ತೂರಿಸಿರುವುದನ್ನು ಖಚಿತಪಡಿಸಿ.

(ಮುಂದುವರಿದಿದೆ..)

### ⚠ ಎಚ್ಚರಿಕೆ

(ಮುಂದುವರಿದಿದೆ)

- ಗರ್ಭಿಣಿ ಮಹಿಳೆಯ ವೈದ್ಯಕೀಯ ಸಲಹೆಗಾರರು ಆಕೆಗಾಗಿ ಸೂಕ್ತ ರೀತಿಯ ಚಾಲನೆಯ ನಿರ್ದಿಷ್ಟತೆಗಳನ್ನು ಶಿಫಾರಸು ಮಾಡಿದ್ದಾರಾದರೂ ಕೂಡ ಮಹಿಳೆ ಸೀಟ್ ಬೆಲ್ಟ್ ಗಳನ್ನು ಬಳಸಬೇಕು. ಬೆಲ್ಟಿನ ಕೆಳಭಾಗವನ್ನು ಸಾಧ್ಯವಾದಷ್ಟು ಕೆಳಭಾಗದಲ್ಲಿ ನಿತಂಬದ ಸುತ್ತಲೂ, ಚಿತ್ರದಲ್ಲಿ ತೋರಿಸಿರುವಂತೆ ಧರಿಸಬೇಕು ಎನ್ನುವುದು ನೆನಪಿರಲಿ.
- ಬಟ್ಟೆಯಲ್ಲಿರುವ ಅಥವಾ ನಿಮ್ಮ ಪಾಕೆಟ್ ಗಳಲ್ಲಿರುವ ಕಠಿಣವಾದ ಅಥವಾ ಮುರಿಯಬಹುದಾದ ವಸ್ತುಗಳ ಮೇಲೆ ನಿಮ್ಮ ಸೀಟ್ ಬೆಲ್ಟ್ ಅನ್ನು ಧರಿಸಬೇಡಿ. ಅಪಘಾತಗಳು ಸಂಭವಿಸಿದಲ್ಲಿ, ಗಾಜುಗಳು, ಪೆನ್ನುಗಳು ಇತ್ಯಾದಿ ವಸ್ತುಗಳು ಸೀಟ್ ಬೆಲ್ಟ್ ಅಡಿಯಲ್ಲಿದ್ದರೆ ಗಾಯಗಳನ್ನು ಮಾಡಬಹುದು.

(ಮುಂದುವರಿದಿದೆ..)

### ⚠ ಎಚ್ಚರಿಕೆ

(ಮುಂದುವರಿದಿದೆ)

- ಅದೇ ಸೀಟ್ ಬೆಲ್ಟ್ ಅನ್ನು ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಧರಿಸಬಾರದು. ಹಸುಗೂಸು ಅಥವಾ ವ್ಯಕ್ತಿಯ ಮಡಿಲಲ್ಲಿ ಕುಳಿತಿರುವ ಮಗುವಿಗೆ ಸೀಟ್ ಬೆಲ್ಟ್ ಅನ್ನು ಜೋಡಿಸಬೇಡಿ. ಆ ರೀತಿಯಲ್ಲಿ ಸೀಟ್ ಬೆಲ್ಟ್ ಬಳಸಿದಲ್ಲಿ ಅಪಘಾತದ ಸಂದರ್ಭದಲ್ಲಿ ಗಂಭೀರ ಗಾಯಗಳಾಗುವ ಸಾಧ್ಯತೆಯಿದೆ.
- ಕಾಲ ಕಾಲಕ್ಕೆ ಸೀಟ್ ಬೆಲ್ಟ್ ಅಸೆಂಬ್ಲಿಗಳನ್ನು ಮಿತಿಮೀರಿದ ಸವೆತ ಮತ್ತು ಹಾನಿಗಾಗಿ ಪರೀಕ್ಷಿಸಿ ಗಟ್ಟಿಪಟ್ಟಿಗಳು ಯಾವುದೇ ರೀತಿಯಲ್ಲಿ ಕ್ಷೋಭೆಗೊಂಡಿದ್ದಲ್ಲಿ, ಕಶ್ಮಲಗೊಂಡಿದ್ದಲ್ಲಿ ಅಥವಾ ಹಾನಿಯಾಗಿದ್ದಲ್ಲಿ ಸೀಟ್ ಬೆಲ್ಟ್ ಗಳನ್ನು ಬದಲಿಸತಕ್ಕದ್ದು. ಗಂಭೀರವಾಗಿ ಸವೆದು ಹೋದ ಮೇಲೆ, ಅಸೆಂಬ್ಲಿಗೆ ಆದ ಹಾನಿ ಹೆಚ್ಚು ಕಾಣಿಸದೆ ಇದ್ದಲ್ಲೂ ಸಂಪೂರ್ಣ ಸೀಟ್ ಬೆಲ್ಟ್ ಅಸೆಂಬ್ಲಿಯನ್ನು ಬದಲಿಸುವುದು ಅತ್ಯಗತ್ಯ.
- ಸೂಕ್ತವಾದ ಭದ್ರತೆಯಿಲ್ಲದೆ ಹಸುಗೂಸುಗಳು ಮತ್ತು ಸಣ್ಣ ಮಕ್ಕಳನ್ನು ಕರೆದುಕೊಂಡು ಪ್ರಯಾಣಿಸಬಾರದು.
- ಮಕ್ಕಳಿಗೆ, ಶುಲ್ಡರ್ ಬೆಲ್ಟ್ ಗಳು ಕುತ್ತಿಗೆ ಅಥವಾ ಮುಖಕ್ಕೆ ಕಿರಿಕಿರಿ ಮಾಡುತ್ತಿದ್ದಲ್ಲಿ ಅವರನ್ನು ವಾಹನದ ಮಧ್ಯಭಾಗದ ಸಮೀಪದಲ್ಲಿ ಕೂರಿಸಬೇಕು.
- ಪಾಲಿಶ್ ಗಳು, ಆಯಿಲ್ ಗಳು, ರಾಸಾಯನಿಕಗಳು ಮತ್ತು ಮುಖ್ಯವಾಗಿ ಬ್ಯಾಟರಿ ಆಸಿಡ್ ಗಳಿಂದ ಸೀಟ್ ಬೆಲ್ಟ್ ನ ಗಟ್ಟಿಪಟ್ಟಿಗೆ ಹಾನಿಯಾಗುವುದನ್ನು ತಪ್ಪಿಸಿ. ಮೃದುವಾದ ಸೋಪ್ ಮತ್ತು ನೀರನ್ನು ಬಳಸಿ ಸ್ವಚ್ಛತೆಯನ್ನು ಸುರಕ್ಷಿತವಾಗಿ ಮಾಡಬಹುದು.

(ಮುಂದುವರಿದಿದೆ..)

**⚠ ಎಚ್ಚರಿಕೆ**

(ಮುಂದುವರಿದಿದೆ)


- **ಕಾಯಿನ್ ಗಳು, ಕ್ಲಿಪ್ ಗಳು ಇತ್ಯಾದಿ ಯಾವುದೇ ವಸ್ತುಗಳನ್ನು ಸೀಟ್ ಬೆಲ್ಟ್ ಬಕಲ್ ಗಳಲ್ಲಿ ತೂರಿಸಬೇಡಿ ಮತ್ತು ಈ ಭಾಗಗಳ ಮೇಲೆ ದ್ರವವನ್ನು ಚೆಲ್ಲದಿರುವಂತೆ ಜಾಗರೂಕರಾಗಿರಿ. ಬಾಹ್ಯ ವಸ್ತುಗಳು ಸೀಟ್ ಬೆಲ್ಟ್ ಬಕಲ್ ನಲ್ಲಿ ಸಿಲುಕಿಕೊಂಡಲ್ಲಿ ಸೀಟ್ ಬೆಲ್ಟ್ ಸರಿಯಾಗಿ ಕೆಲಸ ಮಾಡದೆ ಇರಬಹುದು.**

## ಲ್ಯಾಪ್ ಶುಲ್ಡರ್ ಬೆಲ್ಟ್


### ಎಮರ್ಜೆನ್ಸಿ ಲಾಕಿಂಗ್ ರಿಟ್ರಾಕ್ಟರ್ (ಇ.ಎಲ್.ಆರ್)

ಸೀಟ್ ಬೆಲ್ಟ್ ನಲ್ಲಿ ಎಮರ್ಜೆನ್ಸಿ ಲಾಕಿಂಗ್ ರಿಟ್ರಾಕ್ಟರ್ (ಇ.ಎಲ್.ಆರ್) ಇದೆ. ಅದು ಆಕಸ್ಮಿಕವಾಗಿ ನಿಂತಾಗ ಅಥವಾ ಪರಿಣಾಮವಾದಾಗ ಮಾತ್ರ ಸೀಟ್ ಬೆಲ್ಟ್ ಅನ್ನು ಲಾಕ್ ಮಾಡುವಂತೆ ವಿನ್ಯಾಸಗೊಳಿಸಲಾಗಿದೆ. ನಿಮ್ಮ ದೇಹದ ಸುತ್ತ ಬೆಲ್ಟ್ ಅನ್ನು ತ್ವರಿತವಾಗಿ ಎಳೆದುಕೊಂಡಲ್ಲಿ ಅದು ಲಾಕ್ ಆಗಿಬಿಡಬಹುದು. ಇದು ನಡೆದಲ್ಲಿ, ಬೆಲ್ಟ್ ಅನ್ನು ಅನ್ಲಾಕ್ ಮಾಡಿ ಮತ್ತು ನಿಮ್ಮ ದೇಹದ ಸುತ್ತ ನಿಧಾನವಾಗಿ ಬೆಲ್ಟ್ ಎಳೆದು ಲಾಕ್ ಮಾಡಿ.

### ಸುರಕ್ಷೆಯ ನೆನಪು





60A038





60A040

ಢಿಕ್ಕಿಯ ಸಂದರ್ಭದಲ್ಲಿ ಬೆಲ್ಟ್ ಅಡಿಯಲ್ಲಿ ಜಾರುವ ಅಪಾಯವನ್ನು ಕಡಿಮೆ ಮಾಡಲು, ಬೆಲ್ಟ್ ನ ತೊಡೆ ಭಾಗವನ್ನು ನಿಮ್ಮ ತೊಡೆಯ ಮೇಲೆ ಕೆಳ ನಿತಂಬಗಳ ಮೇಲೆ ಸಾಧ್ಯವಾದಷ್ಟು ಪೊಸಿಷನ್ ಮಾಡಿ. ಮತ್ತು ಬೆಲ್ಟಿನ ಶುಲ್ಡರ್ ಭಾಗವನ್ನು ಮೇಲ್ಮುಖವಾಗಿ ಲ್ಯಾಚ್ ಪ್ಲೇಟ್ ಮೂಲಕ ಎಳೆದು ಅದನ್ನು ಬಿಗಿಯಾಗಿ ಕೂರಿಸಿ. ಡಯಗನಲ್ ಶುಲ್ಡರ್ ಸ್ಟ್ರಾಪ್ ಉದ್ದವನ್ನು ಚಲನೆಯ ಸ್ವಾತಂತ್ರ್ಯ ಇರುವಂತೆ ಹೊಂದಿಸಿ.




60A036

ಸೀಟ್ ಬೆಲ್ಟ್ ಅನ್ನು ಬಿಗಿಮಾಡಲು, ನೇರವಾಗಿ ಕುಳಿತುಕೊಳ್ಳಿ ಮತ್ತು ಸೀಟಿನಲ್ಲಿ ಹಿಂದಕ್ಕೆ ಒರಗಿ. ಸೀಟ್ ಬೆಲ್ಟಿಗೆ ಜೋಡಿಸಿದ ಲ್ಯಾಚ್ ಪ್ಲೇಟ್ ಅನ್ನು ನಿಮ್ಮ ದೇಹದ ಸುತ್ತ ಎಳೆಯಿರಿ. ಕ್ಲಿಕ್ ಧ್ವನಿ ಕೇಳುವವರೆಗೂ ಅದನ್ನು ಬಕಲ್ ಮೇಲೆ ನೇರವಾಗಿ ಒತ್ತಿ.





60A039

ಸೀಟ್ ಬೆಲ್ಟ್ ಅನ್ನು ಕಳಚಲು, ಬಕಲ್ ಮೇಲೆ ಬಟನ್ ಅನ್ನು ದೂಡಿ ಮತ್ತು ಬೆಲ್ಟ್ ಗೆ ಅಥವಾ / ಮತ್ತು ಲ್ಯಾಚ್ ಪ್ಲೇಟಿಗೆ

ಕೈಯನ್ನು ಜೋಡಿಸುವ ಮೂಲಕ ಬೆಲ್ಟ್ ಅನ್ನು ನಿಧಾನವಾಗಿ ಬೆಲ್ಟ್ ಅನ್ನು ಹಿಂತೆಗೆದುಕೊಳ್ಳಿ.

## ಡ್ರೈವರ್ಸ್ ಸೀಟ್ ಬೆಲ್ಟ್ ವಾರ್ನಿಂಗ್ ಲೈಟ್/ ಫ್ರಂಟ್ ಪ್ಯಾಸೆಂಜರ್ಸ್ ಸೀಟ್ ಬೆಲ್ಟ್ ವಾರ್ನಿಂಗ್ ಲೈಟ್(ಅಳವಡಿಸಿದಲ್ಲಿ)

ಉದಾಹರಣೆ




77PM02017

(1) ಡ್ರೈವರ್ಸ್ ಸೀಟ್ ಬೆಲ್ಟ್ ರಿಮೈಂಡರ್ ಲೈಟ್ / ಫ್ರಂಟ್ ಪ್ಯಾಸೆಂಜರ್ಸ್ ಸೀಟ್ ಬೆಲ್ಟ್ ರಿಮೈಂಡರ್ ಲೈಟ್

ಚಾಲಕ ಮತ್ತು / ಅಥವಾ ಮುಂಭಾಗದಲ್ಲಿ ಕುಳಿತ ಪ್ರಯಾಣಿಕರು ತಮ್ಮ ಸೀಟ್ಬೆಲ್ಟ್‌ಗಳನ್ನು ಬಿಗಿಗೊಳಿಸುವುದು / ಬಿಗಿಗೊಳಿಸದೆ ಇದ್ದಾಗ, ಸೀಟ್ ಬೆಲ್ಟ್ ರಿಮೈಂಡರ್ ಲೈಟ್ ಆನ್ ಆಗುತ್ತದೆ ಅಥವಾ ಬೆಳಗುತ್ತದೆ ಮತ್ತು ಒಂದು ಬಜರ್ ಧ್ವನಿ ಚಾಲಕ ಮತ್ತು/ ಅಥವಾ ಪ್ರಯಾಣಿಕರಿಗೆ ಸೀಟ್ ಬೆಲ್ಟ್‌ಗಳನ್ನು ಬಿಗಿ ಮಾಡುವಂತೆ ನೆನಪಿಸುತ್ತದೆ. ಹೆಚ್ಚಿನ ವಿವರಗಳಿಗೆ, ಕೆಳಗೆ ನೀಡಲಾದ ವಿವರಣೆಯನ್ನು ಓದಿ.

**⚠ ಎಚ್ಚರಿಕೆ**

ಡ್ರೈವರ್ ಮತ್ತು ಪ್ರಯಾಣಿಕರು ಎಲ್ಲಾ ಸಮಯದಲ್ಲೂ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ. ಸೀಟ್ ಬೆಲ್ಟ್ ಧರಿಸದಿದ್ದ ವ್ಯಕ್ತಿ ಅಪಘಾತ ಸಂಭವಿಸಿದಲ್ಲಿ ಹೆಚ್ಚಿನ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಇಗ್ನೀಷನ್ ಸ್ವಿಚ್ ಆನ್ ಮಾಡುವ ಮೊದಲು ನಿಮ್ಮ ಸೀಟ್ ಬೆಲ್ಟ್ ಬಿಗಿಗೊಳಿಸುವುದನ್ನು ನಿಯಮಿತವಾದ ಅಭ್ಯಾಸ ಮಾಡಿಕೊಳ್ಳಿ.

*ಗಮನಿಸಿ :*

*ಚಾಲಕರ ಸೀಟ್ ಬೆಲ್ಟ್ ನೆನಪಿಸುವ ಲೈಟ್ / ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ನೆನಪಿಸುವ ಲೈಟ್ ಎರಡೂ ಚಾಲಕ ಮತ್ತು ಮುಂಭಾಗದ ಪ್ರಯಾಣಿಕರಿಗೆ ಮೀಸಲಾಗಿರುತ್ತದೆ.*

### ಡ್ರೈವರ್ಸ್ ಸೀಟ್ ಬೆಲ್ಟ್ ರಿಮೈಂಡರ್

ಇಗ್ನಿಷನ್ ಸ್ವಿಚ್ "ON" (ಆನ್) ಆಗಿದ್ದ ಸಂದರ್ಭದಲ್ಲಿ ಅಥವಾ ಇಗ್ನಿಷನ್ ಮೋಡ್ "ON" (ಆನ್) ಇದ್ದಾಗ ಡ್ರೈವರ್ಸ್ ಸೀಟ್ ಬೆಲ್ಟ್ ಬಿಗಿ ಮಾಡದೆ ಇದ್ದಲ್ಲಿ, ನೆನಪಿಸುವ ಕಾರ್ಯ ಈ ಕೆಳಗಿನಂತೆ ನಡೆಯುತ್ತದೆ:

1) ಡ್ರೈವರ್ಸ್ ಸೀಟ್ ಬೆಲ್ಟ್ ನೆನಪಿಸುವ ಬೆಳಕು ಬೆಳಗುತ್ತದೆ.
2) ವಾಹನದ ವೇಗವು 15 km/h ತಲುಪಿದಾಗ, ಡ್ರೈವರ್ಸ್ ಸೀಟ್ ಬೆಲ್ಟ್ ರಿಮೈಂಡರ್ ಬೆಳಕು ಬೆಳಗುತ್ತದೆ ಮತ್ತು 95 ಸೆಕೆಂಡುಗಳ ಕಾಲ ಬಜರ್ ಧ್ವನಿಯು ಮೊಳಗುತ್ತದೆ.
3) ಡ್ರೈವರ್ ಸೀಟ್ ಬೆಲ್ಟ್ ಬಿಗಿ ಮಾಡುವವರೆಗೂ ನೆನಪಿಸುವ ಬೆಳಕು ಆನ್ ಆಗಿಯೇ ಇರುತ್ತದೆ.


ಡ್ರೈವರ್ ತನ್ನ ಸೀಟ್ ಬೆಲ್ಟ್ ಅನ್ನು ಬಿಗಿ ಮಾಡಿದ್ದರೆ ಮತ್ತು ನಂತರ ಸೀಟ್ ಬೆಲ್ಟ್ ಅನ್ನು ಬಿಚ್ಚಿದಲ್ಲಿ, ವಾಹನದ ವೇಗವನ್ನು ಅನುಸರಿಸಿ ಹಂತ 1) ಅಥವಾ 2) ರಿಂದ ನೆನಪಿಸುವ ವ್ಯವಸ್ಥೆಯು ಸಕ್ರಿಯಗೊಳ್ಳಲಿದೆ. ವಾಹನದ ವೇಗವು 15 km/h ಗಿಂತ ಕಡಿಮೆ ಇದ್ದಲ್ಲಿ ನೆನಪಿಸುವುದು ಹಂತ 1) ರಿಂದ ಆರಂಭವಾಗಲಿದೆ. ವಾಹನದ ವೇಗವು 15 km/h ಗಿಂತ ಹೆಚ್ಚಾಗಿದ್ದಲ್ಲಿ, ನೆನಪಿಸುವುದು ಹಂತ 2) ರಿಂದ ಆರಂಭವಾಗಲಿದೆ.

ಡ್ರೈವರ್ಸ್ ಸೀಟ್ ಬೆಲ್ಟ್ ಅನ್ನು ಬಿಗಿಮಾಡಿದಾಗ ಅಥವಾ ಇಗ್ನಿಷನ್ ಸ್ವಿಚ್ OFF (ಆಫ್) ಮಾಡುವುದು ಅಥವಾ ಇಗ್ನಿಷನ್ ಮೋಡ್ ಆಫ್ ಮಾಡಿದಾಗ ನೆನಪಿಸುವುದು ಸ್ವಯಂಚಾಲಿತವಾಗಿ ನಿಂತು ಹೋಗುತ್ತದೆ.

### ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ನೆನಪಿಸುವುದು

ಮುಂಭಾಗದ ಪ್ರಯಾಣಿಕರ ಸೀಟ್ನಲ್ಲಿ ವ್ಯಕ್ತಿಯೊಬ್ಬರು ಕುಳಿತಿದ್ದರೆ ಮತ್ತು ಇಗ್ನಿಷನ್ ಸ್ವಿಚ್ "ON" (ಆನ್) ಪೊಸಿಷನ್ನಲ್ಲಿದ್ದಾಗ ಅಥವಾ ಇಗ್ನಿಷನ್ ಮೋಡ್ "ON" (ಆನ್) ಆಗಿದ್ದಾಗ, ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ಅನ್ನು ಬಿಗಿ ಮಾಡದೆ ಇದ್ದಲ್ಲಿ, ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ನೆನಪಿಸುವ ವ್ಯವಸ್ಥೆ ಸಕ್ರಿಯಗೊಳ್ಳಲಿದೆ.

ಉದಾಹರಣೆ




69RH203

(2)ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ನೆನಪಿಸುವುದು.

ಸೀಟ್ ಬೆಲ್ಟ್ ರಿಮೈಂಡರ್ ಸೆನ್ಸರ್ (2) ವ್ಯಕ್ತಿಯು ಮುಂಭಾಗದ ಸೀಟ್ನಲ್ಲಿ ಕುಳಿತಿದ್ದಾರೆಯೇ ಎನ್ನುವುದನ್ನು ಪತ್ತೆ ಹಚ್ಚುತ್ತದೆ. ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ರಿಮೈಂಡರ್ ಸೀಟಿನ ಕುಷನ್ನಲ್ಲಿರುತ್ತದೆ.

ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ರಿಮೈಂಡರ್ ಕೂಡ ಚಾಲಕರ ಸೀಟ್ ಬೆಲ್ಟ್ ರಿಮೈಂಡರ್ ರೀತಿಯಲ್ಲಿಯೇ ಕೆಲಸ ಮಾಡುತ್ತದೆ.

***ಸೂಚನೆ***

- **ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ರಿಮೈಂಡರ್ಸೆನ್ಸರ್ ಸೀಟಿನ ಕುಷನ್ನಲ್ಲಿರುತ್ತದೆ. ಸೀಟಿನ ಕುಷನ್ ಮೇಲೆ ಬಾರವಾದ ಅಥವಾ ತೀಕ್ಷ್ಣ ವಸ್ತುಗಳನ್ನು ಇಟ್ಟಾಗ ಅಥವಾ ಪ್ರಯಾಣಿಕರ ಸೀಟನ್ನು ಕಳಚುವುದು, ಅಪಜೋಡಣೆ ಮತ್ತು ಮಾರ್ಪಾಡು ಮಾಡಿದಾಗ, ಸೆನ್ಸರ್ ಸರಿಯಾಗಿ ಕಾರ್ಯ ನಿರ್ವಹಿಸದೆ ಇರಬಹುದು ಅಥವಾ ಹಾನಿಯಾಗಬಹುದು. ಭಾರವಾದ ಅಥವಾ ತೀಕ್ಷ್ಣ ವಸ್ತುಗಳನ್ನು ಸೀಟಿನ ಕುಷನ್ ಮೇಲೆ ಇಡಬೇಡಿ. ಪ್ರಯಾಣಿಕರ ಸೀಟನ್ನು ಕಳಚುವುದು, ಅಪಜೋಡಣೆ ಮತ್ತು ಮಾರ್ಪಾಡು ಮಾಡಬೇಡಿ.**
- **ವಿವಿಧ ರೀತಿಯ ಸೀಟು ಕವರ್ಗಳನ್ನು ಅವಲಂಬಿಸಿ, ಸೆನ್ಸರ್ಕಾರ್ಯ ನಿರ್ವಹಣೆಯಲ್ಲಿ ಏರುಪೇರಾಗಬಹುದು. ಮಾರುತಿ ಸುಜುಕಿ ಮಾನ್ಯತೆ ಹೊಂದಿದ ಸೀಟ್ ಕವರ್ ಅನ್ನೇ ಪ್ರತ್ಯೇಕವಾಗಿ ಈ ವಾಹನಕ್ಕೆ ಬಳಸುವಂತೆ ಮಾರುತಿ ಸುಜುಕಿ ಬಲವಾಗಿ ಶಿಫಾರಸು ಮಾಡುತ್ತದೆ.**
- **ದ್ರವರೂಪದ ವಾಸನೆ ಪದಾರ್ಥಗಳು, ತಂಪು ಪಾನೀಯ ಅಥವಾ ಶರಬತ್ತುಗಳಂತಹ ದ್ರವವಸ್ತುಗಳನ್ನು ಮುಂಭಾಗದ ಪ್ರಯಾಣಿಕರ ಸೀಟಿನ ಕುಷನ್ ಮೇಲೆ ಚೆಲ್ಲಿದರೆ, ಸೀಟಿನ ಕುಷನ್ನಲ್ಲಿರುವ ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ರಿಮೈಂಡರ್ನ ಸೆನ್ಸರ್ಗೆ ಹಾನಿಯಾಗಬಹುದು. ಚೆಲ್ಲಿದ ತಕ್ಷಣವೇ ಮೃದು ಬಟ್ಟೆಯಿಂದ ದ್ರವವನ್ನು ಒರೆಸಿ ಒಣಗಿಸಬೇಕು.**

(ಮುಂದುವರಿದಿದೆ..)

***ಸೂಚನೆ***

(ಮುಂದುವರಿದಿದೆ..)

- **ಮುಂಭಾಗದ ಪ್ರಯಾಣಿಕರ ಸೀಟ್ಮೇಲೆ ಕುಳಿತುಕೊಳ್ಳುವಾಗ ಸೀಟ್ಬೆಲ್ಟ್ ನೆನಪಿಸುವ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಪ್ರಯಾಣಿಕರು ನೇರವಾಗಿ ಕುಳಿತುಕೊಳ್ಳಬೇಕು, ಸೀಟಿನ ವಿಶ್ರಾಂತಿ ಭಾಗದ ವಿರುದ್ಧ ವಾಲುವ ಮೂಲಕ ಕುಷನ್ ಮಧ್ಯಭಾಗದಲ್ಲಿ ಕೇಂದ್ರೀಕರಿಸಿ ಕೂರಬೇಕು. ಪ್ರಯಾಣಿಕರು ಸರಿಯಾಗಿ ಕುಳಿತುಕೊಳ್ಳದೆ ಇದ್ದಲ್ಲಿ (ಜಾರುವುದು, ಬದಿಗೆ ಬಾಗುವುದು, ಮುಂದೆ ಅಥವಾ ಬದಿಗೆ ಕೂರುವುದು) ಸೆನ್ಸರ್ ಪ್ರಯಾಣಿಕರನ್ನು ಗುರುತಿಸಲು ಸಾಧ್ಯವಾಗದೆ ವ್ಯವಸ್ಥೆ ಸೂಕ್ತವಾಗಿ ಕಾರ್ಯನಿರ್ವಹಿಸದೆ ಇರಬಹುದು.**

*ಗಮನಿಸಿ :*


- *ನೀವು ವಸ್ತುವೊಂದನ್ನು ಪ್ರಯಾಣಿಕರ ಸೀಟಿನ ಮೇಲೆ ಇಟ್ಟಲ್ಲಿ, ವಸ್ತುವಿನ ಭಾರವನ್ನು ಸೆನ್ಸರ್ಮೂಲಕ ಗುರುತಿಸಬಹುದು ಮತ್ತು ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ರಿಮೈಂಡರ್ ಲೈಟ್ ಆನ್ ಆಗಲಿದೆ ಮತ್ತು ಆಗ ಒಳಗಿನ ಬಜರ್ ಬೀಪ್ ಸದ್ದು ಮಾಡಲಿದೆ.*
- *ಮಗು ಅಥವಾ ಚಿಕ್ಕ ಗಾತ್ರದ ವ್ಯಕ್ತಿಗಳು ಮುಂಭಾಗದ ಪ್ರಯಾಣಿಕರ ಸೀಟಿನಲ್ಲಿ ಕುಳಿತುಕೊಳ್ಳುವಾಗ ಅಥವಾ ಮುಂಭಾಗದ ಪ್ರಯಾಣಿಕರ ಸೀಟಿನಲ್ಲಿ ಕುಷನ್ ಹಾಕಿದಾಗ, ಸೆನ್ಸರ್ಭಾರವನ್ನು ಗುರುತಿಸದೆ ಇರಬಹುದು ಮತ್ತು ಒಳಗಿನ ಬಜರ್ ಸದ್ದು ಮಾಡದೆ ಇರಬಹುದು.*

*ಗಮನಿಸಿ :*

*ಮಾರುತಿ ಸುಜುಕಿ ಮಾನ್ಯತೆ ಹೊಂದಿರುವ "ಸೀಟ್ ಕವರ್" ವಸ್ತುವನ್ನೇ ಬಳಸುವಂತೆ ಮಾರುತಿ ಸುಜುಕಿ ಶಿಫಾರಸು ಮಾಡುತ್ತದೆ.*

## ಸೀಟ್ ಬೆಲ್ಟ್ ತಪಾಸಣೆ

**ಉದಾಹರಣೆ**



65D209S


ಸೀಟ್ ಬೆಲ್ಟ್ ಗಳು ಸರಿಯಾಗಿ ಕೆಲಸ ಮಾಡುತ್ತವೆ ಮತ್ತು ಹಾನಿಯಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲು ಕಾಲ ಕಾಲಕ್ಕೆ ಅವುಗಳನ್ನು ಪರೀಕ್ಷಿಸಿ. ಗಟ್ಟಿಪಟ್ಟಿ, ಬಕಲ್ ಗಳು, ಲ್ಯಾಚ್ ಪ್ಲೇಟ್ ಗಳು, ರಿಟ್ರಾಕ್ಟರ್ ಗಳು, ಆಂಕೋರೇಜ್ ಗಳುತ ಮತ್ತು ಗೈಡ್ ಲೂಪ್ ಗಳನ್ನು ಪರೀಕ್ಷಿಸಿ. ಸರಿಯಾಗಿ ಕೆಲಸ ಮಾಡದೆ ಇರುವ ಮತ್ತು ಹಾನಿಯಾಗಿರುವ ಸೀಟ್ ಬೆಲ್ಟ್ ಗಳನ್ನು ಬದಲಿಸಿ.

**⚠ ಎಚ್ಚರಿಕೆ**

**ಯಾವುದೇ ಅವಘಡದ ನಂತರ ಎಲ್ಲಾ ಸೀಟ್ ಬೆಲ್ಟ್ ಅಸೆಂಬ್ಲಿಗಳನ್ನು ತಪಾಸಣೆ ಮಾಡಿರುವುದು ಖಚಿತಪಡಿಸಿ. ಅಸೆಂಬ್ಲಿಗೆ ಹಾನಿಯಾಗಿರುವುದು ಕಾಣದೆ ಇದ್ದರೂ ಸಹ, ಢಿಕ್ಕಿಯ (ಅತೀ ಸಣ್ಣ ಹೊರತುಪಡಿಸಿ) ಸಂದರ್ಭದಲ್ಲಿ ಬಳಕೆಯಲ್ಲಿದ್ದ ಯಾವುದೇ ಸೀಟ್ ಬೆಲ್ಟ್ ಅಸೆಂಬ್ಲಿಯನ್ನು ಬದಲಿಸಬೇಕು. ಢಿಕ್ಕಿಯ ಸಂದರ್ಭದಲ್ಲಿ ಬಳಕೆಯಲ್ಲಿಲ್ಲದ ಯಾವುದೇ ಸೀಟ್ ಬೆಲ್ಟ್ ಅಸೆಂಬ್ಲಿಯನ್ನು ಸರಿಯಾಗಿ ಕೆಲಸ ಮಾಡದೆ ಇದ್ದಲ್ಲಿ ಅಥವಾ ಸರಿಯಾಗಿ ಕೆಲಸ ಮಾಡದೆ ಇದ್ದಲ್ಲಿ ಬದಲಿಸಬೇಕು.**

## ಇನ್ ಸ್ಟ್ರುಮೆಂಟ್ ಕ್ಲಸ್ಟರ್

1. ಸ್ಪೀಡೋಮೀಟರ್
2. ಮಾಹಿತಿ ಡಿಸ್ಪ್ ಲೇ
3. ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್
4. ವಾರ್ನಿಂಗ್ ಮತ್ತು ಇಂಡಿಕೇಟರ್ ಲೈಟ್ಸ್




77PM02001

## ಸ್ಪೀಡೋಮೀಟರ್

ಸ್ಪೀಡೋಮೀಟರ್ ವಾಹನದ ವೇಗವನ್ನು ಸೂಚಿಸುತ್ತದೆ.


### ಸ್ಪೀಡ್ ಅಲರ್ಟ್ ಸಿಸ್ಟಂ

ಸ್ಪೀಡ್ ಅಲರ್ಟ್ ಸಿಸ್ಟಂ ವೇಗ ಅತಿಯಾದಾಗ ಚಾಲಕನಿಗೆ ಸದ್ದು ಮಾಡಿ ಎಚ್ಚರಿಕೆಯನ್ನು ನೀಡುತ್ತದೆ.ವಾಹನದ ವೇಗವು 80 km/h ಮೀರಿದಾಗ, ಪ್ರಾಥಮಿಕ ಮಟ್ಟದ ಎಚ್ಚರಿಕೆಯಾಗಿ ಎರಡು ಬೀಪ್ ಸದ್ದುಗಳು ಪ್ರತೀ ನಿಮಿಷಕ್ಕೊಮ್ಮೆ ಕೇಳಿಬರುತ್ತದೆ. ವಾಹನವು 120 km/h ವೇಗವನ್ನು ಮೀರಿದಾಗ ದ್ವಿತೀಯ ಹಂತದ ಎಚ್ಚರಿಕೆಯು ನಿರಂತರ ಬೀಪ್ ಸದ್ದುಗಳ ಮೂಲಕ ಕೇಳಿ ಬರುತ್ತದೆ. ವಾಹನದ ವೇಗವು 118 km/h ಇಳಿದಲ್ಲಿ ಪ್ರಾಥಮಿಕ ಎಚ್ಚರಿಕೆಯು ಮರಳಿ ಆರಂಭವಾಗುತ್ತದೆ. ವಾಹನದ ವೇಗವು 78 km/h ಇಳಿದಲ್ಲಿ ವೇಗದ ಎಚ್ಚರಿಕೆ ನೀಡುವ ಶಬ್ದವು ಸಂಪೂರ್ಣ ನಿಂತು ಹೋಗುತ್ತದೆ. ಈ ಬಜರ್ ವಾಹನದಲ್ಲಿ ಯಾವುದೇ ದೋಷವನ್ನು ಸೂಚಿಸುವುದಿಲ್ಲ.

## ಫ್ಯೂಯೆಲ್ ಗೇಜ್

**(ಪೆಟ್ರೋಲ್ ಮತ್ತು ದ್ವಿ-ಇಂಧನ ಎಂಜಿನ್ ಮಾದರಿಗಾಗಿ)**


**ಪೆಟ್ರೋಲ್**




77PM07020


**(ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ಗೆ)**

**ಸಿ.ಎನ್.ಜಿ.**




77PM07019

**(ಡೀಸೆಲ್ ಎಂಜಿನ್ ಮಾದರಿಗಾಗಿ)**




77PH006

ಇಗ್ನಿಷನ್ ಸ್ವಿಚ್ “ON” (ಆನ್) ಪೊಸಿಷನ್ ನಲ್ಲಿದ್ದಾಗ, ಈ ಗೇಜ್ ಫ್ಯೂಯೆಲ್ ಟ್ಯಾಂಕ್ ನಲ್ಲಿರುವ ಅಂದಾಜು ಫ್ಯೂಯೆಲ್ ಅನ್ನು ಸೂಚಿಸುತ್ತದೆ. “F” ಎಂದರೆ ಪೂರ್ಣ ಮತ್ತು “E” ಎಂದರೆ ಖಾಲಿ ಎಂದರ್ಥ.


ಫ್ಯೂಯೆಲ್ ಮೀಟರ್ ಇಂಡಿಕೇಟರ್ ಕೇವಲ ಒಂದು ಭಾಗವಾಗಿ “E” ಯನ್ನು ತೋರಿಸಿದಲ್ಲಿ ಟ್ಯಾಂಕ್ ಅನ್ನು ಸಾಧ್ಯವಾದಷ್ಟು ಬೇಗನೇ ಮರಳಿ ತುಂಬಿ.

*ಸೂಚನೆ:*
*ಕೊನೆಯ ಭಾಗವು ಬೆಳಗುತ್ತಿದ್ದಲ್ಲಿ, ಫ್ಯೂಯೆಲ್ ಬಹುತೇಕ ಖಾಲಿಯಾಗಿದೆ ಎಂದರ್ಥವಾಗಿರುತ್ತದೆ.*

ಗುರುತು (1) ಫ್ಯೂಯೆಲ್ ಫಿಲ್ಲರ್ ಡೋರ್ ವಾಹನದ ಬಲಭಾಗದಲ್ಲಿರುವುದನ್ನು ಸೂಚಿಸುತ್ತದೆ.

## ಮಾಹಿತಿ ಪ್ರದರ್ಶನ


**(ಪೆಟ್ರೋಲ್ ಮತ್ತು ದ್ವಿ-ಇಂಧನ ಎಂಜಿನ್ ಮಾದರಿಗಾಗಿ)**




77PM07029

*ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ಗೆ ಅನ್ವಯಿಸುತ್ತದೆ

**(ಡೀಸೆಲ್ ಎಂಜಿನ್ ಮಾದರಿಗಾಗಿ)**




77PH109

(1) ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್
(2) ಮಾಹಿತಿ ಡಿಸ್ಪ್ ಲೇ

ಇಗ್ನಿಷನ್ ಸ್ವಿಚ್ "ON" (ಆನ್) ಪೊಸಿಷನ್ ನಲ್ಲಿರುವಾಗ, ಮಾಹಿತಿ ಡಿಸ್ಪ್ ಲೇ ಈ ಕೆಳಗಿನ ಮಾಹಿತಿಯನ್ನು ತೋರಿಸುತ್ತದೆ.

**ಡಿಸ್ಪ್ ಲೇ (A)**
ಫ್ಯೂಯೆಲ್ ಗೇಜ್

**ಡಿಸ್ಪ್ ಲೇ (B)**
ಓಡೋಮೀಟರ್/ ಟ್ರಿಪ್ ಮೀಟರ್/ ಕ್ಲಾಕ್/ ಬ್ರೈಟ್ನೆಸ್ ಕಂಟ್ರೋಲ್

**ಡಿಸ್ಪ್ ಲೇ (C)**
ಫ್ಯೂಯೆಲ್ಮೋಡ್ಗಳು (ಅಳವಡಿಸಿದಲ್ಲಿ)


**ಫ್ಯೂಯೆಲ್ ಗೇಜ್**
ಇಗ್ನಿಷನ್ ಸ್ವಿಚ್ "ON" (ಆನ್) ಪೊಸಿಷನ್ ನಲ್ಲಿರುವಾಗ, ಡಿಸ್ಪ್ ಲೇ (A) ಫ್ಯೂಯೆಲ್ ಗೇಜ್ ಅನ್ನು ತೋರಿಸುತ್ತದೆ.

ಈ ವಿಭಾಗದಲ್ಲಿ "ಫ್ಯೂಯೆಲ್ ಗೇಜ್" ಅನ್ನು ಓದಿ.

**ಓಡೋಮೀಟರ್ / ಟ್ರಿಪ್ ಮೀಟರ್ / ಕ್ಲಾಕ್ / ಬ್ರೈಟ್ನೆಸ್ ಕಂಟ್ರೋಲ್**
ಇಗ್ನಿಷನ್ ಸ್ವಿಚ್ "ON" (ಆನ್) ಪೊಸಿಷನ್ ನಲ್ಲಿರುವಾಗ, ಡಿಸ್ಪ್ ಲೇ (B) ಈ ಕೆಳಗಿನ ಒಂದು ಸೂಚನೆಯನ್ನು ಕೊಡುತ್ತದೆ, ಓಡೋಮೀಟರ್, ಟ್ರಿಪ್ ಮೀಟರ್ A, ಟ್ರಿಪ್ ಮೀಟರ್ B ಅಥವಾ ಕ್ಲಾಕ್


ಡಿಸ್ಪ್ ಲೇ ಇಂಡಿಕೇಶನ್ (B) ಯನ್ನು ಬದಲಿಸಲು, ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ತ್ವರಿತವಾಗಿ ದೂಡಿ.

**(ಪೆಟ್ರೋಲ್ ಮತ್ತು ದ್ವಿ-ಇಂಧನ ಎಂಜಿನ್ ಮಾದರಿಗಾಗಿ)**




77PH007

**(ಡೀಸೆಲ್ ಇಂಜಿನ್ ಮಾಡೆಲ್‌ಗೆ)**




77PH007

(a) ಓಡೋಮೀಟರ್
(b) ಟ್ರಿಪ್ ಮೀಟರ್ A
(c) ಟ್ರಿಪ್ ಮೀಟರ್ B
(d) ಕ್ಲಾಕ್
(e) ಬ್ರೈಟ್ನೆಸ್ ಕಂಟ್ರೋಲ್*

* ಪೊಸಿಷನ್ ಲೈಟ್ಸ್ ಮತ್ತು / ಅಥವಾ ಹೆಡ್ ಲೈಟ್ ಗಳು ಆನ್ ಆಗಿದ್ದಾಗ ಬ್ರೈಟ್ನೆಸ್ ಕಂಟ್ರೋಲ್ ಕಾಣಿಸುತ್ತದೆ.

**⚠ ಎಚ್ಚರಿಕೆ**

**ಚಾಲನೆ ಮಾಡುವಾಗ ಡಿಸ್ಪ್ಲೇಯನ್ನು ಹೊಂದಿಸಲು ನೀವು ಪ್ರಯತ್ನಿಸಿದಲ್ಲಿ, ನೀವು ವಾಹನದ ನಿಯಂತ್ರಣವನ್ನು ಕಳೆದುಕೊಳ್ಳಬಹುದು.**
**ಚಾಲನೆ ಮಾಡುತ್ತಿರುವಾಗ ಡಿಸ್ಪ್ಲೇಯನ್ನು ಹೊಂದಿಸಲು ಪ್ರಯತ್ನಿಸಬೇಡಿ.**

*ಸೂಚನೆ:*
*ನಾಬ್ ಅನ್ನು ದೂಡುವಾಗ ಮತ್ತು ರಿಲೀಸ್ ಮಾಡುವಾಗ ಸೂಚನೆಗಳು ಬದಲಾಗಬಹುದು.*

**ಓಡೋಮೀಟರ್**
ವಾಹನವನ್ನು ಚಲಾಯಿಸಿರುವ ಒಟ್ಟು ಅಂತರವನ್ನು ಓಡೋಮೀಟರ್ ದಾಖಲಿಸುತ್ತದೆ.

***ಸೂಚನೆ***

**ನಿಮ್ಮ ಓಡೋಮೀಟರ್ ರೀಡಿಂಗ್ ಟ್ರಾಕ್ ಇಟ್ಟುಕೊಳ್ಳಿ ಮತ್ತು ನಿರ್ವಹಣಾ ವೇಳಾಪಟ್ಟಿಯನ್ನು ನಿರ್ದಿಷ್ಟ ಸೇವೆಗಳಿಗೆ ನಿಯಮಿತವಾಗಿ ಪರೀಕ್ಷಿಸಿ.**
**ನಿರ್ದಿಷ್ಟ ಸೇವೆಗಳನ್ನು ಸೂಕ್ತ ಮೈಲೇಜ್ ಅವಧಿಗಳಲ್ಲಿ ನಡೆಸಲು ವಿಫಲವಾಗುವುದು ಕೆಲವು ಭಾಗಗಳಿಗೆ ಹೆಚ್ಚಾದ ಸವೆತ ಅಥವಾ ಹಾನಿಗೆ ಕಾರಣವಾಗಬಹುದು.**

**ಟ್ರಿಪ್ ಮೀಟರ್**
ಸಣ್ಣ ಪ್ರವಾಸಗಳು ಅಥವಾ ಫ್ಯೂಯೆಲ್ ಸ್ಟಾಪ್ ಗಳ ನಡುವೆ ಪ್ರಯಾಣಿಸಿದ ಅಂತರವನ್ನು ಅಳೆಯಲು ಟ್ರಿಪ್ ಮೀಟರ್ ಅನ್ನು ಬಳಸಬಹುದು.
ಟ್ರಿಪ್ ಮೀಟರ್ A ಅಥವಾ ಟ್ರಿಪ್ ಮೀಟರ್ B ಯನ್ನು ಸ್ವತಂತ್ರವಾಗಿ ನೀವು ಬಳಸಬಹುದು.

ಟ್ರಿಪ್ ಮೀಟರ್ ಅನ್ನು ಜೀರೋಗೆ ರಿಸೆಟ್ ಮಾಡಲು, ದೂಡಿ ಮತ್ತು ಡಿಸ್ಪ್ಲೇನಲ್ಲಿ ಟ್ರಿಪ್ ಮೀಟರ್ ಎಂದು ತೋರಿಸುವಾಗ ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ಸ್ವಲ್ಪ ಹೊತ್ತು ಹಿಡಿದುಕೊಳ್ಳಿ.

*ಸೂಚನೆ:*
*ಟ್ರಿಪ್ ಮೀಟರ್ ನ ಸೂಚಿತ ಗರಿಷ್ಠ ಮೌಲ್ಯ 9999.9. ನೀವು ಗರಿಷ್ಠ ಮೌಲ್ಯವನ್ನು ಮೀರಿ ಮುಂದುವರಿದಾಗ, ಸೂಚಿತ ಮೌಲ್ಯವು 0.0 ಗೆ ಮರಳುತ್ತದೆ.*

**ಗಡಿಯಾರ**
ಡಿಸ್ಪ್ಲೇ ಸಮಯವನ್ನು ತೋರಿಸುತ್ತದೆ.

ಸಮಯ ಸೂಚನೆಯನ್ನು ಬದಲಿಸಲು:
1) ಮಿನಿಟ್ ಇಂಡಿಕೇಟರ್ ಬೆಳಗುವವರೆಗೆ ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ದೂಡಿ ಮತ್ತು ಹಿಡಿದಿಡಿ.
2) ಮಿನಿಟ್ ಸೂಚನೆಯನ್ನು ಬದಲಿಸಲು, ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ಮಿನಿಟ್ ಸೂಚನೆ ಬೆಳಗುವಾಗ ಪದೇ ಪದೇ ದೂಡಿ. ಮಿನಿಟ್ ಸೂಚನೆಯನ್ನು ತ್ವರಿತವಾಗಿ ಬದಲಿಸಲು, ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ದೂಡಿ ಮತ್ತು ಹಿಡಿದಿಡಿ. ಮಿನಿಟ್ ಸೂಚನೆಯನ್ನು ಸೆಟ್ ಮಾಡಲು ಗಂಟೆ ಸೂಚನೆಯು ಬೆಳಗಲು ಆರಂಭವಾಗುವವರೆಗೆ 5 ಸೆಕೆಂಡುಗಳ ಕಾಲ ಕಾಯಿರಿ.
3) ಗಂಟೆ ಸೂಚನೆ ಬದಲಿಸಲು, ಮಿನಿಟ್ ಸೂಚನೆ ಹೊಳೆಯುವವರೆಗೂ ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ಪದೇ ಪದೇ ದೂಡಿ. 5 ಸೆಕೆಂಡುಗಳ ಕಾಲ ಕಾಯಿರಿ ಮತ್ತು ಗಂಟೆ ಸೂಚನೆಯು ಹೊಳೆಯಲು ಆರಂಭಿಸುತ್ತದೆ. ಗಂಟೆ ಸೂಚನೆಯನ್ನು ಬದಲಿಸಲು, ತ್ವರಿತವಾಗಿ ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ದೂಡಿ ಮತ್ತು ಹಿಡಿದಿಡಿ. ಗಂಟೆ ಸೂಚನೆಯನ್ನು ಸೆಟ್ ಮಾಡಲು 5 ಸೆಕೆಂಡುಗಳ ಕಾಲ ಕಾಯಿರಿ.

**⚠ ಎಚ್ಚರಿಕೆ**

**ಚಾಲನೆ ಮಾಡುವಾಗ ಡಿಸ್ಪ್ ಲೇಯನ್ನು ಹೊಂದಿಸಲು ನೀವು ಪ್ರಯತ್ನಿಸಿದಲ್ಲಿ, ನೀವು ವಾಹನದ ನಿಯಂತ್ರಣವನ್ನು ಕಳೆದುಕೊಳ್ಳಬಹುದು.**

**ಚಾಲನೆ ಮಾಡುತ್ತಿರುವಾಗ ಡಿಸ್ಪ್ ಲೇಯನ್ನು ಹೊಂದಿಸಲು ಪ್ರಯತ್ನಿಸಬೇಡಿ.**

*ಸೂಚನೆ:*
*ನೆಗೆಟಿವ್ (-) ಟರ್ಮಿನಲ್ ಅನ್ನು ಬ್ಯಾಟರಿಗೆ ನೀವು ಮರಳಿ ಸಂಪರ್ಕಿಸಿದಾಗ ಗಂಟೆಯ ಸೂಚನೆಯು ಮರಳಿ ಆರಂಭಗೊಳ್ಳುತ್ತದೆ. ಸೂಚನೆಯನ್ನು ನಿಮ್ಮ ಆದ್ಯತೆಗೆ ಅನುಗುಣವಾಗಿ ಮತ್ತೊಮ್ಮೆ ಬದಲಿಸಿ.*

### ಬೆಳಕಿನ ನಿಯಂತ್ರಣ

ಲೈಟ್ ಗಳು ಮತ್ತು / ಅಥವಾ ಹೆಡ್ ಲೈಟ್ ಗಳನ್ನು “ಆನ್” (ON) ಸ್ಥಿತಿಯಲ್ಲಿ ಪೊಸಿಷನ್ ಮಾಡಿದಾಗ, ನೀವು ಮೀಟರ್ ಬೆಳಗುವ ತೀವ್ರತೆಯನ್ನು ನಿಯಂತ್ರಿಸಬಹುದು.

ಇನ್ ಸ್ಟ್ರುಮೆಂಟ್ ಪ್ಯಾನೆಲ್ ಲೈಟ್ಸ್ ಗಳ ಹೊಳಪನ್ನು ಬದಲಿಸಲು, ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ (1) ಅನ್ನು ದೂಡಿ ಮತ್ತು ಹಿಡಿದಿಡಿ.

**⚠ ಎಚ್ಚರಿಕೆ**


**ಚಾಲನೆ ಮಾಡುವಾಗ ಡಿಸ್ಪ್ ಲೇಯನ್ನು ಹೊಂದಿಸಲು ನೀವು ಪ್ರಯತ್ನಿಸಿದಲ್ಲಿ, ನೀವು ವಾಹನದ ನಿಯಂತ್ರಣವನ್ನು ಕಳೆದುಕೊಳ್ಳಬಹುದು.**

**ಚಾಲನೆ ಮಾಡುತ್ತಿರುವಾಗ ಡಿಸ್ಪ್ ಲೇಯನ್ನು ಹೊಂದಿಸಲು ಪ್ರಯತ್ನಿಸಬೇಡಿ.**

*ಸೂಚನೆ:*
- *ಬೆಳಕಿನ ನಿಯಂತ್ರಣ ಡಿಸ್ಪ್ ಲೇ ಸಕ್ರಿಯಗೊಳಿಸಿದ 10 ಸೆಕೆಂಡುಗಳ ಒಳಗೆ ಟ್ರಿಪ್ ಮೀಟರ್ ಸೆಲೆಕ್ಟರ್ ನಾಬ್ ಅನ್ನು ದೂಡದೆ ಇದ್ದಲ್ಲಿ, ಬೆಳಕಿನ ನಿಯಂತ್ರಣ ಡಿಸ್ಪ್ ಲೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.*
- *ನೀವು ಬ್ಯಾಟರಿಯನ್ನು ಮರಳಿ ಸಂಪರ್ಕಿಸಿದಾಗ, ಇನ್ ಸ್ಟ್ರುಮೆಂಟ್ ಪ್ಯಾನಲ್ ಬೆಳಕಿನ ಹೊಳಪು ಮರಳಿ ಆರಂಭಗೊಳ್ಳುತ್ತದೆ. ನಿಮ್ಮ ಆದ್ಯತೆಗೆ ಅನುಗುಣವಾಗಿ ಬೆಳಕನ್ನು ಮರಳಿ ಹೊಂದಿಸಿ.*


## ಫ್ಯೂಯೆಲ್ಮೋಡ್ಗಳು (ಅಳವಡಿಸಿದಲ್ಲಿ)

ವಾಹನದಲ್ಲಿ ಮೂರು ಫ್ಯೂಯೆಲ್ ಪೆಟ್ರೋಲ್ ಮೋಡ್ಗಳಿವೆ. ಡ್ಯಾಶ್ಬೋರ್ಡ್ನ ಸ್ಟೀರಿಂಗ್ವೀಲ್ನ ಬಲ ಬದಿಯಲ್ಲಿರುವ ಸೆಲೆಕ್ಟರ್ ಸ್ವಿಚ್ (1) ಒತ್ತುವ ಮೂಲಕ ಪೆಟ್ರೋಲ್, ಅಟೋ ಮತ್ತು ಫೋರ್ಸ್ಡ್ ಸಿ.ಎನ್.ಜಿ. ಮೋಡ್ಗಳನ್ನು ಆಯ್ಕೆ ಮಾಡಬಹುದಾಗಿದೆ.



77PM02005


### ಪೆಟ್ರೋಲ್ ಮೋಡ್



77PM02002

ಈ ಮೋಡ್ನಲ್ಲಿ ವಾಹನವು ಪೆಟ್ರೋಲ್ನಲ್ಲಿ ಸ್ಟಾರ್ಟ್ಆಗಿ, ಪೆಟ್ರೋಲ್ ಮೋಡ್ನಲ್ಲಿ ರನ್ ಆಗುತ್ತದೆ. ಈ ಮೋಡ್ನಲ್ಲಿ ಪೆಟ್ರೋಲ್ ಇಂಡಿಕೇಟರ್ ನಿರಂತರವಾಗಿ ತೋರಿಸುತ್ತದೆ ಮತ್ತು ಸಿ.ಎನ್.ಜಿ. ಇಂಡಿಕೇಟರ್ “ಆಫ್” ಆಗಿಯೇ ಇರುತ್ತದೆ.

### ಅಟೋ ಮೋಡ್



77PM02003


ಈ ಮೋಡ್ನಲ್ಲಿ ಪೆಟ್ರೋಲ್ಮೋಡ್ನಲ್ಲಿ ಇಂಜಿನ್ ಸ್ಟಾರ್ಟ್ಆಗುತ್ತದೆ ಮತ್ತು ನಂತರ ಯೋಜಿತ ವಾರ್ಮಿಂಗ್ ಅಪ್ಸ್ಥಿತಿಯ ನಂತರ ಸ್ವಯಂಚಾಲಿತವಾಗಿ ಸಿ.ಎನ್.ಜಿ.ಗೆ ತಲುಪುತ್ತದೆ. ಇಗ್ನಿಶನ್ ಸ್ವಿಚ್ ಆನ ಮಾಡಿಕೊಂಡು ವಾಹನವನ್ನು “ಅಟೋ ಮೋಡ್”ನಲ್ಲಿ ಆನ್ಮಾಡಿದರೆ, ಡಿಸ್ಪ್ಲೇಯಲ್ಲಿ ಸಿ.ಎನ್.ಜಿ. ಇಂಡಿಕೇಟರ್ ತೋರಿಸುತ್ತದೆ ಮತ್ತು ಪೆಟ್ರೋಲ್ಇಂಡಿಕೇಟರ್ ಕಾಣಿಸುತ್ತದೆ. ಸಿ.ಎನ್.ಜಿ.ಗೆ ಬದಲಾದ ನಂತರ, ಸಿ.ಎನ್.ಜಿ.

ಇಂಡಿಕೇಟರ್ ಕಾಣಿಸುತ್ತದೆ ಮತ್ತು ಪೆಟ್ರೋಲ್‌ಇಂಡಿಕೇಟರ್ ಸ್ವಯಂಚಾಲಿತವಾಗಿ ಆಫ್‌ಆಗುತ್ತದೆ.

*ಸೂಚನೆ:*
- *ಇಂಜಿನ್ ಬಾಳಿಕೆ ಹೆಚ್ಚಲು ಅಟೋ ಮೋಡ್ ಅಥವಾ ಪೆಟ್ರೋಲ್ ಮೋಡ್ನಲ್ಲಿ ಇಂಜಿನ್ ಆರಂಭಿಸುವುದನ್ನು ಶಿಫಾರಸು ಮಾಡಲಾಗಿದೆ.*
- *ಎಂಬಿಯಂಟ್/ ಇಂಜಿನ್ ತಾಪಮಾನವು ಶೂನ್ಯ ಡಿಗ್ರಿ ಸೆಲ್ಸಿಯಸ್ಗಿಂತ ಕಡಿಮೆ ಇದ್ದಾಗ ಸ್ಟಾರ್ಟ್ ಆದರೆ ವಾಹನದ ಫ್ಯುಯೆಲ್ ಚೇಂಜ್ಓವರ್ ಸಿ.ಎನ್.ಜಿ.ಗೆ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ, ಬೆಚ್ಚಗಾಗುವವರೆಗೆ ಇಂಜಿನ್ ಅನ್ನು ಪೆಟ್ರೋಲ್ ಮೋಡ್ನಲ್ಲಿ ರನ್ ಮಾಡಿ ಮತ್ತು ನಂತರ ಸಿ.ಎನ್.ಜಿ.ಗೆ ಇಂಜಿನ್ ಚೇಂಜ್ಓವರ್ ರಿಸ್ಟಾರ್ಟ್ ಮಾಡಲು ಪ್ರಯತ್ನಿಸಿ.*

## ಫೋರ್ಸ್ಡ್ ಸಿ.ಎನ್.ಜಿ. ಮೋಡ್

**ಉದಾಹರಣೆ**




77PM02004

ಇದು ಎಮರ್ಜೆನ್ಸಿ ಮೋಡ್ ಮತ್ತು ಪೆಟ್ರೋಲ್ ಟ್ಯಾಂಕ್ನಲ್ಲಿ ಪೆಟ್ರೋಲ್ ಇಲ್ಲದ ಸಂದರ್ಭದಲ್ಲಿ ಇದನ್ನು ಬಳಸಬಹುದಾಗಿದೆ. ಈ ಮೋಡ್‌ನಲ್ಲಿ ವಾಹನವು ಸಿ.ಎನ್.ಜಿ. ಮೋಡ್ನಲ್ಲಿ ಆರಂಭವಾಗುತ್ತದೆ ಮತ್ತು ಸಿ.ಎನ್.ಜಿ. ಮೋಡ್ನಲ್ಲೇ ಮುಂದುವರಿಯುತ್ತದೆ. ಇಗ್ನಿಶನ್ ಆನ್ ಆಗಿ, ಇಂಜಿನ್ ರನ್ ಆಗದಿದ್ದರೆ, ಸಿ.ಎನ್.ಜಿ. ಇಂಡಿಕೇಟರ್ ಮಾತ್ರ ತೋರಿಸುವುದಕ್ಕೆ ಬದಲಾಗುವವರೆಗೆ ಚೇಂಜ್ಓವರ್ ಸ್ವಿಚ್ ಅನ್ನು ಹಿಡಿದುಕೊಳ್ಳಿ.

ಈ ಮೋಡ್ನಲ್ಲಿ, ಸಿ.ಎನ್.ಜಿ. ಇಂಡಿಕೇಟರ್ ತೋರಿಸುತ್ತದೆ ಮತ್ತು ಪೆಟ್ರೋಲ್ ಇಂಡಿಕೇಟರ್ ಆಫ್ ಆಗಿಯೇ ಇರುತ್ತದೆ.

*ಸೂಚನೆ:*
- *ಪೆಟ್ರೋಲ್ ಟ್ಯಾಂಕ್ನಲ್ಲಿ ಸೂಕ್ತ ಪ್ರಮಾಣದ ಪೆಟ್ರೋಲ್ ಅನ್ನು ಇಟ್ಟಿರಬೇಕು.*
- *ಎಂಬಿಯಂಟ್/ ಇಂಜಿನ್ ತಾಪಮಾನವು ಶೂನ್ಯ ಡಿಗ್ರಿ ಸೆಲ್ಸಿಯಸ್ಗಿಂತ ಕಡಿಮೆ ಇದ್ದಾಗ ಸ್ಟಾರ್ಟ್ ಆದರೆ ವಾಹನದ ಫ್ಯುಯೆಲ್ ಚೇಂಜ್ಓವರ್ ಸಿ.ಎನ್.ಜಿ.ಗೆ ಆಗುವುದಿಲ್ಲ. ಅಟೋಮೋಡ್ನಲ್ಲಿ ವಾಹನ ಸ್ಟಾರ್ಟ್ ಮಾಡುವುದನ್ನು ಶಿಫಾರಸು ಮಾಡಲಾಗಿದೆ.*

## ಸಿ.ಎನ್.ಜಿ. ಮೋಡ್ನಿಂದ ಪೆಟ್ರೋಲ್ ಮೋಡ್ಗೆ ಸ್ವಯಂಚಾಲಿತ ಚೇಂಜ್ಓವರ್


ಇಂಜಿನ್ ರನ್ ಆಗುತ್ತಿರುವಾಗ ಸಿ.ಎನ್.ಜಿ. ಖಾಲಿಯಾದರೆ, ವಾಹನವು ಸ್ವಯಂಚಾಲಿತವಾಗಿ ಸಿ.ಎನ್.ಜಿ. ಮೋಡ್ನಿಂದ ಪೆಟ್ರೋಲ್ ಮೋಡ್ಗೆ ಚೇಂಜ್ಓವರ್ ಆಗುತ್ತದೆ ಮತ್ತು ಸಿ.ಎನ್.ಜಿ. ದೋಷ ಎಚ್ಚರಿಕೆ ದೀಪವು ಬೆಳಗಲು ಆರಂಭಿಸುತ್ತದೆ. ಪೆಟ್ರೋಲ್ ಇಂಡಿಕೇಟರ್ ನಿರಂತರವಾಗಿ ಪ್ರದರ್ಶನಗೊಳ್ಳುತ್ತದೆ ಮತ್ತು ಸಿ.ಎನ್.ಜಿ. ಇಂಡಿಕೇಟರ್ ಸ್ವಯಂಚಾಲಿತವಾಗಿ ಆಫ್ ಆಗುತ್ತದೆ.

ಈ ಮಾಹಿತಿಯನ್ನು ಸಮ್ಮತಿಸಲು, ಒಮ್ಮೆ ಚೇಂಜ್ಓವರ್ ಸ್ವಿಚ್ ಒತ್ತಿ. ಚೇಂಜ್ಓವರ್ ಸ್ವಿಚ್ ಒತ್ತಿದ ನಂತರ ಸಿ.ಎನ್.ಜಿ. ದೋಷ ಎಚ್ಚರಿಕೆ ದೀಪವು ಬ್ಲಿಂಕ್ ಆಗುವುದನ್ನು ನಿಲ್ಲಿಸುತ್ತದೆ ಮತ್ತು ಪೆಟ್ರೋಲ್ ಇಂಡಿಕೇಟರ್ ನಿರಂತರವಾಗಿ ಬೆಳಗಲು ಆರಂಭಿಸುತ್ತದೆ.
ಆದರೂ, ಮರುಪೂರಣ ಮಾಡಿದ ಸಿ.ಎನ್.ಜಿ.ಯನ್ನು ವಾಹನಕ್ಕೆ ಅಳವಡಿಸುವವರೆಗೂ ಇಗ್ನಿಶನ್ ಆನ್- ಇಗ್ನಿಶನ್ ಆಫ್ ರೀತಿ ಬ್ಲಿಂಕ್ ಆಗುತ್ತಲೇ ಇರುತ್ತದೆ. ಸಿ.ಎನ್.ಜಿ. ರಿಫಿಲ್ ಮಾಡಿದರೆ, ಸಿ.ಎನ್.ಜಿ.ಗೆ ಚೇಂಜ್ಓವರ್ ಮಾಡುವುದಕ್ಕಾಗಿ ಫ್ಯುಯೆಲ್ ಚೇಂಜ್ಓವರ್ ಸ್ವಿಚ್ ಅನ್ನು ಒಮ್ಮೆ ಒತ್ತಿ. ನಂತರ ವಾಹನವನ್ನು ಸಿ.ಎನ್.ಜಿ.ಯಲ್ಲಿ ರನ್ ಮಾಡಿ.

*ಸೂಚನೆ:*
- *ಸಿ.ಎನ್.ಜಿ. ಮೋಡ್ನಿಂದ ಪೆಟ್ರೋಲ್ ಮೋಡ್ಗೆ ಸ್ವಯಂಚಾಲಿತ ಚೇಂಜ್ಓವರ್ ಆಗುವಾಗ ಇಂಜಿನ್ ನಿಲ್ಲುವುದನ್ನು ತಡೆಯಲು ಪೆಟ್ರೋಲ್ ಟ್ಯಾಂಕ್ನಲ್ಲಿ ಸಾಕಷ್ಟು ಪ್ರಮಾಣದ ಪೆಟ್ರೋಲ್ ಹಾಕಿರುವುದನ್ನು ಶಿಫಾರಸು ಮಾಡಲಾಗಿದೆ.*
- *ಚೇಂಜ್ಓವರ್ ಸ್ವಿಚ್ ಅನ್ನು ಒತ್ತಿದ ನಂತರ ಸಿ.ಎನ್.ಜಿ. ದೋಷ ಎಚ್ಚರಿಕೆ ದೀಪವು ಬ್ಲಿಂಕ್ ಆಗುವುದು ನಿಲ್ಲದಿದ್ದರೆ ಸಮೀಪದ ದೃಢೀಕೃತ ಮಾರುತಿ ಸುಜುಕಿ ಕಮರ್ಷಿಯಲ್ ವರ್ಕ್ಶಾಪ್ನಲ್ಲಿ ವಾಹನವನ್ನು ತಪಾಸಣೆ ಮಾಡಿಸಿಕೊಳ್ಳಿ*

## ಎಚ್ಚರಿಕೆ ಮತ್ತು ಇಂಡಿಕೇಟರ್ ಲೈಟ್ ಗಳು

### ಬ್ರೇಕ್ ಸಿಸ್ಟಂ ವಾರ್ನಿಂಗ್ ಲೈಟ್



82K170

ವಾಹನದ ನಿರ್ದಿಷ್ಟತೆಗೆ ಅನುಗುಣವಾಗಿ ನಾಲ್ಕು ವಿಭಿನ್ನ ರೀತಿಯ ಕಾರ್ಯಾಚರಣೆಗಳು ಇವೆ.

1) ಇಗ್ನಿಷನ್ ಸ್ವಿಚ್ ಅನ್ನು “ON” (ಆನ್) ಪೊಸಿಷನ್ ಗೆ ತಂದಾಗ ಲೈಟ್ ಸ್ವಲ್ಪ ಮಾತ್ರ ಬೆಳಗುತ್ತದೆ.
2) ಇಗ್ನಿಷನ್ ಸ್ವಿಚ್ ಅನ್ನು “ON” (ಆನ್) ಪೊಸಿಷನ್ ನಲ್ಲಿದ್ದಂತೆ ಪಾರ್ಕಿಂಗ್ ಬ್ರೇಕ್ ಅನ್ನು ಚಲಾಯಿಸಿದಾಗ ಲೈಟ್ ಬೆಳಗುತ್ತದೆ.
3) ಮೇಲಿನ ಯಾವುದಾದರೂ ಒಂದು ಅಥವಾ ಎರಡೂ ಸ್ಥಿತಿಗಳಲ್ಲಿ ಲೈಟ್ ಬೆಳಗುತ್ತದೆ.

4) ಬ್ರೇಕ್ ಫ್ಲೂಯಿಡ್ ರಿಸರ್ವಾಯರ್ ನಲ್ಲಿ ಫ್ಲೂಯಿಡ್ ನಿರ್ದಿಷ್ಟ ಮಟ್ಟಕ್ಕಿಂತ ಕೆಳಗೆ ಇಳಿದಾಗಲೂ ಲೈಟ್ ಆನ್ ಆಗಿಬಿಡುತ್ತದೆ.

ಇಂಜಿನ್ ಆರಂಭವಾದ ಮೇಲೆ ಮತ್ತು ಪಾರ್ಕಿಂಗ್ ಬ್ರೇಕ್ ಅನ್ನು ಪೂರ್ಣವಾಗಿ ರಿಲೀಸ್ ಮಾಡಿದಾಗ, ಬ್ರೇಕ್ ಫ್ಲೂಯಿಡ್ ರಿಸರ್ವಾಯರ್ ನಲ್ಲಿ ಸಾಕಷ್ಟು ಫ್ಲೂಯಿಡ್ ಮಟ್ಟ ಇದ್ದರೆ ಲೈಟ್ ಆಫ್ ಆಗಬೇಕು.

ನೀವು ವಾಹನವನ್ನು ಚಾಲನೆ ಮಾಡುತ್ತಿದ್ದಾಗ ಬ್ರೇಕ್ ಸಿಸ್ಟಂ ವಾರ್ನಿಂಗ್ ಲೈಟ್ ಆನ್ ಆದಲ್ಲಿ, ವಾಹನದ ಬ್ರೇಕ್ ಸಿಸ್ಟಂನಲ್ಲಿ ಏನೋ ಸಮಸ್ಯೆಯಿದೆ ಎಂದು ತಿಳಿದುಕೊಳ್ಳಬೇಕು. ಅದು ನಡೆದಲ್ಲಿ, ನೀವು ಮಾಡಬೇಕು:

1) ವಾಹನವನ್ನು ರಸ್ತೆಬದಿಗೆ ತಂದು ಜಾಗರೂಕವಾಗಿ ನಿಲ್ಲಿಸುವುದು.

**⚠ ಎಚ್ಚರಿಕೆ**

**ವಾಹನ ನಿಲ್ಲಿಸುವ ಅಂತರವು ವಿಸ್ತಾರವಾಗಿರಲಿ, ಪೆಡಲ್ ಮೇಲೆ ನೀವು ಹೆಚ್ಚು ಪ್ರಯತ್ನ ಹಾಕಬೇಕಾಗಿ ಬರಬಹುದು, ಮತ್ತು ಪೆಡಲ್ ಸಾಮಾನ್ಯಕ್ಕಿಂತ ಹೆಚ್ಚು ಕೆಳಗೆ ಹೋಗಬಹುದು.**


2) ರಸ್ತೆಯ ಬದಿಯಲ್ಲಿ ಜಾಗರೂಕವಾಗಿ ಸ್ಟಾರ್ಟ್ ಮಾಡುವುದು ಮತ್ತು ನಿಲ್ಲಿಸುವ ಮೂಲಕ ಬ್ರೇಕ್ ಗಳನ್ನು ಪರೀಕ್ಷಿಸಿ.
   - ಅದು ಸುರಕ್ಷಿತ ಎಂದು ನೀವು ಕಂಡುಕೊಂಡಲ್ಲಿ, ಜಾಗರೂಕವಾಗಿ ಕಡಿಮೆ ವೇಗದಲ್ಲಿ ಸಮೀಪದ ಡೀಲರ್ ಬಳಿ ರಿಪೇರಿಗಾಗಿ ಚಲಾಯಿಸಿ, ಅಥವಾ
   - ಸಮೀಪದ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ರಿಪೇರಿಗಾಗಿ ವಾಹನವನ್ನು ಎಳೆದೊಯ್ಯಿರಿ.

**⚠ ಎಚ್ಚರಿಕೆ**

**ಈ ಕೆಳಗಿನ ಯಾವುದೇ ಸ್ಥಿತಿ ಸಂಭವಿಸಿದಲ್ಲಿ, ನೀವು ತಕ್ಷಣವೇ ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಅನ್ನು ಬ್ರೇಕ್ ಸಿಸ್ಟಂ ತಪಾಸಣೆ ಮಾಡುವಂತೆ ಕೇಳಬೇಕು.**
- **ಇಂಜಿನ್ ಸ್ಟಾರ್ಟ್ ಮಾಡಿದ ಮೇಲೂ ಮತ್ತು ಪಾರ್ಕಿಂಗ್ ಬ್ರೇಕ್ ಅನ್ನು ಪೂರ್ಣವಾಗಿ ರಿಲೀಸ್ ಮಾಡಿದ ಮೇಲೂ ಬ್ರೇಕ್ ಸಿಸ್ಟಂ ವಾರ್ನಿಂಗ್ ಲೈಟ್ ಹೋಗದೇ ಇದ್ದಲ್ಲಿ.**
- **ಇಗ್ನಿಷನ್ ಸ್ವಿಚ್ ಅನ್ನು "ON" (ಆನ್) ಪೊಸಿಷನ್ ಗೆ ತಿರುಗಿಸಿದಾಗ ಬ್ರೇಕ್ ಸಿಸ್ಟಂ ವಾರ್ನಿಂಗ್ ಲೈಟ್ ಆನ್ ಆಗದೆ ಇದ್ದಲ್ಲಿ.**
- **ವಾಹನದ ಕಾರ್ಯಾಚರಣೆ ಸಮಯದಲ್ಲಿ ಬ್ರೇಕ್ ಸಿಸ್ಟಂ ವಾರ್ನಿಂಗ್ ಲೈಟ್ ಆನ್ ಆದಲ್ಲಿ.**

*ಸೂಚನೆ:*
*ಬ್ರೇಕ್ ಸಿಸ್ಟಂ ಸ್ವಯಂ ಹೊಂದಾಣಿಕೆಯಾಗುತ್ತಿರುವ ಕಾರಣ, ಬ್ರೇಕ್ ಪ್ಯಾಡ್ ಗಳು ಸವೆದು ಹೋಗುವ ಕಾರಣದಿಂದ ಫ್ಲೂಯಿಡ್ ಮಟ್ಟವು ಇಳಿಯಲಿದೆ. ಬ್ರೇಕ್ ಫ್ಲೂಯಿಡ್ ರಿಸರ್ವಾಯರನ್ನು ಮತ್ತೆ ತುಂಬುವುದು ಕಾಲಕಾಲಕ್ಕೆ ಮಾಡುವ ಸಾಮಾನ್ಯ ನಿರ್ವಹಣೆ ಎಂದು ಪರಿಗಣಿಸಲಾಗಿದೆ.*

### ದೋಷ ಇಂಡಿಕೇಟರ್ ಲೈಟ್



63J031


ನಿಮ್ಮ ವಾಹನದಲ್ಲಿ ಕಂಪ್ಯೂಟರ್ ನಿಯಂತ್ರಿತ ಧೂಮ ನಿಯಂತ್ರಣ ವ್ಯವಸ್ಥೆಯಿದೆ. ಎಮಿಶನ್ ಕಂಟ್ರೋಲ್ ಸಿಸ್ಟಂ ಅನ್ನು ಸರ್ವಿಸ್ ಮಾಡಬೇಕಾದ ಅಗತ್ಯ ಬರುವಾಗ ಸೂಚನೆ ನೀಡಲು ದೋಷ ಇಂಡಿಕೇಟರ್ ಲೈಟ್ ಅನ್ನು ಇನ್ ಸ್ಟ್ರುಮೆಂಟ್ ಪ್ಯಾನಲ್ ಮೇಲೆ ಒದಗಿಸಲಾಗಿದೆ. ಇಗ್ನಿಷನ್ ಸ್ವಿಚ್ "ON" (ಆನ್) ಆಗಿದ್ದಾಗ ದೋಷ ಇಂಡಿಕೇಟರ್ ಲೈಟ್ ಬೆಳಗುವ ಮೂಲಕ ಅದು ಸರಿಯಾಗಿ ಕೆಲಸ ಮಾಡುತ್ತಿರುವುದನ್ನು ಸೂಚಿಸುತ್ತದೆ ಮತ್ತು ಇಂಜಿನ್ ಆರಂಭವಾದ ಮೇಲೆ ಅದು ನಂದಿ ಹೋಗುತ್ತದೆ.

ಇಂಜಿನ್ ಚಲಿಸುತ್ತಿರುವಾಗಲೂ ದೋಷ ಇಂಡಿಕೇಟರ್ ಲೈಟ್ ಆನ್ ಆಗಿದ್ದಲ್ಲಿ, ಎಮಿಶನ್ ಕಂಟ್ರೋಲ್ ಸಿಸ್ಟಂನಲ್ಲಿ ಏನೋ ಸಮಸ್ಯೆಯಿದೆ ಎಂದು ತಿಳಿಯಬೇಕು. ವಾಹನವನ್ನು ಸಮೀಪದ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿಗೆ ತೆಗೆದುಕೊಂಡು ಹೋಗಿ ಹಾನಿಯನ್ನು ಸರಿಪಡಿಸಿ.

***ಸೂಚನೆ***

**ದೋಷ ಇಂಡಿಕೇಟರ್ ಲೈಟ್ ಬೆಳಗುತ್ತಿದ್ದಾಗಲೂ ವಾಹನವನ್ನು ಚಲಾಯಿಸುವುದರಿಂದ ವಾಹನದ ಎಮಿಶನ್ ಕಂಟ್ರೋಲ್ ಸಿಸ್ಟಂಗೆ ಶಾಶ್ವತ ಹಾನಿಯಾಗುವ ಸಾಧ್ಯತೆಯಿದೆ ಮತ್ತು ಇದು ಫ್ಯೂಯೆಲ್ ಇಕಾನಮಿ ಮತ್ತು ಚಾಲನೆಯ ಮೇಲೂ ಪರಿಣಾಮ ಬೀರಬಹುದು.**

### ಆಯಿಲ್ ಪ್ರೆಶರ್ ಲೈಟ್




50G051

ಇಗ್ನಿಷನ್ ಸ್ವಿಚ್ ಆನ್ ಪೊಸಿಷನ್ ನಲ್ಲಿದ್ದಾಗ ಲೈಟ್ ಬೆಳಗುತ್ತದೆ ಮತ್ತು ಇಂಜಿನ್ ಆರಂಭವಾದಾಗ ಅದು ನಂದಿ ಹೋಗುತ್ತದೆ. ಸಾಕಷ್ಟು ಆಯಿಲ್ ಪ್ರೆಶರ್ ಇಲ್ಲದೆ ಇದ್ದಲ್ಲಿ ಲೈಟ್ "ON" (ಆನ್) ಆಗುತ್ತದೆ ಮತ್ತು ಆನ್ ಆಗಿಯೇ ಇರುತ್ತದೆ. ಚಾಲನೆಯಲ್ಲಿದ್ದಾಗ ಲೈಟ್ ಆನ್ ಆಗಿದ್ದಲ್ಲಿ, ಸಾಧ್ಯವಾದಷ್ಟು ಬೇಗನೇ ರಸ್ತೆಯ ಬದಿಗೆ ವಾಹನವನ್ನು ತಂದು ಇಂಜಿನ್ ಸ್ಥಗಿತಗೊಳಿಸಿ.
ಆಯಿಲ್ ಲೆವೆಲ್ ಅನ್ನು ಪರೀಕ್ಷಿಸಿ ಮತ್ತು ಶಿಫಾರಸು ಮಾಡಿರುವ ಇಂಜಿನ್ ಆಯಿಲ್ ಅನ್ನು ಅಗತ್ಯವಿದ್ದಲ್ಲಿ ಸೇರಿಸಿ. ಸಾಕಷ್ಟು ಆಯಿಲ್ ಇದ್ದಲ್ಲಿ, ವಾಹನವನ್ನು ಮತ್ತೊಮ್ಮೆ ಚಲಾಯಿಸುವ ಮೊದಲು ಲುಬ್ರಿಕೇಶನ್ ಸಿಸ್ಟಂ ಅನ್ನು ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಪರೀಕ್ಷಿಸಬೇಕು.

***ಸೂಚನೆ***

- **ಈ ಲೈಟ್ ಆನ್ ಆಗಿರುವಂತೆ ನೀವು ಇಂಜಿನ್ ಚಾಲನೆ ಮಾಡಿದಲ್ಲಿ, ಗಂಭೀರ ಇಂಜಿನ್ ಹಾನಿಯಾಗುವ ಸಾಧ್ಯತೆಯಿದೆ.**
- **ಆಯಿಲ್ ಸೇರಿಸಲು ಸೂಚನೆ ನೀಡಲು ಆಯಿಲ್ ಪ್ರೆಶರ್ ಲೈಟ್ ಅನ್ನೇ ಅವಲಂಬಿಸಬೇಡಿ. ಇಂಜಿನ್ ಆಯಿಲ್ ಮಟ್ಟವನ್ನು ಕಾಲ ಕಾಲಕ್ಕೆ ಪರೀಕ್ಷಿಸುತ್ತಾ ಇರಬೇಕು.**

### ಚಾರ್ಜಿಂಗ್ ಲೈಟ್



50G052

ಇಗ್ನಿಷನ್ ಸ್ವಿಚ್ "ON" (ಆನ್) ಪೊಸಿಷನ್ ನಲ್ಲಿದ್ದಾಗ ಲೈಟ್ ಬೆಳಗುತ್ತದೆ ಮತ್ತು ಇಂಜಿನ್ ಆರಂಭವಾದಾಗ ಅದು ನಂದಿ ಹೋಗುತ್ತದೆ. ಬ್ಯಾಟರಿ ಚಾರ್ಜಿಂಗ್ ಸಿಸ್ಟಂನಲ್ಲಿ ಏನಾದರೂ ಸಮಸ್ಯೆ ಇದ್ದಲ್ಲಿ ಲೈಟ್ ಆನ್ ಆಗುತ್ತದೆ ಮತ್ತು ಆನ್ ಆಗಿಯೇ ಉಳಿಯುತ್ತದೆ. ಇಂಜಿನ್ ಚಾಲನೆಯಲ್ಲಿದ್ದಾಗ ಲೈಟ್ ಆನ್ ಆದಲ್ಲಿ, ಚಾರ್ಜಿಂಗ್ ಸಿಸ್ಟಂ ಅನ್ನು ತಕ್ಷಣವೇ ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಮೂಲಕ ತಪಾಸಣೆ ಮಾಡಬೇಕು.

### ಡ್ರೈವರ್ಸ್ ಸೀಟ್ ಬೆಲ್ಟ್ ವಾರ್ನಿಂಗ್ ಲೈಟ್/ ಮುಂಭಾಗದ ಪ್ರಯಾಣಿಕರ ಸೀಟ್ ಬೆಲ್ಟ್ ವಾರ್ನಿಂಗ್ ಲೈಟ್ (ಅಳವಡಿಸಿದಲ್ಲಿ)




60G049

ಚಾಲಕ ಅಥವಾ ಮುಂಭಾಗದ ಪ್ರಯಾಣಿಕರು ತಮ್ಮ ಸೀಟ್ ಬೆಲ್ಟ್ ಅನ್ನು ಬಿಗಿ ಮಾಡದೆ ಇದ್ದಾಗ, ಈ ಲೈಟ್ ಆನ್ ಆಗುತ್ತದೆ ಮತ್ತು/ ಅಥವಾ ಬ್ಲಿಂಕ್ ಆಗುತ್ತದೆ.

ಸೀಟ್ ಬೆಲ್ಟ್ ನೆನಪಿಸುವುದು ಸಂಬಂಧಿಸಿದ ವಿವರಗಳಿಗೆ "ಸೀಟ್ ಬೆಲ್ಟ್ ಗಳು ಮತ್ತು ಮಕ್ಕಳನ್ನು ನಿರ್ಬಂಧಿಸುವ ವ್ಯವಸ್ಥೆಗಳು" ವಿಭಾಗವನ್ನು ಓದಿ.

### ಹೈ ಇಂಜಿನ್ ಕೂಲಂಟ್ ಟೆಂಪರೇಚರ್ ವಾರ್ನಿಂಗ್ ಲೈಟ್ (ಕೆಂಪು ಬಣ್ಣ)




54G344

ಇಗ್ನಿಷನ್ ಸ್ವಿಚ್ ಅನ್ನು ಆನ್ ಪೊಸಿಷನ್ ಗೆ ತಂದಾಗ, ಈ ಲೈಟ್ ಸ್ವಲ್ಪ ಸಮಯದ ಕಾಲ "ON" (ಆನ್) ಆಗುತ್ತದೆ. ಹಾಗೆ ಲೈಟ್ ಕೆಲಸ ಮಾಡುತ್ತಿದೆ ಎನ್ನುವುದನ್ನು ನೀವು ಪರೀಕ್ಷಿಸಬಹುದು. ಚಾಲನೆ ಮಾಡುವಾಗ ಈ ಲೈಟ್ ಬೆಳಗಿದಲ್ಲಿ, ಇಂಜಿನ್ ಬಿಸಿಯಾಗಿ ಓಡುತ್ತಿದೆ ಎಂದರ್ಥವಾಗಿದೆ. ವಾಸ್ತವದ ಅತಿಯಾದ ಬಿಸಿಯಾಗುವಿಕೆಗೆ ಕಾರಣವಾಗಬಹುದಾದ ಚಾಲನಾ ಸ್ಥಿತಿಗಳನ್ನು ತಪ್ಪಿಸಿಕೊಳ್ಳಿ. ಬೆಳಗದೆಯೇ ಲೈಟ್ ಆನ್ ಆಗಿ ನಿಂತಲ್ಲಿ, ಇಂಜಿನ್ ಅತಿಯಾಗಿ ಬಿಸಿಯಾಗುತ್ತಿದೆ ಎಂದರ್ಥವಾಗಿದೆ. "ತುರ್ತು ಸರ್ವಿಸ್" ವಿಭಾಗದ "ಇಂಜಿನ್ ಅತಿಯಾಗಿ ಬಿಸಿಯಾದಲ್ಲಿ" ನೀಡಲಾಗಿರುವ ಸೂಚನೆಗಳನ್ನು ಪಾಲಿಸಿ.

***ಸೂಚನೆ***

**ಇಂಜಿನ್ ಅತಿಯಾಗಿ ಬಿಸಿಯಾಗಿದೆ ಎನ್ನುವ ಸೂಚನೆ ಇದ್ದಾಗಲೂ ವಾಹನವನ್ನು ಚಲಾಯಿಸುವುದನ್ನು ಮುಂದುವರಿಸಿದಲ್ಲಿ ಗಂಭೀರ ಇಂಜಿನ್ ಹಾನಿಗೆ ಕಾರಣವಾಗಬಹುದು.**


### ಟರ್ನ್ ಸಿಗ್ನಲ್ ಇಂಡಿಕೇಟರ್ ಗಳು



50G055

ನೀವು ಎಡ ಅಥವಾ ಬಲ ಟರ್ನ್ ಸಿಗ್ನಲ್ ಗಳನ್ನು ಆನ್ ಮಾಡಿದಾಗ, ಇನ್ ಸ್ಟ್ರುಮೆಂಟ್ ಪ್ಯಾನೆಲ್ ನಲ್ಲಿ ಸಂಬಂಧಪಟ್ಟ ಹಸಿರು ಬಾಣವು ಸಂಬಂಧಪಟ್ಟ ಟರ್ನ್ ಸಿಗ್ನಲ್ ಲೈಟ್ ಗಳ ಜೊತೆಯಲ್ಲಿ ಬೆಳಗುತ್ತದೆ. ನೀವು ಹಜಾರ್ಡ್ ವಾರ್ನಿಂಗ್ ಸ್ವಿಚ್ ಅನ್ನು ಆನ್ ಮಾಡಿದಾಗ, ಎಲ್ಲಾ ಟರ್ನ್ ಸಿಗ್ನಲ್ ಲೈಟ್ ಗಳ ಜೊತೆಯಲ್ಲಿ ಎರಡೂ ಬಾಣಗಳು ಬೆಳಗುತ್ತವೆ.


### ಮೈನ್ ಬೀಮ್ (ಹೈ ಬೀಮ್) ಇಂಡಿಕೇಟರ್ ಲೈಟ್



50G056

ಹೆಡ್ ಲೈಟ್ ಮೈನ್ ಬೀಮ್ಸ್ (ಹೈ ಬೀಮ್ಸ್) ಆನ್ ಆಗಿದ್ದಾಗ ಈ ಇಂಡಿಕೇಟರ್ ಆನ್ ಆಗುತ್ತದೆ.

### ಫ್ಯೂಯೆಲ್ ಫಿಲ್ಟರ್ ವಾರ್ನಿಂಗ್ ಲೈಟ್ (ಅಳವಡಿಸಿದಲ್ಲಿ)




60A541

ಇಗ್ನಿಷನ್ ಸ್ವಿಚ್ ಅನ್ನು ಆನ್ ಪೊಸಿಷನಿಗೆ ತಂದಾಗ ಹಲವು ಸೆಕೆಂಡುಗಳ ಕಾಲ ಈ ಲೈಟ್ ಆನ್ ಆಗಿರುತ್ತದೆ. ಹೀಗಾಗಿ ನೀವು ಲೈಟ್ ಕೆಲಸ ಮಾಡುತ್ತಿದೆಯೇ ಎಂದು ಪರೀಕ್ಷಿಸಬಹುದು.

ಚಾಲನೆಯಲ್ಲಿದ್ದಾಗ ಲೈಟ್ “ON” (ಆನ್) ಆದಲ್ಲಿ, ಫ್ಯೂಯೆಲ್ ಫಿಲ್ಟರ್ ನಲ್ಲಿ ನೀರಿನಂಶ ಬೆರೆತಿರುವ ಸಾಧ್ಯತೆಯಿದೆ. ಸಾಧ್ಯವಾದಷ್ಟು ಬೇಗನೇ ನೀರನ್ನು ಬಸಿಯಬೇಕು. ನೀರು ಬಸಿಯುವ ಬಗ್ಗೆ ವಿವರಗಳಿಗಾಗಿ “ತಪಾಸಣೆ ಮತ್ತು ನಿರ್ವಹಣೆ” ವಿಭಾಗದಲ್ಲಿ “ಫ್ಯೂಯೆಲ್ ಫಿಲ್ಟರ್” ಅನ್ನು ಓದಿ.


### ಗ್ಲೋ ಪ್ಲಗ್ ಇಂಡಿಕೇಟರ್ ಲೈಟ್ (ಅಳವಡಿಸಿದಲ್ಲಿ)



60A543

ಕೂಲಂಟ್ ಟೆಂಪರೇಚರ್ ಸಾಕಷ್ಟು ತಂಪಾಗಿದ್ದಲ್ಲಿ, ಇಗ್ನಿಷನ್ ಸ್ವಿಚ್ “ON” (ಆನ್) ಆಗಿದ್ದಲ್ಲಿ ಈಲೈಟ್ ಆನ್ ಆಗುತ್ತದೆ ಮತ್ತು ಇಂಜಿನ್ ಸ್ಟಾರ್ಟ್ ಮಾಡಲು ಸಾಕಾಗುವಷ್ಟು ಗ್ಲೋ ಪ್ಲಗ್ ಬಿಸಿಯಾದಾಗ ನಂದಿ ಹೋಗುತ್ತದೆ.

### ಸಿ.ಎನ್.ಜಿ. ದೋಷ ಎಚ್ಚರಿಕೆ ಲೈಟ್ (ಅಳವಡಿಸಿದಲ್ಲಿ)




77PMC015

ಇಗ್ನಿಶನ್ ಸ್ವಿಚ್ ಅನ್ನು ಆನ್ ಮಾಡಿದರೆ, ಸಿಎನ್ ಈ ಸಿ.ಎನ್.ಜಿ. ದೋಷ ದೀಪವು ದೋಷಮುಕ್ತವಾಗಿದೆಯೇ ಎಂದು ಪರಿಶೀಲಿಸಲು ದೋಷ ಎಚ್ಚರಿಕೆ ದೀಪವು ಒಮ್ಮೆಯಷ್ಟೇ ಕಾಣಿಸುತ್ತದೆ.


- ಇಗ್ನಿಶನ್ ಆನ್ ಆಗಿದ್ದಾಗ ಸಿ.ಎನ್.ಜಿ. ದೋಷ ಎಚ್ಚರಿಕೆ ದೀಪವು ನಿರಂತರವಾಗಿ ಬೆಳಗುತ್ತಿದ್ದರೆ, ಸಿ.ಎನ್.ಜಿ. ಸಿಸ್ಟಂನಲ್ಲಿ ಸಮಸ್ಯೆಯಿದೆ ಎಂದರ್ಥ. ತಕ್ಷಣ ನಿಮ್ಮ ವಾಹನವನ್ನು ದೃಢೀಕೃತ ಮಾರುತಿ ಸುಜುಕಿ ಕಮರ್ಷಿಯಲ್ ವರ್ಕ್ಶಾಪ್ನಲ್ಲಿ ಪರಿಶೀಲಿಸಿಕೊಳ್ಳಿ.
- ಸಿ.ಎನ್.ಜಿ. ದೋಷ ಎಚ್ಚರಿಕೆ ದೀಪವು ಇಂಜಿನ್ ರನ್ ಆಗುತ್ತಿರುವಾಗಲೂ ಬೆಳಗುತ್ತಿದ್ದರೆ, ವಾಹನವು ಸಿ.ಎನ್.ಜಿ. ಮೋಡ್ನಲ್ಲಿ ರನ್ ಆಗುವುದನ್ನು ಮುಂದುವರಿಸುವಲ್ಲಿ ಮತ್ತು ಪೆಟ್ರೋಲ್ ಮೋಡ್ಗೆ ಸ್ವಿಚ್ ಸ್ವಯಂಚಾಲಿತವಾಗಿ ಸ್ವಿಚ್ಓವರ್ ಆಗಲು ಸಮಸ್ಯೆಯಿದೆ ಎಂಬರ್ಥ ಉಂಟಾಗುತ್ತದೆ. ದೃಢೀಕೃತ ಮಾರುತಿ ಸುಜುಕಿ ಕಮರ್ಷಿಯಲ್ ವರ್ಕ್ಶಾಪ್ನಲ್ಲಿ ನಿಮ್ಮ ವಾಹನವನ್ನು ಪರಿಶೀಲಿಸಿಕೊಳ್ಳಿ.

*ಸೂಚನೆ:*

*ಇಗ್ನಿಶನ್ ಸ್ವಿಚ್ ಆನ್ ಮಾಡಿ, ಇಂಜಿನ್ ರನ್ ಆಗುತ್ತಿಲ್ಲದಿದ್ದರೆ, ಸಿ.ಎನ್.ಜಿ. ಲ್ಯಾಂಪ್ ಬ್ಲಿಂಕ್ ಆಗಿದೆ ಎಂದರೆ ಫ್ಯೂಯೆಲ್ ಲಿಡ್ ತೆರೆದಿದೆ ಎಂದರ್ಥ. ಈ ಸ್ಥಿತಿಯಲ್ಲಿ ವಾಹನ ಆನ್ ಆಗುವುದಿಲ್ಲ. ವಾಹನ ಸ್ಟಾರ್ಟ್ ಮಾಡಲು ಮುಚ್ಚಳ ಮುಚ್ಚಿ.*

## ಲೈಟಿಂಗ್ ಕಂಟ್ರೋಲ್ ಲಿವರ್

ಉದಾಹರಣೆ




65D611

**⚠ ಎಚ್ಚರಿಕೆ**

**ಗಾಯದಿಂದ ತಪ್ಪಿಸಿಕೊಳ್ಳಲು, ಸ್ಟೀರಿಂಗ್ ವೀಲ್ ಅನ್ನು ಹಿಡಿದುಕೊಂಡೇ ಕಂಟ್ರೋಲ್ ಗಳನ್ನು ಚಲಾಯಿಸಬೇಡಿ.**

### ಲೈಟಿಂಗ್ ಕಾರ್ಯನಿರ್ವಹಣೆ

ಉದಾಹರಣೆ




77PH110

ಲೈಟ್ ಗಳನ್ನು ಆನ್ ಅಥವಾ ಆಫ್ ಗೆ ತಿರುಗಿಸಲು, ನಾಬ್ ಅನ್ನು ಲಿವರ್ ತುದಿಯಲ್ಲಿ ತಿರುಗಿಸಿ. ಮೂರು ಪೊಸಿಷನ್ ಗಳು ಇವೆ:

**ಆಫ್**

ಎಲ್ಲಾ ಲೈಟ್ ಗಳೂ ಆಫ್ ಆಗಿವೆ.


⁼D0⊂

ಫ್ರಂಟ್ ಪೊಸಿಷನ್ ಲೈಟ್ಸ್, ಟೈಲ್ ಲೈಟ್ಸ್, ಲೈಸೆನ್ಸ್ ಪ್ಲೇಟ್ ಲೈಟ್ಸ್ ಮತ್ತು ಇನ್ ಸ್ಟ್ರುಮೆಂಟ್ ಲೈಟ್ಸ್ ಆನ್ ಆಗಿವೆ. ಆದರೆ ಹೆಡ್ ಲೈಟ್ಸ್ ಆಫ್ ಆಗಿವೆ.

≣D

ಫ್ರಂಟ್ ಪೊಸಿಷನ್ ಲೈಟ್ಸ್, ಟೈಲ್ ಲೈಟ್ಸ್, ಲೈಸೆನ್ಸ್ ಪ್ಲೇಟ್ ಲೈಟ್ಸ್, ಇನ್ ಸ್ಟ್ರುಮೆಂಟ್ ಲೈಟ್ಸ್ ಮತ್ತು ಹೆಡ್ ಲೈಟ್ಸ್ ಆನ್ ಆಗಿವೆ.

ಉದಾಹರಣೆ




77PH111

ಹೆಡ್ ಲೈಟ್ಸ್ ಆನ್ ಆಗಿರುವಾಗ ಹೈ ಬೀಮ್ಸ್ (ಮೈನ್ ಬೀಮ್ಸ್) ಗೆ ಬದಲಿಸಲು ಲಿವರ್ ಅನ್ನು ಮುಂದಕ್ಕೆ ದೂಡಿ. ಅಥವಾ ಲಿವರ್ ಅನ್ನು ಲೋ ಬೀಮ್ಸ್ ಗೆ ಬದಲಿಸಲು ನಿಮ್ಮ ಕಡೆಗೆ ಎಳೆಯಿರಿ. ಹೈ ಬೀಮ್ಸ್ (ಮೈನ್ ಬೀಮ್ಸ್) ಆನ್ ಆಗಿರುವಾಗ, ಮೈನ್ ಬೀಮ್ಸ್ (ಹೈ ಬೀಮ್) ಇಂಡಿಕೇಟರ್ ಲೈಟ್ ಇನ್ ಸ್ಟ್ರುಮೆಂಟ್ ಪ್ಯಾನೆಲ್ ಮೇಲೆ ಆನ್ ಆಗುತ್ತದೆ. ಹೈ ಬೀಮ್ಸ್ (ಮೈನ್ ಬೀಮ್ಸ್ ) ಗಳನ್ನು ಪಾಸಿಂಗ್ ಸಿಗ್ನಲ್ ಆಗಿ ತಕ್ಷಣಕ್ಕೆ ಸಕ್ರಿಯಗೊಳಿಸಲು, ಲಿವರ್ ಅನ್ನು ಮೆಲ್ಲಗೆ ನಿಮ್ಮ ಕಡೆಗೆ ಎಳೆಯಿರಿ ಮತ್ತು ನೀವು ಸಿಗ್ನಲ್ ಪೂರ್ಣಗೊಳಿಸಿದಾಗ ಅದನ್ನು ರಿಲೀಸ್ ಮಾಡಿ.

## ಹೆಡ್ ಲೈಟ್ ಲೆವೆಲಿಂಗ್ ಸ್ವಿಚ್

ಉದಾಹರಣೆ




77PH010

ಈ ಸ್ವಿಚ್ ಅನ್ನು ತಿರುಗಿಸುವ ಮೂಲಕ ಹೆಡ್ ಲೈಟ್ ಬೀಮ್ ಅನ್ನು ನಿಮ್ಮ ವಾಹನದ ಲೋಡ್ ಸ್ಥಿತಿಗೆ ಅನುಗುಣವಾಗಿ ಸಮತಟ್ಟಾಗಿಸಿ. ವಿಭಿನ್ನ ವಾಹನದ ಲೋಡ್ ಸ್ಥಿತಿಗಳಿಗೆ ಕೆಳಗಿನ ಚಾರ್ಟ್ ಸೂಕ್ತ ಸ್ವಿಚ್ ಪೊಸಿಷನ್ ಅನ್ನು ತೋರಿಸುತ್ತದೆ.

**(ಪೆಟ್ರೋಲ್ ಮತ್ತು ದ್ವಿ-ಇಂಧನ ಎಂಜಿನ್ ಮಾದರಿಗಾಗಿ)**


| ವಾಹನ ಲೋಡ್ ಸ್ಥಿತಿ | ಸ್ವಿಚ್ ಪೊಸಿಷನ್ |
|---|---|
| ಚಾಲಕ ಮಾತ್ರ | 0 |
| ಚಾಲಕ + ಪೂರ್ಣ ಕಾರ್ಗೋ (ಲೋಡ್ ಪ್ಲಾಟ್ ಫಾರ್ಮ್ ಮೇಲೆ ಸಮನಾಗಿ ಹಂಚಿದ ಲೋಡ್). | 2 |

**(ಡೀಸೆಲ್ ಇಂಜಿನ್ ಮಾಡೆಲ್)**

| ವಾಹನ ಲೋಡ್ ಸ್ಥಿತಿ | ಸ್ವಿಚ್ ಪೊಸಿಷನ್ |
|---|---|
| ಚಾಲಕ ಮಾತ್ರ | 0 |
| ಚಾಲಕ + ಪೂರ್ಣ ಕಾರ್ಗೋ (ಲೋಡ್ ಪ್ಲಾಟ್ ಫಾರ್ಮ್ ಮೇಲೆ ಸಮನಾಗಿ ಹಂಚಿದ ಲೋಡ್). | 3 |

## ಟರ್ನ್ ಸಿಗ್ನಲ್ ಕಂಟ್ರೋಲ್ ಲಿವರ್

**ಉದಾಹರಣೆ**



65D611


**⚠ ಎಚ್ಚರಿಕೆ**

**ಗಾಯದಿಂದ ತಪ್ಪಿಸಿಕೊಳ್ಳಲು, ಸ್ಟೀರಿಂಗ್ ವೀಲ್ ಅನ್ನು ಹಿಡಿದುಕೊಂಡೇ ಕಂಟ್ರೋಲ್ ಗಳನ್ನು ಚಲಾಯಿಸಬೇಡಿ.**

### ಟರ್ನ್ ಸಿಗ್ನಲ್ ಕಾರ್ಯನಿರ್ವಹಣೆ

ಇಗ್ನಿಷನ್ ಸ್ವಿಚ್ "ON" (ಆನ್) ಪೊಸಿಷನ್ ನಲ್ಲಿರುವಾಗ, ಬಲ ಅಥವಾ ಎಡ ಸಿಗ್ನಲ್ ಗಳನ್ನು ಸಕ್ರಿಯಗೊಳಿಸಲು ಲಿವರ್ ಅನ್ನು ಮೇಲೆ ಅಥವಾ ಕೆಳಗೆ ಚಲಿಸಿ.

**ಉದಾಹರಣೆ**





77PH112

ಲಿವರ್ ಅನ್ನು ಮೇಲ್ಮುಖ ಅಥವಾ ಕೆಳಮುಖವಾಗಿ ಸಿಗ್ನಲ್ ಗೆ ಚಲಿಸಿ. ತಿರುವು ಪೂರ್ಣಗೊಂಡಾಗ, ಸಿಗ್ನಲ್ ರದ್ದಾಗುತ್ತದೆ ಮತ್ತು ಲಿವರ್ ತನ್ನ ಸಾಮಾನ್ಯ ಪೊಸಿಷನ್ ಗೆ ಹಿಂತಿರುಗುತ್ತದೆ.

## ಹಜಾರ್ಡ್ ವಾರ್ನಿಂಗ್ ಸ್ವಿಚ್

**ಉದಾಹರಣೆ**





77PH028

(1) ಆನ್
(2) ಆಫ್

ಹಜಾರ್ಡ್ ವಾರ್ನಿಂಗ್ ಲೈಟ್ ಗಳನ್ನು ಸಕ್ರಿಯಗೊಳಿಸಲು ಹಜಾರ್ಡ್ ವಾರ್ನಿಂಗ್ ಸ್ವಿಚ್ ಅನ್ನು ಮೇಲಕ್ಕೆ ಎಳೆಯಿರಿ. ಎಲ್ಲಾ ಟರ್ನ್ ಸಿಗ್ನಲ್ ಲೈಟ್ ಗಳು ಮತ್ತು ಎರಡೂ ಟರ್ನ್ ಸಿಗ್ನಲ್ ಇಂಡಿಕೇಟರ್ ಗಳು ಜೊತೆಯಾಗಿ ಬೆಳಗುತ್ತವೆ. ಲೈಟ್ ಗಳನ್ನು ಆಫ್ ಮಾಡಲು ಸ್ವಿಚ್ ಕೆಳಕ್ಕೆ ದೂಡಿ.
ತುರ್ತು ಪಾರ್ಕಿಂಗ್ ಸಂದರ್ಭದಲ್ಲಿ ಅಥವಾ ನಿಮ್ಮ ವಾಹನವು ಟ್ರಾಫಿಕ್ ಹಜಾರ್ಡ್ ಆಗುವ ಸಾಧ್ಯತೆ ಇದ್ದಾಗ ಹಜಾರ್ಡ್ ವಾರ್ನಿಂಗ್ ಲೈಟ್ ಗಳನ್ನು ಇತರ ಸಾರಿಗೆಯನ್ನು ಎಚ್ಚರಿಸಲು ಬಳಸಬಹುದು.

## ವಿಂಡ್ ಶೀಲ್ಡ್ ವೈಪರ್ ಮತ್ತು ವಾಶರ್ ಲೆವರ್

ಉದಾಹರಣೆ



65D611

**⚠ ಎಚ್ಚರಿಕೆ**


**ಗಾಯದಿಂದ ತಪ್ಪಿಸಿಕೊಳ್ಳಲು, ಸ್ಟೀರಿಂಗ್ ವೀಲ್ ಅನ್ನು ಹಿಡಿದುಕೊಂಡೇ ಕಂಟ್ರೋಲ್ ಗಳನ್ನು ಚಲಾಯಿಸಬೇಡಿ.**

### ವೈಪರ್ ಕಾರ್ಯನಿರ್ವಹಣೆ

ಇಗ್ನಿಷನ್ ಸ್ವಿಚ್ "ON" (ಆನ್) ಪೊಸಿಷನ್ ನಲ್ಲಿದ್ದಾಗ, ನೀವು ವೈಪರ್ ಲಿವರ್ ಅನ್ನು ಬಳಸಬಹುದು.

### ವಿಂಡ್ ಶೀಲ್ಡ್ ವೈಪರ್ ಗಳು

ಉದಾಹರಣೆ





77PM02015

ವಿಂಡ್ ಶೀಲ್ಡ್ ವೈಪರ್ ಗಳನ್ನು ಆನ್ ಮಾಡಲು ನಾಬ್ ಅನ್ನು ಲಿವರ್ ಎಂಡ್ ನಲ್ಲಿ ಒಂದು ಕಾರ್ಯನಿರ್ವಹಣಾ ಪೊಸಿಷನ್ ಗಳಿಗೆ ತಿರುಗಿಸಿ. "LO" (ಎಲ್) ಪೊಸಿಷನ್ ನಲ್ಲಿ, ವೈಪರ್ ನಿಯಮಿತವಾದ ಕಡಿಮೆ ವೇಗದಲ್ಲಿ ಕಾರ್ಯ ನಿರ್ವಹಿಸುತ್ತದೆ. "HI" (ಎಚ್) ಪೊಸಿಷನ್ ನಲ್ಲಿ, ವೈಪರ್ ನಿಯಮಿತವಾದ ಅತಿವೇಗದಲ್ಲಿ ಕಾರ್ಯನಿರ್ವಹಿಸುತ್ತದೆ. ವೈಪರ್ ಗಳನ್ನು ಆಫ್ ಮಾಡಲು, ಲಿವರ್ ಅನ್ನು ಮರಳಿ "OFF" (ಆಫ್) ಪೊಸಿಷನ್ ಗೆ ತಿರುಗಿಸಬೇಕು.

### ವಿಂಡ್ ಶೀಲ್ಡ್ ವಾಶರ್ (ಅಳವಡಿಸಿದಲ್ಲಿ)

ಉದಾಹರಣೆ




77PM02016

ವಿಂಡ್ ಶೀಲ್ ವಾಶರ್ ದ್ರವ ಸಿಂಪಡಿಸಲು, ಲೆವರ್ ಅನ್ನು ನಿಮ್ಮ ದಿಕ್ಕಿಗೆ ಎಳೆಯಿರಿ

**⚠ ಎಚ್ಚರಿಕೆ**


**ವಿಂಡ್ ಶೀಲ್ಡ್ ವಾಶರ್ ರಿಸರ್ವಾಯಿರ್ ನಲ್ಲಿ ರೇಡಿಯೇಟರ್ ಆಂಟಿಫ್ರೀಜ್ ಬಳಸಬೇಡಿ. ಇದನ್ನು ವಿಂಡ್ ಶೀಲ್ಡ್ ಮೇಲೆ ಸಿಂಪಡಿಸಿದರೆ ಅದರ ಸ್ಪಷ್ಟತೆಯನ್ನು ತೀವ್ರವಾಗಿ ಅಸಹಜಗೊಳಿಸುತ್ತದೆ, ಹಾಗೂ ನಿಮ್ಮ ವಾಹನದ ಪೇಂಟ್ ಹಾಳುಮಾಡುತ್ತದೆ**

***ಸೂಚನೆ***

ವಿಂಡ್ ಶೀಲ್ಡ್ ವೈಪರ್ ಮತ್ತು ವಾಶರ್ ವ್ಯವಸ್ಥೆಯ ಭಾಗಗಳಿಗೆ ಹಾನಿಯಾಗದಂತೆ ತಡೆಯಲು, ನೀವು ಕೆಳಗಿನ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು:

- ವಿಂಡ್ ಶೀಲ್ಡ್ ವಾಶರ್ ದ್ರವ ಸಿಂಪಡಿಸದೇ ಅಥವಾ ವಾಶರ್ ಮೋಟಾರ್ ಹಾನಿಗೊಳಗಗಿದ್ದರೆ ಲೆವರ್ ಅನ್ನು ಹಿಡಿಯಬೇಡಿ.
- ವೈಪರ್ ಗಳಿಂದ ಒಣಗಿದ ವಿಂಡ್ ಶೀಲ್ಡ್ ನಿಂದ ಕೊಳೆ ತೆಗೆಯಲು ಪ್ರಯತ್ನಿಸಬೇಡಿ ಅಥವಾ ನೀವು ವಿಂಡ್ ಶೀಲ್ಡ್ ಮತ್ತು ವೈಪರ್ ಬ್ಲೇಡ್ ಹಾಳುಮಾಡಬೇಡಿ. ಯಾವಾಗಲೂ ವಿಂಡ್ ಶೀಲ್ಡ್ ನಲ್ಲಿ ವೈಪರ್ ಕಾರ್ಯ ನಿರ್ವಹಿಸುವ ಮೊದಲು ವಾಶರ್ ದ್ರವ ಸಿಂಪಡಿಸಿ.
- ವೈಪರ್ ಗಳನ್ನು ಬಳಸುವ ಮೊದಲು ವೈಪರ್ ಬ್ಲೇಡ್ ನಿಂದ ಕಟ್ಟಿದ ಹಿಮ ತೆಗೆಯಿರಿ.
- ವಾಶರ್ ದ್ರವವನ್ನು ನಿಯಮಿತವಾಗಿ ಪರೀಕ್ಷಿಸಿ. ಹವಾಮಾನ ಕೆಟ್ಟದಾಗಿದ್ದರೆ ಆಗಾಗ್ಗೆ ಪರೀಕ್ಷಿಸಿ.
- ಉಷ್ಣಾಂಶ ಶೀತಲೀಕರಣವಾಗುವಷ್ಟು ಕಡಿಮೆಗೆ ಕುಸಿದಿದ್ದರೆ ಪರಿಹಾರವಾಗಿ ವಾಶರ್ ದ್ರವ ರಿಸರ್ವಾಯಿರ್ ಅನ್ನು ಚಳಿಗಾಲದಲ್ಲಿ ಹಿಗ್ಗುವಿಕೆಗಾಗಿ 3/4 ನಷ್ಟು ತುಂಬಿಸಿ.


## ಹಾರ್ನ್




77PH029

ಹಾರ್ನ್ ಧ್ವನಿ ಮಾಡಲು ಹಾರ್ನ್ ಬಟನ್ ಅನ್ನು ಸ್ಟೀರಿಂಗ್ ವೀಲ್ ಗೆ ಒತ್ತಿ. ಹಾರ್ನ್ ಯಾವುದೇ ಪೊಸಿಷನ್ ನಲ್ಲೂ ಸಹ ಇಗ್ನಿಷನ್ ಸ್ವಿಚ್ ಜೊತೆಗೆ ಧ್ವನಿ ಮಾಡಲಿದೆ.

## ಸಿ.ಎನ್.ಜಿ. ಸಿಲಿಂಡರ್ ವಾರ್ನಿಂಗ್ ಲೇಬಲ್ (ಅಳವಡಿಸಿದಲ್ಲಿ)





77PM02006

ಸಿ.ಎನ್.ಜಿ. ಸಿಲಿಂಡರ್ನಲ್ಲಿ ನೀವು ಈ ಲೇಬಲ್ ಕಂಡುಕೊಳ್ಳುತ್ತೀರಿ.

## ಸಿ.ಎನ್.ಜಿ. ಎಚ್ಚರಿಕೆ ಲೇಬಲ್ (ಅಳವಡಿಸಿದಲ್ಲಿ)


### ಫ್ರಂಟ್ ಡ್ರೈವ್ ಡೋರ್





77PM02007

ಸಿ.ಎನ್.ಜಿ. ಎಚ್ಚರಿಕೆ ಲೇಬಲ್ ಫ್ರಂಟ್ ರೈಟ್ ಡೋರ್‌ನಲ್ಲಿ ಕಾಣಿಸುತ್ತದೆ.

## ಸಿ.ಎನ್.ಜಿ. ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ (ಅಳವಡಿಸಿದಲ್ಲಿ)





77PM02011





77PM02014

### ಬಲಗೈ ಬದಿ (ಆರ್‌ಎಚ್‌ಎಸ್)




77PM02012

## ಎಡಗೈ ಬದಿ (ಎಲ್ಎಚ್ಎಸ್)




77PM02013

ಸಿ.ಎನ್.ಜಿ. ಸಿಲಿಂಡರುಗಳಲ್ಲಿ ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ ನೀಡಲಾಗಿರುತ್ತದೆ, ಇದನ್ನು ವಾಹನದ ಕೆಳಭಾಗದಲ್ಲಿ ನೀಡಲಾಗಿರುತ್ತದೆ.

ವಾಹನದ ಕೆಳಭಾಗದಲ್ಲಿ ಎರಡು ಸಿ.ಎನ್.ಜಿ. ಸಿಲಿಂಡರುಗಳು ಇರುತ್ತವೆ, ಪ್ರತಿಯೊಂದಕ್ಕೂ ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ ಇರುತ್ತದೆ.

ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ 1 ಮತ್ತು 2 ಅನ್ನು ವಾಹನದ ಬಲ ಬದಿ (ಆರ್ಎಚ್ಎಚ್) ಮತ್ತು ಎಡಬದಿಯ (ಎಲ್ಎಚ್ಎಸ್) ಅಲ್ಲಿ ನೋಡಬಹುದು.

ಎರಡೂ ಸಿ.ಎನ್.ಜಿ. ಸಿಲಿಂಡರುಗಳಲ್ಲಿ ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ ಅನ್ನು ಮುಚ್ಚುವ ಮೂಲಕ ಸಿ.ಎನ್.ಜಿ. ಪೂರೈಕೆಯನ್ನು ಆಫ್ ಮಾಡಬಹುದು.

**ವಾಲ್ವ್ ಕ್ಲೋಸಿಂಗ್**: ಇಂಜಿನ್ಗೆ ಸಿ.ಎನ್.ಜಿ. ಪೂರೈಕೆಯನ್ನು ಸಂಪೂರ್ಣವಾಗಿ ಮುಚ್ಚಲು ಪ್ರದಕ್ಷಿಣಾಕಾರವಾಗಿ ನಾಬ್ ಅನ್ನು ತಿರುಗಿಸಿ (ವ್ಯೂ ಎ ಇಂದ).

**ವಾಲ್ವ್ ತೆರೆಯುವುದು**: ಇಂಜಿನ್ಗೆ ಸಿ.ಎನ್.ಜಿ. ಪೂರೈಕೆಯನ್ನು ತೆರೆಯಲು ನಾಬ್ ಅನ್ನು ಸಂಪೂರ್ಣವಾಗಿ ಅಪ್ರದಕ್ಷಿಣಾಕಾರವಾಗಿ ತಿರುಗಿಸಿ (ವ್ಯೂ ಎ ಇಂದ).

**⚠ ಜಾಗ್ರತೆ**

**ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ 2 (ಎಲ್ಎಚ್ಎಸ್) ಮುಟ್ಟುವಾಗ ನಿಮ್ಮ ಕೈ ಎಕ್ಸಾಸ್ಟ್ ಪೈಪ್ಗೆ ತಾಕದಂತೆ ಎಚ್ಚರಿಕೆ ವಹಿಸಿ. ಡ್ರೈವಿಂಗ್ ಮಾಡಿದ ನಂತರ, ನಿಮ್ಮ ಕೈ ಸುಡುವಷ್ಟು ಎಕ್ಸಾಸ್ಟ್ ಪೈಪ್ ಬಿಸಿಯಾಗಿರಬಹುದು.**

*ಸೂಚನೆ:*

- *ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ ಸಂಪೂರ್ಣ ತೆರೆಯದಿದ್ದರೆ, ಆಗ ಇಂಜಿನ್ ಸರಿಯಾಗಿ ರನ್ ಆಗದೇ ಇರಬಹುದು.*
- *ಮ್ಯಾನ್ಯುಅಲ್ ಶಟ್ ಆಫ್ ವಾಲ್ವ್ ಮುಚ್ಚಿ ದಸ್ಥಿತಿಯಲ್ಲಿದ್ದರೆ, ಸಿಲಿಂಡರ್ಗೆ ಸಿ.ಎನ್.ಜಿ. ಅನ್ನು ಭರ್ತಿ ಮಾಡಲು ಸಾಧ್ಯವಾಗದಿರಬಹುದು.*

*ಸೂಚನೆ:*

- *ಸರ್ಕಾರದ ನಿಯಮಾವಳಿ ಪ್ರಕಾರ, ಸಿ.ಎನ್.ಜಿ. ಸಿಲಿಂಡರ್ ಐಡೆಂಟಿಫಿಕೇಶನ್ ಪ್ಲೇಟ್ನಲ್ಲಿ ನಮೂದಿಸಿದ ಪ್ರಕಾರ ಆರಂಭಿಕ ಪರೀಕ್ಷೆಯ ದಿನಾಂಕದಿಂದ ಪ್ರತಿ ಮೂರು (3) ವರ್ಷಗಳಿಗೊಮ್ಮೆ ಸಿ.ಎನ್.ಜಿ. ಸಿಲಿಂಡರ್ ಅನ್ನು ಪರಿಶೀಲಿಸಬೇಕು ಮತ್ತು ಪ್ರಮಾಣೀಕರಿಸಬೇಕು.*
- *ಸರ್ಕಾರ ಅನುಮೋದಿಸಿದ ಟೆಸ್ಟಿಂಗ್ ಏಜೆನ್ಸಿಗೆ ವಾಹನವನ್ನು ಗ್ರಾಹಕರು ಸಲ್ಲಿಸಬೇಕು.*
- *ಸಿಲಿಂಡರ್ ಅನ್ನು ಪರೀಕ್ಷಿಸಲು ವಿಫಲವಾದರೆ, ಸಿ.ಎನ್.ಜಿ. ಡಿಸ್ಪೆನ್ಸಿಂಗ್ ಸ್ಟೇಷನ್ಗಳಲ್ಲಿ ಸಿ.ಎನ್.ಜಿ. ಭರ್ತಿ ಮಾಡಲು ನಿರಾಕರಿಸಬಹುದು ಅಥವಾ ಜಾರಿ ಅಧಿಕಾರಿಗಳು ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.*
- *ಸಿ.ಎನ್.ಜಿ. ಸಿಲಿಂಡರ್ ಪರೀಕ್ಷೆಯ ಎಲ್ಲ ವೆಚ್ಚಗಳನ್ನು ಗ್ರಾಹಕರು ಭರಿಸಬೇಕು.*
- *ಸರ್ಕಾರಿ ನಿಯಮಾವಳಿ ಪ್ರಕಾರ, ಸಿ.ಎನ್.ಜಿ. ಸಿಲಿಂಡರ್ ಐಡೆಂಟಿಫಿಕೇಶನ್ ಪ್ಲೇಟ್ನಲ್ಲಿ ನಮೂದಿಸಿದಂತೆ ಆರಂಭಿಕ ಪರೀಕ್ಷೆ ದಿನಾಂಕದಿಂದ 20 ವರ್ಷಗಳಲ್ಲಿ ಸಿ.ಎನ್.ಜಿ. ಸಿಲಿಂಡರ್ ಅನ್ನು ವರ್ಜ್ಯಗೊಳಿಸಬೇಕು.*
- *ಸರ್ಕಾರ ಅನುಮೋದಿಸಿದ ಸ್ಕ್ರಾಪ್ ಏಜೆನ್ಸಿ ಮೂಲಕ ಗ್ರಾಹಕರು ತಮ್ಮ ವೆಚ್ಚದಲ್ಲಿ ಸಿಲಿಂಡರ್ ವರ್ಜ್ಯಗೊಳಿಸಬೇಕು.*
- *ಸಿಲಿಂಡರ್ ಮೇಲೆ ನಡೆಸಿದ ರಿಪೇರಿ ಮತ್ತು ಪರೀಕ್ಷೆಯ ಸಂಪೂರ್ಣ ವರದಿಯ ಜೊತೆಗೆ, ಪರೀಕ್ಷೆಯ ಬಗ್ಗೆ ರಿಪೇರಿ ಮಾಡಿದವರ ಪ್ರಮಾಣಪತ್ರ ಇಲ್ಲದಿದ್ದರೆ ಉಪ ನಿಯಮ (2) ಅಡಿಯಲ್ಲಿ ಯಾವುದೇ ಗ್ಯಾಸ್ನಿಂದ ರಿಪೇರಿ ಮಾಡಿದ ಯಾವುದೇ ಸಿಲಿಂಡರ್ ಅನ್ನು ಯಾವ ವ್ಯಕ್ತಿಯೂ ರಿಫಿಲ್ ಮಾಡಬಾರದು. ಈ ವರದಿಯನ್ನು ಚೀಫ್ ಕಂಟ್ರೋಲರ್ಗೆ ಸಲ್ಲಿಸಬೇಕು ಮತ್ತು ರಿಫಿಲ್ಲಿಂಗ್ಗೆ ಅವರ ಅನುಮತಿಯನ್ನು ಪಡೆಯಬೇಕು.*


**⚠ ಎಚ್ಚರಿಕೆ**

- ಸಿಲಿಂಡರ್ ಅಸೆಂಬ್ಲಿಯಿಂದ ಸಿಲಿಂಡರ್ ವಾಲ್ವ್ ಅನ್ನು ಎಂದಿಗೂ ತೆಗೆಯಬೇಡಿ. ಯಾವುದೇ ಸಹಾಯಕ್ಕಾಗಿ ದೃಢೀಕೃತ ಮಾರುತಿ ಸುಜುಕಿ ಕಮರ್ಷಿಯಲ್ ವರ್ಕ್‌ಷಾಪ್‌ಗೆ ಭೇಟಿ ನೀಡಿ.
- ಸಿಲಿಂಡರ್ ಸ್ವಚ್ಛಗೊಳಿಸಲು ಎಂದೂ ಪ್ರಯತ್ನಿಸಬೇಡಿ. ಯಾವುದೇ ಸಮಸ್ಯೆ ಇದ್ದರೆ, ದೃಢೀಕೃತ ಮಾರುತಿ ಸುಜುಕಿ ಕಮರ್ಷಿಯಲ್ ವರ್ಕ್‌ಷಾಪ್‌ಗೆ ಭೇಟಿ ನೀಡಿ.
- ಸಿಲಿಂಡರ್ ಅಸೆಂಬ್ಲಿಯಿಂದ ರಿಪ್ಲೇಸ್/ತೆಗೆದ ನಂತರ ಸಿಲಿಂಡರ್ ವಾಲ್ವ್ ಅನ್ನು ಮರುಬಳಕೆ ಮಾಡಬೇಡಿ.
- ಇಂಜಿನ್ ನಿಲ್ಲುವವರೆಗೂ ಸಿಲಿಂಡರ್‌ನಿಂದ ಸಿ.ಎನ್.ಜಿ.ಯನ್ನು ಬಳಸಿದ್ದರೂ, ಒತ್ತಡದಲ್ಲಿ ಸ್ವಲ್ಪ ಮಟ್ಟಿನ ಸಿ.ಎನ್.ಜಿ. ಉಳಿದಿರುತ್ತದೆ.

# ನಿಮ್ಮ ವಾಹನ ಚಾಲನೆ


ಎಕ್ಸಾಸ್ಟ್ ಗ್ಯಾಸ್ ವಾರ್ನಿಂಗ್ ........ 3-1
ನಿತ್ಯದ ಪರಿಶೀಲನಾ ಪಟ್ಟಿ ........ 3-1
ಇಂಜಿನ್ ಆಯಿಲ್ ಬಳಕೆ ........ 3-2
ಇಗ್ನಿಷನ್ ಸ್ವಿಚ್ ........ 3-2
ಪಾರ್ಕಿಂಗ್ ಬ್ರೇಕ್ ಲಿವರ್ ........ 3-4
ಪೆಡಲ್ ........ 3-4
ಇಂಜಿನ್ ಸ್ಟಾರ್ಟ್ ಮಾಡುವುದು ........ 3-5
ಟ್ರಾನ್ಸ್ ಮಿಶನ್ ಬಳಸುವುದು ........ 3-7
ಬ್ರೇಕಿಂಗ್ ........ 3-11

## ಎಕ್ಸಾಸ್ಟ್ ಗ್ಯಾಸ್ ವಾರ್ನಿಂಗ್




82DY03

**⚠ ಎಚ್ಚರಿಕೆ**

ಎಕ್ಸಾಸ್ಟ್ ಗ್ಯಾಸ್ ಗಳನ್ನು ಉಸಿರಾಡುವುದನ್ನು ತಪ್ಪಿಸಿ. ಎಕ್ಸಾಸ್ಟ್ ಗ್ಯಾಸ್ ಗಳಲ್ಲಿ ಕಾರ್ಬನ್ ಮೊನಾಕ್ಸೈಡ್ ಇರುತ್ತದೆ. ಇದು ಬಣ್ಣವಿಲ್ಲದ ಮತ್ತು ವಾಸನೆಯಿಲ್ಲದ ಸಾಕಷ್ಟು ಮಾರಕವಾದ ಅನಿಲವಾಗಿದೆ. ಕಾರ್ಬನ್ ಮೊನಾಕ್ಸೈಡ್ ಅನ್ನು ಕಂಡುಹಿಡಿಯುವುದು ಬಹಳ ಕಷ್ಟವಾದ ಕಾರಣ, ಕಾರ್ಬನ್ ಮೊನಾಕ್ಸೈಡ್ ನಿಮ್ಮ ವಾಹನ ಒಳಗೆ ಪ್ರವೇಶಿಸದಂತೆ ಈ ಕೆಳಗಿನ ಮುಂಜಾಗ್ರತೆಗಳನ್ನು ತೆಗೆದುಕೊಂಡಿರುವುದನ್ನು ಖಚಿತಪಡಿಸಿ.

- ಇಂಜಿನ್ ಅನ್ನು ಚಾಲನೆಯ ಸ್ಥಿತಿಯಲ್ಲಿ ಗ್ಯಾರೇಜಿನಲ್ಲಿ ಅಥವಾ ಇತರ ಮುಚ್ಚಿದ ಸ್ಥಳಗಳಲ್ಲಿ ಇಡಬೇಡಿ.

(ಮುಂದುವರಿದಿದೆ...)


**⚠ ಎಚ್ಚರಿಕೆ**

(ಮುಂದುವರಿದಿದೆ)

- ಇಂಜಿನ್ ಅನ್ನು ಚಾಲನೆಯ ಸ್ಥಿತಿಯಲ್ಲಿ ತೆರೆದ ಪ್ರದೇಶದಲ್ಲೂ ಸಹ ದೀರ್ಘ ಅವಧಿಗೆ ಪಾರ್ಕ್ ಮಾಡಬೇಡಿ.
- ನಿಮ್ಮ ವಾಹನದ ಗಾಳಿ ಪರಿಚಲನೆಯ ಸಿಸ್ಟಂನಲ್ಲಿ ಸೂಕ್ತ ಕಾರ್ಯಾಚರಣೆಗೆ ಅವಕಾಶ ಕೊಡಲು, ಹಿಮ, ಎಲೆಗಳು, ಅಥವಾ ಇತರ ತಡೆಗಳನ್ನು ಎಲ್ಲಾ ಸಮಯದಲ್ಲೂ ನಿವಾರಿಸಲು ವಾಹನದ ಫ್ರಂಟ್ ನಲ್ಲಿ ಏರ್ ಇನ್ಲೆಟ್ ಗ್ರಿಲ್ ಅನ್ನು ಇಡಿ.
- ವಾಹನದ ಅಡಿಯಲ್ಲಿ ಎಕ್ಸಾಸ್ಟ್ ಗ್ಯಾಸ್ ತುಂಬಿಕೊಳ್ಳುವುದನ್ನು ಕಡಿಮೆಗೊಳಿಸಲು ಎಕ್ಸಾಸ್ಟ್ ಪೈಪ್ ಜಾಗದಲ್ಲಿ ಹಿಮ ಅಥವಾ ಇತರ ವಸ್ತುಗಳು ಇಲ್ಲದಿರುವಂತೆ ಗಮನಿಸಿ. ಹಿಮಗಾಳಿಯ ಸ್ಥಿತಿಯಲ್ಲಿ ಪಾರ್ಕ್ ಮಾಡಿದಾಗ ಇದು ಅತೀ ಮುಖ್ಯವಾಗಿರುತ್ತದೆ.
- ಎಕ್ಸಾಸ್ಟ್ ಸಿಸ್ಟಂ ಅನ್ನು ಕಾಲ ಕಾಲಕ್ಕೆ ಹಾನಿ ಮತ್ತು ಸೋರಿಕೆಗಳಿಗಾಗಿ ತಪಾಸಣೆ ಮಾಡಿ. ಯಾವುದೇ ಹಾನಿ ಅಥವಾ ಸೋರಿಕೆಗಳನ್ನು ತಕ್ಷಣವೇ ರಿಪೇರಿ ಮಾಡಬೇಕು.

## ನಿತ್ಯದ ತಪಾಸಣಾ ಪರಿಶೀಲನಾಪಟ್ಟಿ.

### ಚಾಲನೆಗೆ ಮೊದಲು




779M03001

1) ವಿಂಡೋಗಳು, ಮಿರರ್ ಗಳು, ಲೈಟ್ ಗಳು ಮತ್ತು ರಿಫ್ಲೆಕ್ಟರ್ ಗಳು ಸ್ವಚ್ಛವಾಗಿರುವುದು ಮತ್ತು ತಡೆಯಿಲ್ಲದೆ ಇರುವುದನ್ನು ಖಚಿತಪಡಿಸಿ.
2) ಟೈರ್ ಗಳನ್ನು ಈ ಕೆಳಗಿನ ಪಾಯಿಂಟುಗಳಿಗಾಗಿ ನೋಡಿ ಪರೀಕ್ಷಿಸಿ:
   - ಥ್ರೆಡ್ ಗ್ರೂವ್ ನ ಆಳ
   - ಅಸಹಜ ಸವೆತ, ಮುರಿತಗಳು ಮತ್ತು ಹಾನಿ
   - ಸಡಿಲ ವೀಲ್ ನಟ್ಟುಗಳು
   - ಹೊರಗಿನ ಕಣಗಳಾದ ಮೊಳೆಗಳು, ಕಲ್ಲುಗಳು ಇತ್ಯಾದಿಗಳ ಇರುವಿಕೆ

ವಿವರಗಳಿಗಾಗಿ "ತಪಾಸಣೆ ಮತ್ತು ನಿರ್ವಹಣೆ" ವಿಭಾಗದಲ್ಲಿ "ಟೈರ್ ಗಳು" ಓದಿ.

3) ಫ್ಲೂಯಿಡ್ ಮತ್ತು ಆಯಿಲ್ ಸೋರಿಕೆಗಳಿಗಾಗಿ ಗಮನಿಸಿ.
4) ಇಂಜಿನ್ ಕಂಪಾರ್ಟ್ ಮೆಂಟ್ ಪೂರ್ಣವಾಗಿ ಮುಚ್ಚಿದೆ ಮತ್ತು ಲ್ಯಾಚ್ ಆಗಿದೆ ಎಂದು ಖಚಿತಪಡಿಸಿ.
5) ಹೆಡ್ ಲೈಟ್ ಗಳು, ಟರ್ನ್ ಸಿಗ್ನಲ್ ಲೈಟ್ ಗಳು, ಬ್ರೇಕ್ ಲೈಟ್ ಗಳು ಮತ್ತು ಹಾರ್ನ್ ಅನ್ನು ಸೂಕ್ತ ಕಾರ್ಯ ನಿರ್ವಹಣೆಗಾಗಿ ಪರೀಕ್ಷಿಸಿ.

6) ಡ್ರೈವರ್ ಸೀಟ್ ಹೊಂದಿಸಿ.
7) ಬ್ರೇಕ್ ಪೆಡಲ್ ಮತ್ತು ಪಾರ್ಕಿಂಗ್ ಬ್ರೇಕ್ ಲಿವರ್ ಅನ್ನು ಪರೀಕ್ಷಿಸಿ.
8) ಮಿರರ್ ಗಳನ್ನು ಹೊಂದಿಸಿ.
9) ನೀವು ಮತ್ತು ಪ್ರಯಾಣಿಕರು ಸೀಟ್ ಬೆಲ್ಟ್ ಗಳನ್ನು ಸರಿಯಾಗಿ ಬಿಗಿದುಕೊಂಡಿರುವುದನ್ನು ಖಚಿತಪಡಿಸಿ.
10) ಕೀಯನ್ನು "ON" (ಆನ್) ಪೊಸಿಷನಿಗೆ ತಿರುಗಿಸಿದಾಗ ಎಲ್ಲಾ ವಾರ್ನಿಂಗ್ ಲೈಟ್ ಗಳು ಆನ್ ಆಗಿರುವುದನ್ನು ಖಚಿತಪಡಿಸಿ.
11) ಎಲ್ಲಾ ಗೇಜ್ ಗಳನ್ನು ಪರೀಕ್ಷಿಸಿ.
12) ಪಾರ್ಕಿಂಗ್ ಬ್ರೇಕ್ ರಿಲೀಸ್ ಮಾಡಿದಾಗ ಬ್ರೇಕ್ ಸಿಸ್ಟಂ ವಾರ್ನಿಂಗ್ ಲೈಟ್ ಆಫ್ ಆಗಿರುವುದು ಖಚಿತಪಡಿಸಿ.

ವಾರಕ್ಕೊಮ್ಮೆ, ಅಥವಾ ಪ್ರತೀ ಬಾರಿ ನಿಮ್ಮ ಫ್ಯೂಯೆಲ್ ಟ್ಯಾಂಕ್ ತುಂಬಿದಾಗ, ಈ ಕೆಳಗಿನ ಪರಿಶೀಲನೆಗಳನ್ನು ಮಾಡಿ:

1) ಇಂಜಿನ್ ಆಯಿಲ್ ಮಟ್ಟ
2) ಕೂಲಂಟ್ ಮಟ್ಟ
3) ಬ್ರೇಕ್ ಫ್ಲೂಯಿಡ್ ಮಟ್ಟ
4) ವಿಂಡ್ ಶೀಲ್ಡ್ ವಾಶರ್ ದ್ರವದ ಮಟ್ಟ (ಸುಸಜ್ಜಿತವಾಗಿದ್ದಲ್ಲಿ)
5) ಬ್ಯಾಟರಿ ಇಲೆಕ್ಟ್ರೋಲೈಟ್ ಮಟ್ಟ
6) ಲ್ಯಾಚ್ ಕಾರ್ಯನಿರ್ವಹಣೆ
ಲುಬ್ರಿಕೇಶನ್ ವೇಳಾಪಟ್ಟಿಗೆ ಇರುವ "ತಪಾಸಣೆ ಮತ್ತು ನಿರ್ವಹಣೆ"ಯಲ್ಲಿ "ಕಾಲ ಕಾಲಕ್ಕೆ ನಿರ್ವಹಣಾ ವೇಳಾಪಟ್ಟಿ" ಯಲ್ಲಿ "ಚಾಸಿ ಮತ್ತು ಬಾಡಿ" ಯ "ಎಲ್ಲಾ ಲ್ಯಾಚ್ ಗಳು, ಹಿಂಜ್ ಗಳು & ಲಾಕ್ ಗಳು" ನೋಡಿ.

ತಿಂಗಳಿಗೆ ಒಮ್ಮೆ, ಅಥವಾ ಪ್ರತೀ ಬಾರಿ ನೀವು ಫ್ಯೂಯೆಲ್ ಟ್ಯಾಂಕ್ ತುಂಬುತ್ತೀರಿ. ಟೈರ್ ಪ್ರೆಶರ್ ಗೇಜ್ ಬಳಸಿ ಟೈರ್ ಪ್ರೆಶರ್ ಪರೀಕ್ಷಿಸಿ. ಸ್ಪೇರ್ ಟೈರ್ ನ ಟೈರ್ ಪ್ರೆಶರನ್ನೂ ಪರೀಕ್ಷಿಸಿ.

## ಇಂಜಿನ್ ಆಯಿಲ್ ಬಳಕೆ

ಸಾಮಾನ್ಯ ವಾಹನ ಕಾರ್ಯಾಚರಣೆ ಸಂದರ್ಭದಲ್ಲಿ ಇಂಜಿನ್ ಸ್ವಲ್ಪ ಇಂಜಿನ್ ಆಯಿಲ್ ಬಳಸುವುದು ಸಾಮಾನ್ಯವಾಗಿದೆ.


ಬಳಸಿದ ಇಂಜಿನ್ ಆಯಿಲ್ ಪ್ರಮಾಣವು ಆಯಿಲ್ ನ ವಿಸ್ಕಾಸಿಟಿ, ಆಯಿಲ್ ಗುಣಮಟ್ಟ ಮತ್ತು ವಾಹನದ ಚಾಲನೆ ನಡೆಸಿದ ಸ್ಥಿತಿಯನ್ನು ಆಧರಿಸಿದೆ.
ಹೈ ಸ್ಪೀಡ್ ಚಾಲನೆಯ ಸಂದರ್ಭದಲ್ಲಿ ಹೆಚ್ಚು ಆಯಿಲ್ ಅನ್ನು ಬಳಸಲಾಗುತ್ತದೆ ಮತ್ತು ಪದೇ ಪದೇ ವೇಗ ಮತ್ತು ವೇಗ ಕಡಿತವಾದಾಗಲೂ ಹೆಚ್ಚು ಆಯಿಲ್ ಬಳಕೆಯಾಗುತ್ತದೆ. ಅಧಿಕ ಲೋಡ್ ಗಳ ಸಂದರ್ಭದಲ್ಲಿ, ನಿಮ್ಮ ಇಂಜಿನ್ ಕೂಡ ಹೆಚ್ಚು ಆಯಿಲನ್ನು ಬಳಸುತ್ತದೆ.
ಒಂದು ಹೊಸ ಇಂಜಿನ್ ಹೆಚ್ಚು ಆಯಿಲನ್ನು ಬಳಸುತ್ತದೆ. ಏಕೆಂದರೆ ಅದರ ಪಿಸ್ಟನ್ ಗಳು, ಪಿಸ್ಟನ್ ರಿಂಗ್ ಗಳು ಮತ್ತು ಸಿಲಿಂಡರ್ ವಾಲ್ ಗಳು ಇನ್ನೂ ಕಂಡೀಷನ್ ಗೆ ಬರಬೇಕಿದೆ. ಸುಮಾರು 5000 km (3000 miles) ಚಾಲನೆಯ ನಂತರ ಮಾತ್ರ ಹೊಸ ಇಂಜಿನ್ ಗಳು ಆಯಿಲ್ ಬಳಕೆಯ ಸಾಮಾನ್ಯ ಮಟ್ಟವನ್ನು ತಲುಪುವುದು.

**ಆಯಿಲ್ ಬಳಕೆ:**
**ಗರಿಷ್ಠ 1.0 L ಪ್ರತೀ 1000 km**
**(1 ಕ್ವಾರ್ಟರ್ ಪ್ರತೀ 600 miles)**

ಆಯಿಲ್ ಬಳಕೆಯ ಪ್ರಮಾಣವನ್ನು ನಿರ್ಧರಿಸುವಾಗ, ಆಯಿಲ್ ಕರಗಬಹುದು ಮತ್ತು ಅದರಿಂದ ನಿಜವಾದ ಆಯಿಲ್ ಮಟ್ಟವನ್ನು ಕರಾರುವಕ್ಕಾಗಿ ನಿರ್ಧರಿಸುವುದು ಕಷ್ಟವಾಗಬಹುದು ಎನ್ನುವುದನ್ನು ಗಮನದಲ್ಲಿರಿಸಿ.
ಉದಾಹರಣೆಯಾಗಿ, ಒಂದು ವಾಹನವನ್ನು ಪದೇ ಪದೇ ಪ್ರಯಾಣಕ್ಕೆ ಬಳಸಲಾಗಿದ್ದಲ್ಲಿ ಮತ್ತು ಸಾಮಾನ್ಯ ಪ್ರಮಾಣದ ಆಯಿಲನ್ನು ಅದು ಬಳಸುತ್ತಿದ್ದಲ್ಲಿ, ಡಿಪ್ ಸ್ಟಿಕ್ ಆಯಿಲ್ ಮಟ್ಟದಲ್ಲಿ 1000 km (600 miles) ಅಥವಾ ಹೆಚ್ಚು ಚಾಲನೆಯ ನಂತರವೂ ಯಾವುದೇ ಇಳಿಕೆಯನ್ನು ತೋರಿಸದೆ ಇರಬಹುದು. ಆಯಿಲ್ ನಿಧಾನವಾಗಿ ಫ್ಯೂಯೆಲ್ ಮತ್ತು ತೇವಾಂಶದ ಜೊತೆಗೆ ಕರಗುವುದೇ ಇದಕ್ಕೆ ಕಾರಣ. ಹಾಗೆ ಆಯಿಲ್ ಮಟ್ಟ ಬದಲಾಗಿಲ್ಲ ಎಂದೇ ಕಂಡುಬರುತ್ತದೆ.

ಎಕ್ಸ್ ಪ್ರೆಸ್ ವೇ ಮೊದಲಾಗಿ ವಾಹನವನ್ನು ಅಧಿಕ ವೇಗದಲ್ಲಿ ಚಾಲನೆ ಮಾಡಿದಾಗ ಕರಗಿರುವ ಅಂಶಗಳು ಆವಿಯಾಗಿ ಹೋಗುತ್ತವೆ ಎನ್ನುವುದನ್ನೂ ನೀವು ತಿಳಿದುಕೊಂಡಿರಬೇಕು. ಹೀಗಾಗಿ ಅಧಿಕ ವೇಗದ ಚಾಲನೆಯಲ್ಲಿ ಆಯಿಲ್ ಹೆಚ್ಚು ಬಳಕೆಯಾಗಿರುವಂತೆ ತೋರುತ್ತದೆ.

## ಇಗ್ನಿಷನ್ ಸ್ವಿಚ್




65D611

**⚠ ಎಚ್ಚರಿಕೆ**

**ಗಾಯಗಳಾಗುವ ಸಾಧ್ಯತೆಯನ್ನು ತಪ್ಪಿಸಿಕೊಳ್ಳಲು ಸ್ಟೀರಿಂಗ್ ವೀಲ್ ಹಿಡಿದುಕೊಂಡೇ ಕಂಟ್ರೋಲ್ ಗಳನ್ನು ನಿಯಂತ್ರಿಸಲು ಪ್ರಯತ್ನಿಸಬೇಡಿ.**

ಉದಾಹರಣೆ




77PH002

ಇಗ್ನಿಷನ್ ಸ್ವಿಚ್ ಈ ಕೆಳಗಿನ ನಾಲ್ಕು ಪೊಸಿಷನ್ ಗಳನ್ನು ಹೊಂದಿದೆ:

**ಲಾಕ್ಲಾಕ್**

ಇದು ಸಾಮಾನ್ಯ ಪಾರ್ಕಿಂಗ್ ಪೊಸಿಷನ್. ಕೀಯನ್ನು ಕಳಚುವ ಒಂದೇ ಪೊಸಿಷನ್ ಇದಾಗಿದೆ.

ಸ್ಟೀರಿಂಗ್ ಲಾಕ್ ರಿಲೀಸ್ ಮಾಡಲು, ಕೀಯನ್ನು ತೂರಿಸಿ ಮತ್ತು ಅದನ್ನು ಎಡದಿಂದ ಬಲಕ್ಕೆ ಒಂದು ಅಥವಾ ಮತ್ತೊಂದು ಪೊಸಿಷನ್ ಗೆ ತಿರುಗಿಸಿ. ಸ್ಟೀರಿಂಗ್ ಅನ್ನು ಅನ್ಲಾಕ್ ಮಾಡಲು ನಿಮಗೆ ಕೀಯನ್ನು ತಿರುಗಿಸಲು ಸಮಸ್ಯೆಯಾದಲ್ಲಿ, ಕೀಯನ್ನು ತಿರುಗಿಸುತ್ತಲೇ ಸ್ಟೀರಿಂಗ್ ವೀಲ್ ಅನ್ನು ನಿಧಾನವಾಗಿ ಬಲ ಅಥವಾ ಎಡದ ಕಡೆಗೆ ತಿರುಗಿಸಲು ಪ್ರಯತ್ನಿಸಿ.

**ಎ.ಸಿ.ಸಿ**

ಅಕ್ಸೆಸರಿ ಸಾಕೆಟ್ ಕಾರ್ಯ ನಿರ್ವಹಿಸುವ ಅಕ್ಸೆಸರಿಗಳು, ಆದರೆ ಇಂಜಿನ್ ಆಫ್ ಆಗಿರುತ್ತದೆ.

**ಆನ್**

ಇದು ಸಾಮಾನ್ಯ ಕಾರ್ಯನಿರ್ವಹಿಸುವ ಪೊಸಿಷನ್. ಇಲೆಕ್ಟ್ರಿಕಲ್ ಸಿಸ್ಟಂಗಳು ಆನ್ ಆಗಿರುತ್ತವೆ.

**ಸ್ಟಾರ್ಟ್**

ಸ್ಟಾರ್ಟರ್ ಮೋಟಾರ್ ಬಳಸಿ ಇಂಜಿನ್ ಸ್ಟಾರ್ಟ್ ಮಾಡಲು ಈ ಪೊಸಿಷನ್. ಇಂಜಿನ್ ಸ್ಟಾರ್ಟ್ ಆದ ಕೂಡಲೇ ಕೀಯನ್ನು ಆ ಪೊಸಿಷನ್ ನಿಂದ ಕಳಚಬೇಕು.

ಉದಾಹರಣೆ



82DY04


**⚠ ಎಚ್ಚರಿಕೆ**

- ವಾಹನ ಚಾಲನೆಯಲ್ಲಿದ್ದಾಗ ಯಾವತ್ತೂ ಇಗ್ನಿಷನ್ ಕೀಯನ್ನು ಕಳಚಬೇಡಿ. ಸ್ಟೀರಿಂಗ್ ವೀಲ್ ಲಾಕ್ ಆಗುತ್ತದೆ ಮತ್ತು ನೀವು ವಾಹನವನ್ನು ಸ್ಟೀರ್ ಮಾಡಲು ಸಾಧ್ಯವಾಗುವುದಿಲ್ಲ.
- ವಾಹನವನ್ನು ಬಿಡುವಾಗ ಅಲ್ಪ ಅವಧಿಗೇ ಆಗಿದ್ದರೂ ಸಹ, ಯಾವಾಗಲೂ ಇಗ್ನಿಷನ್ ಕೀಯನ್ನು ಕಳಚಿ. ಪಾರ್ಕ್ ಮಾಡಿರುವ ವಾಹನದಲ್ಲಿ ಮಕ್ಕಳನ್ನು ಏಕಾಂತದಲ್ಲಿ ಬಿಡಬೇಡಿ. ಬಿಸಿಯಾದ ವಾತಾವರಣದಲ್ಲಿ ಅವರು ಬಿಸಿಯಿಂದ ನಲುಗಬಹುದು. ಇದರಿಂದ ಗಂಭೀರ ಗಾಯ ಅಥವಾ ಮರಣ ಸಂಭವಿಸುವ ಸಾಧ್ಯತೆಯೂ ಇದೆ.

***ಸೂಚನೆ***

- ಸ್ಟಾರ್ಟರ್ ಮೋಟಾರ್ ಅನ್ನು ಒಂದು ಬಾರಿಗೆ 30 ಸೆಕೆಂಡುಗಳಿಗಿಂತ ಹೆಚ್ಚು ಬಳಸಬೇಡಿ. ಇಂಜಿನ್ ಸ್ಟಾರ್ಟ್ ಆಗದೆ ಇದ್ದಲ್ಲಿ, ಮತ್ತೊಮ್ಮೆ ಪ್ರಯತ್ನಿಸುವ ಮೊದಲು 15 ನಿಮಿಷಗಳ ಕಾಲ ಕಾಯಿರಿ. ಹಲವು ಪ್ರಯತ್ನಗಳ ನಂತರವೂ ಇಂಜಿನ್ ಸ್ಟಾರ್ಟ್ ಆಗದೆ ಇದ್ದಲ್ಲಿ, ಫ್ಯೂಯೆಲ್ ಮತ್ತು ಇಗ್ನಿಷನ್ ಸಿಸ್ಟಂಗಳನ್ನು ಪರೀಕ್ಷಿಸಿ ಅಥವಾ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರನ್ನು ಸಂಪರ್ಕಿಸಿ.
- ಬ್ಯಾಟರಿ ಡಿಸ್ ಚಾರ್ಜ್ ಆಗುವ ಕಾರಣ ಇಂಜಿನ್ ಚಾಲನೆಯಾಗದೆ ಇದ್ದಲ್ಲಿ ಇಗ್ನಿಷನ್ ಸ್ವಿಚ್ ಅನ್ನು “ON” (ಆನ್) ಪೊಸಿಷನ್ ನಲ್ಲಿ ಬಿಡಬೇಡಿ.

## ಪಾರ್ಕಿಂಗ್ ಬ್ರೇಕ್ ಲಿವರ್




77PH030

(1) ಸೆಟ್ ಮಾಡಲು
(2) ರಿಲೀಸ್ ಮಾಡಲು
(3) ರಿಲೀಸ್ ಮಾಡಲು

ಪಾರ್ಕಿಂಗ್ ಬ್ರೇಕ್ ಲಿವರ್ ಸೀಟ್ ಗಳ ನಡುವೆ ಇದೆ. ಪಾರ್ಕಿಂಗ್ ಬ್ರೇಕ್ ಸೆಟ್ ಮಾಡಲು, ಬ್ರೇಕ್ ಪೆಡಲ್ ಕೆಳಗೆ ಮಾಡಿ ಹಿಡಿಯಿರಿ ಮತ್ತು ಪಾರ್ಕಿಂಗ್ ಬ್ರೇಕ್ ಲಿವರ್ ಅನ್ನು ಮೇಲ್ಮುಖವಾಗಿರಿಸಿ. ಪಾರ್ಕಿಂಗ್ ಬ್ರೇಕ್ ರಿಲೀಸ್ ಮಾಡಲು, ಬ್ರೇಕ್ ಪೆಡಲ್ ಅನ್ನು ಕೆಳಮುಖವಾಗಿ ಹಿಡಿಯಿರಿ, ಪಾರ್ಕಿಂಗ್ ಬ್ರೇಕ್ ಲಿವರ್ ಮೇಲೆ ಮೆಲ್ಲಗೆ ಮೇಲ್ಮುಖವಾಗಿ ಎತ್ತಿ, ಹೆಬ್ಬೆರಳಿನಿಂದ ಲಿವರ್ ತುದಿಯಲ್ಲಿರುವ ಬಟನ್ ಅನ್ನು ದೂಡಿ, ಮತ್ತು ಲಿವರ್ ಅನ್ನು ಅದರ ಸ್ವಸ್ಥಾನಕ್ಕೆ ಕೆಳಗೆ ಮಾಡಿ.

**⚠ ಎಚ್ಚರಿಕೆ**

- ಪಾರ್ಕಿಂಗ್ ಬ್ರೇಕ್ ಆನ್ ಆಗಿರುವಂತೆ ನಿಮ್ಮ ವಾಹನವನ್ನು ಚಲಾಯಿಸಬೇಡಿ: ಅತಿಯಾಗಿ ಬಿಸಿಯಾಗುವುದು, ಬ್ರೇಕ್ ಬಾಳಿಕೆ ಕಡಿಮೆಯಾಗುವುದು, ಅಥವಾ ಶಾಶ್ವತವಾಗಿ ಬ್ರೇಕ್ ಹಾನಿಯಾಗಿ ರೇರ್ ಬ್ರೇಕ್ ಕೌಶಲ್ಯ ಕಡಿಮೆಯಾಗಬಹುದು.
- ಪಾರ್ಕಿಂಗ್ ಬ್ರೇಕ್ ವಾಹನವನ್ನು ಭದ್ರವಾಗಿ ಹಿಡಿದಿಡದೆ ಇದ್ದಲ್ಲಿ ಅಥವಾ ಪೂರ್ಣವಾಗಿ ರಿಲೀಸ್ ಆಗದೆ ಇದ್ದಲ್ಲಿ, ನಿಮ್ಮ ವಾಹನವನ್ನು ತಕ್ಷಣವೇ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ತಪಾಸಣೆ ಮಾಡಿಕೊಳ್ಳಬೇಕು.

**⚠ ಎಚ್ಚರಿಕೆ**


ನಿಮ್ಮ ವಾಹನವನ್ನು ಬಿಡುವ ಮೊದಲು ಪಾರ್ಕಿಂಗ್ ಬ್ರೇಕ್ ಅನ್ನು ಪೂರ್ಣವಾಗಿ ಸೆಟ್ ಮಾಡಿ. ಇಲ್ಲದಿದ್ದರೆ ಅದು ಚಲಿಸಿ ಗಾಯ ಅಥವಾ ಹಾನಿ ಸಂಭವಿಸಬಹುದು. ಪಾರ್ಕ್ ಮಾಡುವಾಗ, ಗೇರ್ ಶಿಫ್ಟ್ ಲಿವರ್ ರಿವರ್ಸ್ ಅಥವಾ ಮೊದಲ ಗೇರ್ ನಲ್ಲಿರುವುದನ್ನು ಖಚಿತಪಡಿಸಿ. ನೆನಪಿಡಿ. ಟ್ರಾನ್ಸ್ ಮಿಶನ್ ಒಂದು ವೇಳೆ ಗೇರ್ ನಲ್ಲಿದ್ದರೂ ಸಹ, ನೀವು ಪಾರ್ಕಿಂಗ್ ಬ್ರೇಕ್ ಅನ್ನು ಪೂರ್ಣವಾಗಿ ಸೆಟ್ ಮಾಡಬೇಕು.

**⚠ ಎಚ್ಚರಿಕೆ**

ಅತಿಯಾದ ಶೀತಲ ವಾತಾವರಣದಲ್ಲಿ ವಾಹನವನ್ನು ಪಾರ್ಕ್ ಮಾಡುತ್ತಿದ್ದಲ್ಲಿ, ಈ ಕೆಳಗಿನ ಪ್ರಕ್ರಿಯೆಯನ್ನು ಅನುಸರಿಸಬೇಕು:

1) ಪಾರ್ಕಿಂಗ್ ಬ್ರೇಕ್ ಸೆಟ್ ಮಾಡಿ.
2) ಇಂಜಿನ್ ಆಫ್ ಮಾಡಿ, ನಂತರ ರಿವರ್ಸ್ ಅಥವಾ ಫಸ್ಟ್ ಗೇರ್ ಗೆ ಬದಲಿಸಿ.
3) ವಾಹನದಿಂದ ಹೊರಗೆ ಬನ್ನಿ ಮತ್ತು ವೀಲ್ ಗಳಿಗೆ ಚೋಕ್ ನೀಡಿ.
4) ಪಾರ್ಕಿಂಗ್ ಬ್ರೇಕ್ ರಿಲೀಸ್ ಮಾಡಿ.
ನೀವು ವಾಹನಕ್ಕೆ ಮರಳಿದಾಗ, ಮೊದಲಿಗೆ ಪಾರ್ಕಿಂಗ್ ಬ್ರೇಕ್ ಸೆಟ್ ಮಾಡಲು ನೆನಪಿಡಿ. ನಂತರ ವೀಲ್ ಗಳ ಚೋಕ್ ಕಳಚಿ.

## ಪೆಡಲ್




80J2121

**ಕ್ಲಚ್ ಪೆಡಲ್ (1)**
ಇಂಜಿನ್ ಸ್ಟಾರ್ಟ್ ಮಾಡುವಾಗ, ನಿಲ್ಲುವಾಗ, ಅಥವಾ ಗೇರ್ ಶಿಫ್ಟ್ ಲಿವರ್ ಬದಲಿಸುವಾಗ ಡ್ರೈವ್ ಅನ್ನು ವೀಲ್ ಗಳಿಂದ ಕಳಚಲು ಕ್ಲಚ್ ಪೆಡಲ್ ಬಳಸಲಾಗುತ್ತದೆ. ಪೆಡಲ್ ತಗ್ಗಿಸಿದಾಗ ಕ್ಲಚ್ ಕಳಚುತ್ತದೆ.

| ⚠ ಎಚ್ಚರಿಕೆ |
|---|
| **ಕ್ಲಚ್ ಪೆಡಲ್ ಮೇಲೆ ಕಾಲನ್ನು ವಿಶ್ರಮಿಸಿ ಚಾಲನೆ ಮಾಡಬೇಡಿ. ಅದರಿಂದಾಗಿ ಅಧಿಕ ಕ್ಲಚ್ ಸವೆತ, ಕ್ಲಚ್ ಹಾನಿಯಾಗುವುದು ಅಥವಾ ಇಂಜಿನ್ ಬ್ರೇಕಿಂಗ್ ಅನಿರೀಕ್ಷಿತ ನಷ್ಟಕ್ಕೆ ಕಾರಣವಾಗಲಿದೆ.** |

**ಬ್ರೇಕ್ ಪೆಡಲ್ (2)**
ನಿಮ್ಮ ವಾಹನವು ಫ್ರಂಟ್ ಡಿಸ್ಕ್ ಬ್ರೇಕ್ಸ್ ಮತ್ತು ರೇರ್ ಡ್ರಮ್ ಬ್ರೇಕ್ಸ್ ಹೊಂದಿದೆ. ಬ್ರೇಕ್ ಪೆಡಲ್ ಅನ್ನು ತಗ್ಗಿಸುವುದು ಎರಡೂ ಬ್ರೇಕ್ ಗಳ ಸೆಟ್ ಗಳಿಗೆ ಅನ್ವಯಿಸುತ್ತದೆ.

ಬ್ರೇಕ್ ಗಳನ್ನು ಹಾಕಿದಾಗ ಕೆಲವೊಮ್ಮೆ ಬ್ರೇಕ್ ಕೀರಲು ಧ್ವನಿಯನ್ನು ನೀವು ಕೇಳಿಸಿಕೊಳ್ಳಬಹುದು. ಇದು ಸಾಮಾನ್ಯ ಸ್ಥಿತಿಯಲ್ಲಿ ಪರಿಸರದ ಅಂಶಗಳಾದ ಶೀತ, ಜೌಗು, ಹಿಮ ಇತ್ಯಾದಿಗಳಿಂದ ಸಂಭವಿಸಿರುತ್ತದೆ.


| ⚠ ಎಚ್ಚರಿಕೆ |
|---|
| **ಬ್ರೇಕ್ ನಿಂದ ಕೀರಲು ಧ್ವನಿ ಅತಿಯಾಗಿ ಇದ್ದಲ್ಲಿ ಮತ್ತು ಪ್ರತೀ ಬಾರಿ ಬ್ರೇಕ್ ಹಾಕುವಾಗಲೂ ಬಂದಲ್ಲಿ, ಬ್ರೇಕ್ ಗಳನ್ನು ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಪರೀಕ್ಷಿಸಿಕೊಳ್ಳಬೇಕು.** |

| ⚠ ಎಚ್ಚರಿಕೆ |
|---|
| **ಬ್ರೇಕ್ ಗಳನ್ನು ನಿರಂತರವಾಗಿ ಹಾಕುವುದು ಅಥವಾ ನಿಮ್ಮ ಕಾಲನ್ನು ಅದರ ಮೇಲೆ ವಿಶ್ರಮಿಸಿ ವಾಹನ ಚಲಾಯಿಸಬೇಡಿ. ಇದರಿಂದ ಬ್ರೇಕ್ ಗಳು ಅತಿಯಾಗಿ ಬಿಸಿಯಾಗಬಹುದು. ಅದರಿಂದ ಅನಿರೀಕ್ಷಿತ ಬ್ರೇಕಿಂಗ್ ಆಕ್ಷನ್ ಆಗಿ, ದೀರ್ಘಕಾಲೀನ ನಿಲುಗಡೆ ಅಂತರ ಅಥವಾ ಶಾಶ್ವತ ಬ್ರೇಕ್ ಹಾನಿಯಾಗಬಹುದು.** |

**ಅಕ್ಸಲರೇಟರ್ ಪೆಡಲ್ (3)**
ಈ ಪೆಡಲ್ ಇಂಜಿನ್ ವೇಗವನ್ನು ನಿಯಂತ್ರಿಸುತ್ತದೆ. ಅಕ್ಸಲರೇಟರ್ ಪೆಡಲ್ ತಗ್ಗಿಸುವುದರಿಂದ ಪವರ್ ಔಟ್ಪುಟ್ ಮತ್ತು ವೇಗವನ್ನು ಏರಿಸುತ್ತದೆ.

## ಇಂಜಿನ್ ಸ್ಟಾರ್ಟ್ ಮಾಡುವುದು

### ಇಂಜಿನ್ ಸ್ಟಾರ್ಟ್ ಮಾಡುವ ಮೊದಲು



ಉದಾಹರಣೆ

77PH014

1) ಪಾರ್ಕಿಂಗ್ ಬ್ರೇಕ್ ಪೂರ್ಣವಾಗಿ ಸೆಟ್ ಮಾಡಿರುವುದನ್ನು ಖಚಿತಪಡಿಸಿ.
2) “N” (ಎನ್) (ನ್ಯೂಟ್ರಲ್)ಗೆ ಬದಲಾಗಿ ಮತ್ತು ಕ್ಲಚ್ ಪೆಡಲ್ ಅನ್ನು ಫ್ಲೋರ್ ವರೆಗೆ ತಗ್ಗಿಸಿ. ಇಂಜಿನ್ ಸ್ಟಾರ್ಟ್ ಮಾಡುವಾಗ ಕ್ಲಚ್ ಪೆಡಲ್ ಅನ್ನು ಹಿಡಿದಿಡಿ.

| ⚠ ಎಚ್ಚರಿಕೆ |
|---|
| **ಪಾರ್ಕಿಂಗ್ ಬ್ರೇಕ್ ಪೂರ್ಣವಾಗಿ ಸೆಟ್ ಆಗಿರುವುದನ್ನು ಮತ್ತು ಟ್ರಾನ್ಸ್ ಮಿಶನ್ ನ್ಯೂಟ್ರಲ್ ನಲ್ಲಿದೆ ಎನ್ನುವುದನ್ನು ಇಂಜಿನ್ ಸ್ಟಾರ್ಟ್ ಮಾಡಲು ಪ್ರಯತ್ನಿಸುವ ಮೊದಲು ಖಚಿತಪಡಿಸಿ.** |

### (ಪೆಟ್ರೋಲ್ ಮತ್ತು ದ್ವಿ-ಇಂಧನ ಎಂಜಿನ್ ಮಾದರಿಗಾಗಿ)

### ತಂಪಾದ ಮತ್ತು ಬಿಸಿಯಾದ ಇಂಜಿನ್ ಸ್ಟಾರ್ಟ್ ಮಾಡುವುದು

ಅಕ್ಸಲರೇಟರ್ ಪೆಡಲ್ನಿಂದ ನಿಮ್ಮ ಕಾಲನ್ನು ತೆಗೆಯುವ ಮೂಲಕ, ಇಗ್ನಿಷನ್ ಕೀಯನ್ನು ‘ಸ್ಟಾರ್ಟ್’ಗೆ ತಿರುಗಿಸುವ ಮೂಲಕ ಇಂಜಿನ್ ಕ್ರಾಂಕ್ ಮಾಡಿ. ಇಂಜಿನ್ ಸ್ಟಾರ್ಟ್ ಆದಾಗ ಕೀ ಬಿಡಿ.

| *ಸೂಚನೆ* |
|---|
| • **ಇಂಜಿನ್ ಸ್ಟಾರ್ಟ್ ಆದ ತಕ್ಷಣವೇ ಸ್ಟಾರ್ಟರ್ ಅನ್ನು ತಕ್ಷಣವೇ ತಿರುಗಿಸುವುದನ್ನು ನಿಲ್ಲಿಸಿ, ಇಲ್ಲದೆ ಇದ್ದಲ್ಲಿ ಸ್ಟಾರ್ಟರ್ ಸಿಸ್ಟಂಗೆ ಹಾನಿಯಾಗಬಹುದು.**<br>• **ಇಂಜಿನ್ ಅನ್ನು 12 ಸೆಕೆಂಡುಗಳಿಗಿಂತ ಹೆಚ್ಚು ಕಾಲ ಒಮ್ಮೆಗೆ ಕ್ರಾಂಕ್ ಮಾಡಬೇಡಿ. ಇಂಜಿನ್ ಮೊದಲ ಪ್ರಯತ್ನದಲ್ಲಿ ಆರಂಭವಾಗದೆ ಇದ್ದಲ್ಲಿ, ಮತ್ತೊಮ್ಮೆ ಪ್ರಯತ್ನಿಸುವ ಮೊದಲು 15 ಸೆಕೆಂಡುಗಳ ಕಾಲ ಕಾಯಿರಿ.** |

12 ಸೆಕೆಂಡುಗಳ ಕಾಲ ಕ್ರಾಂಕಿಂಗ್ ಮಾಡಿದ ನಂತರವೂ ಇಂಜಿನ್ ಸ್ಟಾರ್ಟ್ ಆಗದೇ ಇದ್ದಲ್ಲಿ, 15 ಸೆಕೆಂಡುಗಳ ಕಾಲ ಕಾಯಿರಿ, ನಂತರ ಅಕ್ಸಲರೇಟರ್ ಪೆಡಲ್ ಅನ್ನು ಅದರ

ಟ್ರಾವೆಲ್‌ಗೆ 1/3 ಗೆ ಒತ್ತಿ ಮತ್ತು ಇಂಜಿನ್ ಅನ್ನು ಮತ್ತೊಮ್ಮೆ ಕ್ರಾಂಕ್ ಮಾಡಲು ಪ್ರಯತ್ನಿಸಿ. ಕೀಯನ್ನು ಬಿಡಿ ಮತ್ತು ಇಂಜಿನ್ ಸ್ಟಾರ್ಟ್ ಆಗುವಾಗ ಪೆಡಲ್‌ಅಕ್ಸಲರೇಟ್ ಮಾಡಿ.
ಇನ್ನೂ ಇಂಜಿನ್ ಸ್ಟಾರ್ಟ್ ಆಗದೇ ಇದ್ದಲ್ಲಿ, ಕ್ರಾಂಕಿಂಗ್ ಮಾಡುವಾಗ ಅಕ್ಸಲರೇಟರ್ ಪೆಡಲ್ ಅನ್ನು ಹಿಡಿದಿಡಲು ಪ್ರಯತ್ನಿಸಿ. ಇದರಿಂದ ಎಂಜಿನ್ನಲ್ಲಿ ನೀರು ತುಂಬಿಕೊಂಡಿದ್ದಲ್ಲಿ ಸರಿಯಾಗಿಬಿಡುತ್ತದೆ.

*ಸೂಚನೆ:*
*(ಬೈ ಫ್ಯೂಯೆಲ್ ಇಂಜಿನ್ ಮಾಡೆಲ್‌ಗೆ)*
- *ಪೆಟ್ರೋಲ್‌ನಿಂದ ಸಿ.ಎನ್.ಜಿ. ಮೋಡ್ಗೆ ಚೇಂಜ್‌ಓವರ್ ಮಾಡಲು ಅಕ್ಸಲರೇಟರ್ ಪೆಡಲ್ ಒತ್ತಬೇಡಿ.*
- *ಇಗ್ನಿಶನ್ ಸ್ವಿಚ್ ಆನ್ ಮಾಡಿ, ಇಂಜಿನ್ ರನ್ ಆಗದೇ ಇದ್ದರೆ, ಇಂಧನ ಮುಚ್ಚಳ ತೆರೆದಿದೆ ಎಂಬುದನ್ನು ಸಿ.ಎನ್.ಜಿ. ದೋಷ ಎಚ್ಚರಿಕೆ ಲ್ಯಾಂಪ್ ಬೆಳಗುವಿಕೆಯು ಸೂಚಿಸುತ್ತದೆ.*
- *ಇಂಜಿನ್ ಬಾಳಿಕೆಯನ್ನು ವರ್ಧಿಸಲು ಆಟೋ ಮೋಡ್ ಅಥವಾ ಪೆಟ್ರೋಲ್ ಮೋಡ್ನಲ್ಲಿ ವಾಹನವನ್ನು ಆರಂಭಿಸುವುದನ್ನು ಎಂದಿಗೂ ಶಿಫಾರಸು ಮಾಡಲಾಗಿದೆ.*
- *ಏಂಬಿಯಂಟ್/ಇಂಜಿನ್ ತಾಪಮಾನವು ಶೂನ್ಯ ಡಿಗ್ರಿ ಸೆಲ್ಸಿಯಸ್ಗಿಂತ ಕಡಿಮೆ ಇದ್ದಾಗ ಸ್ಟಾರ್ಟ್ ಆದರೆ ವಾಹನದ ಫ್ಯೂಯೆಲ್ ಚೇಂಜ್‌ಓವರ್ ಸಿ.ಎನ್.ಜಿ.ಗೆ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ, ಬೆಚ್ಚಗಾಗುವವರೆಗೆ ಇಂಜಿನ್ ಅನ್ನು ಪೆಟ್ರೋಲ್ ಮೋಡ್ನಲ್ಲಿ ರನ್ ಮಾಡಿ ಮತ್ತು ನಂತರ ಸಿ.ಎನ್.ಜಿ.ಗೆ ಇಂಜಿನ್ ಚೇಂಜ್‌ಓವರ್ ರಿಸ್ಟಾರ್ಟ್ ಮಾಡಲು ಪ್ರಯತ್ನಿಸಿ.*
- *ಪೆಟ್ರೋಲ್ ಟ್ಯಾಂಕ್ನಲ್ಲಿ ಸೂಕ್ತ ಪ್ರಮಾಣದ ಪೆಟ್ರೋಲ್ ಅನ್ನು ಇಟ್ಟಿರಬೇಕು.*
- *ಏಂಬಿಯೆಂಟ್/ಇಂಜಿನ್ ತಾಪಮಾನವು ಶೂನ್ಯ ಡಿಗ್ರಿ ಸೆಲ್ಸಿಯಸ್ಗಿಂತ ಕೆಳಗೆ ಇದ್ದರೆ ಫೋರ್ಸ್ಡ್ ಸಿ.ಎನ್.ಜಿ. ಮೋಡ್ನಲ್ಲಿ ವಾಹನ ಸ್ಟಾರ್ಟ್ ಆಗದು. ಆಟೋ ಮೋಡ್ನಲ್ಲಿ ವಾಹನ ಸ್ಟಾರ್ಟ್ ಮಾಡುವುದನ್ನು ಶಿಫಾರಸು ಮಾಡಲಾಗಿದೆ.*
- *ಸಿ.ಎನ್.ಜಿ. ಮೋಡ್ನಿಂದ ಪೆಟ್ರೋಲ್ ಮೋಡ್ಗೆ ಸ್ವಯಂಚಾಲಿತ ಚೇಂಜ್‌ಓವರ್ ಆಗುವಾಗ ಇಂಜಿನ್ ನಿಲ್ಲುವುದನ್ನು ತಡೆಯಲು ಪೆಟ್ರೋಲ್ ಟ್ಯಾಂಕ್ನಲ್ಲಿ ಸಾಕಷ್ಟು ಪ್ರಮಾಣದ ಪೆಟ್ರೋಲ್ ಹಾಕಿರುವುದನ್ನು ಶಿಫಾರಸು ಮಾಡಲಾಗಿದೆ.*
- *ಚೇಂಜ್‌ಓವರ್ ಸ್ವಿಚ್ ಅನ್ನು ಒತ್ತಿದ ನಂತರ ಸಿ.ಎನ್.ಜಿ. ದೋಷ ಎಚ್ಚರಿಕೆ ದೀಪವು ಬ್ಲಿಂಕ್ ಆಗುವುದು ನಿಲ್ಲದಿದ್ದರೆ ಸಮೀಪದ ದೃಢೀಕೃತ ಮಾರುತಿ ಸುಜುಕಿ ಕಮರ್ಷಿಯಲ್ ವರ್ಕ್ಶಾಪ್ನಲ್ಲಿ ವಾಹನವನ್ನು ತಪಾಸಣೆ ಮಾಡಿಸಿಕೊಳ್ಳಿ.*

**(ಡೀಸೆಲ್ ಎಂಜಿನ್ ಮಾದರಿಗಾಗಿ)**
**ತಂಪಾದ ಇಂಜಿನ್**
ಇಗ್ನಿಷನ್ ಸ್ವಿಚ್ ಅನ್ನು "ON" (ಆನ್) ಪೊಸಿಷನ್ ಗೆ ತನ್ನಿ ಮತ್ತು ಗ್ಲೋ ಪ್ಲಗ್ ಇಂಡಿಕೇಟರ್ ಆನ್ ಆದಲ್ಲಿ ನಂದಿ ಹೋಗುವವರೆಗೂ ಕಾಯಿರಿ. ಇಗ್ನಿಷನ್ ಕೀಯನ್ನು "START" (ಸ್ಟಾರ್ಟ್) ಗೆ ತಿರುಗಿಸುವ ಮೂಲಕ ಇಂಜಿನ್ ಕ್ರಾಂಕ್ ಮಾಡಿ. ಇಂಜಿನ್ ಸ್ಟಾರ್ಟ್ ಆಗುವಾಗ ಕೀಯನ್ನು ರಿಲೀಸ್ ಮಾಡಿ.

| *ಸೂಚನೆ* |
|---|
| • **ಇಂಜಿನ್ ಸ್ಟಾರ್ಟ್ ಆದ ಕೂಡಲೇ ಸ್ಟಾರ್ಟರ್ ಅನ್ನು ತಿರುಗಿಸುವುದು ತಕ್ಷಣವೇ ನಿಲ್ಲಿಸಿ ಅಥವಾ ಸ್ಟಾರ್ಟರ್ ಸಿಸ್ಟಂಗೆ ಹಾನಿಯಾಗಬಹುದು.**<br>• **ಒಂದು ಬಾರಿಗೆ 30 ಸೆಕೆಂಡುಗಳಿಗೆ ಹೆಚ್ಚು ಕಾಲ ಇಂಜಿನ್ ಕ್ರಾಂಕ್ ಮಾಡಬೇಡಿ. ಮೊದಲ ಪ್ರಯತ್ನದಲ್ಲಿ ಇಂಜಿನ್ ಸ್ಟಾರ್ಟ್ ಆಗದೇ ಇದ್ದಲ್ಲಿ, ಸುಮಾರು 15 ಸೆಕೆಂಡುಗಳ ಕಾಲ ಕಾದು ನಂತರ ಮತ್ತೊಮ್ಮೆ ಪ್ರಯತ್ನಿಸಿ.** |

**ಬಿಸಿ ಇಂಜಿನ್**
ಇಗ್ನಿಷನ್ ಕೀಯನ್ನು "START" (ಸ್ಟಾರ್ಟ್) ಗೆ ತಿರುಗಿಸುವ ಮೂಲಕ ಇಂಜಿನ್ ಕ್ರಾಂಕ್ ಮಾಡಿ. ಇಂಜಿನ್ ಸ್ಟಾರ್ಟ್ ಆಗುವಾಗ ಕೀಯನ್ನು ರಿಲೀಸ್ ಮಾಡಿ.

**ಟರ್ಬೋಚಾರ್ಜರ್ ಜೊತೆಗೆ ಇಂಜಿನ್ ಅನ್ನು ನಿಲ್ಲಿಸುವಾಗ ಜಾಗ್ರತೆವಹಿಸಿ.**
ಏರುವಾಗ ಅಥವಾ ಅತ್ಯಧಿಕ ವೇಗದ ಚಾಲನೆಯ ಸಮಯದಲ್ಲಿ ಇಂಜಿನ್ ನಿಲ್ಲಿಸುವಾಗ, ಒಂದು ನಿಮಿಷದ ಅಥವಾ ಹೆಚ್ಚು ಕಾಲ (ತಡೆ ಇಲ್ಲದೆ ಇದ್ದಲ್ಲಿ) ಇಂಜಿನ್ ಅನ್ನು ತಟಸ್ಥವಾಗಿಸಿ ಟರ್ಬೋಚಾರ್ಜರ್ ಮತ್ತು ಇಂಜಿನ್ ಆಯಿಲ್ ಅನ್ನು ತಂಪಾಗಿಸಿ. ಇಂಜಿನ್ ಆಯಿಲ್ ಅತಿಯಾಗಿ ಕೆಡುವುದನ್ನು ತಪ್ಪಿಸಲು ಹೀಗೆ ಮಾಡಲಾಗುತ್ತದೆ. ಕೆಟ್ಟು ಹೋದ ಇಂಜಿನ್ ಆಯಿಲ್ ಟರ್ಬೋಚಾರ್ಜರಿನ ಬೇರಿಂಗ್ ಗಳಿಗೆ ಹಾನಿಯುಂಟು ಮಾಡಬಹುದು.

**ಫ್ಯೂಯೆಲ್ ಖಾಲಿ ನಿಲುಗಡೆಯ ನಂತರ ಡೀಸಲ್ ಇಂಜಿನ್ ಅನ್ನು ಮರಳಿ ಸ್ಟಾರ್ಟ್ ಮಾಡುವುದು**
ಇಂಜಿನ್ ನಿಂತು ಹೋದಲ್ಲಿ ಮತ್ತು ಕಡಿಮೆ ಫ್ಯೂಯೆಲ್ ಇರುವ ಎಚ್ಚರಿಕೆಯ ಲೈಟ್ ಮತ್ತು ದೋಷ ಇಂಡಿಕೇಟರ್ ಲೈಟ್ ಬೆಳಗಿದಲ್ಲಿ, ಈ ಕೆಳಗಿನ ವಿಧಾನ ಅನುಸರಿಸಿ:


1) ಫ್ಯೂಯೆಲ್ ಟ್ಯಾಂಕ್ ತುಂಬಿ.
2) ಫ್ಯೂಯೆಲ್ ಅನ್ನು ಫೀಡ್ ಮಾಡಲು 5-10 ಸೆಕೆಂಡುಗಳ ಕಾಲ ಇಗ್ನಿಷನ್ ಕೀಯನ್ನು "ON" (ಆನ್) ಪೊಸಿಷನ್ ಗೆ ತನ್ನಿ.
3) ಇಂಜಿನ್ ಸ್ಟಾರ್ಟ್ ಮಾಡಲು ಮೇಲೆ ಹೇಳಿರುವ ಸ್ಟಾರ್ಟಿಂಗ್ ವಿಧಾನವನ್ನು ಮಾಡಿ.

ಇಂಜಿನ್ ಸ್ಟಾರ್ಟ್ ಆದ ಮೇಲೂ ದೋಷ ಇಂಡಿಕೇಟರ್ ಲೈಟ್ ಇನ್ನೂ ಉರಿಯುತ್ತಿದ್ದಲ್ಲಿ, ಇಂಜಿನ್ ನಲ್ಲಿ ಏನಾದರೂ ಸಮಸ್ಯೆ ಇರುವ ಸಾಧ್ಯತೆಯಿದೆ. ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಇಂಜಿನ್ ತಪಾಸಣೆ ಮಾಡುವಂತೆ ಕೇಳಿ.

## ಟ್ರಾನ್ಸ್ ಮಿಶನ್ ಬಳಸುವುದು

### ಮ್ಯಾನುವಲ್ ಟ್ರಾನ್ಸ್ ಮಿಶನ್

ಉದಾಹರಣೆ




65D038

**ಸ್ಟಾರ್ಟ್ ಮಾಡುವುದು**

ಸ್ಟಾರ್ಟ್ ಮಾಡಲು, ಕ್ಲಚ್ ಪೆಡಲ್ ಅನ್ನು ಫ್ಲೋರ್ ವರೆಗೂ ತಗ್ಗಿಸಿ ಮತ್ತು 1ನೇ ಮತ್ತು 2ನೇ ಗೇರ್ ಗೆ ಬದಲಿಸಿ. ಪಾರ್ಕಿಂಗ್ ಬ್ರೇಕ್ ರಿಲೀಸ್ ಮಾಡಿದ ಮೇಲೆ, ನಿಧಾನವಾಗಿ ಕ್ಲಚ್ ಬಿಡುಗಡೆ ಮಾಡಿ. ಇಂಜಿನ್ ಧ್ವನಿಯಲ್ಲಿ ಬದಲಾವಣೆಯನ್ನು ಕೇಳಿದಾಗ, ನಿಧಾನವಾಗಿ ಅಕ್ಸಲರೇಟರ್ ಅನ್ನು ಒತ್ತುತ್ತಾ ಮೆಲ್ಲನೆ ಕ್ಲಚ್ ಬಿಡುವುದನ್ನು ಮುಂದುವರಿಸಿ.

*ಸೂಚನೆ:*

- ಸಾಮಾನ್ಯ ಚಾಲನೆಯಲ್ಲಿ ಸ್ಟಾರ್ಟ್ ಮಾಡಲು ಶಿಫಾರಸು ಮಾಡಿರುವ ಗೇರ್ ಪೊಸಿಷನ್ 2ನೇ ಗೇರ್.
- ದೊಡ್ಡ ಚಾಲನಾ ಬಲ ಅಗತ್ಯವಿರುವ ಕ್ರಾಸ್ ಕಂಟ್ರೀ ಚಾಲನೆ, ತೆವಳುತ್ತಾ ಸಾಗುವುದು ಅಥವಾ ಲೋಡಿಂಗ್ ಚಾಲನೆಯ ಸಂದರ್ಭದಲ್ಲಿ, ಪೊಸಿಷನ್ ಅನ್ನು 1ನೇ ಗೇರ್ ಗೆ ಬದಲಿಸಲು ಶಿಫಾರಸು ಮಾಡಲಾಗಿದೆ.

**ಬದಲಿಸುವುದು**

ಎಲ್ಲಾ ಫಾರ್ವರ್ಡ್ ಗೇರ್ ಗಳು ಸಿಂಕ್ರೊನೈಸ್ ಆಗಿದ್ದು, ಮೌನವಾಗಿ ಮತ್ತು ಸರಳವಾದ ಬದಲಾವಣೆ ಒದಗಿಸುತ್ತವೆ. ಗೇರ್ ಗಳನ್ನು ಬದಲಿಸುವಾಗ ಯಾವಾಗಲೂ ಕ್ಲಚ್ ಪೆಡಲ್ ನಲ್ಲಿ ಪೂರ್ಣವಾಗಿ ದೂಡಿ.

**ಗರಿಷ್ಠ ಅವಕಾಶವಿರುವ ವೇಗಗಳಲ್ಲಿ ಕೆಳಗೆ ದೂಡುವುದು.**

**(ಪೆಟ್ರೋಲ್ ಮತ್ತು ದ್ವಿ-ಇಂಧನ ಎಂಜಿನ್ ಮಾದರಿಗಾಗಿ)**

| ಕೆಳಗೆ ದೂಡುವುದು | km/h |
|---|---|
| 2ನೇ ರಿಂದ 1ನೇ | 20 |
| 3ನೇ ರಿಂದ 2ನೇ | 70 |
| 4ನೇ ರಿಂದ 3ನೇ | 100 |
| 5ನೇ ರಿಂದ 4ನೇ | 130 |

**(ಡೀಸೆಲ್ ಇಂಜಿನ್ ಮಾಡೆಲ್‌ಗೆ)**

| ಕೆಳಗೆ ದೂಡುವುದು | km/h |
|---|---|
| 2ನೇ ರಿಂದ 1ನೇ | 5 |
| 3ನೇ ರಿಂದ 2ನೇ | 40 |
| 4ನೇ ರಿಂದ 3ನೇ | 60 |
| 5ನೇ ರಿಂದ 4ನೇ | 85 |

**ಸೂಚನೆ:*

*ವಾಹನಾ ಸ್ಥಿತಿ ಮತ್ತು / ಅಥವಾ ವಾಹನದ ಸ್ಥಿತಿಯ ಕಾರಣದಿಂದ ನೀವು ಗರಿಷ್ಠ ಲಭ್ಯವಿರುವ ವೇಗಕ್ಕೆ ನೀವು ಅಕ್ಸಲರೇಟ್ ಮಾಡಲು ಸಾಧ್ಯವಾಗದೆ ಇರಬಹುದು.*

**ಸೂಚನೆ**

ಕೆಳಗಿನ ಗೇರ್ ಗೆ ಇಳಿಸುವಾಗ, ಗರಿಷ್ಠ ಲಭ್ಯವಿರುವ ವೇಗಗಳಿಗಿಂತ ಹೆಚ್ಚು ವೇಗದಲ್ಲಿ ಇಳಿಸದೆ ಇರುವಂತೆ ಖಚಿತಪಡಿಸಿ. ಅಥವಾ ಗಂಭೀರ ಇಂಜಿನ್ ಹಾನಿ ಸಂಭವಿಸಬಹುದು.

**⚠ ಎಚ್ಚರಿಕೆ**

- ನಿಮ್ಮ ವೇಗವನ್ನು ಇಳಿಸಿ ಮತ್ತು ಧೀರ್ಘವಾದ ಅಥವಾ ಕಡಿದಾದ ಗುಡ್ಡದಲ್ಲಿ ಇಳಿಯುವಾಗ ಕೆಳಗಿನ ಗೇರ್ ಗೆ ಬದಲಿಸಿ. ಕೆಳಗಿನ ಗೇರ್ ಇಂಜಿನ್ ಗೆ ಬ್ರೇಕಿಂಗ್ ಅನ್ನು ಒದಗಿಸುತ್ತದೆ. ಬ್ರೇಕ್ ಗಳನ್ನು ಚಾಲನೆ ಮಾಡುವುದು ತಪ್ಪಿಸಿ ಅಥವಾ ಅವು ಅತಿಯಾಗಿ ಬಿಸಿಯಾಗಿ ಬ್ರೇಕ್ ವಿಫಲವಾಗಬಹುದು.
- ಜಾರುವ ರಸ್ತೆಗಳಲ್ಲಿ ಚಾಲನೆ ಮಾಡುವಾಗ, ಕೆಳಗೆ ಇಳಿಯುವ ಮೊದಲು ನಿಧಾನಿಸುವುದನ್ನು ಖಚಿತಪಡಿಸಿ. ಮಿತಿ ಮೀರಿದ ಮತ್ತು ಅಥವಾ ಇಂಜಿನ್ ವೇಗದಲ್ಲಿ ಆಕಸ್ಮಿಕ ಬದಲಾವಣೆಗಳು ಘರ್ಷಣೆಯ ನಷ್ಟಕ್ಕೆ ಕಾರಣವಾಗಬಹುದು. ಅದರಿಂದ ನೀವು ನಿಯಂತ್ರಣ ಕಳೆದುಕೊಳ್ಳಬಹುದು.

**ಸೂಚನೆ**

ನೀವು ರಿವರ್ಸ್ ಗೆ ಬದಲಿಸುವ ಮೊದಲು ವಾಹನವು ಪೂರ್ಣವಾಗಿ ಸ್ಥಿರವಾಗಿರುವುದನ್ನು ಖಚಿತಪಡಿಸಿ.

**ಸೂಚನೆ**

- ಕ್ಲಚ್ ಹಾನಿಯನ್ನು ತಪ್ಪಿಸಲು ನೆರವಾಗಲು, ಚಾಲನೆ ಮಾಡುವಾಗ ಕ್ಲಚ್ ಪೆಡಲ್ ಅನ್ನು ಪಾದ ಇಡಲು ಬಳಸಬೇಡಿ. ಅಥವಾ ವಾಹನವನ್ನು ಇಳಿಜಾರಿನಲ್ಲಿ ಸ್ಥಿರವಾಗಿ ನಿಲ್ಲಿಸಲು ಕ್ಲಚ್ ಬಳಸಬೇಡಿ. ಬದಲಿಸುವಾಗ ಕ್ಲಚ್ ಅನ್ನು ಪೂರ್ಣವಾಗಿ ತಗ್ಗಿಸಿ.
- ಬದಲಿಸುವಾಗ ಅಥವಾ ಆರಂಭಿಸುವಾಗ, ಇಂಜಿನ್ ಅನ್ನು ವೇಗಗೊಳಿಸಬೇಡಿ. ಇಂಜಿನ್ ವೇಗಗೊಳಿಸುವುದರಿಂದ ಇಂಜಿನ್ ಬಾಳಿಕೆ ಕಡಿಮೆಯಾಗಬಹುದು ಮತ್ತು ಸರಾಗವಾದ ಬದಲಾವಣೆ ಮೇಲೆ ಪರಿಣಾಮ ಬೀರಬಹುದು.

## ಪಾರ್ಕಿಂಗ್ ಸೆನ್ಸರ್‌ಗಳು

- ಪಾರ್ಕಿಂಗ್ ಸೆನ್ಸರ್ ವ್ಯವಸ್ಥೆಯು ರೇರ್ ಬಂಪರ್ ಬಳಿ ಇರುವ ಅಡಚಣೆಯನ್ನು ಪತ್ತೆ ಮಾಡಲು ಅಲ್ಟ್ರಾಸಾನಿಕ್ ಸೆನ್ಸರ್‌ಗಳನ್ನು ಬಳಸುತ್ತದೆ. ನೀವು ಪಾರ್ಕ್ ಮಾಡುವಾಗ ಅಥವಾ ವಾಹನವನ್ನು ನಿಧಾನವಾಗಿ ಚಲಿಸುವಾಗ ಅಡಚಣೆಯ ಸಂವೇದನೆಯನ್ನು ಸ್ವೀಕರಿಸಿದಾಗ, ವ್ಯವಸ್ಥೆಯು ಬಜರ್ ಧ್ವನಿಯ ಮೂಲಕ ಎಚ್ಚರಿಕೆ ನೀಡುತ್ತದೆ.
- ಸಿಸ್ಟಂ ಅಲ್ಟ್ರಾಸಾನಿಕ್ ತರಂಗವನ್ನು ಹೊರಸೂಸುತ್ತದೆ ಮತ್ತು ಅಡಚಣೆಯಿಂದ ಪ್ರತಿಫಲಿಸಿದ ತರಂಗವನ್ನು ಸಂಬಂಧಿತ ಸೆನ್ಸರ್ ಪತ್ತೆ ಹಚ್ಚುತ್ತದೆ. ಅಲ್ಟ್ರಾಸಾನಿಕ್ ತರಂಗವು ಅಡಚಣೆಯನ್ನು ತಲುಪಿ ಮರಳಿ ಪ್ರತಿಫಲಿಸಲು ತೆಗೆದುಕೊಂಡ ಸಮಯವನ್ನು ವ್ಯವಸ್ಥೆಯು ಅಳೆಯುತ್ತದೆ, ಅದರಿಂದ ಅದು ಅಡಚಣೆಯ ಸ್ಥಾನವನ್ನು ನಿರ್ಧರಿಸುತ್ತದೆ.
- ನೀವು ಇಗ್ನಿಷನ್ ಸ್ವಿಚ್ ಅನ್ನು “ON” (ಆನ್) ಸ್ಥಿತಿಗೆ ತಂದಾಗ ಮತ್ತು ಗೇರ್ ಶಿಫ್ಟ್ ಲಿವರ್ “R” ಸ್ಥಾನದಲ್ಲಿ ಇದ್ದಾಗ ಪಾರ್ಕಿಂಗ್ ಸೆನ್ಸರ್ ಕಾರ್ಯವನ್ನು ಬಳಸಬಹುದು. ಈ ಕೆಳಗಿನ ವಿಚಾರದಲ್ಲಿ ಈ ಕಾರ್ಯವು ಸಹಕಾರಿಯಾಗಿರುತ್ತದೆ: ಕರ್ಬ್ ಮೇಲೆ ಎಳೆಯುವುದು; ವಾಹನದ ಸಮಾಂತರ ಪಾರ್ಕಿಂಗ್; ಗ್ಯಾರೇಜ್ ಕಡೆಗೆ ವಾಹನವನ್ನು ಎಳೆಯುವುದು; ಅಲೇ ಮೂಲಕ ಚಾಲನೆ ನಡೆಸುವುದು; ಅಡಚಣೆಗಳಿರುವ ಜಾಗದಲ್ಲಿ ನಿಧಾನವಾಗಿ ಚಲಿಸುವುದು.

**⚠ ಎಚ್ಚರಿಕೆ**

- ಪಾರ್ಕಿಂಗ್ ಸೆನ್ಸರ್ ಅಡಚಣೆಗಳಿದ್ದಾಗ ಬಜರ್ ಸದ್ದಿನ ಮೂಲಕ ನಿಮಗೆ ಎಚ್ಚರಿಕೆ ನೀಡುತ್ತದೆ. ಹಾಗಿದ್ದರೂ, ನೀವು ನಿರ್ದಿಷ್ಟ ಜಾಗರೂಕತೆಯಿಂದ ಚಲಾಯಿಸಬೇಕಾಗುತ್ತದೆ.
- ಸೆನ್ಸರ್‌ಗಳು ಒಂದಿಷ್ಟು ಮಿತಿಗೊಳಿಸಿದ ಸ್ಥಳದಲ್ಲಿ ಮತ್ತು ವಾಹನವು ಸೀಮಿತ ವೇಗದ ಗತಿಯಲ್ಲಿ ಚಲಿಸುತ್ತಿದ್ದಾಗ ಮಾತ್ರವೇ ಅಡಚಣೆಗಳನ್ನು ಪತ್ತೆ ಮಾಡಬಹುದು. ಹೀಗಾಗಿ ನಾಜೂಕಾದ ಸ್ಥಳಗಳಲ್ಲಿ, ನೀವು ಸುತ್ತಮುತ್ತ ಪರಿಶೀಲಿಸುತ್ತಲೇ ನಿಮ್ಮ ನೇರ ದೃಷ್ಟಿ ಮತ್ತು ರೇರ್ವ್ಯೂ ಮಿರರ್‌ಗಳನ್ನು ಬಳಸಿಕೊಂಡು ವಾಹನವನ್ನು ನಿಧಾನವಾಗಿ ಚಲಿಸಬೇಕಾಗುತ್ತದೆ. ಪಾರ್ಕಿಂಗ್ ಸೆನ್ಸರ್‌ಗಳನ್ನೇ ನಂಬಿಕೊಂಡು ನೀವು ವಾಹನ ನಿಯಂತ್ರಣ ಮಾಡಿದಲ್ಲಿ ಅಪಾಯ ಹೆಚ್ಚಾಗುವ ಸಾಧ್ಯತೆಯಿದೆ.

*ಗಮನಿಸಿ :*


*ಗೇರ್‌ಶಿಫ್ಟ್ ಲಿವರ್ ಅನ್ನು “R” ಸ್ಥಾನಕ್ಕೆ ಬದಲಿಸಿದಾಗ ಒಂದು ಬಾರಿ ಬಜರ್ ಧ್ವನಿ ಕೇಳಿಸುತ್ತದೆ.*

**ಸೂಚನೆ**

ಪಾರ್ಕಿಂಗ್ ಸೆನ್ಸರ್‌ಗಳು ಚಾಲಕನಿಗೆ ಸಹಾಯ ಮಾಡಲು ಮಾತ್ರವಷ್ಟೇ ಇರುತ್ತವೆ.

### ಸೆನ್ಸರ್ ಸ್ಥಳಗಳು

### ರೇರ್ ಬಂಪರ್ ಮೇಲೆ (ಅಳವಡಿಸಿದಲ್ಲಿ)




77PM03002

(1) ರೇರ್ ಸೆನ್ಸರ್‌ಗಳು (2 ಸ್ಥಳಗಳು)

**ಸೂಚನೆ**

- ಸೆನ್ಸರ್ ಏರಿಯಾಗಳಿಗೆ ಬಡಿಯುವುದು ಅಥವಾ ಅತಿಯಾದ ಒತ್ತಡದ ಕಾರ್ವಾಷರ್ ನಾಜಲ್ ಅನ್ನು ಸೆನ್ಸರ್ ಏರಿಯಾಗಳಿಗೆ ನಿರ್ದೇಶಿಸುವುದನ್ನು ತಪ್ಪಿಸಿ. ಇಲ್ಲದೆ ಇದ್ದಲ್ಲಿ, ಸೆನ್ಸರ್‌ಗಳಿಗೆ ಹಾನಿಯಾಗಬಹುದು.
- ಬಂಪರ್ ಗಟ್ಟಿಯಾದ ವಸ್ತುವಿಗೆ ಬಡಿದಲ್ಲಿ, ಸೆನ್ಸರ್‌ಗಳು ಸರಿಯಾಗಿ ಕೆಲಸ ಮಾಡದೆ ಇರಬಹುದು. ಅದು ನಡೆದಲ್ಲಿ, ಸೆನ್ಸರ್‌ಗಳನ್ನು ಮಾರುತಿ ಸುಜುಕಿ ಅಧಿಕೃತ ಕಾರ್ಯಾಗಾರದಲ್ಲಿ ತಪಾಸಣೆ ನಡೆಸಬಹುದು.


**ಕಾರ್ಯನಿರ್ವಹಿಸುವ ಸೆನ್ಸರ್‌ಗಳು**

ಗೇರ್‌ಶಿಫ್ಟ್ ಲಿವರ್ ಸ್ಥಾನವನ್ನು ಆಧರಿಸಿ ಸೆನ್ಸರ್‌ಗಳು ಈ ಕೆಳಗಿನಂತೆ ಕಾರ್ಯನಿರ್ವಹಿಸುತ್ತವೆ:

| ಗೇರ್‌ಶಿಫ್ಟ್ ಲಿವರ್ ಪೊಸಿಷನ್ | R | N, 1ನೇ – 5ನೇ |
|---|---|---|
| ರೇರ್ ಸೆನ್ಸರ್‌ಗಳು | “ON” (ಆನ್) | OFF (ಆಫ್) |

**ಅಡಚಣೆಗಳನ್ನು ಪತ್ತೆ ಮಾಡಬಹುದಾದ ಅಂದಾಜು ಏರಿಯಾಗಳು**

**ಉದಾಹರಣೆ**



78MM05003

- ಸೆನ್ಸರ್‌ಗೆ 20 cm (8 in) ನ ಒಳಗಿರುವ ಅಥವಾ ಸೆನ್ಸರ್‌ಗಿಂತ ನೇರ ಕೆಳಗೆ ಇರುವ ಅಡಚಣೆಯನ್ನು ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲ.
- ವಾಹನದ ರೇರ್‌ನಿಂದ ಸುಮಾರು 1.5 cm (5 ft) ವರೆಗಿನ ಗೋಡೆಯವರೆಗೆ ಅಡಚಣೆಗಳನ್ನು ಸೆನ್ಸರ್‌ಗಳು ಗುರುತಿಸಬಲ್ಲವು.

**⚠ ಎಚ್ಚರಿಕೆ**

ಈ ಕೆಳಗಿನ ಸ್ಥಿತಿಗಳಲ್ಲಿ, ಪಾರ್ಕಿಂಗ್ ಸೆನ್ಸರ್ ಸಿಸ್ಟಂ ಸಾಮಾನ್ಯವಾಗಿ ಕೆಲಸ ಮಾಡದೆ ಇರಬಹುದು. ಏಕೆಂದರೆ ಸೆನ್ಸರ್‌ಗಳು ಅಡಚಣೆಗಳನ್ನು ಸರಿಯಾಗಿ ಪತ್ತೆ ಮಾಡಲು ಸಾಧ್ಯವಾಗದೆ ಇರಬಹುದು.

- ಸೆನ್ಸರ್‌ಗಳ ಮೇಲೆ ಮಣ್ಣು, ಹಿಮ ಅಥವಾ ಇತರ ವಸ್ತುಗಳು ಮುಚ್ಚಿಕೊಳ್ಳಬಹುದು. (ಸಾಮಾನ್ಯವಾಗಿ ಕಾರ್ಯನಿರ್ವಹಿಸಲು ಅಂತಹ ವಸ್ತುಗಳನ್ನು ನಿವಾರಿಸಬೇಕು.)
- ನೀರಿನ ಹನಿಗಳು ಅಥವಾ ಅತಿಯಾದ ಮಳೆಯಿಂದ ಸೆನ್ಸರ್‌ಗಳು ಒದ್ದೆಯಾಗಬಹುದು.
- ಸೆನ್ಸರ್‌ಗಳನ್ನು ಕೈಯಿಂದ, ಸ್ಟಿಕರ್, ಸಲಕರಣೆ ಇತ್ಯಾದಿಯಿಂದ ಮುಚ್ಚಲಾಗಿರುತ್ತದೆ.
- ಸೆನ್ಸರ್‌ನ ಸಂವೇದನೆ ಸ್ವೀಕರಿಸುವ ಜಾಗದಲ್ಲಿ ಸಲಕರಣೆ ಅಥವಾ ಇತರ ವಸ್ತುವನ್ನು ಜೋಡಿಸಲಾಗಿರುತ್ತದೆ.
- ಎಳೆಯುವ ಹುಕ್ಕಳು, ವಾಣಿಜ್ಯವಾಗಿ ಲಭ್ಯವಿರುವ ಕಾರ್ನರ್ ಕಂಬಗಳು, ರೇಡಿಯೋ ಏಂಟೆನಾಗಳು ಇತ್ಯಾದಿಗಳನ್ನು ಬಂಪರ್‌ಮೇಲೆ ಅಳವಡಿಸಿರಲಾಗುತ್ತದೆ.
- ಸಸ್ಪೆನ್ಷನ್ ಮಾರ್ಪಾಡು ಅಥವಾ ಇತರ ಕಾರಣಗಳಿಗಾಗಿ ಬಂಪರ್‌ನ ಎತ್ತರವನ್ನು ಬದಲಿಸಿರಲಾಗುತ್ತದೆ.
- ಸೆನ್ಸರ್ ಏರಿಯಾಗಳು ನೇರವಾದ ಸೂರ್ಯನ ಬೆಳಕಿನಿಂದ ಅತಿಯಾಗಿ ಬಿಸಿಯಾಗುತ್ತವೆ ಅಥವಾ ಶೀತಗಾಳಿಯ ಹವಾಮಾನದಲ್ಲಿ ಶೀತಲಗೊಳ್ಳುತ್ತವೆ.
- ಒರಟಾದ ಹೊರಮೈ, ಇಳಿಜಾರು, ಜಲ್ಲಿಕಲ್ಲುಗಳ ರಸ್ತೆ ಅಥವಾ ಹುಲ್ಲುಗಾವಲು ಹೊಲದ ಮೇಲೆ ವಾಹನ ಚಲಿಸಿದಾಗ.
- ವಾಹನವು ತೀಕ್ಷ್ಣವಾದ ಕೋನದಲ್ಲಿರುವಾಗ.

(ಮುಂದುವರಿಯಲಿದೆ)

**⚠ ಎಚ್ಚರಿಕೆ**

(ಮುಂದುವರಿಯಲಿದೆ)

- ಮತ್ತೊಂದು ವಾಹನದ ಹಾರ್ನ್, ಎಂಜಿನ್, ಏರ್ ಬ್ರೇಕಿಂಗ್ ಸಿಸ್ಟಂ (ದೊಡ್ಡ ವಾಹನಗಳು) ಅಥವಾ ಪಾರ್ಕಿಂಗ್ ಸೆನ್ಸರ್‌ಗಳಿಂದ ಸೆನ್ಸರ್‌ಗಳಿಗೆ ಅಡ್ಡಿಯಾಗಿದೆ.
- ಅಡಚಣೆಗಳು ಸೆನ್ಸರ್‌ಗಳಿಗೆ ಅತೀ ಹತ್ತಿರವಾಗಿವೆ.
- ಸೆನ್ಸರ್‌ಗಳು ಗಾಜಿನಂತಹ ಅತಿಯಾಗಿ ಪ್ರತಿಫಲಿಸುವ ವಸ್ತುಗಳಿಗೆ ಕೋನೀಯವಾಗಿ ಇವೆ. (ಅಲ್ಟ್ರಾಸಾನಿಕ್ ತರಂಗಗಳು ಅಡಚಣೆಗಳಿಂದ ಮರಳಿ ಪ್ರತಿಫಲಿಸುವುದಿಲ್ಲ)

• ಈ ಕೆಳಗಿನ ಅಡಚಣೆಗಳನ್ನು ಸೆನ್ಸರ್‌ಗಳು ಸರಿಯಾಗಿ ಪತ್ತೆ ಹಚ್ಚಲು ಸಾಧ್ಯವಾಗದೆ ಇರಬಹುದು:
  - ತಂತಿಗಳ ಜಾಲ ಅಥವಾ ಹಗ್ಗಗಳಂತಹ ತೆಳುವಾದ ವಸ್ತುವಿನಿಂದ ಮಾಡಿದ ವಸ್ತುಗಳು
  - ಚೌಕಾಕಾರದ ಘನಕಲ್ಲುಗಳು ಅಥವಾ ಇತರ ತೀಕ್ಷ್ಣ ತುದಿಗಳಿರುವ ವಸ್ತುಗಳು
  - ರಸ್ತೆಯ ಸೂಚನೆಯಂಥ ದೊಡ್ಡ ಮೇಲ್ಭಾಗದ ಉದ್ದನೆಯ ವಸ್ತು
  - ಕಬ್ಬೋರ್ನ್‌ಗಳಂತಹ ಹೆಚ್ಚು ಕಾಣಿಸದೆ ಇರುವ ವಸ್ತುಗಳು
  - ಹತ್ತಿ ಮತ್ತು ಹಿಮದಂತಹ ಶಬ್ದವನ್ನು ಹೀರುವ ವಸ್ತುಗಳು

*ಗಮನಿಸಿ :*

- *ದೂರದಿಂದ ಪತ್ತೆಯಾದರೂ ಸಹ ವಾಹನವು ಸಮೀಪದಲ್ಲಿ ಚಲಿಸುವಾಗ ತೆಳುವಾದ ಕಂಬಗಳು ಅಥವಾ ಸೆನ್ಸರ್‌ಗಳಿಗಿಂತ ಕೆಳಗೆ ಇರುವ ವಸ್ತುಗಳಿಗೆ ಪತ್ತೆಯಾಗದೆ ಇರಬಹುದು.*
- *ರಸ್ತೆಯ ಚಿಹ್ನೆ ಅಥವಾ ಅದೇ ರೀತಿಯ ಅಡಚಣೆಗಳನ್ನು ವಾಸ್ತವಿಕ ಅಂತರಕ್ಕಿಂತ ಕಡಿಮೆ ಇದೆ ಎಂದು ವ್ಯವಸ್ಥೆಯು ಅಂದಾಜಿಸುವ ಸಾಧ್ಯತೆಯಿದೆ.*

**ಪಾರ್ಕಿಂಗ್ ಸೆನ್ಸರ್‌ನಿಂದ ಅಡಚಣೆಯ ಸೂಚನೆ**

ಅಡಚಣೆಯನ್ನು ಪತ್ತೆ ಮಾಡಿದ ನಂತರ ಪಾರ್ಕಿಂಗ್ ಸೆನ್ಸರ್ ಒಳಗೆ ಬಜರ್ ಧ್ವನಿಯನ್ನು ಮೊಳಗಿಸುತ್ತದೆ.

- ರೇರ್‌ನಲ್ಲಿರುವ ಸೆನ್ಸರ್ ಅಡಚಣೆಯನ್ನು ಪತ್ತೆಮಾಡಿದಾಗ ರೇರ್ ಸೀಟ್ ಹಿಂಬದಿಯಲ್ಲಿರುವ ಬಜರ್ ಮೊಳಗುತ್ತದೆ.
- ಗೋಡೆಗಳಂತಹ ಅಡಚಣೆಯನ್ನು ಪತ್ತೆ ಮಾಡಿದಾಗ ಎಚ್ಚರಿಕೆಯ ಧ್ವನಿ ಮೊಳಗುತ್ತದೆ.

| ದೂರ<br>(ಸುಮಾರು) | ಬಜರ್ |
|---|---|
| 100 – 150 cm<br>(39 – 59 in) | ಅತೀ ಸಣ್ಣ ಅಂತರದಲ್ಲಿ ಸಣ್ಣ ಸದ್ದುಗಳು |
| 60-100 cm<br>(24-39 in) | ಅತೀ ಸಣ್ಣ ಅಂತರದಲ್ಲಿ ಸಣ್ಣ ಸದ್ದುಗಳು |
| 60 cm ಗಿಂತ ಕಡಿಮೆ (24 in) | ನಿರಂತರ ಸದ್ದು |


## ಎಚ್ಚರಿಕೆ ಮತ್ತು ಇಂಡಿಕೇಟರ್ ಸಂದೇಶಗಳು

ಪಾರ್ಕಿಂಗ್ ಸೆನ್ಸರ್ ವ್ಯವಸ್ಥೆಗೆ ಸಂಬಂಧಿಸಿದಂತೆ ಸಮಸ್ಯೆ ಅಥವಾ ಎಚ್ಚರಿಕೆ ಇದ್ದಲ್ಲಿ, ಬಜರ್ ಅದರ ಬಗ್ಗೆ ಮಾಹಿತಿ ನೀಡುತ್ತದೆ. ಅದರ ಸೂಚನೆಯನ್ನು ಅನುಸರಿಸಿ.

- ಬಜರ್ ತಡೆತಡೆದು ಸದ್ದು ಮಾಡುತ್ತದೆ. ಇಂಡಿಕೇಟರ್ ಸೆನ್ಸರ್ ಮಲಿನಗೊಂಡಿರುತ್ತದೆ. ಅದನ್ನು ಮೃದು ಬಟ್ಟೆಯಿಂದ ಸ್ವಚ್ಛಗೊಳಿಸಿ. ಒರೆಸಿದ ನಂತರವೂ ಸದ್ದು ನಿಲ್ಲದೆ ಹೋದಲ್ಲಿ ಪಾರ್ಕಿಂಗ್ ಸೆನ್ಸರ್ ವ್ಯವಸ್ಥೆಯಲ್ಲಿ ಸಮಸ್ಯೆ ಇರಬಹುದು. ಮಾರುತಿ ಸುಜುಕಿ ಅಧಿಕೃತ ಕಾರ್ಯಾಗಾರದಲ್ಲಿ ನಿಮ್ಮ ವಾಹನವನ್ನು ತಪಾಸಣೆಗೆ ಒಳಪಡಿಸಿ.

## ಬ್ರೇಕಿಂಗ್

ಉದಾಹರಣೆ



60G165S

ಯಾವುದೇ ವಾಹನವನ್ನು ನಿಲುಗಡೆಗೆ ಮಾಡಲು ಬೇಕಾದ ಅಂತರವು ವಾಹನದ ವೇಗದ ಜೊತೆಗೆ ಹೆಚ್ಚಾಗುತ್ತದೆ. ಉದಾಹರಣೆಗೆ 30 km/h (19 mph) ಬೇಕಾಗುವ ಬ್ರೇಕಿಂಗ್ ಅಂತರಕ್ಕೆ ಹೋಲಿಸಿದಲ್ಲಿ 60 km/h (37 mph) ಬೇಕಾಗುವ ಬ್ರೇಕಿಂಗ್ ಅಂತರವು ಸರಿ ಸುಮಾರು 4 ಪಟ್ಟು ಹೆಚ್ಚಾಗಿರುತ್ತದೆ. ನಿಮ್ಮ ವಾಹನ ಮತ್ತು ನಿಲುಗಡೆ ಪಾಯಿಂಟ್ ನಡುವೆ ಸಾಕಷ್ಟು ಅಂತರ ಇರುವಾಗ ವಾಹನವನ್ನು ಬ್ರೇಕ್ ಮಾಡಲು ಆರಂಭಿಸಿ ಮತ್ತು ಮೆಲ್ಲನೆ ನಿಧಾನಿಸಿ.

**⚠ ಎಚ್ಚರಿಕೆ**

ಬ್ರೇಕ್ ಡ್ರಮ್ ಗಳಿಗೆ ನೀರು ಹೋದಲ್ಲಿ, ಬ್ರೇಕ್ ಪ್ರದರ್ಶನವು ದುರ್ಬಲವಾಗಬಹುದು ಮತ್ತು ಊಹಿಸಲು ಸಾಧ್ಯವಾಗದೆ ಇರಬಹುದು. ವಾಹನವನ್ನು ನೀರಿನಲ್ಲಿ ಚಲಾಯಿಸಿದಾಗ ಅಥವಾ ವಾಹನದ ಒಳಗೆ ತೊಳೆದಾಗ ಕಡಿಮೆ ವೇಗದಲ್ಲಿ ಚಲಾಯಿಸುವ ಮೂಲಕ ಬ್ರೇಕ್ ಗಳನ್ನು ಪರೀಕ್ಷಿಸಿ. ಅವುಗಳು ತಮ್ಮ ಸಾಮಾನ್ಯ ಪರಿಣಾಮವನ್ನು ಉಳಿಸಿಕೊಂಡಿವೆಯೇ ಎಂದು ಗಮನಿಸಿ. ಬ್ರೇಕ್ ಗಳು ಸಾಮಾನ್ಯಕ್ಕಿಂತ ಕಡಿಮೆ ಪರಿಣಾಮಕಾರಿಯಾಗಿದ್ದಲ್ಲಿ, ನಿಧಾನವಾಗಿ ಚಾಲನೆ ಮಾಡುತ್ತಾ ಬ್ರೇಕ್ ಗಳು ತಮ್ಮ ಸಾಮಾನ್ಯ ಪರಿಣಾಮವನ್ನು ಮರಳಿ ಪಡೆಯುವವರೆಗೆ ಪದೇಪದೇ ಬ್ರೇಕ್ ಹಾಕಿ ಅವುಗಳನ್ನು ಒಣಗಿಸಿ.

### ಪವರ್ ಅಸಿಸ್ಟೆಡ್ ಬ್ರೇಕ್ ಗಳು

ನಿಮ್ಮ ವಾಹನಕ್ಕೆ ಪವರ್ ಅಸಿಸ್ಟೆಡ್ ಬ್ರೇಕ್ ಗಳು ಇವೆ. ನಿಂತಿರುವ ಇಂಜಿನ್ ಅಥವಾ ಇತರ ವೈಫಲ್ಯಗಳಿಂದ ಪವರ್ ಅಸಿಸ್ಟನ್ಸ್ ಅನ್ನು ಕಳೆದುಕೊಂಡಲ್ಲಿ, ಸಿಸ್ಟಂ ಇನ್ನೂ ರಿವರ್ಸ್ ಪವರ್ ನಲ್ಲಿ ಪೂರ್ಣವಾಗಿ ಕಾರ್ಯ ನಿರ್ವಹಿಸುತ್ತದೆ ಮತ್ತು ನೀವು ಒಮ್ಮೆ ಅದನ್ನು ಹಿಡಿತಕ್ಕೆ ತಂದು ಬ್ರೇಕ್ ಪೆಡಲ್ ಅನ್ನು ಒತ್ತುವ ಮೂಲಕ ವಾಹನವನ್ನು ಪೂರ್ಣವಾಗಿ ನಿಲ್ಲಿಸಬಹುದು. ನೀವು ಬ್ರೇಕ್ ಪೆಡಲ್ ಅನ್ನು ಒತ್ತಿದಾಗ ರಿವರ್ಸ್ ಪವರ್ ಅನ್ನು ಬಾಗಶಃ ಬಳಸಲಾಗಿರುತ್ತದೆ ಮತ್ತು ಪ್ರತೀ ಬಾರಿ ಪೆಡಲ್ ಒತ್ತಿದಾಗಲೂ ಅದು ಕಡಿತಗೊಳ್ಳುತ್ತದೆ. ಸರಾಗವಾದ ಮತ್ತು ಸಮಾನವಾದ ಪ್ರೆಶರನ್ನು ಪೆಡಲ್ ಮೇಲೆ ಹಾಕಿ. ಪೆಡಲ್ ಅನ್ನು ಪಂಪ್ ಮಾಡಬೇಡಿ.


**⚠ ಎಚ್ಚರಿಕೆ**

ಬ್ರೇಕ್ ಸಿಸ್ಟಂನಲ್ಲಿ ರಿಸರ್ವ್ ಪವರ್ ಇಲ್ಲದೆ ಇದ್ದಾಗಲೂ, ನೀವು ವಾಹನವನ್ನು ಬ್ರೇಕ್ ಪೆಡಲ್ ಅನ್ನು ಸಾಮಾನ್ಯ ಅಗತ್ಯವಿರುವುದಕ್ಕಿಂತ ಹೆಚ್ಚು ಕಠಿಣವಾಗಿ ಒತ್ತುವ ಮೂಲಕ ನಿಲ್ಲಿಸಬಹುದು. ಆದರೆ, ನಿಲುಗಡೆಯ ಅಂತರ ಹೆಚ್ಚು ದೀರ್ಘವಾಗಿರಬಹುದು.

# ಚಾಲನಾ ಸಲಹೆಗಳು


ರನ್ನಿಂಗ್-ಇನ್ ........ 4-1
ಕ್ಯಾಟಲಿಟಿಕ್ ಕನ್ವರ್ಟರ್ ........ 4-1
ಫ್ಯೂಯೆಲ್ ವೆಚ್ಚ ಸುಧಾರಣೆ ........ 4-2
ಹೆದ್ದಾರಿ ಚಾಲನೆ ........ 4-3
ಗುಡ್ಡಗಳ ಮೇಲೆ ಚಾಲನೆ ........ 4-3
ಜಾರುವ ರಸ್ತೆಗಳ ಮೇಲೆ ಚಾಲನೆ ........ 4-4
ಒದ್ದೆಯಾದ ರಸ್ತೆಗಳ ಮೇಲೆ ಚಾಲನೆ ........ 4-4
ಸುರಕ್ಷಿತ ಚಾಲನೆಗೆ ಮಾಡು ಇಲ್ಲವೆ ಮಡಿ ........ 4-5
ಸುರಕ್ಷೆಯ ಗೆರೆ ........ 4-6


4




52D078S

**⚠ ಎಚ್ಚರಿಕೆ**

- ನಿಮ್ಮ ಸೀಟ್ ಬೆಲ್ಟ್ ಗಳನ್ನು ಸದಾ ಧರಿಸಿಕೊಂಡು ಇರಿ. ಡ್ರೈವರ್ ಮತ್ತು ಪ್ರಯಾಣಿಕರು ಒದಗಿಸಿರುವ ಸೀಟ್ ಬೆಲ್ಟ್ ಗಳನ್ನು ಬಳಸಿಕೊಂಡು ಎಲ್ಲಾ ಸಮಯದಲ್ಲಿ ಸಂಯಮದಿಂದ ಇರಬೇಕು. ಸೀಟ್ ಬೆಲ್ಟ್ ಗಳನ್ನು ಸೂಕ್ತರೀತಿಯಲ್ಲಿ ಬಳಸುವ ಮಾಹಿತಿಗಳಿಗಾಗಿ “ಸೀಟ್ ಬೆಲ್ಟ್”ಗಳ ವಿಭಾಗವನ್ನು ಓದಿ.
- ಆಲ್ಕೋಹಾಲ್ ಅಥವಾ ಇತರ ಮಾದಕ ದ್ರವ್ಯಗಳನ್ನು ಸೇವಿಸಿ ಯಾವತ್ತೂ ವಾಹನ ಚಲಾಯಿಸಬೇಡಿ. ಆಲ್ಕೋಹಾಲ್ ಮತ್ತು ಇತರ ಮಾದಕ ದ್ರವ್ಯಗಳು ಸುರಕ್ಷಿತವಾಗಿ ವಾಹನ ಚಲಾಯಿಸುವ ನಿಮ್ಮ ಸಾಮರ್ಥ್ಯದ ಮೇಲೆ ಗಂಭೀರವಾಗಿ ಪರಿಣಾಮ ಬೀರುತ್ತವೆ. ಸ್ವತಃ ನಿಮಗೆ ಮತ್ತು ಇತರರಿಗೆ ನೀವು ಗಾಯಗಳನ್ನು ಮಾಡುವ ಸಾಧ್ಯತೆಯೂ ಇದೆ. ನೀವು ಬಹಳ ಬಳಲಿದ್ದಾಗ, ಅನಾರೋಗ್ಯ, ಕಿರಿಕಿರಿ ಮತ್ತು ಒತ್ತಡದಲ್ಲಿ ಇದ್ದಾಗಲೂ ವಾಹನ ಚಲಾಯಿಸುವುದನ್ನು ತಪ್ಪಿಸಿ.


## ಚಾಲನೆಯಲ್ಲಿದೆ

*ಸೂಚನೆ*

ಮುಂದಿನ ಪ್ರದರ್ಶನ ಮತ್ತು ಇಂಜಿನ್ ನ ವಿಶ್ವಾಸಾರ್ಹತೆಯು ಆರಂಭದಲ್ಲಿ ತೋರಿಸಿರುವ ಆರೈಕೆ ಮತ್ತು ಸಂಯಮದ ಚಾಲನೆಯನ್ನು ಅವಲಂಬಿಸಿರುತ್ತದೆ. ಈ ಕೆಳಗಿನ ಮುಂಜಾಗ್ರತೆಗಳನ್ನು ಆರಂಭದ **960** ಕಿಮೀ ವಾಹನ ಚಾಲನೆಯ ಸಂದರ್ಭದಲ್ಲಿ ತೆಗೆದುಕೊಳ್ಳುವುದು ಅತೀ ಮುಖ್ಯವಾಗಿದೆ.

- ಸ್ಟಾರ್ಟ್ ಮಾಡಿದ ಮೇಲೆ, ಇಂಜಿನ್ ಅನ್ನು ವೇಗವಾಗಿ ಓಡಿಸಬೇಡಿ. ನಿಧಾನವಾಗಿ ಬೆಚ್ಚಗೆ ಮಾಡಿ
- ದೀರ್ಘಕಾಲ ವಾಹನ ಚಾಲನೆಯನ್ನು ಒಂದೇ ವೇಗದಲ್ಲಿ ಮಾಡುವುದನ್ನು ತಪ್ಪಿಸಿ. ನಿಮ್ಮ ವೇಗವನ್ನು ಬದಲಿಸಿದಲ್ಲಿ ಚಲಿಸುವ ಭಾಗಗಳು ತುಂಡಾಗುವ ಸಾಧ್ಯತೆಯಿದೆ.
- ನಿಲ್ದಾಣದಿಂದ ನಿಧಾನವಾಗಿ ಸ್ಟಾರ್ಟ್ ಮಾಡಿ. ಪೂರ್ಣ ಥ್ರಾಟಲ್ ಸ್ಟಾರ್ಟ್ ಗಳನ್ನು ತಪ್ಪಿಸಿ.
- ಮುಖ್ಯವಾಗಿ ಮೊದಲ **320** ಕಿಮೀ ಚಾಲನೆಯಲ್ಲಿ ಕಠಿಣ ಬ್ರೇಕಿಂಗ್ ಅನ್ನು ತಪ್ಪಿಸಿ.
- ಟ್ರಾನ್ಸ್ ಮಿಶನ್ ಹೈ ಗೇರ್ ನಲ್ಲಿರುವಂತೆ ನಿಧಾನವಾಗಿ ಚಲಿಸಬೇಡಿ.
- ಸಾಧಾರಣ ಇಂಜಿನ್ ವೇಗದಲ್ಲಿ ವಾಹನವನ್ನು ಚಲಾಯಿಸಿ.
- ಟ್ರೈಲರ್ ಅನ್ನು ಎಳೆಯಬೇಡಿ.

## ಕ್ಯಾಟಲಿಟಿಕ್ ಕನ್ವರ್ಟರ್




77PH201

ನಿಮ್ಮ ವಾಹನದ ಎಕ್ಸಾಸ್ಟ್ ನಲ್ಲಿರುವ ಹಾನಿಕಾರಕ ಮಾಲಿನ್ಯಗಳ ಪ್ರಮಾಣವನ್ನು ಕನಿಷ್ಠಗೊಳಿಸುವುದು ಕ್ಯಾಟಲಿಟಿಕ್ ಕನ್ವರ್ಟರ್ ಉದ್ದೇಶವಾಗಿದೆ. ಕ್ಯಾಟಲಿಟಿಕ್ ಕನ್ವರ್ಟರ್ ಇರುವ ವಾಹನದಲ್ಲಿ ಸತು ಇರುವ ಫ್ಯೂಯೆಲ್ ಬಳಕೆಯನ್ನು ನಿಷೇಧಿಸಲಾಗಿದೆ. ಏಕೆಂದರೆ ಸತು ಕ್ಯಾಟಲಿಟಿಕ್ ವ್ಯವಸ್ಥೆಯ ಮಾಲಿನ್ಯ ಕಡಿಮೆ ಮಾಡುವ ಅಂಶಗಳನ್ನು ನಿಷ್ಕ್ರಿಯಗೊಳಿಸುತ್ತದೆ.

ವಾಹನದ ಬಾಳಿಕೆ ಸಾಮಾನ್ಯ ಬಳಕೆಯಲ್ಲಿ ಮತ್ತು ಸತುವಿಲ್ಲದ ಫ್ಯೂಯೆಲ್ ಬಳಸಿದಾಗ ದೀರ್ಘಕಾಲ ಬರಲು ಕನ್ವರ್ಟರ್ ಅನ್ನು ವಿನ್ಯಾಸಗೊಳಿಸಲಾಗಿದೆ. ಯಾವುದೇ ವಿಶೇಷ ನಿರ್ವಹಣೆಯ ಅಗತ್ಯವು ಕನ್ವರ್ಟರ್ ಗೆ ಇಲ್ಲ. ಆದರೆ, ಇಂಜಿನ್ ಅನ್ನು ಸೂಕ್ತವಾಗಿ ಟ್ಯೂನ್ ಆಗಿರುವಂತೆ ನೋಡಿಕೊಳ್ಳುವುದೂ ಅತೀ ಮುಖ್ಯ. ಅಸಮರ್ಪಕವಾಗಿ ಟ್ಯೂನ್ ಆಗಿರುವ ಇಂಜಿನ್ ನಿಂದಾಗಿ ಇಂಜಿನ್ ಮಿಸ್ ಫೈರಿಂಗ್ ಆಗುತ್ತದೆ. ಇದರಿಂದ ಕ್ಯಾಟಲಿಸ್ಟ್ ನ ಅತಿಯಾದ ಬಿಸಿಯಾಗುವಿಕೆಗೆ ಕಾರಣವಾಗಬಹುದು. ಇದು ಶಾಶ್ವತವಾಗಿ ಕ್ಯಾಟಲಿಸ್ಟ್ ಗೆ ಮತ್ತು ಇತರ ವಾಹನ ಭಾಗಗಳಿಗೆ ಬಿಸಿಯಿಂದ ಹಾನಿಯಾಗಲು ಕಾರಣವಾಗಬಹುದು.

*ಸೂಚನೆ*


ಹಾನಿಯಾಗುವ ಕ್ಯಾಟಲಿಸ್ಟ್ ಅಥವಾ ಇತರ ವಾಹನ ಹಾನಿಯನ್ನು ತಪ್ಪಿಸಲು:

- ಇಂಜಿನ್ ಅನ್ನು ಸೂಕ್ತ ಕಾರ್ಯಕಾರಿ ಸ್ಥಿತಿಯಲ್ಲಿ ನಿರ್ವಹಣೆ ಮಾಡಬೇಕು.
- ಇಂಜಿನ್ ಧೋಷವಿದ್ದಲ್ಲಿ, ಮುಖ್ಯವಾಗಿ ಇಂಜಿನ್ ಮಿಸ್ ಫೈರಿಂಗ್ ಆಗುವುದು ಅಥವಾ ಇತರ ಕಾರ್ಯವೈಖರಿಯ ನಷ್ಟವಾಗಿರುವುದು ಕಂಡಲ್ಲಿ ವಾಹನವನ್ನು ತಕ್ಷಣವೇ ಸರ್ವಿಸ್ ಮಾಡಿಸಬೇಕು.
- ಇಂಜಿನ್ ಅನ್ನು ಆಫ್ ಮಾಡಬೇಡಿ ಅಥವಾ ಟ್ರಾನ್ಸ್ ಮಿಶನ್ ಸಾಮಾನ್ಯವಾಗಿ ಗೇರ್ ನಲ್ಲಿದ್ದಾಗ ಮತ್ತು ವಾಹನವು ಚಲಿಸುತ್ತಿದ್ದಾಗ ಇಗ್ನಿಷನ್ ಗೆ ಅಡ್ಡಿ ಮಾಡಬೇಡಿ.
- ವಾಹನವನ್ನು ದೂಡುವುದು ಅಥವಾ ಎಳೆಯುವ ಮೂಲಕ ಇಂಜಿನ್ ಸ್ಟಾರ್ಟ್ ಮಾಡಲು ಪ್ರಯತ್ನಿಸಬೇಡಿ. ಅಥವಾ ಇಳಿಜಾರಿನಲ್ಲಿ ವಾಹನ ಇಳಿಸಬೇಡಿ.
- ತಟಸ್ಥವಾಗಿ ನಿಲ್ಲಿಸುವುದು ಕಷ್ಟವಾದಾಗ ಅಥವಾ ಇತರ ಧೋಷಗಳಿದ್ದಾಗ ದೀರ್ಘಕಾಲದವರೆಗೆ ವಾಹನವನ್ನು ಐಡಲ್ ನಲ್ಲಿಡಬೇಡಿ.
- ಐಡ್ಲಿಂಗ್ ಗಡುಸಾಗಿದ್ದರೆ ಅಥವಾ ಇತರ ದೋಷವಿದ್ದರೆ ದೀರ್ಘ ಅವಧಿಯವರೆಗೆ ವಾಹನವನ್ನು ಐಡಲ್ನಲ್ಲಿ ಇಡಬೇಡಿ.
- ಫ್ಯೂಯೆಲ್ ಟ್ಯಾಂಕ್ ಅನ್ನು ಖಾಲಿ ಮಟ್ಟದ ಸಮೀಪಕ್ಕೆ ಬರಲೂ ಬಿಡಬೇಡಿ.
- ಅತಿಯಾದ ಅಧಿಕ ಇಂಜಿನ್ ವೇಗದಲ್ಲಿ ವಾಹನ ಚಲಾಯಿಸಬೇಡಿ.

**⚠ ಎಚ್ಚರಿಕೆ**

ನೀವು ವಾಹನ ಪಾರ್ಕ್ ಮಾಡುವ ಮತ್ತು ಚಲಾಯಿಸುವ ಪ್ರದೇಶಗಳ ಬಗ್ಗೆ ಜಾಗರೂಕರಾಗಿರಿ. ಕ್ಯಾಟಲಿಟಿಕ್ ಕನ್ವರ್ಟರ್ ಮತ್ತು ಇತರ ಎಕ್ಸಾಸ್ಟ್ ಭಾಗಗಳು ಅಧಿಕ ಬಿಸಿಯಾಗಬಹುದು. ಯಾವುದೇ ವಾಹನದ ವಿಷಯಕ್ಕೆ ಸಂಬಂಧಿಸಿದಂತೆ, ಈ ವಾಹನವನ್ನೂ ಉರಿಯುವ ವಸ್ತುಗಳು ಇರುವ ಅಂದರೆ ಒಣ ಹುಲ್ಲು ಅಥವಾ ಎಲೆಗಳು ಇರುವ ಕಡೆಯಲ್ಲಿ ನಿಲ್ಲಿಸಬೇಡಿ ಅಥವಾ ಚಲಾಯಿಸಬೇಡಿ. ಅವು ಬಿಸಿ ಎಕ್ಸಾಸ್ಟ್ ಸಿಸ್ಟಂ ಜೊತೆಗೆ ಸಂಪರ್ಕ ಪಡೆಯಬಹುದು.

ಉದಾಹರಣೆ



82DY05

## ಫ್ಯೂಯೆಲ್ ಇಕಾನಮಿ ಸುಧಾರಣೆ

ಈ ಕೆಳಗಿನ ಮಾಹಿತಿಗಳು ನಿಮಗೆ ಫ್ಯೂಯೆಲ್ ಇಕಾನಮಿ ಸುಧಾರಿಸಲು ನೆರವಾಗಲಿವೆ.

### ಮಿತಿಮೀರಿದ ಐಡ್ಲಿಂಗ್ ತಪ್ಪಿಸಿ

ನೀವು ಪಾರ್ಕ್ ಮಾಡಿದಾಗ ಒಂದು ನಿಮಿಷಕ್ಕಿಂತ ಹೆಚ್ಚು ಕಾಲ ಕಾಯಬೇಕಿದ್ದಲ್ಲಿ, ಇಂಜಿನ್ ನಿಲ್ಲಿಸಿ ಮತ್ತು ಮತ್ತೊಮ್ಮೆ ಸ್ಟಾರ್ಟ್ ಮಾಡಿ. ತಂಪಾದ ಇಂಜಿನ್ ಅನ್ನು ವಾರ್ಮ್ ಅಪ್ ಮಾಡಬೇಕಾದಾಗ, ಇಂಜಿನ್ ಐಡಲ್ ಆಗಲು ಬಿಡಬೇಡಿ ಅಥವಾ ಪೂರ್ಣ ಥ್ರಾಟಲ್ ಅನ್ನು ಇಂಜಿನ್ ತನ್ನ ಕಾರ್ಯಕಾರಿ ಉಷ್ಣತೆಯನ್ನು ತಲುಪುವವರೆಗೆ ಹಚ್ಚಿ. ಇಂಜಿನ್ ಅನ್ನು ಚಲಾಯಿಸುವಾಗ ವಾರ್ಮ್ ಅಪ್ ಆಗಲು ಬಿಡಿ.

### ಆಕಸ್ಮಿಕವಾಗಿ ಅಕ್ಸಲರೇಶನ್ ಹಾಕುವುದು ತಪ್ಪಿಸಿ

ನಿಲ್ದಾಣದಿಂದ ಸ್ಟಾರ್ಟ್ ಮಾಡುವಾಗ ಅಥವಾ ಚಲಾಯಿಸುವಾಗ ಆಕಸ್ಮಿಕ ಅಕ್ಸಲರೇಶನ್ ಅನಗತ್ಯ ಫ್ಯೂಯೆಲ್ ಬಳಕೆಯಾಗುತ್ತದೆ ಮತ್ತು ಇಂಜಿನ್ ಬಾಳಿಕೆ ಕಡಿಮೆಯಾಗುತ್ತದೆ. ನಿಧಾನವಾಗಿ ಸ್ಟಾರ್ಟ್ ಮಾಡಿ.

### ಅನಗತ್ಯ ನಿಲ್ದಾನಗಳನ್ನು ತಪ್ಪಿಸಿ


ಅನಗತ್ಯ ಡಿಸಲರೇಶನ್ ಮತ್ತು ನಿಲ್ದಾಣವನ್ನು ತಪ್ಪಿಸಿ. ನಿಧಾನ, ನಿರಂತರ ವೇಗವನ್ನು ಸಾಧ್ಯವಾದಷ್ಟು ನಿರ್ವಹಿಸಲು ಪ್ರಯತ್ನಿಸಿ. ನಿಧಾನಗೊಳಿಸುವುದು ಮತ್ತು ನಂತರ ಮತ್ತೊಮ್ಮೆ ವೇಗಗೊಳಿಸುವುದು ಹೆಚ್ಚು ಫ್ಯೂಯೆಲ್ ಬಳಸುತ್ತದೆ.

### ನಿರ್ದಿಷ್ಟ ಮಿತಿಯ ವೇಗದಲ್ಲಿ ಮುಂದುವರಿಯಿರಿ.

ರಸ್ತೆ ಮತ್ತು ಸಾರಿಗೆ ಸ್ಥಿತಿ ಅವಕಾಶ ನೀಡಿದಂತೆ ವೇಗವನ್ನು ನಿರ್ದಿಷ್ಟ ಮಿತಿಯಲ್ಲಿರಿಸಿ.

ಏರ್ ಕ್ಲೀನರ್ ಸ್ವಚ್ಛವಾಗಿಡಿ

ಉದಾಹರಣೆ



60A183S

ಏರ್ ಕ್ಲೀನರ್ ನಲ್ಲಿ ಧೂಳು ತುಂಬಿದಲ್ಲಿ, ಹೆಚ್ಚು ಒಳಹೀರುವ ನಿರೋಧಕತೆ ಇರುತ್ತದೆ. ಇದರಿಂದಾಗಿ ಪವರ್ ಔಟ್ಪುಟ್ ಕಡಿಮೆಯಾಗುತ್ತದೆ ಮತ್ತು ಫ್ಯೂಯೆಲ್ ಬಳಕೆ ಏರುತ್ತದೆ.

**ಕನಿಷ್ಠ ತೂಕವನ್ನು ಕಾದಿರಿಸಿ**

ಲೋಡ್ ಹೆಚ್ಚಾಗಿದ್ದಷ್ಟು, ವಾಹನವು ಹೆಚ್ಚು ಫ್ಯೂಯೆಲ್ ಬಳಸುತ್ತದೆ. ಯಾವುದೇ ಲಗೇಜ್ ಅಥವಾ ಕಾರ್ಗೋ ಅನಗತ್ಯ ಎನಿಸಿದಲ್ಲಿ ಅದನ್ನು ಹೊರತೆಗೆಯಿರಿ.

**ಟೈರ್ ಪ್ರೆಶರ್ ಸರಿಯಾಗಿಡಿ**

ಟೈರ್ ಗಳನ್ನು ಸರಿಯಾಗಿ ಉಬ್ಬಿಸದೆ ಇದ್ದಲ್ಲಿ ಟೈರ್ ಗಳ ಚಾಲನೆಯ ನಿರೋಧಕ ಶಕ್ತಿ ಹೆಚ್ಚಾಗುವ ಕಾರಣದಿಂದ ಫ್ಯೂಯೆಲ್ ನಷ್ಟವಾಗಲಿದೆ. ವಾಹನದ ಟೈರ್ ಗಳನ್ನು ಡ್ರೈವರ್ಸ್ ಡೋರ್ ಲಾಕ್ ಪಿಲ್ಲರ್ ನ ಲೇಬಲ್ ನಲ್ಲಿ ತೋರಿಸಿರುವ ಸರಿಯಾದ ಪ್ರೆಶರ್ ಗೆ ಉಬ್ಬಿಸಿ.

## ಹೆದ್ದಾರಿ ಚಾಲನೆ


ಹೆದ್ದಾರಿಯಲ್ಲಿ ವೇಗದಿಂದ ಚಾಲನೆ ಮಾಡುವಾಗ ಈ ಕೆಳಗಿನ ವಿಷಯಗಳತ್ತ ಗಮನಹರಿಸಿ:

- ವಾಹನದ ವೇಗದ ಜೊತೆಗೆ ನಿಲುಗಡೆ ಅಂತರವೂ ಪ್ರಗತಿಯುತವಾಗಿ ಏರುತ್ತದೆ. ನಿಲುಗಡೆಯ ಪಾಯಿಂಟಿಗೆ ಮುಂದೆ ನಿಲ್ದಾಣದ ಅಂತರ ಸಾಕಷ್ಟಿರುವಂತೆ ಬ್ರೇಕ್ ಗಳನ್ನು ಹಾಕಿ.
- ಮಳೆಗಾಲದಲ್ಲಿ ಹೈಡ್ರೋಪ್ಲಾನಿಂಗ್ ಆಗಬಹುದು. ಹೈಡ್ರೋಪ್ಲಾನಿಂಗ್ ಎನ್ನುವುದು ರಸ್ತೆ ಮೇಲ್ಮೈ ಮತ್ತು ವಾಹನದ ಟೈರ್ ಗಳ ನಡುವೆ ನೀರಿನ ಅಂಶಗಳು ಬರುವ ಕಾರಣ ನೇರ ಸಂಪರ್ಕವು ನಷ್ಟವಾಗುವುದು. ಹೈಡ್ರೋಪ್ಲಾನಿಂಗ್ ಆದಾಗ ವಾಹನದ ಸ್ಟೀರಿಂಗ್ ಅಥವಾ ಬ್ರೇಕಿಂಗ್ ಕಷ್ಟವಾಗಬಹುದು ಮತ್ತು ನಿಯಂತ್ರಣ ಕಳೆದುಕೊಳ್ಳುವ ಸಾಧ್ಯತೆಯೂ ಇದೆ. ರಸ್ತೆಯ ಹೊರಮೈ ತೇವವಾಗಿದ್ದಾಗ ವೇಗವನ್ನು ಕಡಿಮೆಯಿಡಿ.
- ಅಧಿಕ ವೇಗಗಳಲ್ಲಿ, ವಾಹನವು ವಾತಾವರಣದ ಗಾಳಿಯ ಹೊಡೆತದ ಪರಿಣಾಮಕ್ಕೆ ಸಿಲುಕಬಹುದು. ಹೀಗಾಗಿ, ವೇಗ ಕಡಿಮೆಗೊಳಿಸಿ ಮತ್ತು ಗುಡ್ಡದ ಬಳಿ ಸಾಗುವಾಗ ಅಥವಾ ದೊಡ್ಡ ವಾಹನಗಳು ಓವರ್ ಟೇಕ್ ಮಾಡುವಾಗ ಇತ್ಯಾದಿ ಸಂದರ್ಭಗಳಲ್ಲಿ ಟನಲ್ ಗಳ ಹೊರಗಡೆ ನಡೆಯಬಹುದಾದ ಅನಿರೀಕ್ಷಿತ ಬಫರಿಂಗ್ ಗೆ ಸಿದ್ಧವಾಗಿರಿ.

## ಗುಡ್ಡಗಳ ಮೇಲೆ ಚಾಲನೆ ಮಾಡುವುದು

- ಕಡಿದಾದ ಗುಡ್ಡಗಳನ್ನು ಏರುವಾಗ, ವಾಹನವು ನಿಧಾನಗೊಳ್ಳಬಹುದು ಮತ್ತು ಶಕ್ತಿ ಇಲ್ಲದ ಸ್ಥಿತಿ ಎದುರಾಗಬಹುದು. ಇದು ನಡೆದಲ್ಲಿ, ನೀವು ಕೆಳಗಿನ ಗೇರ್ ಗೆ ಬದಲಾಗಬೇಕು. ಹಾಗೆ ಇಂಜಿನ್ ಮತ್ತ ತನ್ನ ಸಾಮಾನ್ಯ ಪವರ್ ರೇಂಜ್ ನಲ್ಲಿ ಚಾಲನೆಗೊಳ್ಳಲು ಆರಂಭವಾಗುತ್ತದೆ. ವಾಹನವು ಮೊಮೆಂಟಮ್ ಕಳೆದುಕೊಳ್ಳುವುದರಿಂದ ರಕ್ಷಿಸಲು ತ್ವರಿತವಾಗಿ ಬದಲಿಸಿ.
- ಗುಡ್ಡದ ಇಳಿಜಾರಿನಲ್ಲಿ ಚಾಲನೆ ಮಾಡುವಾಗ ಇಂಜಿನ್ ಅನ್ನು ಕೆಳಗಿನ ಗೇರ್ ಗೆ ಬದಲಿಸುವ ಮೂಲಕ ಬ್ರೇಕಿಂಗ್ ಬಳಸಬೇಕು.

ಉದಾಹರಣೆ




77PH003

**⚠ ಎಚ್ಚರಿಕೆ**

**ಇಳಿಜಾರಿನಲ್ಲಿ ಅಥವಾ ದೀರ್ಘಗುಡ್ಡದಲ್ಲಿ ಬ್ರೇಕ್ ಪೆಡಲನ್ನು ಒತ್ತಿ ಬಹಳ ಹೊತ್ತು ಇರಬೇಡಿ ಅಥವಾ ಆಗಾಗ್ಗೆ ಒತ್ತಬೇಡಿ. ಇದರಿಂದ ಬ್ರೇಕ್ ಹೆಚ್ಚು ಬಿಸಿಯಾಗಿ ಬ್ರೇಕಿಂಗ್ ಪರಿಣಾಮ ಕಡಿಮೆಯಾಗಬಹುದು. ಈ ಮುಂಜಾಗ್ರತೆ ತೆಗೆದುಕೊಳ್ಳದೆ ಇದ್ದಲ್ಲಿ ವಾಹನ ನಿಯಂತ್ರಣವನ್ನು ನೀವು ಕಳೆದುಕೊಳ್ಳಬಹುದು.**


**ಗುಡ್ಡದ ಮೇಲೆ / ಗ್ರೇಡಿಯಂಟ್ ನಲ್ಲಿ ಚಲಿಸುವಾಗ, ಸ್ಥಿರವಾದ ಸ್ಥಿತಿಯಿಂದ**

- ಪಾರ್ಕಿಂಗ್ ಬ್ರೇಕ್ ಅನ್ನು ದೃಢವಾಗಿ ಹಾಕಿ. ಹಾಗೆ ವಾಹನ ಹಿಂದಕ್ಕೆ ಉರುಳದಂತೆ ಗಮನಹರಿಸಿ.
- ಕ್ಲಚ್ ಪೆಡಲ್ ಅನ್ನು ಒತ್ತಿ ಮತ್ತು ಗೇರ್ ಶಿಫ್ಟ್ ಲಿವರ್ ಅನ್ನು 1ನೇ ಆಯ್ಕೆ ಸ್ಥಿತಿಗೆ ತನ್ನಿ.
- ಕ್ಲಚ್ ಜಾರಿಸಬೇಡಿ.
- ಸ್ಟಾರ್ಟ್ ಮಾಡಲು ಸಿದ್ಧರಾದಾಗ ಅಕ್ಸಲರೇಟರ್ ಪೆಡಲ್ ಒತ್ತಿ ಮತ್ತು ನಿಧಾನವಾಗಿ ಕ್ಲಚ್ ಪೆಡಲ್ ಅನ್ನು ಜೊತೆಯಾಗಿ ರಿಲೀಸ್ ಮಾಡಿ. ವಾಹನವು ಚಲಿಸಲು ಆರಂಭಿಸಿದಾಗ ನಿಧಾನವಾಗಿ ಪಾರ್ಕಿಂಗ್ ಬ್ರೇಕ್ ರಿಲೀಸ್ ಮಾಡಿ.

**ಸೂಚನೆ**

**ಗುಡ್ಡದಲ್ಲಿ ಇಳಿಯುವಾಗ, ಇಗ್ನಿಷನ್ ಕೀಯನ್ನು "LOCK" (ಲಾಕ್) ಪೊಸಿಷನ್ ಗೆ ತಿರುಗಿಸಬೇಡಿ. ಹೊಗೆ ನಿಯಂತ್ರಣ ವ್ಯವಸ್ಥೆ ಹಾನಿಯಾಗಬಹುದು.**

## ಜಾರುವ ರಸ್ತೆಗಳಲ್ಲಿ ಚಾಲನೆ



ಉದಾಹರಣೆ

82DY06

ಟೈರ್ ಗಳು ಬ್ರೇಕಿಂಗ್ ಸಮಯದಲ್ಲಿ ಜಾರುವ ಸಾಧ್ಯತೆ ಇರುವ ಕಾರಣ ತೇವಾಂಶವಿರುವ ಸ್ಥಿತಿಯಲ್ಲಿ ನೀವು ಒಣ ರಸ್ತೆಗಳಿಗಿಂತ ಕಡಿಮೆ ವೇಗದಲ್ಲಿ ಚಲಾಯಿಸಬೇಕು. ಹಿಮವಿರುವ, ಜಾರುವ ಅಥವಾ ಮಣ್ಣು ತುಂಬಿದ ರಸ್ತೆಗಳಲ್ಲಿ ಚಾಲನೆ ಮಾಡುವಾಗ ನಿಮ್ಮ ವೇಗವನ್ನು ಕಡಿತಗೊಳಿಸಿ ಮತ್ತು ಆಕಸ್ಮಿಕವಾಗಿ ವೇಗ ಏರಸುವುದು, ತಡೆ ತಡೆದು ಬ್ರೇಕಿಂಗ್ ಅಥವಾ ತೀಕ್ಷ್ಣ ಸ್ಟೀರಿಂಗ್ ಚಲನೆಯನ್ನು ಮಾಡಬೇಡಿ.

### ನಿಮ್ಮ ವಾಹನ ಸಿಕ್ಕಿಹಾಕಿಕೊಂಡಾಗ

ವಾಹನವು ಹಿಮ, ಮಣ್ಣು ಅಥವಾ ಮರಳಲ್ಲಿ ಸಿಕ್ಕಿ ಹಾಕಿಕೊಂಡರೆ ಕೆಳಗಿನ ಸೂಚನೆಗಳನ್ನು ಪಾಲಿಸಿ:

1) ಟ್ರಾನ್ಸ್ ಮಿಶನ್ ಅನ್ನು ಫಸ್ಟ್ ಗೇರ್ ಮತ್ತು ರಿವರ್ಸ್ ನಡುವೆ ಹಿಂದಕ್ಕೆ ಮತ್ತು ಮುಂದಕ್ಕೆ ಬದಲಿಸಿ. ಇದು ರಾಕಿಂಗ್ ಚಲನೆಯನ್ನು ಸೃಷ್ಟಿಸಿ ನಿಮ್ಮ ವಾಹನವನ್ನು ಸ್ವತಂತ್ರಗೊಳಿಸಲು ಸಾಕಷ್ಟು ಚಲನೆಯನ್ನು ಕೊಡಬಹುದು. ಆಕ್ಸಲರೇಟರ್ ಮೇಲೆ ಮೆಲ್ಲಗೆ ಒತ್ತಿ ವೀಲ್ ಅನ್ನು ಕನಿಷ್ಠ ವೀಲ್ ಆರ್ ಪಿಎಂನಲ್ಲಿ ತಿರುಗುವಂತೆ ಮಾಡಿ. ಬದಲಿಸುವಾಗ ನಿಮ್ಮ ಪಾದವನ್ನು ಅಕ್ಸಲರೇಟರ್ ನಿಂದ ಕಳಚಿ.
   ಇಂಜಿನ್ ಅನ್ನು ವೇಗವಾಗಿ ಓಡಿಸಬೇಡಿ. ಮಿತಿ ಮೀರಿದ ವೀಲ್ ಸ್ಪಿನ್ ಟೈರ್ ಗಳನ್ನು ಆಳವಾಗಿ ಒಳ ನೂಕುತ್ತದೆ ಮತ್ತು ವಾಹನವನ್ನು ಸ್ವತಂತ್ರಗೊಳಿಸುವುದು ಕಷ್ಟವಾಗುತ್ತದೆ.
2) ನಿಮ್ಮ ವಾಹನವು ಕೆಲವು ನಿಮಿಷಗಳ ರಾಕಿಂಗ್ ನಂತರ ಸಿಕ್ಕಿ ಹಾಕಿಕೊಂಡಲ್ಲಿ, ನಿಮ್ಮ ವಾಹನವನ್ನು ಹೊರಗೆ ತೆಗೆಯಲು ಮತ್ತೊಂದು ವಾಹನವನ್ನು ಪಡೆಯಿರಿ.

**⚠ ಎಚ್ಚರಿಕೆ**

**ನೀವು ರಾಕಿಂಗ್ ಮಾಡುತ್ತಿರುವಾಗ ಇನ್ಯಾರಿಗೂ ವಾಹನದ ಬಳಿ ನಿಲ್ಲಲು ಬಿಡಬೇಡಿ, ಮತ್ತು ವೀಲ್ ಗಳನ್ನು ಸೂಚಿಸಿರುವ 40 ಕಿಮೀ/ಗಂಟೆ ವೇಗಕ್ಕಿಮತ ಹೆಚ್ಚು ವೇಗವಾಗಿ ಸ್ಪೀಡೋ ಮೀಟರ್ ಮೇಲೆ ತಿರುಗಿಸಬೇಡಿ. ವೀಲ್ ಗಳನ್ನು ವೇಗವಾಗಿ ತಿರುಗಿಸುವುದರಿಂದ ಖಾಸಗಿ ಗಾಯ ಮತ್ತು / ಅಥವಾ ವಾಹನಕ್ಕೆ ಹಾನಿಯಾಗಬಹುದು.**

**ಸೂಚನೆ**


**ವಾಹನವನ್ನು ಕೆಲವು ನಿಮಿಷಗಳಿಗೆ ಹೆಚ್ಚು ಕಾಲ ರಾಕಿಂಗ್ ಮಾಡಬೇಡಿ. ಸುದೀರ್ಘ ರಾಕಿಂಗ್ ಮಾಡುವುದು ಇಂಜಿನ್ ಅತಿಯಾಗಿ ಬಿಸಿಯಾಗುವುದು ಅಥವಾ ಟ್ರಾನ್ಸ್ ಮಿಶನ್ ಹಾನಿಗೆ ಕಾರಣವಾಗಬಹುದು.**

## ತೇವವಿರುವ ರಸ್ತೆಗಳಲ್ಲಿ ಚಾಲನೆ ಮಾಡುವುದು

**ಸೂಚನೆ**

- **ತೇವ ಇರುವ ರಸ್ತೆಗಳಲ್ಲಿ ಚಲಾಯಿಸುವಾಗ, ರಸ್ತೆಯಲ್ಲಿ ಅತಿಯಾಗಿ ನಿಂತಿರುವ ನೀರಿನ ಮೇಲೆ ಚಾಲನೆ ಮಾಡಬೇಡಿ. ಇಂಜಿನ್ ಕಂಪಾರ್ಟ್ ಮೆಂಟ್ ಮೇಲೆ ಅತಿಯಾಗಿ ನೀರು ಪ್ರವೇಶಿಸಿದಲ್ಲಿ ಇಂಜಿನ್ ಮತ್ತು ಇಲೆಕ್ಟ್ರಿಕಲ್ ಭಾಗಗಳಿಗೆ ಹಾನಿಯಾಗಬಹುದು.**
- **ಆಳವಾದ ನೀರಿನಲ್ಲಿ ಸಿಕ್ಕಿಹಾಕಿಕೊಂಡಲ್ಲಿ, ನೀರಿನ ಮಟ್ಟ ಇಳಿಯುವವರೆಗೂ ನಿಲ್ಲಿಸಬೇಡಿ.**
- **ನೀರು ಆವಿಯಾಗದ ಕಾರಣ, ಇಂಜಿನ್ ಒಳಗೆ ನೀರು ನಿಲ್ಲುವುದು ಇಂಜಿನ್ ಗೆ ಹಾನಿಕರ.**

ಉದಾಹರಣೆ



82DY07

**⚠ ಎಚ್ಚರಿಕೆ**

ಈ ವಿಭಾಗದಲ್ಲಿ ಚಾಲನಾ ಸಲಹೆಗಳನ್ನು ಪಾಲಿಸುವ ಜೊತೆಗೆ, ಈ ಕೆಳಗಿನ ಮುಂಜಾಗ್ರತೆಗಳನ್ನು ಗಮನಿಸುವುದೂ ಅಗತ್ಯ.

- ನಿಮ್ಮ ಟೈರ್ ಗಳು ಉತ್ತಮ ಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿ ಮತ್ತು ಯಾವಾಗಲೂ ಸೂಚಿತ ಟೈರ್ ಒತ್ತಡವನ್ನು ನಿಭಾಯಿಸಿ. "ತಪಾಸಣೆ ಮತ್ತು ನಿರ್ವಹಣೆ" ವಿಭಾಗದಲ್ಲಿ ವಿವರಗಳಿಗಾಗಿ "ಟೈರ್ ಗಳು" ಓದಿ.
- ಮಾರುತಿ ಸುಜುಕಿ ನಿರ್ದೇಶನ ನೀಡಿರುವುದು ಹೊರತಾದ ಟೈರ್ ಗಳನ್ನು ಬಳಸಬೇಡಿ. ಫ್ರಂಟ್ ಮತ್ತು ರೇರ್ ವೀಲ್ ಗಳಲ್ಲಿ ವಿಭಿನ್ನ ಗಾತ್ರ ಮತ್ತು ವಿಧದ ಟೈರ್ ಗಳನ್ನು ಯಾವತ್ತೂ ಬಳಸಬೇಡಿ. ನಿರ್ದಿಷ್ಟ ಟೈರ್ ಗಳಿಗೆ ಸಂಬಂಧಿಸಿದ ಮಾಹಿತಿಗಳಿಗೆ, ಚಾಲಕರ ಡೋರ್ ಲಾಕ್ ಪಿಲ್ಲರ್ ಮೇಲಿರುವ ಟೈರ್ ಮಾಹಿತಿ ಲೇಬಲ್ ಅನ್ನು ಓದಿ.
- ವಾಹನವನ್ನು ಮೇಲೆತ್ತಲು (ಜಾಕಪ್) ಅತಿಯಾದ ಗಾತ್ರದ ಟೈರ್ ಗಳು ಅಥವಾ ವಿಶೇಷ ಶಾಕ್ ಅಬ್ಸಾರ್ಬರ್ ಗಳು ಮತ್ತು ಸ್ಪ್ರಿಂಗ್ ಗಳನ್ನು ಯಾವತ್ತೂ ಬಳಸಬೇಡಿ. ಇದು ನಿಭಾಯಿಸುವ ಅಂಶಗಳನ್ನು ಬದಲಿಸಲಿದೆ. ಅತೀ ಗಾತ್ರದ ಟೈರ್ ಗಳಿಂದಾಗಿ ಏರುತಗ್ಗುಗಳಲ್ಲಿ ವಾಹನದ ಬಾಡಿ ಒರೆಸಿ ಹೋಗಿ ವಾಹನಕ್ಕೆ ಹಾನಿ ಅಥವಾ ಟೈರ್ ವೈಫಲ್ಯಕ್ಕೆ ಕಾರಣವಾಗಬಹುದು.
- ನೀರಿನ ಮೂಲಕ ಚಾಲನೆ ಮಾಡಿದ ಮೇಲೆ, ಅವುಗಳು ತಮ್ಮ ಸಾಮಾನ್ಯ ಕಾರ್ಯವೈಖರಿಯನ್ನು ಉಳಿಸಿಕೊಂಡಿವೆಯೇ ಎಂದು ನಿಧಾನ ವೇಗದಲ್ಲಿ ಚಾಲನೆ ಮಾಡಿ ಬ್ರೇಕ್ ಗಳನ್ನು ಪರೀಕ್ಷಿಸಿ. ಅವುಗಳು ಸಾಮಾನ್ಯಕ್ಕಿಂತ ಕಡಿಮೆ ಕಾರ್ಯವೈಖರಿ ತೋರಿಸಿದಲ್ಲಿ, ನಿಧಾನವಾಗಿ ಚಾಲನೆ ಮಾಡುತ್ತಾ, ಬ್ರೇಕ್ ಮರಳಿ ತಮ್ಮ ಕಾರ್ಯ ವೈಖರಿ ಪಡೆಯುವವರೆಗೂ ಪದೇ ಪದೇ ಬ್ರೇಕ್ ಗಳನ್ನು ಹಾಕಿ ಅವುಗಳನ್ನು ಒಣಗಿಸಿ.

## ಸುರಕ್ಷಿತ ಚಾಲನೆಗಾಗಿ ಮಾಡು ಮತ್ತು ಮಾಡಬೇಡಿ


ನಿಮ್ಮ ವಾಹನವನ್ನು ನಿಭಾಯಿಸುವಲ್ಲಿ ಜಾಗರೂಕತೆವಹಿಸಿ. ನಿಮ್ಮ ಸುರಕ್ಷೆ ಮಾತ್ರವಲ್ಲ, ರಸ್ತೆಯಲ್ಲಿ ಸಾಗುವ ಇತರರ ಸುರಕ್ಷೆ ಕಡೆಗೂ ಗಮನಕೊಡಿ ಮತ್ತು ಆ ಮೂಲಕ ಉತ್ತಮ ಮತ್ತು ಅತೀ ಹಿತಕರವಾದ ಚಾಲನಾ ಅನುಭವವನ್ನು ಪಡೆದುಕೊಳ್ಳಿ.

ಈ ಕೆಳಗಿನವು ಸುರಕ್ಷಿತ ಚಾಲನೆಗಾಗಿ ಮೂಲಕ ನಿಯಮಗಳು ವಿಷಯಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಅವುಗಳನ್ನು ಜಾಗರೂಕವಾಗಿ ಓದಿ. ಆ ಮೂಲಕ ನೀವು ನಿಮ್ಮ ವಾಹನದಲ್ಲಿ ಸುರಕ್ಷಿತವಾಗಿ ಮತ್ತು ಸಂತೃಪ್ತ ಚಾಲನೆಯನ್ನು ಮಾಡಬಹುದು.

**ಆರಂಭಿಸುವುದು**

1) ಡ್ರೈವರ್ ರ ಸೀಟ್ ಅನ್ನು ಸೂಕ್ತ ಚಾಲನಾ ಭಂಗಿಗಾಗಿ ಹೊಂದಿಸಿ.
2) ಸಾಧ್ಯವಾದ ಅತ್ಯುತ್ತಮ ರೇರ್ ವ್ಯೂ ಪಡೆಯಲು ರೇರ್ ವ್ಯೂ ಮಿರರ್ ಅನ್ನು ಹೊಂದಿಸಿ.

**ಉದಾಹರಣೆ**





77PM04002

3) ಚಲಿಸುವ ಮೊದಲು, ನಿಮ್ಮ ವಾಹನದ ಸುತ್ತಲೂ ಗಮನಿಸಿ ಮತ್ತು ಸುರಕ್ಷೆಯನ್ನು ದೃಢೀಕರಿಸಿ.
4) ತಕ್ಷಣವೇ ವೇಗವನ್ನು ಏರಿಸಬೇಡಿ. ಅದು ಅಪಾಯಕಾರಿ ಮತ್ತು ಫ್ಯೂಯೆಲ್ ನಷ್ಟವಾಗಬಹುದು.

**ಸಾಮಾನ್ಯ ಚಾಲನೆ**

1) ಸ್ಟಾಪ್ ಲೈಟ್ ಅಥವಾ ಸ್ಟಾಪ್ ಸೈನ್ ಗೆ ಮೊದಲು ನಿಲ್ಲಿಸಲು ಖಚಿತಪಡಿಸಿ. ಯಾವುದೇ ಸಾರಿಗೆ ಲೈಟ್ ಗಳು ಅಥವಾ ಚಿಹ್ನೆಗಳು ಇಲ್ಲದೆ ಇದ್ದಾಗ ತಡೆಯೊಂದರ ಕಡೆಗೆ ಸಾಗುವಾಗ, ಸುರಕ್ಷಿತವಾಗಿ ನಿಧಾನವಾಗಿ ಚಲಿಸಿ.
2) ಮುಂದೆ ಇರುವ ವಾಹನವು ಆಕಸ್ಮಿಕವಾಗಿ ನಿಂತಲ್ಲಿ ಹಿಂಬದಿಯಲ್ಲಿ ಢಿಕ್ಕಿಯನ್ನು ತಡೆಯಲು ಯಾವಾಗಲೂ ಇತರ ವಾಹನಗಳನ್ನುಸುರಕ್ಷಿತವಾದ ಅಂತರದಲ್ಲಿ ಹಿಂಬಾಲಿಸಿ.
3) ಟರ್ನ್ ಮಾಡುವ ಮೊದಲು ಅಥವಾ ಲೇನ್ ಬದಲಿಸುವಾಗ ಟರ್ನ್ ಸಿಗ್ನಲ್ ಅನ್ನು ಕನಿಷ್ಠ 30 ಮೀಟರ್ ಗಳಿಗೆ ಮೊದಲು ಆನ್ ಮಾಡಿ. ಆ ಮೂಲಕ ಢಿಕ್ಕಿಯಾಗದಂತೆ ಗಮನಹರಿಸಿ.
4) ಮೂಲೆಯೊಂದನ್ನು ಪ್ರವೇಶಿಸುವ ಮೊದಲು ಸುರಕ್ಷಿತ ವೇಗಕ್ಕೆ ಇಳಿಸಿ. ಮೂಲೆಯಲ್ಲಿ ತಿರುಗಿಸುವಾಗ ಬ್ರೇಕ್ ಗಳನ್ನು ಹಾಕಬೇಡಿ ಅಥವಾ ಜಾರುವ ಸಾಧ್ಯತೆಯಿದೆ.
5) ಬೇರೆ ವಾಹನಗಳನ್ನು ಓವರ್ ಟೇಕ್ ಮಾಡುವಾಗ ಬರುತ್ತಿರುವ ವಾಹನಗಳನ್ನು ಗಮನಿಸಿ ಮತ್ತು ಜಾಗರೂಕವಾಗಿ ಸುರಕ್ಷಿತವಾಗಿ ಚಲಾಯಿಸಿ.
6) ಜಿಗ್ ಜಾಗ್ ಚಾಲನೆಗೆ ಪ್ರಯತ್ನಿಸಬೇಡಿ. ಅದು ವಾಹನದ ಮೇಲೆ ನಿಮ್ಮ ನಿಯಂತ್ರಣವನ್ನು ಕಳೆದುಕೊಳ್ಳುವಂತೆ ಮಾಡಬಹುದು ಮತ್ತು ಅಪಘಾತಕ್ಕೆ ಕಾರಣವಾಗಬಹುದು.
7) ಒಟ್ಟಾರೆಯಾಗಿ ವಾಹನ ಚಲಾಯಿಸಬೇಡಿ. ನಿರಂತರವಾದ ವೇಗವನ್ನು ನಿಭಾಯಿಸಿಕೊಂಡು ರಸ್ತೆ ಸ್ಥಿತಿಗಳಿಗೆ ಸೂಕ್ತವೆನಿಸುವಂತೆ ಸುರಕ್ಷಿತ ವೇಗದಲ್ಲಿ ಚಾಲನೆಗೆ ಪ್ರಯತ್ನಿಸಿ.
8) ವೇಗ ಅಧಿಕವಾಗಿದ್ದಷ್ಟು, ಚಾಲಕನ ದೃಷ್ಟಿಯ ರೇಂಜ್ ಕಡಿಮೆಯಾಗಿಬಿಡುತ್ತದೆ. ಅಂತಹ ಸ್ಥಿತಿಯಲ್ಲಿ, ಯಾವುದೇ ಅಪಾಯವನ್ನು ಊಹಿಸುವುದು ಕಷ್ಟ ಮತ್ತು ಚಾಲಕನಿಗೆ ಸುಸ್ತಿನ ಅನುಭವವಾಗಬಹುದು.

ಉದಾಹರಣೆ




77PM04001

9) ಅಧಿಕ ವೇಗದ ಚಾಲನೆಯಲ್ಲಿ ತೀಕ್ಷ್ಣವಾಗಿ ನಿಭಾಯಿಸಲು ಪ್ರಯತ್ನಿಸಬೇಡಿ. ವಾಹನದ ಮೇಲೆ ನಿಮ್ಮ ನಿಯಂತ್ರಣವನ್ನು ಕಳೆದುಕೊಳ್ಳಬಹುದು.
10) ಅಧಿಕ ವೇಗದಲ್ಲಿ ಚಾಲನೆ ಮಾಡುವಾಗ ಓವರ್ ಟೇಕ್ ಮಾಡುವಾಗ ಅಥವಾ ಲೇನ್ ಗಳನ್ನು ಬದಲಿಸುವಾಗ, ವಾಹನದಿಂದ ವಾಹನದ ನಡುವೆ ಸಾಕಷ್ಟು ಅಂತರವನ್ನು ಇಡಿ.

**ಬ್ರೇಕಿಂಗ್**

1) ನಿಮ್ಮ ವಾಹನವನ್ನು ಪಾರ್ಕ್ ಮಾಡುವಾಗ ಪಾರ್ಕಿಂಗ್ ಬ್ರೇಕ್ ಬಳಸಿ ಮತ್ತು ಗೇರ್ ಶಿಫ್ಟ್ ಲಿವರ್ ಅನ್ನು ಸುರಕ್ಷೆಗಾಗಿ ಫಸ್ಟ್ ಗೇರ್ ಅಥವಾ ರಿವರ್ಸ್ ಗೇರ್ ನಲ್ಲಿ ಬದಲಿಸಿ.
2) ತಪ್ಪಿಸಲು ಸಾಧ್ಯವೇ ಇಲ್ಲವಾದಲ್ಲಿ ಹೊರತುಪಡಿಸಿ ಹ್ಯಾಂಡ್ ಬ್ರೇಕಿಂಗ್ ಅನ್ನು ಬಳಸಬೇಡಿ. ಅದು ವಾಹನ ಸ್ಕಿಡ್ ಆಗುವಂತೆ ಮಾಡುತ್ತದೆ ಮತ್ತು ಢಿಕ್ಕಿಯಾಗುವ ಸಾಧ್ಯತೆಯೂ ಇದೆ. ಟೈರ್ ಗಳು ಸವೆದು ಹೋಗಿರುವಾಗ ಹೆಚ್ಚು ಸ್ಕಿಡ್ ಆಗುವ ಕಾರಣ ಇನ್ನೂ ಹೆಚ್ಚು ಅಪಾಯಕಾರಿ.

ಫೂಟ್ ಬ್ರೇಕ್ ಅನ್ನು ಮೂರು ಹಂತಗಳಲ್ಲಿ ಬಳಸಿ.

1. ನಿಮ್ಮ ಹಿಂದೆ ಇರುವ ವಾಹನವನ್ನು ಎಚ್ಚರಿಸಿ
2. ನಿಧಾನವಾಗಿ ಬ್ರೇಕ್ ಗಳನ್ನು ಹಾಕಿ.
3. ವಾಹನವನ್ನು ನಿಲ್ಲಿಸಿ.

3) ಇಳಿಜಾರಿನಲ್ಲಿ ಚಾಲನೆ ಮಾಡುವಾಗ, ಬ್ರೇಕ್ ಬಳಸದೆ ಇರಲು ಪ್ರಯತ್ನಿಸಿ. ಆದರೆ ಇಂಜಿನ್ ಬ್ರೇಕ್ ಅನ್ನು ಪರಿಣಾಮಕಾರಿಯಾಗಿ ಬಳಸಿ. ಫೂಟ್ ಬ್ರೇಕ್ ಅನ್ನು ಹೆಚ್ಚು ಬಳಸುವುದು ಬ್ರೇಕ್ ನ ಕಾರ್ಯವೈಖರಿ ಕಡಿಮೆಯಾಗಲು ಕಾರಣವಾಗಬಹುದು.

**ದೀರ್ಘ ಅಂತರದ ಚಾಲನೆ**

1) ಪ್ರಯಾಣವನ್ನು ಆರಂಭಿಸುವ ಮೊದಲು ಸುರಕ್ಷಾ ಪರಿಶೀಲನೆಗಳನ್ನು ನಡೆಸಿರುವುದು ಖಚಿತಪಡಿಸಿ.
2) ಕಾಲ ಕಾಲಕ್ಕೆ ಸಾಕಷ್ಟು ವಿಶ್ರಾಂತಿ ಪಡೆದುಕೊಂಡು ನಿದ್ರಾನುಭವ ಅಥವಾ ಸುಸ್ತಿನಿಂದ ಆಗಬಹುದಾದ ಅಪಘಾತಗಳನ್ನು ತಪ್ಪಿಸಿ.

**ರಾತ್ರಿ ಸಮಯದ ಚಾಲನೆ**

1) ದಿನದ ವೇಳೆಗೆ ಹೋಲಿಸಿದಲ್ಲಿ ರಾತ್ರಿಯಲ್ಲಿ ಕಡಿಮೆ ವೇಗದಲ್ಲಿ ಚಲಾಯಿಸಿ. ಏಕೆಂದರೆ ರಾತ್ರಿಯಲ್ಲಿ ದೃಶ್ಯದ ರೇಂಜ್ ಸೀಮಿತವಾಗಿರುತ್ತದೆ.
2) ಇತರ ವಾಹನಗಳನ್ನು ರಾತ್ರಿಯಲ್ಲಿ ಓವರ್ ಟೇಕ್ ಮಾಡುವುದು ತಪ್ಪಿಸಿ. ಕತ್ತಲು ವೇಗದ ಮೇಲೆ ಪರಿಣಾಮ ಬೀರುತ್ತದೆ ಮತ್ತು ವಾಹನದಿಂದ ವಾಹನದ ನಡುವಿನ ನಿರ್ಧಾರ ತಪ್ಪಾಗಬಹುದು.
3) ಅನಿವಾರ್ಯವಾಗದ ಹೊರತಾಗಿ ಹೆಡ್ ಲೈಟ್ ಗಳನ್ನು ಹೈ ಬೀಮ್ ನಲ್ಲಿ ಬಳಸಬೇಡಿ. ಮುಂದೆ ಬರುತ್ತಿರುವ ಅಥವಾ ನಿಮ್ಮ ಮುಂದಿರುವ ವಾಹನದ ಚಾಲಕನಿಗೆ ಅದು ದೃಶ್ಯ ಗೋಚರಿಸದಂತೆ ಮಾಡಬಹುದು. ಅದರಿಂದ ಅಪಘಾತವಾಗಬಹುದು.
4) ವಿಂಡೋ ಗ್ಲಾಸ್ ಗಳನ್ನು ಯಾವಾಗಲೂ ಸ್ವಚ್ಛವಾಗಿಡಿ. ವಿಂಡ್ ಶೀಲ್ಡ್ ಗ್ಲಾಸ್ ಒಣಗಿದ್ದಾಗ ವಿಂಡ್ ಶೀಲ್ಡ್ ವೈಪರ್ ಚಲಾಯಿಸಬೇಡಿ. ಇಲ್ಲದಿದ್ದಲ್ಲಿ ವೈಪರ್ ಬ್ಲೇಡ್ ಮತ್ತು ಗ್ಲಾಸ್ ಗೆ ಹಾನಿಯಾಗಬಹುದು.

## ಸುರಕ್ಷೆಯ ಗೆರೆ

ಚಾಲನೆಯ ಸಂದರ್ಭದಲ್ಲಿ ಸ್ವತಃ ಸುರಕ್ಷಾ ಅಂತರವನ್ನು ಹಾಕಿಕೊಳ್ಳುವುದು ಮುಖ್ಯ. ಹಾಗೆ ಇತರ ಚಾಲಕರ ದೋಷಗಳು ಅಥವಾ ಅನಿರೀಕ್ಷಿತ ಚಾಲನೆಯನ್ನು ನಿಭಾಯಿಸಬಹುದು. ಅದಕ್ಕಾಗಿ ಈ ಕೆಳಗಿನ ವಿವರಗಳನ್ನು ಗಮನಿಸಿ.

- ಸುರಕ್ಷಿತ ವೇಗದಲ್ಲಿ ವಾಹನ ಚಲಾಯಿಸಿ
- ನಿಮ್ಮ ವಾಹನ ಮತ್ತು ಮುಂದಿನ ವಾಹನದ ನಡುವೆ ಸೂಕ್ತ ಅಂತರವನ್ನು ಕಾಯ್ದಿರಿಸಿ.
- ಇತರ ವಾಹನಗಳನ್ನು ಓವರ್ ಟೇಕ್ ಮಾಡಲು ಸ್ವತಃ ಒತ್ತಡ ತಂದಕೊಳ್ಳಬೇಡಿ.
- ತಕ್ಷಣವೇ ವೇಗ ಕೊಡುವುದು, ತೀಕ್ಷ್ಣವಾಗಿ ಸ್ಟೀರ್ ಮಾಡುವುದು ಅಥವಾ ಆಕಸ್ಮಿಕವಾಗಿ ನಿಲ್ಲಿಸುವುದು ಮಾಡಬೇಡಿ.
- ಚಾಲನಾ ವೇಳಾಪಟ್ಟಿಯ ನಡುವೆ ಸಾಕಷ್ಟು ಅಂತರಗಳನ್ನು ಕಾಯ್ದುಕೊಳ್ಳಿ.
- ಟ್ರಾಫಿಕ್ ನಿಯಮಗಳು ಮತ್ತು ನಿಯಂತ್ರಣಗಳನ್ನು ಗಮನಿಸಿ.

### ಮುಕ್ತಾಯ

ಪರಿಪೂರ್ಣ ಚಾಲಕ ಎಂದು ಇರುವುದಿಲ್ಲ. ಆದರೆ ಪ್ರತೀ ಚಾಲಕನೂ ಪರಿಪೂರ್ಣತೆ ಸಾಧಿಸಲು ಪ್ರಯತ್ನಿಸಬೇಕು. ಸುರಕ್ಷೆಯ ಪ್ರಜ್ಞೆ ನಿಮ್ಮ ಸುರಕ್ಷೆಯ ಖಾತರಿ ಕೊಡುವುದು ಮಾತ್ರವಲ್ಲ, ಇತರ ರಸ್ತೆ ಬಳಕೆದಾರರ ಸುರಕ್ಷೆಯನ್ನೂ ಕಾಪಾಡುತ್ತದೆ. ಅಲ್ಲದೆ ವಾಹನದ ಸವೆತ ಮತ್ತು ಮುರಿತವನ್ನು ಕಡಿಮೆಗೊಳಿಸುತ್ತದೆ, ವಾಹನದ ಬಾಳಿಕೆ ಹೆಚ್ಚಾಗುತ್ತದೆ, ಉತ್ತಮ ಫ್ಯೂಯೆಲ್ ಸಾಮರ್ಥ್ಯ ಕೊಡುತ್ತದೆ ಮತ್ತು ಹಿತಕರವಾದ ವಾಹನಾ ಅನುಭವದ ಖಾತರಿ ಕೊಡುತ್ತದೆ.
**ಪಟ್ಟಿ ಮಾಡಿರುವ ಮಾಡು ಮತ್ತು ಮಾಡಬೇಡಿಗಳನ್ನು ಪಾಲಿಸಿ. ಚಾಲನೆಯು ಹಿಂದೆಂದಿಗಿಂತಲೂ ಉತ್ತಮವಾಗಲಿದೆ.**

# ಇತರ ನಿಯಂತ್ರಣಗಳು ಮತ್ತು ಸಲಕರಣೆ


ಫ್ಯೂಯೆಲ್ ಫಿಲ್ಲರ್ ಕ್ಯಾಪ್ ........ 5-1
ಇಂಜಿನ್ ವಿಭಾಗ ........ 5-1
ಸನ್ ವೈಸರ್........ 5-3
ಇಂಟೀರಿಯರ್ ಲೈಟ್ ........ 5-4
ಅಕ್ಸೆಸರಿ ಸಾಕೆಟ್ ........ 5-4
ಗ್ಲವ್ ಬಾಕ್ಸ್ ........ 5-4
ಸಂಗ್ರಹ ಸ್ಥಳ ........ 5-5
ಏರ್ ವೆಂಟ್........ 5-5
ಫ್ರೇಮ್ ಹುಕ್........ 5-6
ಅಸಿಸ್ಟ್ ಗ್ರಿಪ್ ........ 5-6

## ಫ್ಯೂಯೆಲ್ ಫಿಲ್ಲರ್ ಕ್ಯಾಪ್

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್)**


ಸಿ.ಎನ್.ಜಿ. ಫಿಲ್ಲರ್ ವಾಲ್ವ್

**(ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ಗೆ)**





77PM05003

ವಾಹನದ ಬಲ ಬದಿಯಲ್ಲಿ ಸಿ.ಎನ್.ಜಿ. ಫಿಲ್ಲರ್ ವಾಲ್ವ್ ಇದೆ.




77PM05001

ಸಿ.ಎನ್.ಜಿ. ಫಿಲ್ಲರ್ ಡೋರ್ (1) ಅನ್ನು ಅನ್ಲಾಕ್ ಮಾಡಲು, ಕೀ ಹಾಕಿ ಮತ್ತು ಕೀ ಮೇಲ್ಭಾಗವನ್ನು ವಾಹನದ ಮುಂಭಾಗದ ಕಡೆಗೆ ತಿರುಗಿಸಿ.





77PM05005

ಸಿ.ಎನ್.ಜಿ. ಫಿಲ್ಲರ್ ವಾಲ್ವ್ ಕವರ್ ಅನ್ನು ತೆಗೆಯಲು:

1) ಸಿ.ಎನ್.ಜಿ. ಫಿಲ್ಲರ್ ಡೋರ್ (1) ತೆರೆಯಿರಿ

2) ಅಪ್ರದಕ್ಷಿಣಾಕಾರವಾಗಿ ತಿರುಗಿಸುವ ಮೂಲಕ ಸಿ.ಎನ್.ಜಿ. ಫಿಲ್ಲರ್ ವಾಲ್ವ್ ಕವರ್ (2) ಅನ್ನು ತೆಗೆಯಿರಿ.




77PM05006

*ಸೂಚನೆ:*
*ಕ್ಯಾಪ್ ಹೋಲ್ಡರ್ ಅನ್ನು (3) ಫ್ಯೂಯೆಲ್ ಫಿಲ್ಲರ್ ಡೋರ್ ಹೊಂದಿದ್ದರೆ, ಆಗ ರಿಫ್ಯೂಯೆಲ್ ಮಾಡುವಾಗ ಫ್ಯೂಯೆಲ್ ಫಿಲ್ಲರ್ ಕ್ಯಾಪ್ ಹಿಡಿದುಕೊಳ್ಳಲು ಕ್ಯಾಪ್ ಹೋಲ್ಡರ್ ಅನ್ನು ಬಳಸಿ.*

ಡಿಸ್ಪೆನ್ಸ್ ಪ್ರೆಶರ್ಗೆ ಸಮಾನವಾಗಿ ಸಿಲಿಂಡರ್ ಪ್ರೆಶರ್ ಕೂಡ ಉಂಟಾದರೆ ಅಟೋಮ್ಯಾಟಿಕ್ ಆಗಿ ಫಿಲ್ಲಿಂಗ್ ಕಟ್ ಆಫ್ ಆಗುತ್ತದೆ.

ಸಿ.ಎನ್.ಜಿ. ಫಿಲ್ಲರ್ ವಾಲ್ವ್ ಕವರ್ ಅನ್ನು ರಿಇನ್ಸ್ಟಾಲ್ ಮಾಡಲು:

1) ಸಿ.ಎನ್.ಜಿ. ಫಿಲ್ಲರ್ ವಾಲ್ವ್ ಕವರ್ (2) ಅನ್ನು ಪೂರ್ತಿ ಮುಚ್ಚುವವರೆಗೂ ಅಪ್ರದಕ್ಷಿಣಾಕಾರವಾಗಿ ತಿರುಗಿಸಿ.


2) ಸಿ.ಎನ್.ಜಿ. ಫಿಲ್ಲರ್ ಡೋರ್ (1) ಕ್ಲೋಸ್ ಮಾಡಿ.

*ಸೂಚನೆ:*

- ಸಿ.ಎನ್.ಜಿ. ಫಿಲ್ಲರ್ ಕವರ್ (2) ಅನ್ನು ಸರಿಯಾಗಿ ಮುಚ್ಚದೇ ಇದ್ದರೆ, ನಿಮಗೆ ವಾಹನ ಸ್ಟಾರ್ಟ್ ಮಾಡಲು ಸಾಧ್ಯವಾಗುವುದಿಲ್ಲ.
- ವಾಹನ ಸ್ಟೇಷನರಿ ಸ್ಥಿತಿಯಲ್ಲಿದ್ದಾಗ ಸಿ.ಎನ್.ಜಿ. ಫಿಲ್ಲರ್ ಕವರ್ (2) ತೆರೆದರೆ ಇಂಜಿನ್ ಸ್ಟಾಪ್ ಆಗುತ್ತದೆ.


*ಸೂಚನೆ :*
ವಾಹನದ ಕಾರ್ಯನಿರ್ವಹಣೆಯಲ್ಲಿ, ಸಿ.ಎನ್.ಜಿ. ಫಿಲ್ಲರ್ ಬಾಕ್ಸ್ನಲ್ಲಿ ಗ್ರಾವೆಲ್ಗಳು ಸೇರಿಕೊಳ್ಳಬಹುದು. ಇದು ಕಂಡುಬಂದಾಗ ತೆಗೆಯಿರಿ.

ಪೆಟ್ರೋಲ್ ಫಿಲ್ಲಿಂಗ್ ಕ್ಯಾಪ್
(ಪೆಟ್ರೋಲ್ ಇಂಜಿನ್ ಮಾಡೆಲ್ಗೆ)




77PH031

ಫ್ಯೂಯೆಲ್ ಫಿಲ್ಲರ್ ಕ್ಯಾಪ್ವಾಹನದ ಬಲಬದಿಯಲ್ಲಿದೆ.




68KN048

ಫ್ಯೂಯೆಲ್ ಫಿಲ್ಲರ್ ಕ್ಯಾಪ್ ಅನ್ನು ಕಳಚಲು, ಅದನ್ನು ಬಲದಿಂದ ಎಡಕ್ಕೆ ತಿರುಗಿಸಿ. ಫ್ಯೂಯೆಲ್ ಫಿಲ್ಲರ್ ಕ್ಯಾಪ್ ಅನ್ನು ಮರಳಿ ಜೋಡಿಸಲು, ಅದನ್ನು ಎಡದಿಂದ ಬಲಕ್ಕೆ ಹಲವು ಕ್ಲಿಕ್ ಧ್ವನಿ ಕೇಳುವವರೆಗೂ ತಿರುಗಿಸಿ.

**⚠ ಜಾಗ್ರತೆ**

ಫ್ಯೂಯೆಲ್ ಫಿಲ್ಲರ್ ಕ್ಯಾಪ್ ಅನ್ನು ನಿಧಾನವಾಗಿ ಕಳಚಿ. ಇಂಧನದ ಮೇಲೆ ಒತ್ತಡ ಬೀಳಬಹುದು ಮತ್ತು ಅದು ಸಿಂಪಡನೆಯಾಗಿ ಗಾಯಕ್ಕೆ ಕಾರಣವಾಗಬಹುದು.


**⚠ ಎಚ್ಚರಿಕೆ**

ಇಂಧನ ಬೇಗನೇ ಉರಿಯುವ ವಸ್ತು. ಇಂಧನವನ್ನು ಮರುತುಂಬಿಸುವಾಗ ಧೂಮಪಾನ ಮಾಡಬೇಡಿ, ಮತ್ತು ಎಲ್ಲೂ ತೆರೆದ ಜ್ವಾಲೆಗಳು ಅಥವಾ ಬೆಂಕಿಯ ಕಿಡಿಗಳು ಪ್ರದೇಶದಲ್ಲಿ ಇಲ್ಲವೆಂದು ಖಚಿತಪಡಿಸಿ.

**⚠ ಎಚ್ಚರಿಕೆ**


ನಿಮಗೆ ಫ್ಯೂಯೆಲ್ ಕ್ಯಾಪ್ ಬದಲಿಸುವ ಅಗತ್ಯ ಕಂಡುಬಂದಲ್ಲಿ ಮಾರುತಿಯ ಮಾನ್ಯತೆ ಹೊಂದಿದ ಕ್ಯಾಪ್ ಬಳಸಿ. ಅಸಮರ್ಪಕವಾದ ಕ್ಯಾಪ್ ಬಳಸುವುದರಿಂದ ಫ್ಯೂಯೆಲ್ ಸಿಸ್ಟಂನಲ್ಲಿ ಅಥವಾ ಧೂಮ ಹೊರಬಿಡುವ ನಿಯಂತ್ರಣ ವ್ಯವಸ್ಥೆಯಲ್ಲಿ ತೊಂದರೆ ಕಾಣಿಸಿಕೊಳ್ಳಬಹುದು ಅದರಿಂದ ಅಪಘಾತವಾದಲ್ಲಿ ಇಂಧನ ಸೋರಿಕೆಯಾಗುವ ಸಾಧ್ಯತೆಯೂ ಇದೆ.

(ಡೀಸೆಲ್ ಇಂಜಿನ್ ಮಾಡೆಲ್ಗೆ)
ಡೀಸೆಲ್ ಫಿಲ್ಲಿಂಗ್ ಕ್ಯಾಪ್




77PH031

ಫ್ಯೂಯೆಲ್ ಫಿಲ್ಲರ್ ಕ್ಯಾಪ್ವಾಹನದ ಬಲಬದಿಯಲ್ಲಿದೆ.




68KN048

ಫ್ಯೂಯೆಲ್ ಫಿಲ್ಲರ್ ಕ್ಯಾಪ್ ಅನ್ನು ಕಳಚಲು, ಅದನ್ನು ಬಲದಿಂದ ಎಡಕ್ಕೆ ತಿರುಗಿಸಿ. ಫ್ಯೂಯೆಲ್ ಫಿಲ್ಲರ್ ಕ್ಯಾಪ್ ಅನ್ನು ಮರಳಿ ಜೋಡಿಸಲು, ಅದನ್ನು ಎಡದಿಂದ ಬಲಕ್ಕೆ ಹಲವು ಕ್ಲಿಕ್ ಧ್ವನಿ ಕೇಳುವವರೆಗೂ ತಿರುಗಿಸಿ.

**⚠ ಜಾಗ್ರತೆ**

ಫ್ಯೂಯೆಲ್ ಫಿಲ್ಲರ್ ಕ್ಯಾಪ್ ಅನ್ನು ನಿಧಾನವಾಗಿ ಕಳಚಿ. ಫ್ಯೂಯೆಲ್ ಒತ್ತಡದಲ್ಲಿರಬಹುದು ಮತ್ತು ಹೊರಗೆ ಚೆಲ್ಲುವ ಮೂಲಕ ಗಾಯಗಳಾಗಬಹುದು.


**⚠ ಎಚ್ಚರಿಕೆ**

ಫ್ಯೂಯೆಲ್ ಅತಿ ಬೇಗನೇ ಉರಿ ಹತ್ತಿಕೊಳ್ಳುತ್ತದೆ. ಫ್ಯೂಯೆಲ್ ಮರಳಿ ತುಂಬಿಸುತ್ತಿರುವಾಗ ಧೂಮಪಾನ ಮಾಡಬೇಡಿ ಮತ್ತು ಜಾಗದಲ್ಲಿ ತೆರೆದ ಉರಿಜ್ವಾಲೆಗಳು ಅಥವಾ ಕಿಡಿಗಳು ಇಲ್ಲದೆ ಇರುವುದನ್ನು ಖಾತರಿಪಡಿಸಿ.

**⚠ ಎಚ್ಚರಿಕೆ**

ನೀವು ಫ್ಯೂಯೆಲ್ ಕ್ಯಾಪ್ ಬದಲಿಸಬೇಕೆಂದಾದಲ್ಲಿ ಮಾರುತಿ ಮಾನ್ಯತೆ ಹೊಂದಿದ ಕ್ಯಾಪ್ ಬಳಸಿ. ಅಸಮರ್ಪಕ ಕ್ಯಾಪ್ ಬಳಸುವುದರಿಂದ ಫ್ಯೂಯೆಲ್ ಸಿಸ್ಟಂ ದೋಷ ಅಥವಾ ಧೂಮ ನಿಯಂತ್ರಣ ವ್ಯವಸ್ಥೆಯ ದೋಷಕ್ಕೆ ಕಾರಣವಾಗಬಹುದು. ಅಪಘಾತದ ಸಂದರ್ಭದಲ್ಲಿ ಫ್ಯೂಯೆಲ್ ಸೋರಿಕೆಗೂ ಅದು ಕಾರಣವಾಗಬಹುದು.

## ಇಂಜಿನ್ ಭಾಗ





77PH094

ಇಂಜಿನ್ ಭಾಗವನ್ನು ತೆರೆಯಲು:

1) ಚಾಲಕನ ಸೀಟ್ ಬೆಲ್ಟ್ ಬಕಲ್ (1) ಅನ್ನು ಸೀಟ್ ಬ್ಯಾಕ್ ಪೊಸಿಷನ್ ಗೆ ಮೇಲೆತ್ತಿ. ಪ್ರಯಾಣಿಕರ ಸೀಟ್ ಬೆಲ್ಟ್ ಬಕಲ್ (2) ಅನ್ನು ಸಂಗ್ರಹಿಸಿಡಿ.
2) ಚಾಲಕನ ಸೀಟ್ ಗಾಗಿ, ಸೀಟನ್ನು ಅತೀ ಹಿಂಬದಿ ಪೊಸಿಷನ್ ಗೆ ಜಾರಿಸಿ.

**⚠ ಜಾಗ್ರತೆ**

ನೀವು ಚಾಲಕನ ಸೀಟನ್ನು ಹಿಂಬದಿಗೆ ಜಾರಿಸುವಾಗ ಸೀಟ್ ಬ್ಯಾಕ್ ಅನ್ನು ದೂಡಿ.
ನೀವು ಸೀಟ್ ಬ್ಯಾಕ್ ಟಾಪ್ ಅನ್ನು ಹಿಡಿದಾಗ, ಸೀಟ್ ಬ್ಯಾಕ್ ಮತ್ತು ಕ್ಯಾಬಿನ್ ಬ್ಯಾಕ್ ಪ್ಯಾನಲ್ ನಡುವೆ ತೂರಿಕೊಂಡು ವೈಯಕ್ತಿಕವಾಗಿ ಗಾಯಗಳಾಗಬಹುದು.





77PH093

3) ಚಾಲಕನ ಸೀಟಿಗೆ, ಸೀಟ್ ಬ್ಯಾಕ್ ಅನ್ನು ಮುಂದಕ್ಕೆ ಮಡಚಲು ಲಾಕ್ ಲಿವರ್ (3) ಅನ್ನು ಎಳೆಯಿರಿ.

*ಸೂಚನೆ:*
*ಸೀಟ್ ಬ್ಯಾಕ್ ಅನ್ನು ಪೊಸಿಷನ್ ವರೆಗೆ ಮಾತ್ರ ಮಡಚಬಹುದು. ಆಗ ಅದು ಸ್ಟೀರಿಂಗ್ ವೀಲ್ ಜೊತೆ ಸಂಪರ್ಕಕ್ಕೆ ಬರುತ್ತದೆ.*

4) ಲಾಕ್ ಹ್ಯಾಂಡಲ್ ಗಳನ್ನು (4) ಪ್ರತೀ ಸೀಟಿನ ಫ್ರಂಟ್ ಎಂಡ್ ನಲ್ಲಿ ಹುಕ್ ತೆಗೆಯಿರಿ.

ಉದಾಹರಣೆ





77PH081

- ಲಾಕ್ ಹ್ಯಾಂಡಲ್ ಹುಕ್ ತೆಗೆಯಲು “PULL” (ಎಳೆಯುವುದು) ಭಾಗ (5) ವನ್ನು ಎಳೆಯಿರಿ ಮತ್ತು ರಿಂಗ್ (7) ಅನ್ನು ಹುಕ್ (8) ನಿಂದ ಕಳಚಿ.
- ಲಾಕ್ ಹ್ಯಾಂಡಲ್ ಅನ್ನು ಲಾಕ್ ಮಾಡಲು ರಿಂಗ್ (7) ಅನ್ನು ಹುಕ್ (8) ನ ಮೇಲಿಡಿ ಮತ್ತು ನಂತರ “PUSH” (ದೂಡುವ) ಭಾಗ (6) ದೂಡಿಬಿಡಿ.

**ಚಾಲಕರ ಬದಿ**


ಉದಾಹರಣೆ




77PH102

**ಪ್ರಯಾಣಿಕರ ಬದಿ**

ಉದಾಹರಣೆ




77PH103

*ಸೂಚನೆ:*
*ಸ್ಟ್ರಾಪ್ ಗಳು (11) ಪ್ರಯಾಣಿಕರ ಸೀಟಿನ ಹಿಂಬದಿಯಲ್ಲಿ ಲಭ್ಯವಿದೆ.*


5) ಸೀಟನ್ನು ಮೇಲೆತ್ತಿ ಮತ್ತು ಸ್ಟ್ರಾಪ್ (11) ಅನ್ನು ಹುಕ್ (9) ಗೆ ಜೋಡಿಸಿ. ಹುಕ್ (10) ಅನ್ನು ಸೀಟ್ ಸ್ಟ್ರಾಪ್ ಗೆ ಜೋಡಿಸಲು ಬಳಸಲಾಗಿಲ್ಲ.

***ಸೂಚನೆ***

**ಸ್ಟ್ರಾಪ್ ಅನ್ನು ಚಾಲಕನ ಸೀಟ್ ಪೊಸಿಷನ್ ಅಜಸ್ಟ್ ಮೆಂಟ್ ಲಿವರ್ ಗೆ ಹುಕ್ ಮಾಡಬೇಡಿ. ಅಥವಾ ಸ್ಟ್ರಾಪ್ ಗಳಿಂದ ಹುಕ್ ಆಗಿರುವಾಗ ಸೀಟ್ ಗಳ ಮೇಲೆ ಅನಗತ್ಯ ಒತ್ತಡವನ್ನು ಹಾಕಬೇಡಿ. ಹಾಗೆ ಮಾಡುವುದರಿಂದ ಸ್ಟ್ರಾಪ್ ಗಳು, ಹುಕ್ ಗಳು ಮತ್ತು/ ಅಥವಾ ಚಾಲಕನ ಸೀಟ್ ಪೊಸಿಷನ್ ಅಜಸ್ಟ್ ಮೆಂಟ್ ಲಿವರ್ ಮುರಿದು ಹೋಗಬಹುದು.**

- ಇಂಜಿನ್ ಕಂಪಾರ್ಟ್ ಮೆಂಟ್ ಮುಚ್ಚಲು, ನೀವು ಅದನ್ನು ತೆರೆದಿರುವ ಹಂತಗಳನ್ನು ವಿರುದ್ಧ ರೀತಿಯಲ್ಲಿ ಮಾಡಿ.
- ಮುಚ್ಚಿದ ಮೇಲೆ, ಸೀಟುಗಳನ್ನು ಸ್ವಲ್ಪ ಚಲಿಸಿ ಅವು ಭದ್ರವಾಗಿ ಸಿಕ್ಕಿಸಲಾಗಿದೆ ಎಂದು ಖಚಿತಪಡಿಸಿ.
- ಚಿತ್ರದಲ್ಲಿ ತೋರಿಸಿರುವಂತೆ ಸ್ಟ್ರಾಪ್ ಗಳನ್ನು ಪ್ರಯಾಣಿಕರ ಸೀಟಿನ ಹಿಂದೆ ಇರುವ ಜಾಗದಲ್ಲಿ ಸಂಗ್ರಹಿಸಿ.

ಉದಾಹರಣೆ



77PH097


**⚠ ಎಚ್ಚರಿಕೆ**

**ಸ್ಟ್ರಾಪ್ ಗಳನ್ನು ಪ್ರಯಾಣಿಕರ ಸೀಟಿನ ಹಿಂಬದಿ ಇರುವ ಜಾಗದಲ್ಲಿ ಸಂಗ್ರಹಿಸಿಡಿ. ಕುಳಿತವರ ದೇಹವು ಸ್ಟ್ರಾಪ್ ಗಳಲ್ಲಿ ಸಿಲುಕಿಕೊಂಡಲ್ಲಿ, ಗಂಭೀರ ಗಾಯ ಅಥವಾ ಉಸಿರುಗಟ್ಟುವ ಸಾಧ್ಯತೆಯಿದೆ. ಹಾಗಾದಲ್ಲಿ, ಸ್ಟ್ರಾಪ್ ಗಳನ್ನು ಕತ್ತರಿಯಿಂದ ಕತ್ತರಿಸಿ.**

**⚠ ಜಾಗ್ರತೆ**

**ಇಂಜಿನ್ ಕಂಪಾರ್ಟ್ ಮೆಂಟ್ ಅನ್ನು ಮುಚ್ಚುವಾಗ, ಸೀಟ್ ಗಳು ಅಥವಾ ಚಾಲಕನ ಸೀಟ್ ಬೆಲ್ಟ್ ಬಕಲ್ ನಿಮ್ಮ ಕೈಗಳಿಗೆ ಚುಚ್ಚದಂತೆ ಅಥವಾ ದೇಹಕ್ಕೆ ಹೊಡೆದುಕೊಳ್ಳದಂತೆ ಜಾಗ್ರತೆವಹಿಸಿ.**

## ಸನ್ ವೈಸರ್





77PH004

ಸನ್ ವೈಸರ್ ವಾಹನದ ಚಾಲಕನ ಬದಿಯಲ್ಲಿ ಲಭ್ಯವಿದೆ. ಸನ್ ವೈಸರ್ ಅನ್ನು ಕೆಳಗೆ ಎಳೆದು ವಿಂಡ್ ಶೀಲ್ಡ್ ನಿಂದ ಬರುವ ಬೆಳಕಿನ ತೀವ್ರತೆಯಿಂದ ತಪ್ಪಿಸಿಕೊಳ್ಳಬಹುದು, ಅಥವಾ ಅವುಗಳ ಹುಕ್ ತೆಗೆಯಬಹುದು ಮತ್ತು ಸೈಡ್ ವಿಂಡೋದಿಂದ ಬರುವ ಕಿರಣಗಳನ್ನು ತಡೆಯಲು ಬದಿಗೆ ತಿರುಗಿಸಬಹುದು.

| *ಸೂಚನೆ* |
|---|
| **ಸನ್ ವೈಸರ್ ಹುಕ್ ತೆಗೆಯುವುದು ಮತ್ತು ಹುಕ್ ಮಾಡುವಾಗ, ಚಿತ್ರದಲ್ಲಿ ತೋರಿಸಿರುವಂತೆ ಸನ್ ವೈಸರ್ ನ ಬದಿಯನ್ನು ಹಿಡಿದಿರುವುದನ್ನು ಖಾತರಿಪಡಿಸಿ. ಇಲ್ಲದಿದ್ದಲ್ಲಿ ಸನ್ ವೈಸರ್ ಹಾಳಾಗಬಹುದು.** |

## ಇಂಟೀರಿಯರ್ ಲೈಟ್





77PH074

ಈ ಲೈಟ್ ಸ್ವಿಚ್ ಗೆ ಎರಡು ಪೊಸಿಷನ್ ಗಳಿವೆ. ಈ ಪೊಸಿಷನ್ ಗಳನ್ನು ನಾಬ್ (3) ಬಳಸಿ ಆರಿಸಬಹುದು. ಎರಡು ಪೊಸಿಷನ್ ಗಳ ಕೆಲಸಗಳೆಂದರೆ:

**ಆನ್ (1)**
ಲೈಟ್ ಬರುತ್ತದೆ ಮತ್ತು ಉಳಿಯುತ್ತದೆ ಆನ್.

**ಆಫ್ (2)**
ಲೈಟ್ ಉಳಿದುಕೊಳ್ಳುತ್ತದೆ ಆಫ್.

## ಅಕ್ಸಸರಿ ಸಾಕೆಟ್





77PH044

ಇಗ್ನಿಷನ್ ಸ್ವಿಚ್ "ACC" (ಎ.ಸಿ.ಸಿ) ಅಥವಾ "ON" (ಆನ್) ಪೊಸಿಷನ್ ನಲ್ಲಿರುವಾಗ ಅಕ್ಸ ಸರಿ ಸಾಕೆಟ್ ಕೆಲಸ ಮಾಡುತ್ತದೆ. ಈ ಸಾಕೆಟ್ ಅನ್ನು ವಿದ್ಯುತ್ ಅಕ್ಸೆಸರಿಗಳಿಗೆ 12 ವೋಲ್ಟ್ / 120 ವಾಟ್ ಪವರ್ ಕೊಡಲು ಒದಗಿಸಲಾಗಿದೆ.

| *ಸೂಚನೆ* |
|---|
| **ಅಸಮರ್ಪಕ ಇಲೆಕ್ಟ್ರಿಕಲ್ ಅಕ್ಸೆಸರಿಗಳು ನಿಮ್ಮ ವಾಹನದ ಇಲೆಕ್ಟ್ರಿಕಲ್ ಸಿಸ್ಟಂಗೆ ಹಾನಿಯುಂಟು ಮಾಡಬಹುದು. ನೀವು ಬಳಸುವ ಯಾವುದೇ ಇಲೆಕ್ಟ್ರಿಕಲ್ ಅಕ್ಸಸರಿಗಳು ಈ ರೀತಿಯ ಸಾಕೆಟ್ ಗೆ ಪ್ಲಗ್ ಮಾಡಲು ವಿನ್ಯಾಸಗೊಳಿಸಿರುವುದನ್ನು ಖಚಿತಪಡಿಸಿ.** |

## ಗ್ಲವ್ ಬಾಕ್ಸ್




77PH045

ಗ್ಲವ್ ಬಾಕ್ಸ್ ತೆರೆಯಲು ನಾಬ್ ಅನ್ನು ಬಲದಿಂದ ಎಡಕ್ಕೆ ತಿರುಗಿಸಿ. ಅದನ್ನು ಮುಚ್ಚಲು ಲಿಡ್ ಅನ್ನು ಲ್ಯಾಚ್ ಭದ್ರವಾಗಿ ಕೂರುವವರೆಗೆ ದೂಡಿ. ಗ್ಲವ್ ಬಾಕ್ಸ್ ಲಾಕ್ ಮಾಡಲು ಕೀಯನ್ನು ನಾಬ್ ಗೆ ತೂರಿಸಿ ಮತ್ತು ಎಡದಿಂದ ಬಲಕ್ಕೆ ತಿರುಗಿಸಿ. ಗ್ಲವ್ ಬಾಕ್ಸ್ ಅನ್ಲಾಕ್ ಮಾಡಲು, ಕೀಯನ್ನು ನಾಬ್ ಗೆ ತೂರಿಸಿ ಬಲದಿಂದ ಎಡಕ್ಕೆ ತಿರುಗಿಸಿ.

**⚠ ಎಚ್ಚರಿಕೆ**

**ಗ್ಲವ್ ಬಾಕ್ಸ್ ಲಿಡ್ ತೆರೆದಿರುವಂತೆ ವಾಹನ ಚಲಾಯಿಸಬೇಡಿ. ಅಪಘಾತ ನಡೆದಲ್ಲಿ ಇದು ಗಾಯಗಳನ್ನು ಮಾಡಬಹುದು.**

## ಸಂಗ್ರಹ ಸ್ಥಳ



77PH104


(1) ಇನ್ ಸ್ಟ್ರುಮೆಂಟ್ ಪ್ಯಾನೆಲ್ ಪಾಕೆಟ್ (ಚಾಲಕನ ಬದಿ)
(2) ಇನ್ ಸ್ಟ್ರುಮೆಂಟ್ ಪ್ಯಾನೆಲ್ ಟ್ರೇ (ಕೇಂದ್ರ) / ಇನ್ ಸ್ಟ್ರುಮೆಂಟ್ ಪ್ಯಾನೆಲ್ ಪಾಕೆಟ್ (ಕೇಂದ್ರ)
(3) ಇನ್ ಸ್ಟ್ರುಮೆಂಟ್ ಪ್ಯಾನೆಲ್ (ಪ್ರಯಾಣಿಕರ ಬದಿ)
(4) ಸೆಂಟರ್ ಪ್ಯಾಕೆಟ್

### ಇನ್ ಸ್ಟ್ರುಮೆಂಟ್ ಪ್ಯಾನೆಲ್ ಪಾಕೆಟ್ (1)/(2) / ಇನ್ ಸ್ಟ್ರುಮೆಂಟ್ ಪ್ಯಾನೆಲ್ ಟ್ರೇ (2)/(3) / ಸೆಂಟರ್ ಪ್ಯಾಕೆಟ್ (4)

**⚠ ಎಚ್ಚರಿಕೆ**

**ವಾಹನ ಚಾಲನೆಯಲ್ಲಿದ್ದಾಗ ಪಾಕೆಟ್ / ಟ್ರೇನಿಂದ ಬೀಳಬಹುದಾದ ಯಾವುದೇ ವಸ್ತುಗಳನ್ನು ಇಡಬೇಡಿ. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲವಾದಲ್ಲಿ ಪೆಡಲ್ ಗಳ ನಡುವೆ ವಸ್ತು ಬಂದು ವಾಹನದ ನಿಯಂತ್ರಣ ತಪ್ಪಿ ಹೋಗಬಹುದು ಅಥವಾ ಅಪಘಾತ ಸಂಭವಿಸಬಹುದು.**

## ಏರ್ ವೆಂಟ್





77PM502

ಏರ್ ವೆಂಟ್ ಗಳು ವಾಹನದ ಚಾಲಕನ ಬದಿ ಮತ್ತು ಪ್ರಯಾಣಿಕರ ಬದಿಯಲ್ಲಿದೆ. ಏರ್ ವೆಂಟ್ ತೆರೆಯುವುದು ಮತ್ತು ಮುಚ್ಚಲು, ನಾಬ್ (1) ಅನ್ನು ನೇರವಾಗಿ ಚಲಿಸಿ ಫ್ಲ್ಯಾ ಪ್ (2) ಅನ್ನು ತೆರೆಯಿರಿ ಮತ್ತು ಮುಚ್ಚಿರಿ. “ತೆರೆದಾಗ” ತಾಜಾ ಗಾಳಿ ಕ್ಯಾಬಿನ್ ಒಳಗೆ ಬರುತ್ತದೆ.

## ಫ್ರೇಮ್ ಹುಕ್

### ಫ್ರಂಟ್




77PH035

ಫ್ರೇಮ್ ಹುಕ್ (1) ಅನ್ನು ತುರ್ತು ಸನ್ನಿವೇಶಗಳು ಮತ್ತು ಸಾಗಾಟ ಉದ್ದೇಶಗಳಿಗಾಗಿ ವಾಹನದ ಫ್ರಂಟ್ ನಲ್ಲಿ ಕೊಡಲಾಗಿದೆ.

ರಸ್ತೆ ಅಥವಾ ಹೆದ್ದಾರಿಯಲ್ಲಿ ವಾಹನವನ್ನು ಎಳೆದೊಯ್ಯಲು “ತುರ್ತು ಸೇವೆ” ವಿಭಾಗದಲ್ಲಿ “ಎಳೆದೊಯ್ಯುವುದು” ಸೂಚನೆಯನ್ನು ಪಾಲಿಸಿ.

**⚠ ಎಚ್ಚರಿಕೆ**


**ಫ್ರೇಮ್ ಹುಕ್ ಅನ್ನು ಮತ್ತೊಂದು ವಾಹನವನ್ನು ಎಳೆದೊಯ್ಯಲು ರಸ್ತೆ ಅಥವಾ ಹೆದ್ದಾರಿಯಲ್ಲಿ ನಿಮ್ಮ ವಾಹನ ಎಳೆದೊಯ್ಯಲು ಬಳಸಬೇಡಿ.**
**ಹುಕ್ (1) ಅನ್ನು ತುರ್ತು ಪರಿಸ್ಥಿತಿಯಲ್ಲಿ ಬಳಸಲು ಮಾತ್ರ ವಿನ್ಯಾಸಗೊಳಿಸಲಾಗಿದೆ. ಅಂದರೆ ನಿಮ್ಮ ವಾಹನ ಅಥವಾ ಮತ್ತೊಂದು ವಾಹನ ಆಳವಾದ ಕೆಸರು ಅಥವಾ ಹಿಮದಲ್ಲಿ ಮುಳುಗಿದ್ದಂತಹ ಸಂದರ್ಭ.**

***ಸೂಚನೆ***

**ಫ್ರೇಮ್ ಹುಕ್ (1) ಅನ್ನು ನೀವು ಬಳಸುವಾಗ, ಹುಕ್ ಗೆ ಆಘಾತ ಕೊಡಬಹುದಾದ ರೀತಿಯಲ್ಲಿ ವಾಹನ ಚಲಾಯಿಸಬೇಡಿ. ಅಂತಹ ಕಾರ್ಯಾಚರಣೆಯಿಂದ ಹುಕ್ ಗೆ ಹಾನಿಯಾಗಬಹುದು ಅಥವಾ ವಾಹನದ ಬಾಡಿಗೆ ಹಾನಿಯಾಗಬಹುದು.**

**ಆಕಸ್ಮಿಕವಾಗಿ ವೇಗ ಏರಿಸಬೇಡಿ.**

## ಅಸಿಸ್ಟ್ ಗ್ರಿಪ್




77PM501

ಅಸಿಸ್ಟ್ ಗ್ರಿಪ್ ಗಳು (1) ವಾಹನದ ಚಾಲಕನ ಬದಿ ಮತ್ತು ಪ್ರಯಾಣಿಕರ ಬದಿಯಲ್ಲಿದೆ. ಅಸಿಸ್ಟ್ ಗ್ರಿಪ್ ಗಳನ್ನು ಚಾಲಕ / ಪ್ರಯಾಣಿಕರಿಗೆ ವಾಹನದಿಂದ ಒಳಗೆ ಬರಲು ಮತ್ತು ಹೊರಗೆ ಹೋಗಲು ನೀಡಲಾಗಿದೆ.

# ವಾಹನಕ್ಕೆ ಭಾರ ತುಂಬುವುದು ಮತ್ತು ಎಳೆದೊಯ್ಯುವುದು

ವಾಹನಕ್ಕೆ ಭಾರ ತುಂಬುವುದು ........ 6-1
ಟ್ರೈಲರ್ ಎಳೆದೊಯ್ಯುವುದು ........ 6-1

## ವಾಹನ ಲೋಡಿಂಗ್

ನಿಮ್ಮ ವಾಹನವನ್ನು ನಿರ್ದಿಷ್ಟ ತೂಕದ ಸಾಮರ್ಥ್ಯಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ನಿಮ್ಮ ವಾಹನದ ತೂಕದ ಸಾಮರ್ಥ್ಯಗಳನ್ನು ಒಟ್ಟು ವಾಹನ ತೂಕ (ಜಿವಿಡಬ್ಲ್ಯು ಆರ್) ಮತ್ತು ಅವಕಾಶವಿರುವ ಗರಿಷ್ಠ ಆಕ್ಸಲ್ ತೂಕ ರೇಟಿಂಗ್ ನಿಂದ (ಪಿಎಡಬ್ಲ್ಯು, ಫ್ರಂಟ್ ಮತ್ತು ರೇರ್) ಸೂಚಿಸಲಾಗುತ್ತದೆ ಜಿವಿಡಬ್ಲ್ಯು ಆರ್ ಮತ್ತು ಪಿಎಡಬ್ಲ್ಯು (ಫ್ರಂಟ್ ಮತ್ತು ರೇರ್) ಗಳನ್ನು ನಿರ್ದಿಷ್ಟತೆಗಳ ವಿಭಾಗದಲ್ಲಿ ಪಟ್ಟಿ ಮಾಡಲಾಗಿದೆ.

ಜಿವಿಡಬ್ಲ್ಯು ಆರ್ - ಪೂರ್ಣ ಲೋಡ್ ಆಗಿರುವ ವಾಹನದ ಗರಿಷ್ಠ ಅವಕಾಶವಿರುವ ಒಟ್ಟು ತೂಕ (ಎಲ್ಲಾ ಪ್ರಯಾಣಿಕರು ಸೇರಿ, ಅಕ್ಸಸರಿಗಳು ಮತ್ತು ಸರಕು ಮತ್ತು ಟ್ರೈಲರ್ ಎಳೆದೊಯ್ಯುವುದಾದಲ್ಲಿ ಟ್ರೈಲರ್ ಮುಂಬದಿ ತೂಕ).
ಪಿಎಡಬ್ಲ್ಯು - (ಫ್ರಂಟ್ ಮತ್ತು ರೇರ್) ಗರಿಷ್ಠ ಅವಕಾಶವಿರುವ ತೂಕ ವೈಯಕ್ತಿಕ ಆಕ್ಸಲ್ ಮೇಲೆ.

ಲೋಡ್ ಮಾಡಿರುವ ವಾಹನದ ವಾಸ್ತವಿಕ ತೂಕ ಮತ್ತು ಫ್ರಂಟ್ ಮತ್ತು ರೇರ್ ಆಕ್ಸಲ್ ಗಳ ವಾಸ್ತವಿಕ ಲೋಡ್ ಗಳನ್ನು ವಾಹನವನ್ನು ತೂಕ ಮಾಡುವ ಮೂಲಕವೇ ನಿರ್ಧರಿಸಲಾಗುವುದು. ಈ ತೂಕಗಳನ್ನು ಜಿವಿಡಬ್ಲ್ಯು ಆರ್ ಮತ್ತು ಪಿಎಡಬ್ಲ್ಯು ಗೆ (ಫ್ರಂಟ್ ಮತ್ತು ರೇರ್) ಹೋಲಿಸಿ. ಒಟ್ಟು ವಾಹನದ ತೂಕ ಅಥವಾ ಪ್ರತೀ ಆಕ್ಸಲ್ ನ ಲೋಡ್ ಈ ರೇಟಿಂಗ್ ಗಳನ್ನು ಮೀರಿದಲ್ಲಿ, ನೀವು ಲೋಡ್ ಅನ್ನು ರೇಟ್ ಮಾಡಿರುವ ಸಾಮರ್ಥ್ಯಕ್ಕೆ ಇಳಿಸಲು ಸಾಕಷ್ಟು ತೂಕವನ್ನು ಕಳಚಬೇಕು.

**⚠ ಎಚ್ಚರಿಕೆ**

**ನಿಮ್ಮ ವಾಹನವನ್ನು ಎಂದಿಗೂ ಓವರ್ ಲೋಡ್ ಮಾಡಬೇಡಿ. ಒಟ್ಟು ವಾಹನ ತೂಕ (ವಾಹನದ ತೂಕಗಳ ಮೊತ್ತ, ಎಲ್ಲಾ ಪ್ರಯಾಣಿಕರು, ಅಕ್ಸಸರಿಗಳು ಮತ್ತು ಕಾರ್ಗೋ ಮತ್ತು ಎಳೆದೊಯ್ಯುವುದಾದಲ್ಲಿ ಟ್ರೈಲರ್ ಮುಂಬದಿ ತೂಕ) ಒಟ್ಟು ವಾಹನದ ತೂಕ ರೇಟಿಂಗ್ ಅನ್ನು ಮೀರಬಾರದು. (ಜಿವಿಡಬ್ಲ್ಯು ಆರ್) ಅಲ್ಲದೆ, ಫ್ರಂಟ್ ಅಥವಾ ರೇರ್ ಆಕ್ಸಲ್ ಮೇಲೆ ತೂಕವು ಅವಕಾಶವಿರುವ ಗರಿಷ್ಠ ಆಕ್ಸಲ್ ತೂಕ (ಪಿಎಡಬ್ಲ್ಯು) ಮಿತಿಯನ್ನು ಮೀರುವಂತೆ ಲೋಡ್ ಅನ್ನು ಯಾವತ್ತೂ ತುಂಬಬೇಡಿ.**

**⚠ ಎಚ್ಚರಿಕೆ**

**ಸರಕನ್ನು ಯಾವಾಗಲೂ ಸಮಾನವಾಗಿ ಹಂಚಿ ಇಡಿ. ನಿಮ್ಮ ವಾಹನಕ್ಕೆ ಗಾಯ ಅಥವಾ ಹಾನಿಯನ್ನು ತಪ್ಪಿಸಲು, ವಾಹನ ಆಕಸ್ಮಿಕವಾಗಿ ಚಲಿಸುತ್ತದೆ ಎಂದಾದಲ್ಲಿ ಸರಕನ್ನು ಯಾವಾಗಲೂ ಭದ್ರವಾಗಿಡಿ. ಭಾರವಾದ ವಸ್ತುಗಳನ್ನು ಫ್ಲೋರ್ ಮೇಲಿಡಿ ಮತ್ತು ಸರಕು ಪ್ರದೇಶದಿಂದ ಎಷ್ಟು ಮುಂದೆ ಸಾಧ್ಯವೋ ಅಷ್ಟು ಮುಂದಿಡಿ. ಸರಕನ್ನು ಸೀಟ್ ಹಿಂಬದಿಗಿಂತ ಎತ್ತರದಲ್ಲಿ ಯಾವತ್ತೂ ಇಡಬೇಡಿ.**


## ಟ್ರೈಲರ್ ಎಳೆದೊಯ್ಯುವುದು

ನಿಮ್ಮ ವಾಹನವು ಮೂಲತಃ ಒಬ್ಬ ಚಾಲಕ, ಒಬ್ಬ ಪ್ರಯಾಣಿಕ ಮತ್ತು ನಿರ್ದಿಷ್ಟ ಪ್ರಮಾಣದ ಸರಕನ್ನು ಕೊಂಡೊಯ್ಯಲು ವಿನ್ಯಾಸಗೊಂಡಿತ್ತು. ಯಾವುದೇ ಟ್ರೈಲರ್ ಎಳೆದೊಯ್ಯಲು ಅಲ್ಲ. ಟ್ರೈಲರ್ ಎಳೆಯಲು ನಿಮ್ಮ ವಾಹನ ಬಳಸುವುದನ್ನು ಮಾರುತಿ ಸುಜುಕಿ ಶಿಫಾರಸು ಮಾಡುವುದಿಲ್ಲ. ಟ್ರೈಲರ್ ಎಳೆಯುವುದು ನಿಭಾಯಿಸುವುದು, ಬಾಳಿಕೆ ಮತ್ತು ಇಂಧನ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದು.

# ತಪಾಸಣೆ ಮತ್ತು ನಿರ್ವಹಣೆ

ನಿರ್ವಹಣಾ ವೇಳಾಪಟ್ಟಿ ............ 7-1
ಕಾಲಕಾಲದ ನಿರ್ವಹಣಾ ವೇಳಾಪಟ್ಟಿ ............ 7-2
ತಪಾಸಣೆ ಮತ್ತು ನಿರ್ವಹಣಾ ಕಾರ್ಯಗಳನ್ನು ಗ್ರಾಹಕರೇ ನಡೆಸಬೇಕು ............ 7-6
ಡ್ರೈವ್ ಬೆಲ್ಟ್ ............ 7-8
ಇಂಜಿನ್ ಆಯಿಲ್ ಮತ್ತು ಫಿಲ್ಟರ್ ............ 7-8
ಇಂಜಿನ್ ಕೂಲಂಟ್ ............ 7-11
ಏರ್ ಕ್ಲೀನರ್ ............ 7-12
ಸ್ಪಾರ್ಕ್ ಪ್ಲಗ್ ............ 7-12
ಗೇರ್ ಆಯಿಲ್ ............ 7-13
ಕ್ಲಚ್ ಪೆಡಲ್ ............ 7-14
ಫ್ಯೂಯೆಲ್ ಫಿಲ್ಟರ್ (ಡೀಸೆಲ್ ಇಂಜಿನ್ ಮಾಡೆಲ್ ಗೆ) ............ 7-14
ಬ್ರೇಕ್ ಗಳು ............ 7-14
ಸ್ಟೀರಿಂಗ್ ............ 7-16
ಪ್ರೊಪೆಲ್ಲರ್ ಶಾಫ್ಟ್ ಯುನಿವರ್ಸಲ್ ಜಾಯಿಂಟ್ ............ 7-17
ಟೈರ್ ಗಳು ............ 7-17
ಬ್ಯಾಟರಿ ............ 7-19
ಫ್ಯೂಸ್ ಗಳು ............ 7-20
ಬಲ್ಬ್ ಬದಲಿ ............ 7-23
ವೈಪರ್ ಬ್ಲೇಡ್ ಗಳು ............ 7-25
ವಿಂಡ್ ಶೀಲ್ಡ್ ವಾಷರ್ ದ್ರವ (ಅಳವಡಿಸಿದಲ್ಲಿ) ............ 7-27

ಉದಾಹರಣೆ



77PM07008

**⚠ ಎಚ್ಚರಿಕೆ**

ಅಪಘಾತದ ಗಾಯವನ್ನು ತಪ್ಪಿಸಲು ನಿಮ್ಮ ವಾಹನದ ಮೇಲೆ ಕೆಲಸ ಮಾಡುವಾಗ ಬಹಳ ಜಾಗರೂಕತೆ ವಹಿಸಬೇಕು. ಇಲ್ಲಿ ನೀವು ಜಾಗರೂಕವಾಗಿ ಗಮನಿಸಬೇಕಾದ ಕೆಲವು ಮುಂಜಾಗ್ರತೆಗಳು ಇಲ್ಲಿವೆ:

- ಗ್ಯಾರೇಜ್ ಗಳಲ್ಲಿ ಅಥವಾ ಇತರ ಮುಚ್ಚಿದ ಜಾಗಗಳಲ್ಲಿ ಇಂಜಿನ್ ಅನ್ನು ಚಾಲನೆಯ ಸ್ಥಿತಿಯಲ್ಲಿ ಇಡಬೇಡಿ.
- ಇಂಜಿನ್ ಚಾಲನೆಯ ಸ್ಥಿತಿಯಲ್ಲಿದ್ದಾಗ, ಕೈಗಳು, ಬಟ್ಟೆ, ಸಾಧನಗಳು ಮತ್ತು ಇತರ ವಸ್ತುಗಳನ್ನು ಫ್ಯಾನ್ ಮತ್ತು ಡ್ರೈವ್ ಬೆಲ್ಟ್ ನಿಂದ ದೂರವಿಡಿ. ಫ್ಯಾನ್ ಚಲಿಸದೆ ಇರಬಹುದು, ಆದರೆ ಎಚ್ಚರಿಕೆಯ ಹೊರತಾಗಿಯೂ ಅದು ಸ್ವಯಂಚಾಲಿತವಾಗಿಯೇ ಆನ್ ಆಗುತ್ತದೆ.

(ಮುಂದುವರಿದಿದೆ)

**⚠ ಎಚ್ಚರಿಕೆ**

(ಮುಂದುವರಿದಿದೆ)

- ಇಂಜಿನ್ ಚಾಲನೆಯಲ್ಲಿದ್ದಾಗ ಸರ್ವಿಸ್ ಕೆಲಸ ಮಾಡುವುದು ಅಗತ್ಯವೆನಿಸಿದಾಗ, ಪಾರ್ಕಿಂಗ್ ಬ್ರೇಕ್ ಪೂರ್ಣವಾಗಿ ಸೆಟ್ ಮಾಡಲಾಗಿದೆ ಮತ್ತು ಟ್ರಾನ್ಸ್ ಮಿಶನ್ ನ್ಯೂಟ್ರಲ್ ನಲ್ಲಿದೆ ಎನ್ನುವುದನ್ನು ಖಚಿತಪಡಿಸಿ.
- ಇಂಜಿನ್ ಸ್ಟಾರ್ಟ್ ಮಾಡುವಾಗ ಅಥವಾ ಇಂಜಿನ್ ಚಾಲನೆಯ ಸ್ಥಿತಿಯಲ್ಲಿ ಇಗ್ನಿಷನ್ ವೈರ್ ಗಳು ಅಥವಾ ಇತರ ಇಗ್ನಿಷನ್ ಸಿಸ್ಟಂ ಭಾಗಗಳನ್ನು ಸ್ಪರ್ಶಿಸಬೇಡಿ. ಅಥವಾ ನಿಮಗೆ ಇಲೆಕ್ಟ್ರಿಕ್ ಶಾಕ್ ತಗಲುವ ಸಾಧ್ಯತೆಯಿದೆ.
- ಬಿಸಿಯಾದ ಇಂಜಿನ್, ಎಕ್ಸಾಸ್ಟ್ ಮ್ಯಾನಿಫೋಲ್ಡ್ ಮತ್ತು ಪೈಪ್ ಗಳು, ಮಫ್ಲರ್, ರೇಡಿಯೇಟರ್ ಮತ್ತು ವಾಟರ್ ಹೋಸ್ ಗಳನ್ನು ಸ್ಪರ್ಶಿಸದೆ ಇರುವಂತೆ ಜಾಗರೂಕತೆ ವಹಿಸಿ.
- ಹೊಗೆ, ಕಿಡಿಗಳು ಅಥವಾ ಜ್ವಾಲೆಗಳನ್ನು ಇಂಧನ ಅಥವಾ ಬ್ಯಾಟರಿಯ ಅಕ್ಕಪಕ್ಕದಲ್ಲಿ ಇಡಬೇಡಿ. ದಹ್ಯ ವಸ್ತುಗಳಿವೆ.
- ನಿಮ್ಮ ವಾಹನದಲ್ಲಿ ಕೊಡಲಾಗಿರುವ ಪೋರ್ಟೇಬಲ್ ಜ್ಯಾಕ್ ಸಪೋರ್ಟ್ ನಲ್ಲಿರುವ ವಾಹನದ ಅಡಿಯಲ್ಲಿ ರಿಪೇರಿಗಾಗಿ ತೂರಬೇಡಿ.
- ಪಾಸಿಟಿವ್ ಮತ್ತು ನೆಗೆಟಿವ್ ಬ್ಯಾಟರಿ ಟರ್ಮಿನಲ್ ಗಳ ನಡುವೆ ಆಕಸ್ಮಿಕ ಶಾರ್ಟ್ ಸರ್ಕ್ಯೂಟ್ ಗಳಾಗದಂತೆ ಎಚ್ಚರವಹಿಸಿ.
- ಬಳಸಿದ ಆಯಿಲ್, ಕೂಲಂಟ್ ಮತ್ತು ಇತರ ಫ್ಲೂಯಿಡ್ ಗಳನ್ನು ಮಕ್ಕಳು ಮತ್ತು ಸಾಕು ಪ್ರಾಣಿಗಳಿಂದ ದೂರವಿಡಿ. ಬಳಸಿದ ಫ್ಲೂಯಿಡ್ ಗಳನ್ನು ಜಾಗರೂಕವಾಗಿ ವಿಲೇವಾರಿ ಮಾಡಿ; ಅವುಗಳನ್ನು ಎಂದಿಗೂ ನೆಲದ ಮೇಲೆ, ಚರಂಡಿ ಇತ್ಯಾದಿಯಲ್ಲಿ ಸುರಿಯಬೇಡಿ.

## ನಿರ್ವಹಣಾ ವೇಳಾಪಟ್ಟಿ

ಈ ಕೆಳಗಿನ ಪಟ್ಟಿಯಲ್ಲಿ ನಿಮ್ಮ ವಾಹನಕ್ಕೆ ಮಾಡಬೇಕಾದ ನಿತ್ಯದ ನಿರ್ವಹಣೆಯ ಸಮಯದ ವಿವರಗಳಿವೆ. ಈ ಪಟ್ಟಿಯು ಕಿಲೋಮೀಟರ್ ಗಳು ಮತ್ತು ತಿಂಗಳುಗಳಲ್ಲಿ ಯಾವಾಗ ತಪಾಸಣೆ, ಹೊಂದಾಣಿಕೆ, ಲುಬ್ರಿಕೇಶನ್ ಮತ್ತು ಇತರ ಸರ್ವಿಸ್ ಗಳನ್ನು ಮಾಡಬೇಕು ಎನ್ನುವ ವಿವರಗಳಿವೆ.

**⚠ ಎಚ್ಚರಿಕೆ**

ನಿಮ್ಮ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ನಿಮ್ಮ ವಾಹನಕ್ಕೆ ನಿರ್ವಹಣೆ ಕೆಲಸವನ್ನು ಮಾಡಬೇಕು ಎಂದು ಮಾರುತಿ ಸುಜುಕಿ ಶಿಫಾರಸು ಮಾಡುತ್ತದೆ.

***ಸೂಚನೆ***

ನಿಮ್ಮ ವಾಹನದ ಭಾಗಗಳನ್ನು ಬದಲಿಸುವುದು ಅಗತ್ಯವಾದಾಗ, ಮಾರುತಿ ಮಾನ್ಯತೆ ಹೊಂದಿದ ಬದಲಿ ಭಾಗಗಳನ್ನು ಅಥವಾ ಅದಕ್ಕೆ ಸಮನಾದುವನ್ನೇ ಬಳಸಿ.

## ಕಾಲ ಕಾಲದ ನಿರ್ವಹಣಾ ವೇಳಾಪಟ್ಟಿ

**"C":** ಸ್ವಚ್ಛ
**"R":** ಬದಲಿಸಿ ಅಥವಾ ಪರಿವರ್ತಿಸಿ
**"I":** ತಪಾಸಣೆ, ಸ್ವಚ್ಛ, ಹೊಂದಿಕೆ, ಲುಬ್ರಿಕೇಟ್ ಅಥವಾ ಅಗತ್ಯವಿದ್ದಂತೆ ಬದಲಿಸುವುದು
**"L":** ಲುಬ್ರಿಕೇಟ್
**"T":** ನಿರ್ದಿಷ್ಟಪಡಿಸಿದ ಟಾರ್ಕ್ ಗೆ ಬಿಗಿಮಾಡಿ
**"O":** ತಿರುಗಿಸಿ

*ಸೂಚನೆ:*

*ಈ ವಿಷಯಗಳ ಪಟ್ಟಿಯು 90,000 ಕಿಮೀ ಮೈಲೇಜಿಗೆ ನಿಗದಿಪಡಿಸಿರುವ ಸರ್ವಿಸ್ ಗಳನ್ನು ಹೊಂದಿರುತ್ತದೆ. 90,000 ಕಿಮೀ ನಂತರ, ಕ್ರಮವಾಗಿ ಅದೇ ಸಮಯದ ಕಾಲಾವಧಿಗಳಲ್ಲಿ ಅದೇ ಸರ್ವಿಸ್ ಗಳನ್ನು ಮಾಡಿ.*

| ಕಾಲಾವಧಿ: ಈ ಕಾಲಾವಧಿಯನ್ನು ಓಡೋಮೀಟರ್ ನಲ್ಲಿ ನಿರ್ಧರಿಸಬೇಕು, ಅಥವಾ ತಿಂಗಳುಗಳು, ಯಾವುದು ಮೊದಲು ಬರುತ್ತದೋ ಅದು. | | | ಸ್ವತಂತ್ರ ತಪಾಸಣೆ | | | | ಕಾಲ ಕಾಲದ ನಿರ್ವಹಣಾ ವೆಚ್ಚ | | | | | |
|---|---|---|---|---|---|---|---|---|---|---|---|---|
| | | ಕಿಮೀ (x1000) | 5 | 10 | 20 | 30 | 40 | 50 | 60 | 70 | 80 | 90 |
| | | ತಿಂಗಳುಗಳು | 2 | 4 | 8 | 12 | 16 | 20 | 24 | 28 | 32 | 36 |
| **ಇಂಜಿನ್** | | | | | | | | | | | | |
| 1-1. | ನೀರಿನ ಪಂಪ್ ಡ್ರೈವ್, ಆಲ್ಟರ್ನೇಟರ್ ಬೆಲ್ಟ್ (ಟೆನ್ಷನ್, ಸವೆತ) | | - | - | - | - | I | - | - | - | R | - |
| 1-2. | ಇಂಜಿನ್ ಕೂಲಂಟ್ (ಮಟ್ಟ, ಸೋರಿಕೆ) | | I | I | - | I | R | - | R | I | R | I |
| 1-3. | ಇಂಜಿನ್ ಆಯಿಲ್ ಮತ್ತು ಇಂಜಿನ್ ಆಯಿಲ್ ಫಿಲ್ಟರ್ | | - | R | R | R | R | R | R | R | R | R |
| 1-4. | ಕೂಲಿಂಗ್ ಸಿಸ್ಟಂ ಹೋಸ್ ಗಳು ಮತ್ತು ಕನೆಕ್ಷನ್ ಗಳು (ಸೋರಿಕೆ ಮತ್ತು ಹಾನಿ) | | I | I | I | I | I | I | I | I | I | I |
| 1-5. | ಇಂಜಿನ್ ಸಿಲಿಂಡರ್ ಹೆಡ್ ಕವರ್ ಬೋಲ್ಟ್ ಗಳು (ಸಡಿಲ, ಹಾನಿ) | | - | T | T | T | T | T | T | T | T | T |
| 1-6. | ಇಂಜಿನ್ ಮೌಂಟಿಂಗ್ ಮತ್ತು ಮ್ಯಾನಿಫೋಲ್ಡ್ ಫಿಕ್ಸಿಂಗ್ (ಸಡಿಲ, ಹಾನಿ) | | I | I | I | I | I | I | I | I | I | I |
| 1-7. | ವಾಲ್ವ್ ಕ್ಲಿಯರೆನ್ಸ್ | | - | - | - | I | - | - | I | - | - | I |
| 1-8. | ಎಕ್ಸಾಸ್ಟ್ ಸಿಸ್ಟಂ (ಶಬ್ದ, ಸೋರಿಕೆ ಅಥವಾ ಧೋಷಪೂರ್ಣ) | | I | - | I | - | I | - | I | - | I | - |
| 1-9. | ಪಾಸಿಟಿವ್ ಕ್ರಾಂಕ್ ಕೇಸ್ ವೆಂಟಿಲೇಶನ್ ವ್ಯವಸ್ಥೆ | ಪೆಟ್ರೋಲ್ ಬೈ ಫ್ಯೂಯೆಲ್ | I | - | I | - | I | - | I | - | I | - |
| 1-10. | ಎಕ್ಸಾಸ್ಟ್ ಗ್ಯಾಸ್ ರಿಸರ್ಕ್ಯುಲೇಶನ್ ವಾಲ್ವ್ | | - | - | - | C | - | - | C | - | - | C |
| **ಇಗ್ನಿಷನ್** | | | | | | | | | | | | |
| 2-1. | ಇಗ್ನಿಷನ್ ವೈರ್ (ಹಾನಿ, ವಿರೂಪತೆ) | ಪೆಟ್ರೋಲ್ ಬೈ ಫ್ಯೂಯೆಲ್ | - | - | I | - | I | - | I | - | I | - |
| 2-2. | ಸ್ಪಾರ್ಕ್ ಪ್ಲಗ್ | ಪೆಟ್ರೋಲ್ ಬೈ ಫ್ಯೂಯೆಲ್ | - | I | R | I | R | I | R | I | R | I |
| **ಫ್ಯೂಯೆಲ್** | | | | | | | | | | | | |
| 3-1. | ಏರ್ ಕ್ಲೀನರ್ ಫಿಲ್ಟರ್ ಎಲಿಮೆಂಟ್ | ಪೇವ್ಡ್ - ರಸ್ತೆ | ಪ್ರತೀ 5,000 ಕಿಮೀ ಸ್ವಚ್ಛ ಪ್ರತೀ 40,000 ಕಿಮೀ ಬದಲಿಸಿ | | | | | | | | | |
| | | ದೂಳು ತುಂಬಿದ ಸ್ಥಿತಿ | ಪ್ರತೀ 2,500 ಕಿಮೀ ಸ್ವಚ್ಛ ಪ್ರತೀ 40,000 ಕಿಮೀ ಬದಲಿಸಿ ಸ್ಥಿತಿಗಳು ಗಂಭೀರವಾಗಿದ್ದಲ್ಲಿ ಹೆಚ್ಚು ಬೇಗನೇ ಬದಲಿಸಬೇಕು. | | | | | | | | | |
| 3-2. | ಫ್ಯೂಯೆಲ್ ಟ್ಯಾಂಕ್ ಕ್ಯಾಪ್, ಫ್ಯೂಯೆಲ್ ಲೈನ್ಸ್ ಮತ್ತು ಕನೆಕ್ಷನ್ ಗಳು (ಸೋರಿಕೆ ಮತ್ತು ಹಾನಿ) | | I | - | - | - | I | - | - | - | I | - |
| 3-3. | ಫ್ಯೂಯೆಲ್ ಫಿಲ್ಟರ್ ಮತ್ತು ನೀರು ಬಸಿಯುವುದು | ಡೀಸೆಲ್ | I | I | R | I | R | I | R | I | R | I |
| 3-4. | ಫ್ಯೂಯೆಲ್ ಫಿಲ್ಟರ್ (ಸೋರಿಕೆ) | ಪೆಟ್ರೋಲ್ ಬೈ ಫ್ಯೂಯೆಲ್ | I | I | I | I | R | I | I | I | R | I |
| 3-5. | ಸಿ.ಎನ್.ಜಿ. ಫ್ಯೂಯೆಲ್ ಲೈನ್ ಜಾಯಿಂಟ್ಸ್ (ಗ್ಯಾಸ್ ಲೀಕೇಜ್) | ಬೈ ಫ್ಯೂಯೆಲ್ | I | I | I | I | I | I | I | I | I | I |
| 3-6. | ಸಿ.ಎನ್.ಜಿ. ಲೋ ಪ್ರೆಷರ್ ಫಿಲ್ಟರ್ ಕಾರ್ಟ್ರಿಡ್ಜ್ ಹಾಗೂ ಒ-ರಿಂಗ್ | ಬೈ ಫ್ಯೂಯೆಲ್ | - | - | R | - | R | - | R | - | R | - |
| 3-7. | ಸಿ.ಎನ್.ಜಿ. ಸಿಲಿಂಡರ್ ಲೀಕ್ | ಬೈ ಫ್ಯೂಯೆಲ್ | ಸರ್ಕಾರ ಅನುಮೋದಿಸಿದ ಟೆಸ್ಟಿಂಗ್ ಏಜೆನ್ಸಿಯಿಂದ ಆರಂಭಿಕ ಪರೀಕ್ಷೆಯ ದಿನಾಂಕದಿಂದ ಪ್ರತಿ 3 ವರ್ಷಗಳು | | | | | | | | | |
| 3-8. | ಸಿ.ಎನ್.ಜಿ. ಫಿಲ್ಲರ್ ರಿಸೆಪ್ಟಕಲ್ ಒ-ರಿಂಗ್ | ಬೈ ಫ್ಯೂಯೆಲ್ | ಪ್ರತಿ 4 ವರ್ಷಗಳು ಅಥವಾ 300,000 ಕಿ.ಮೀ ಪೈಕಿ ಯಾವುದು ಬೇಗವೋ ಆಗ ಬದಲಿಸಿ | | | | | | | | | |

| ಕಾಲಾವಧಿ: ಈ ಕಾಲಾವಧಿಯನ್ನು ಓಡೋಮೀಟರ್ ನಲ್ಲಿ ನಿರ್ಧರಿಸಬೇಕು, ಅಥವಾ ತಿಂಗಳುಗಳು, ಯಾವುದು ಮೊದಲು ಬರುತ್ತದೋ ಅದು. | | ಸ್ವತಂತ್ರ ತಪಾಸಣೆ | | | | ಕಾಲ ಕಾಲದ ನಿರ್ವಹಣಾ ವೆಚ್ಚ | | | | | |
|---|---|---|---|---|---|---|---|---|---|---|---|
| | ಕಿಮೀ (x1000) | 5 | 10 | 20 | 30 | 40 | 50 | 60 | 70 | 80 | 90 |
| | ತಿಂಗಳುಗಳು | 2 | 4 | 8 | 12 | 16 | 20 | 24 | 28 | 32 | 36 |
| **ಕ್ಲಚ್ ಮತ್ತು ಟ್ರಾನ್ಸ್ ಮಿಶನ್** | | | | | | | | | | | |
| 4-1. | ಕ್ಲಚ್ ಪೆಡಲ್ (ಪ್ಲೇ) | I | I | I | I | I | I | I | I | I | I |
| 4-2. | ಕ್ಲಚ್ ಸ್ಲಿಪ್ಪಿಂಗ್ (ಎಳೆದೊಯ್ಯುವುದು ಅಥವಾ ಹೆಚ್ಚುವರಿ ಹಾನಿ) | I | I | I | I | I | I | I | I | I | I |
| 4-3. | ಗೇರ್ ಶಿಫ್ಟರ್ ಕೇಬಲ್ ಗಳು | I | I | I | I | I | I | I | I | I | I |
| 4-4. | ಮ್ಯಾನುವಲ್ ಟ್ರಾನ್ಸ್ ಮಿಶನ್ ಆಯಿಲ್ (ಮಟ್ಟ, ಸೋರಿಕೆ) | 1,60,000 ಕಿಮೀ ಅಥವಾ 10 ವರ್ಷಗಳಲ್ಲಿ ಯಾವುದು ಮೊದಲು ಬರುತ್ತದೋ ಅದರಲ್ಲಿ ಬದಲಿಸಿ | | | | | | | | | |
| | | I | I | I | I | I | I | I | I | I | I |
| 4-5. | ರೇರ್ ಡಿಫರೆನ್ಷಿಯಲ್ ಆಯಿಲ್ (ಮಟ್ಟ, ಸೋರಿಕೆ) | 80,000 ಕಿಮೀ ಅಥವಾ 4 ವರ್ಷಗಳಲ್ಲಿ ಯಾವುದು ಮೊದಲು ಬರುತ್ತದೋ ಅದರಲ್ಲಿ ಬದಲಿಸಿ | | | | | | | | | |
| | | I | I | I | I | I | I | I | I | I | I |
| 4-6. | ಪ್ರೊಪೆಲ್ಲರ್ ಶಾಫ್ಟ್/ ಯುನಿವರ್ಸಲ್ ಜಾಯಿಂಟ್ (ಸಡಿಲ, ಹಾನಿ) | I | I&L | I&L | I&L | I&L | I&L | I&L | I&L | I&L | I&L |
| **ಬ್ರೇಕ್** | | | | | | | | | | | |
| 5-1. | ಬ್ರೇಕ್ ಫ್ಲೂಯಿಡ್ (ಮಟ್ಟ, ಸೋರಿಕೆ) | I | I | R | I | R | I | R | I | R | I |
| 5-2. | ಬ್ರೇಕ್ ಪೆಡಲ್ (ಪೆಡಲ್ - ಫ್ರಂಟ್ ಪ್ಯಾನಲ್ ಕ್ಲಿಯರೆನ್ಸ್) | I | I | I | I | I | I | I | I | I | I |
| 5-3. | ಪಾರ್ಕಿಂಗ್ ಬ್ರೇಕ್ ಲಿವರ್ ಮತ್ತು ಕೇಬಲ್ (ಪ್ಲೇ, ಹಾನಿ) | I | I | I | I | I | I | I | I | I | I |
| 5-4. | ಬ್ರೇಕ್ ಡಿಸ್ಕ್ ಮತ್ತು ಪ್ಯಾಡ್ (ಸವೆತ) | I | I | I | I | I | I | I | I | I | I |
| 5-5. | ಬ್ರೇಕ್ ಡ್ರಮ್ ಮತ್ತು ಶೂಗಳು (ಸವೆತ) | - | I | I | I | I | I | I | I | I | I |
| 5-6. | ಮಾಸ್ಟರ್ ಸಿಲಿಂಡರ್, ವೀಲ್ ಸಿಲಿಂಡರ್ ಮತ್ತು ಕ್ಯಾಲಿಪರ್ ಪಿಸ್ಟನ್ (ಫ್ಲೂಯಿಡ್ ಸೋರಿಕೆ, ಬೂಟ್ / ಸೀಲ್ ಹಾನಿ) | I | I | I | I | I | I | I | I | I | I |
| 5-7. | ಬ್ರೇಕ್ ಹೋಸ್ ಗಳು ಮತ್ತು ಪೈಪ್ ಗಳು (ಸೋರಿಕೆ, ಹಾನಿ) | I | I | I | I | I | I | I | I | I | I |
| **ವೀಲ್** | | | | | | | | | | | |
| 6-1. | ಟೈರ್ ಗಳು (ಏರ್ ಪ್ರೆಶರ್, ಅಸಹಜ ಸವೆತ, ಬಿರುಕು ಮತ್ತು ರೊಟೇಶನ್) | I&O | I&O | I&O | I&O | I&O | I&O | I&O | I&O | I&O | I&O |
| 6-2. | ವೀಲ್ಸ್ (ಹಾನಿ) | I | I | I | I | I | I | I | I | I | I |
| 6-3. | ಫ್ರಂಟ್/ ರೇರ್ ವೀಲ್ ಬೇರಿಂಗ್ (ಸಡಿಲ, ಹಾನಿ) | I | I | I | I | I | I | I | I | I | I |
| **ಫ್ರಂಟ್/ ರೇರ್ ಸಸ್ಪೆನ್ಷನ್** | | | | | | | | | | | |
| 7-1. | ಫ್ರಂಟ್ ಸಸ್ಪೆನ್ಷನ್ ಸ್ಟ್ರಟ್ ಮತ್ತು ಶಾಕ್ ಅಬ್ಸಾರ್ಬರ್ (ಆಯಿಲ್ ಸೋರಿಕೆ, ಹಾನಿ) | I | I | I | I | I | I | I | I | I | I |
| 7-2. | ಫ್ರಂಟ್ ಸಸ್ಪೆನ್ಷನ್ ಆರ್ಮ್ಸ್, ನಕಲ್ ಸಪೋರ್ಟ್ ಮತ್ತು ಟೆನ್ಷನ್ ರಾಡ್ ಗಳು (ಸಡಿಲ, ಹಾನಿ) | I | I | I | I | I | I | I | I | I | I |
| 7-3. | ರೇರ್ ಲೀಫ್ ಸ್ಪ್ರಿಂಗ್ (ಹಾನಿ) | I | I | I | I | I | I | I | I | I | I |
| 7-4. | ರೇರ್ ಶಾಕ್ ಅಬ್ಸಾರ್ಬರ್ (ಆಯಿಲ್ ಸೋರಿಕೆ, ಹಾನಿ) | I | I | I | I | I | I | I | I | I | I |
| 7-5. | ಎಲ್ಲಾ ಬೋಲ್ಟ್ ಗಳು ಮತ್ತು ನಟ್ಟುಗಳು (ಸಡಿಲ) | T | T | T | T | T | T | T | T | T | T |

| ಕಾಲಾವಧಿ: ಈ ಕಾಲಾವಧಿಯನ್ನು ಓಡೋಮೀಟರ್ ನಲ್ಲಿ ನಿರ್ಧರಿಸಬೇಕು, ಅಥವಾ ತಿಂಗಳುಗಳು, ಯಾವುದು ಮೊದಲು ಬರುತ್ತದೋ ಅದು. | | ಸ್ವತಂತ್ರ ತಪಾಸಣೆ | | | | ಕಾಲ ಕಾಲದ ನಿರ್ವಹಣಾ ವೆಚ್ಚ | | | | | |
|---|---|---|---|---|---|---|---|---|---|---|---|
| | ಕಿಮೀ (x1000) | 5 | 10 | 20 | 30 | 40 | 50 | 60 | 70 | 80 | 90 |
| | ತಿಂಗಳುಗಳು | 2 | 4 | 8 | 12 | 16 | 20 | 24 | 28 | 32 | 36 |
| **ಸ್ಟೀರಿಂಗ್** | | | | | | | | | | | |
| 8-1. | ಸ್ಟೀರಿಂಗ್ ವೀಲ್ (ಪ್ಲೇ, ಸಡಿಲ) | I | I | I | I | I | I | I | I | I | I |
| 8-2. | ಸ್ಟೀರಿಂಗ್ ಕಾಲಂ ರಾಡ್ ಗಳು ಮತ್ತು ಆರ್ಮ್ ಗಳು (ಸಡಿಲ, ಹಾನಿ, ಸವೆತ) | I | I | I | I | I | I | I | I | I | I |
| **ಇಲೆಕ್ಟ್ರಿಕಲ್** | | | | | | | | | | | |
| 9-1. | ಬ್ಯಾಟರಿ ಎಲೆಕ್ಟ್ರೋಲೈಟ್ (ಸಮತಟ್ಟು, ಸೋರಿಕೆ) | I | I | I | I | I | I | I | I | I | I |
| 9-2. | ಬ್ಯಾಟರಿ ವೋಲ್ಟೇಜ್ | I | I | I | I | I | I | I | I | I | I |
| 9-3. | ವೈರಿಂಗ್ ಹಾರ್ನೆಸ್ ಕನೆಕ್ಷನ್ (ಸಡಿಲ, ಹಾನಿ) | I | I | I | I | I | I | I | I | I | I |
| 9-4. | ಲೈಟಿಂಗ್ ಸಿಸ್ಟಂ (ಆಪರೇಶನ್, ಸ್ಟೇನ್ಸ್, ಹಾನಿ) | I | I | I | I | I | I | I | I | I | I |
| 9-5. | ಹಾರ್ನ್ (ಆಪರೇಶನ್) | I | I | I | I | I | I | I | I | I | I |
| 9-6. | ಪರಿಕರ ಸಾಕೆಟ್ (ಆಪರೇಶನ್) | I | I | I | I | I | I | I | I | I | I |
| **ಬಾಡಿ** | | | | | | | | | | | |
| 10-1. | ಎಲ್ಲಾ ಚಾಸಿ ಬೋಲ್ಟ್ ಗಳು ಮತ್ತು ನಟ್ಟುಗಳು (ಬಿಗಿಯಾಗಿವೆ) | I | T | T | T | T | T | T | T | T | T |
| 10-2. | ಎಲ್ಲಾ ಲ್ಯಾಚ್ ಗಳು, ಹಿಂಜ್ ಗಳು ಮತ್ತು ಲಾಕ್ ಗಳು (ಕಾರ್ಯ) | I&L | I&L | I&L | I&L | I&L | I&L | I&L | I&L | I&L | I&L |
| 10-3. | ಕಾರ್ಗೋ ಬೆಡ್ (ತಪಾಸಣೆ) | I | I | I | I | I | I | I | I | I | I |
| **ರಸ್ತೆ ಪರೀಕ್ಷೆ** | | | | | | | | | | | |
| 11-1. | ಬ್ರೇಕ್ಸ್, ಗೇರ್ ಶಿಫ್ಟಿಂಗ್ ಮತ್ತು ಸ್ಪೀಡೋಮೀಟರ್ ಆಪರೇಶನ್ | I | I | I | I | I | I | I | I | I | I |
| 11-2. | ಬಾಡಿ ಮತ್ತು ಚಾಸಿ ಶಬ್ದ | I | I | I | I | I | I | I | I | I | I |

## ತಪಾಸಣೆ & ನಿರ್ವಹಣೆ ಕಾರ್ಯಗಳನ್ನು ಗ್ರಾಹಕರೇ ನಡೆಸಬೇಕು

ಈ ಕೆಳಗಿನ ಪಟ್ಟಿಯು ನೀವು ಮಾಡಬಹುದಾದ ತಪಾಸಣೆ ಮತ್ತು ನಿರ್ವಹಣೆ ಕಾರ್ಯಗಳನ್ನು ತೋರಿಸುತ್ತದೆ.
ಈ ಪಟ್ಟಿಯು ನೀವು ತಪಾಸಣೆ, ಗ್ರೀಸಿಂಗ್, ಲುಬ್ರಿಕೇಶನ್ ಮತ್ತು ಇತರ ಸರ್ವಿಸ್ ಗಳನ್ನು ಯಾವಾಗ ಮಾಡಬೇಕು ಎಂದೂ ತೋರಿಸುತ್ತದೆ.

| ಫ್ರೀಕ್ವೆನ್ಸಿ | ಕ್ರಮ ಸಂಖ್ಯೆ | ಆಪರೇಶನ್ | ಉಲ್ಲೇಖ |
|---|---|---|---|
| ನಿತ್ಯವೂ | 1 | ಏರ್ ಪ್ರೆಶರ್, ಅಸಹಜವಾದ ಸವೆತ, ಮುರಿತಗಳು ಮತ್ತು ಹಾನಿಗೆ ಎಲ್ಲಾ ಟೈರ್ ಗಳನ್ನು (ಸ್ಪೇರ್ ವೀಲ್ ಸೇರಿದಂತೆ) ತಪಾಸಣೆ ಮಾಡಿ. | ಪುಟ ಸಂಖ್ಯೆ 7-21 |
| ವಾರಕ್ಕೊಮ್ಮೆ | 2 | ಇಂಜಿನ್ ಆಯಿಲ್ ಮಟ್ಟವನ್ನು ತಪಾಸಣೆ ಮಾಡಿ. ಅಗತ್ಯವಿದ್ದಲ್ಲಿ, ಮಾರುತಿ ಮಾನ್ಯತೆ ಹೊಂದಿದ ಡೀಸಲ್ ಆಯಿಲ್ ಟಾಪಪ್ ಮಾಡಿ. | ಪುಟ ಸಂಖ್ಯೆ 7-9 |
| | 3 | ಕೂಲಂಟ್ ರಿಸರ್ವಾಯರ್ ನಲ್ಲಿ ಕೂಲಂಟ್ ಮಟ್ಟವನ್ನು ತಪಾಸಣೆ ಮಾಡಿ ಮತ್ತು ಅಗತ್ಯವಿದ್ದಲ್ಲಿ, ಶಿಫಾರಸು ಮಾಡಿದ ಮಾರುತಿ ಜೆನ್ಯೂನ್ ಕೂಲಂಟ್ ಮತ್ತು 30/70 ಸೂಚಿತ ಅನುಪಾತದಲ್ಲಿ ಡಿಸ್ಟಿಲ್ ಮಾಡಿದ ನೀರಿನ ಮಿಶ್ರಣವನ್ನು ಟಾಪಪ್ ಮಾಡಿ. | ಪುಟ ಸಂಖ್ಯೆ 7-13 |
| | 4 | ಟ್ರಾನ್ಸ್ ಮಿಶನ್ ಆಯಿಲ್ ಮಟ್ಟ ಮತ್ತು ಡಿಫರೆನ್ಷಿಯಲ್ ಆಯಿಲ್ ಮಟ್ಟವನ್ನು ತಪಾಸಣೆ ಮಾಡಿ. | ಪುಟ ಸಂಖ್ಯೆ 7-13 |
| | 5 | ಬ್ರೇಕ್ ಫ್ಲೂಯಿಡ್ ಮಟ್ಟವನ್ನು ಬ್ರೇಕ್ ಫ್ಲೂಯಿಡ್ ರಿಸರ್ವಾಯರ್ ನಲ್ಲಿ ತಪಾಸಣೆ ಮಾಡಿ ಮತ್ತು ಅಗತ್ಯವಿದ್ದಲ್ಲಿ, ಮಾರುತಿ ಜೆನ್ಯೂನ್ ಬ್ರೇಕ್ ಫ್ಲೂಯಿಡ್ ಜೊತೆಗೆ ಟಾಪಪ್ ಮಾಡಿ. | ಪುಟ ಸಂಖ್ಯೆ 7-18 |
| | 6 | ಇದಕ್ಕಾಗಿ ವಾಹನವನ್ನು ತಪಾಸಣೆ ಮಾಡಿ<br>• ಇಂಜಿನ್ ಆಯಿಲ್ ಸೋರಿಕೆ<br>• ಕೂಲಂಟ್ ಸೋರಿಕೆ<br>• ಬ್ರೇಕ್ ಫ್ಲೂಯಿಡ್ ಸೋರಿಕೆ<br>• ಫ್ರಂಟ್ ಸಸ್ಪೆನ್ಷನ್ ಸ್ಟ್ರಟ್ ಸೋರಿಕೆ<br>• ರೇರ್ ಶಾಕ್ ಅಬ್ಸಾರ್ಬರ್ ಸೋರಿಕೆ<br>• ಫ್ಯೂಯೆಲ್ ಸೋರಿಕೆ<br>• ಟ್ರಾನ್ಸ್ ಮಿಶನ್ ಆಯಿಲ್ ಮತ್ತು ಡಿಫರೆನ್ಷಿಯಲ್ ಆಯಿಲ್ ಸೋರಿಕೆ. | ತಪಾಸಣೆ & ನಿರ್ವಹಣೆ ವಿಭಾಗ |
| | 7 | ಬ್ಯಾಟರಿ ಇಲೆಕ್ಟ್ರೋಲೈಟ್ ಮಟ್ಟ, ಟರ್ಮಿನಲ್ ಗಳು ಮತ್ತು ಬ್ರಾಕೆಟ್. | ಪುಟ ಸಂಖ್ಯೆ 7-23 |
| | 8 | ವೀಲ್ ಮೌಂಟಿಂಗ್ ನಟ್ಟುಗಳನ್ನು ತಪಾಸಣೆ ಮಾಡಿ ಮತ್ತು ಅಗತ್ಯವಿದ್ದಲ್ಲಿ ಬಿಗಿಮಾಡಿ. | ಪುಟ ಸಂಖ್ಯೆ 8-5 |

| | | | |
|---|---|---|---|
| ತಿಂಗಳಿಗೊಮ್ಮೆ | 9 | ಡ್ರೈವ್ ಬೆಲ್ಟ್ ಅನ್ನು ಹಾನಿ ಅಥವಾ ಕೆಟ್ಟು ಹೋಗಿರುವುದು. | ಪುಟ ಸಂಖ್ಯೆ 7-8 |
| | 10 | ಸ್ವಚ್ಛ ಏರ್ ಫಿಲ್ಟರ್ ಎಲಿಮೆಂಟ್. | ಪುಟ ಸಂಖ್ಯೆ 7-14 |
| | 11 | ಬಹು ಉದ್ದೇಶ ಗ್ರೀಸ್ ಬಳಸಿ ಎಲ್ಲಾ ಲ್ಯಾಚ್ ಗಳು, ಹಿಂಜ್ ಗಳು ಮತ್ತು ಲಾಕ್ ಗಳಿಗೆ ಗ್ರೀಸ್ ಹಚ್ಚಿ. | ಪುಟ ಸಂಖ್ಯೆ 7-5 |
| | 12 | ಗ್ರೀಸ್ ಗನ್ ಬಳಸಿ ಪ್ರೊಪೆಲ್ಲರ್ ಶಾಫ್ಟ್ ಯುನಿವರ್ಸಲ್ ಜಾಯಿಂಟ್ ಗೆ ಗ್ರೀಸ್ ಮಾಡಿ. | ಪುಟ ಸಂಖ್ಯೆ 7-20 |
| | 13 | ಫ್ಯೂಯೆಲ್ ಫಿಲ್ಟರ್ ನ ಡ್ರೈನ್ ಸ್ಕ್ರೂವನ್ನುಸಡಿಲಿಸಿ ಮತ್ತು ನೀರು ಮತ್ತು ನಿಕ್ಷೇಪವನ್ನು ಬಸಿಯಿರಿ. | ಪುಟ ಸಂಖ್ಯೆ 7-18 |
| ಅಗತ್ಯ ಬಿದ್ದಾಗಲೆಲ್ಲ | 14 | ಕ್ಲಚ್ ಪೆಡಲ್ ಪ್ಲೇ ತಪಾಸಣೆ. | ಪುಟ ಸಂಖ್ಯೆ 7-17 |
| | 15 | ಇಂಜಿನ್ ಚಾಲನೆಯಲ್ಲಿದ್ದಾಗ ಬ್ರೇಕ್ ಪೆಡಲ್ ನಿಂದ ಫ್ಲೋರ್ ಪ್ಯಾನೆಲ್ ಅಂತರವನ್ನು ಬ್ರೇಕ್ ಗಳನ್ನು ಹಾಕುವ ಮೂಲಕ ತಪಾಸಣೆ ಮಾಡಿ. | ಪುಟ ಸಂಖ್ಯೆ 7-19 |
| | 16 | ಪಾರ್ಕಿಂಗ್ ಬ್ರೇಕ್ ಸೂಕ್ತ ಹೊಂದಾಣಿಕೆಗೆ ತಪಾಸಣೆ ಮಾಡಿ. | ಪುಟ ಸಂಖ್ಯೆ 7-20 |

*** ವಾಹನ ಒಂದು ಕಡೆಗೆ ಎಳೆಯುತ್ತದ್ದಲ್ಲಿ ಅಥವಾ ಅಧಿಕ ವೇಗದಲ್ಲಿ ಕಂಪಿಸುತ್ತಿದ್ದಲ್ಲಿ ವೀಲ್ ಸಾಲು ಜೋಡಣೆಯನ್ನು ಮತ್ತು ಸಮತೋಲನವನ್ನು ತಪಾಸಣೆ ಮಾಡಿ ಮತ್ತು/ ಅಥವಾ ಹೊಂದಿಸಿ.**


## ಡ್ರೈವ್ ಬೆಲ್ಟ್

**⚠ ಎಚ್ಚರಿಕೆ**

**ಇಂಜಿನ್ ಚಾಲನೆಯಲ್ಲಿದ್ದಾಗ ಕೈಗಳು, ಕೂದಲು,ಬಟ್ಟೆ, ಸಾಧನಗಳು ಇತ್ಯಾದಿಯನ್ನು ಚಲಿಸುವ ಫ್ಯಾನ್ ಮತ್ತು ಡ್ರೈವ್ ಬೆಲ್ಟ್ ಗಳಿಂದ ದೂರವಿಡಿ.**

ಡ್ರೈವ್ ಬೆಲ್ಟ್ ಟೆನ್ಷನ್ ಸರಿಯಾಗಿದೆ ಎಂಬುದನ್ನು ಖಚಿತಪಡಿಸಿ. ಬೆಲ್ಟ್ ತುಂಬಾ ಸಡಿಲವಾಗಿದ್ದರೆ, ಬ್ಯಾಟರಿ ಚಾರ್ಜಿಂಗ್ ಸೂಕ್ತವಾಗಿಲ್ಲದಿದ್ದರೆ, ಇಂಜಿನ್ ಓವರ್ಹೀಟಿಂಗ್ ಅಥವಾ ವಿಪರೀತ ಬೆಲ್ಟ್ ಸವಕಳಿ ಉಂಟಾಗಬಹುದು. ನೀವು ಪುಲ್ಲೆಗಳ ಮಧ್ಯೆ ಹೆಬ್ಬೆರಳಿನಿಂದ ಬೆಲ್ಟ್ ಅನ್ನು ಒತ್ತಿದಾಗ ಅದು ಬೆಲ್ಟ್ ಹಾಳಾಗಿಲ್ಲ ಎಂದು ಖಚಿತಪಡಿಸಲು ಅದನ್ನು ಪರಿಶೀಲಿಸಬೇಕು. ನೀವು ಬೆಲ್ಟ್ ಅನ್ನು ಬದಲಿಸಲು ಅಥವಾ ಹೊಂದಿಸಲು ಬಯಸಿದರೆ ಅಧಿಕೃತ ಮಾರುತಿ ಸುಜುಕಿ ಕಮರ್ಷಿಯಲ್ ವರ್ಕ್ಶಾಪ್ನಲ್ಲಿ ಮಾಡಿಸಿಕೊಳ್ಳಿ.

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**




77PM07001

**(ಡೀಸೆಲ್ ಇಂಜಿನ್ ಮಾಡೆಲ್ ಗೆ)**
ಡ್ರೈವ್ ಬೆಲ್ಟ್ಸ್ ಟೆನ್ಷನ್ ಸ್ವಯಂಚಾಲಿತವಾಗಿ ಹೊಂದಿಕೊಳ್ಳುತ್ತದೆ.


ಬೆಲ್ಟ್ ಗಳು ಹಾನಿಯಾಗಿಲ್ಲ ಎಂದು ಖಾತರಿಪಡಿಸಲು ಪರೀಕ್ಷಿಸಬೇಕು.

ಬೆಲ್ಟ್ ಬದಲಿಸಬೇಕು ಅಥವಾ ಹೊಂದಿಸಬೇಕು ಎಂಬ ಅಗತ್ಯ ಬಂದಲ್ಲಿ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಇದನ್ನು ಮಾಡಿಕೊಳ್ಳಿ.

## ಇಂಜಿನ್ ಆಯಿಲ್ ಮತ್ತು ಫಿಲ್ಟರ್

### ನಿರ್ದಿಷ್ಟ ಆಯಿಲ್

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**





77PM07002

(1) ಆದ್ಯತೆ ನೀಡಲಾಗಿದೆ

ನೀವು ಬಳಸುವ ಇಂಜಿನ್ ಆಯಿಲ್ SG+, SH, SJ, SL, SM ಅಥವಾ **SN** ಗುಣಮಟ್ಟದ ವರ್ಗೀಕರಣದ ಅಡಿಯಲ್ಲಿ ಬರುತ್ತದೆ ಎಂದು ಖಚಿತಪಡಿಸಿ. ಮೇಲಿನ ಚಾರ್ಟ್ಗೆ ಅನುಗುಣವಾಗಿ ಸೂಕ್ತ ಆಯಿಲ್ ವಿಸ್ಕಾಸಿಟಿಯನ್ನು ಆರಿಸಿಕೊಳ್ಳಿ. **SAE 5W- 30** ಆಯಿಲ್ ಅನ್ನೇ ಬಳಸುವಂತೆ ಶಿಫಾರಸು ಮಾಡಲಾಗಿದೆ.

**(ಡೀಸೆಲ್ ಇಂಜಿನ್ ಮಾಡೆಲ್ ಗೆ)**





76MH024

(1) ಆದ್ಯತೆಯ

ನೀವು ಬಳಸುವ ಇಂಜಿನ್ ಆಯಿಲ್ **5W-30** ಗುಣಮಟ್ಟ ವಿಭಾಗ ACEA A5/B5 ದಲ್ಲಿ ಬರುತ್ತದೆ ಎಂದು ಖಚಿತಪಡಿಸಿಕೊಳ್ಳಿ. ಮೇಲಿನ ಚಾರ್ಟ್ ಗೆ ತಕ್ಕಂತೆ ಸೂಕ್ತ ಆಯಿಲ್ ವಿಸ್ಕಾಸಿಟಿಯನ್ನು ಬಳಸಿ.


## ಆಯಿಲ್ ಮಟ್ಟ ಪರೀಕ್ಷೆ

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**




77PM07023

**(ಡೀಸೆಲ್ ಇಂಜಿನ್ ಮಾಡೆಲ್ ಗೆ)**





77PH036

(1) ಇಂಜಿನ್ ಆಯಿಲ್ ಡಿಪ್ ಸ್ಟಿಕ್

ಇಂಜಿನ್ ಆಯಿಲ್ ಅನ್ನು ನಿಮ್ಮ ವಾಹನದ ಸೂಕ್ತ ಲುಬ್ರಿಕೇಶನ್ ಗಾಗಿ ಸರಿಯಾದ ಮಟ್ಟದಲ್ಲಿ ಇಡುವುದು ಅತೀ ಅಗತ್ಯವಾಗಿದೆ. ವಾಹನವನ್ನು ಸಮತಟ್ಟಾದ ಹೊರಮೈ ಮೇಲೆ ನಿಲ್ಲಿಸಿ ಆಯಿಲ್ ಪರೀಕ್ಷೆ ಮಾಡಿ. ವಾಹನವು ಇಳಿಜಾರಿನಲ್ಲಿದ್ದಲ್ಲಿ ಆಯಿಲ್ ಮಟ್ಟ ಸೂಚನೆ ಸರಿಯಾಗಿ ಸಿಗದಿರಬಹುದು. ಆಯಿಲ್ ಮಟ್ಟವನ್ನು ಇಂಜಿನ್ ಸ್ಟಾರ್ಟ್ ಆಗುವ ಮೊದಲು ಅಥವಾ ಇಂಜಿನ್ ನಿಲ್ಲಿಸುವ ಕನಿಷ್ಠ 5 ನಿಮಿಷಗಳ ನಂತರ ಪರೀಕ್ಷೆ ಮಾಡತಕ್ಕದ್ದು.

ಇಂಜಿನ್ ಆಯಿಲ್ ಡಿಪ್ ಸ್ಟಿಕ್ ನ ಹ್ಯಾಂಡಲ್ ಹಳದಿ ಬಣ್ಣದಲ್ಲಿದ್ದು ಸುಲಭವಾಗಿ ಗುರುತಿಸಬಹುದು.




52D084

ಆಯಿಲ್ ಡಿಪ್ ಸ್ಟಿಕ್ ಹೊರಗೆಳೆಯಿರಿ, ಸ್ವಚ್ಛ ಬಟ್ಟೆಯಲ್ಲಿ ಆಯಿಲನ್ನು ಒರೆಸಿ, ಡಿಪ್ ಸ್ಟಿಕ್ ಅನ್ನು ಇಂಜಿನ್ ನಲ್ಲಿ ಇಳಿಸಿ ಮತ್ತು ನಂತರ ತೆಗೆಯಿರಿ. ಸ್ಟಿಕ್ ಮೇಲೆ ಆಯಿಲ್ ಸ್ಟಿಕ್ ನಲ್ಲಿ ತೋರಿಸಿರುವಂತೆ ಮೇಲೆ ಅಥವಾ ಕಳಗೆ ಇರಬೇಕು. ಕೆಳಗಿನ ಮಿತಿಯಲ್ಲಿ ಆಯಿಲ್ ಮಟ್ಟವನ್ನು ತೋರಿಸುತ್ತಿದ್ದಲ್ಲಿ ಸಾಕಷ್ಟು ಆಯಿಲನ್ನು ಸೇರಿಸಿ ಮೇಲಿನ ಮಿತಿಗೆ ಆಯಿಲನ್ನು ಏರಿಸಿ.


| *ಸೂಚನೆ* |
|---|
| ಆಯಿಲ್ ಮಟ್ಟವನ್ನು ನಿತ್ಯವೂ ಪರೀಕ್ಷಿಸಲು ವಿಫಲವಾದಲ್ಲಿ ಸಾಕಷ್ಟು ಆಯಿಲ್ ಇಲ್ಲದ ಕಾರಣ ಗಂಭೀರ ಇಂಜಿನ್ ಸಮಸ್ಯೆಗೆ ಕಾರಣವಾಗಬಹುದು. |

| *ಸೂಚನೆ* |
|---|
| ಗರಿಷ್ಠ ಮಿತಿಯನ್ನು ಮೀರಿ ಆಯಿಲನ್ನು ಟಾಪಪ್ ಮಾಡಬೇಡಿ. ಅತಿಯಾದ ಆಯಿಲ್ ಗಂಭೀರ ಇಂಜಿನ್ ಸಮಸ್ಯೆಗೆ ಕಾರಣವಾಗುತ್ತದೆ. |

### ಮರಳಿ ತುಂಬುವುದು

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**


ಉದಾಹರಣೆ



77PM07024

**(ಡೀಸೆಲ್ ಇಂಜಿನ್ ಮಾಡೆಲ್ ಗೆ)**

ಉದಾಹರಣೆ



77PH037

ಆಯಿಲ್ ಫಿಲ್ಲರ್ ಕ್ಯಾಪ್ ಕಳಚಿ ಮತ್ತು ಆಯಿಲನ್ನು ನಿಧಾನವಾಗಿ ಫಿಲ್ಲರ್ ಹೋಲ್ ಮೂಲಕ ತುಂಬಿ ಆಯಿಲ್ ಮಟ್ಟವನ್ನು ಡಿಪ್ ಸ್ಟಿಕ್ ಮೇಲೆ ಮೇಲಿನ ಮಿತಿಗೆ ತನ್ನಿ ಅತಿಯಾಗಿ ತುಂಬದೆ ಇರುವಂತೆ ಜಾಗರೂಕತೆ ವಹಿಸಿ. ಅತಿಯಾದ ಆಯಿಲ್ ಅತೀ ಕಡಿಮೆ ಆಯಿಲ್ ನಷ್ಟೇ ಕೆಟ್ಟದಾಗಿರುತ್ತದೆ. ಮರಳಿ ತುಂಬಿದ ನಂತರ, ಇಂಜಿನ್ ಸ್ಟಾರ್ಟ್ ಮಾಡಿ ಮತ್ತು ಒಂದು ನಿಮಿಷದವರೆಗೆ ತಟಸ್ಥವಾಗಿಡಿ. ಇಂಜಿನ್ ನಿಲ್ಲಿಸಿ, 5 ನಿಮಿಷಗಳ ಕಾಲ ಕಾಯಿರಿ ಮತ್ತು ಆಯಿಲ್ ಮಟ್ಟವನ್ನು ಮತ್ತೊಮ್ಮೆ ಪರೀಕ್ಷಿಸಿ.

## ಇಂಜಿನ್ ಆಯಿಲ್ ಮತ್ತು ಫಿಲ್ಟರ್ ಬದಲಾವಣೆ


ಇಂಜಿನ್ ಇನ್ನೂ ಬಿಸಿಯಾಗಿರುವಾಗಲೇ ಇಂಜಿನ್ ಆಯಿಲನ್ನು ಬಸಿಯಿರಿ.

1) ಆಯಿಲ್ ಫಿಲ್ಲರ್ ಕ್ಯಾಪ್ ಕಳಚಿ.
2) ಡ್ರೈನ್ ಪ್ಲಗ್ ಅಡಿಯಲ್ಲಿ ಡ್ರೈನ್ ಪ್ಯಾನ್ ಇಡಿ.
3) ರೆಂಚ್ ಬಳಸಿ, ಡ್ರೈನ್ ಪ್ಲಗ್ ಕಳಚಿ ಮತ್ತು ಇಂಜಿನ್ ಆಯಿಲ್ ನಿಂದ ಹೊರಗೆಳೆಯಿರಿ.

| ⚠ ಜಾಗ್ರತೆ |
|---|
| ಡ್ರೈನ್ ಪ್ಲಗ್ ಸಡಿಲಗೊಂಡಲ್ಲಿ ನಿಮ್ಮ ಕೈ ಸುಡುವಷ್ಟು ಇಂಜಿನ್ ಆಯಿಲ್ ಟೆಂಪರೇಚರ್ ಬಿಸಿಯಾಗಿರಬಹುದು. ಡ್ರೈನ್ ಪ್ಲಗ್ ಅನ್ನು ಬರಿಗೈಯಲ್ಲಿ ಮುಟ್ಟಲು ಸಾಧ್ಯವಾಗುವಷ್ಟು ತಂಪಾಗುವವರೆಗೂ ಕಾಯಿರಿ. |


**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**

ಉದಾಹರಣೆ




77PM07007

(ಡೀಸೆಲ್ ಇಂಜಿನ್ ಮಾಡೆಲ್ ಗೆ)



77PH038

**ಡ್ರೈನ್ ಪ್ಲಗ್ ಗೆ ಟಾರ್ಕ್ ಬಿಗಿಗೊಳಿಸುವುದು (1):**
**50 Nm (5.1 kgf-m, 36.9 lbf-ft)**


**⚠ ಎಚ್ಚರಿಕೆ**

**ಹೊಸ ಮತ್ತು ಬಳಸಿದ ಆಯಿಲ್ ಅಪಾಯಕಾರಿಯಾಗಬಹುದು ಮಕ್ಕಳು ಮತ್ತು ಸಾಕು ಪ್ರಾಣಿಗಳು ಹೊಸ ಮತ್ತು ಬಳಸಿದ ಆಯಿಲ್ ನುಂಗಿ ಹಾನಿ ತಂದುಕೊಳ್ಳಬಹುದು. ಹೊಸ ಮತ್ತು ಬಳಸಿದ ಆಯಿಲನ್ನು ಮತ್ತು ಬಳಸಿದ ಆಯಿಲ್ ಫಿಲ್ಟರ್ ಗಳನ್ನು ಮಕ್ಕಳು ಮತ್ತು ಸಾಕು ಪ್ರಾಣಿಗಳಿಂದ ದೂರವಿಡಿ.**
**ಬಳಸಿದ ಇಂಜಿನ್ ಆಯಿಲ್ ಜೊತೆಗಿನ ಪುನರಾವರ್ತಿತ, ಧೀರ್ಘಕಾಲದ ಸಂಪರ್ಕ ಚರ್ಮದ ಕ್ಯಾನ್ಸರ್ ಗೆ ಕಾರಣವಾಗಬಹುದು.**
**ಬಳಸಿದ ಆಯಿಲ್ ಜೊತೆಗೆ ಸ್ವಲ್ಪ ಮಾತ್ರವೇ ಸಂಪರ್ಕವಾದರೂ ಚರ್ಮ ಉರಿಯಬಹುದು.**
**ಬಳಸಿದ ಆಯಿಲ್ ಸಂಪರ್ಕ ಬಾರದಂತೆ ಮಾಡಲು ಆಯಿಲ್ ಬದಲಾವಣೆ ಮಾಡುವಾಗ ಧೀರ್ಘ ಸ್ಲೀವ್ ಶರಟು ಧರಿಸಿ ಮತ್ತು ತೇವಾಂಶ ರಕ್ಷಣೆಯ ಗ್ಲವ್ಸ್ (ಡಿಶ್ ವಾಶಿಂಗ್ ಗ್ಲವ್ಸ್ ನಂತಹ) ಧರಿಸಿ. ಆಯಿಲ್ ಚರ್ಮದ ಜೊತೆಗೆ ಸಂಪರ್ಕಕ್ಕೆ ಬಂದಲ್ಲಿ ಸಾಬೂನು ಮತ್ತು ನೀರು ಹಾಕಿ ಸಂಪೂರ್ಣ ತೊಳೆಯಿರಿ.**
**ಯಾವುದೇ ಬಟ್ಟೆ ಅಥವಾ ಕೊಳೆ ಬಟ್ಟೆ ಆಯಿಲಿನಿಂದ ಒದ್ದೆಯಾದಲ್ಲಿ ಯಂತ್ರದಲ್ಲಿ ತೊಳೆಯಿರಿ.**
**ಬಳಸಿದ ಆಯಿಲ್ ಗಳು ಮತ್ತು ಫಿಲ್ಟರ್ ಗಳನ್ನು ನವೀಕರಿಸಿ ಅಥವಾ ಸರಿಯಾಗಿ ವಿಲೇವಾರಿ ಮಾಡಿ.**

4) ಡ್ರೈನ್ ಪ್ಲಗ್ ಮತ್ತು ಗ್ಯಾಸ್ಕೆಟ್ ಅನ್ನು ಮರಳಿ ಅಳವಡಿಸಿ. ರೆಂಚ್ ಬಳಸಿ ಸೂಚಿತ ಟಾರ್ಕ್ ಗೆ ಪ್ಲಗ್ ಬಿಗಿಮಾಡಿ.

### ಆಯಿಲ್ ಫಿಲ್ಟರ್ ಬದಲಿಸಿ


1) ಆಯಿಲ್ ಫಿಲ್ಟರ್ ರೆಂಚ್ ಬಳಸುವಾಗ ಆಯಿಲ್ ಫಿಲ್ಟರನ್ನು ಬಲದಿಂದ ಎಡಕ್ಕೆ ತಿರುಗಿಸಿ ಮತ್ತು ಕಳಚಿ.
2) ಕ್ಲೀನ್ ಕೊಳೆಬಟ್ಟೆಯನ್ನು ಬಳಸಿ ಹೊಸ ಫಿಲ್ಟರ್ ಅನ್ನು ಕೂರಿಸಬೇಕಾದ ಇಂಜಿನ್ ಮೇಲಿನ ಮೌಂಟಿಂಗ್ ಹೊರಮೈಯನ್ನು ಒರೆಸಿಬಿಡಿ.
3) ಸ್ವಲ್ಪ ಇಂಜಿನ್ ಆಯಿಲನ್ನು ಹೊಸ ಆಯಿಲ್ ಫಿಲ್ಟರಿನ ರಬ್ಬರ್ ಗ್ಯಾಸ್ಕೆಟ್ ಸುತ್ತ ಹಾಕಿ.
4) ಫಿಲ್ಟರ್ ಗ್ಯಾಸ್ಕೆಟ್ ಮೌಂಟಿಂಗ್ ಹೊರಮೈ ಜೊತೆಗೆ ಸಂಪರ್ಕಕ್ಕೆ ಬರುವವರೆಗೆ ಹೊಸ ಫಿಲ್ಟರನ್ನು ಕೈಯಿಂದ ಸ್ಕ್ರೂ ಮಾಡಿ.



77PH017

(1) ಸಡಿಲಿಸಿ
(2) ಬಿಗಿಮಾಡಿ

**ಬಿಗಿಮಾಡುವುದು (ಫಿಲ್ಟರ್ ಟಾಪ್ ನಿಂದ ನೋಡಲಾಗಿದೆ)**




54G093

(1) ಆಯಿಲ್ ಫಿಲ್ಟರ್
(2) 3/4 ತಿರುವು

| *ಸೂಚನೆ* |
|---|
| **ಆಯಿಲ್ ಫಿಲ್ಟರನ್ನು ಸರಿಯಾಗಿ ಬಿಗಿಮಾಡಲು ಫಿಲ್ಟರ್ ಗ್ಯಾಸ್ಕೆಟ್ ಮೌಂಟಿಂಗ್ ಹೊರಮೈಯನ್ನು ಮೊದಲು ಸಂಪರ್ಕಿಸುವಲ್ಲಿ ಕರಾರುವಕ್ಕಾಗಿ ಅದರ ಪೊಸಿಷನ್ ಗುರುತಿಸುವುದು ಅಗತ್ಯ.** |

5) ಆಯಿಲ್ ಫಿಲ್ಟರ್ ರೆಂಚ್ ಬಳಸಿಕೊಂಡು ಫಿಲ್ಟರ್ ಸೂಚಿತ ತಿರುವನ್ನು ಸಂಪರ್ಕದ ಬಿಂದುವಿನಿಂದ ಮೌಂಟಿಂಗ್ ಹೊರಮೈವರೆಗೆ (ಅಥವಾ ಸೂಚಿತ ಟಾರ್ಕ್ ಗೆ) ಬಿಗಿಮಾಡಿ.

**ಆಯಿಲ್ ಫಿಲ್ಟರಿಗೆ ಟಾರ್ಕ್ ಹೊಂದಿಸುವುದು.**
**3/4 ತಿರುವು ಅಥವಾ**
**14 Nm (1.4 kgf-m, 10.3 lbf-ft)**

| *ಸೂಚನೆ* |
|---|
| **ಆಯಿಲ್ ಲೀಕೇಜ್ ಅನ್ನು ತಪ್ಪಿಸಲು, ಆಯಿಲ್ ಫಿಲ್ಟರ್ ಬಿಗಿಯಾಗಿರುವುದನ್ನು ಖಚಿತಪಡಿಸಿ. ಆದರೆ ಅದನ್ನು ಅಗತ್ಯಕ್ಕಿಂತ ಹೆಚ್ಚು ಬಿಗಿಮಾಡಬೇಡಿ.** |

### ಆಯಿಲ್ ಮರಳಿ ತುಂಬಿ ಮತ್ತು ಸೋರಿಕೆಗಳನ್ನು ಪರೀಕ್ಷಿಸಿ

1) ಆಯಿಲನ್ನು ಫಿಲ್ಟರ್ ಹೋಲ್ ಮೂಲಕ ತುಂಬಿ ಮತ್ತು ಫಿಲ್ಲರ್ ಕ್ಯಾಪ್ ಅಳವಡಿಸಿ.
ಆಯಿಲಿನ ಅಂದಾಜು ಸಾಮರ್ಥ್ಯಕ್ಕಾಗಿ "ನಿರ್ದಿಷ್ಟತೆಗಳು" ವಿಭಾಗದಲ್ಲಿ "ಸಾಮರ್ಥ್ಯಗಳು" ಐಟಂನಲ್ಲಿ ಓದಿ.
2) ಇಂಜಿನ್ ಸ್ಟಾರ್ಟ್ ಮಾಡಿ ಮತ್ತು ಆಯಿಲ್ ಫಿಲ್ಟರ್ ಮತ್ತು ಡ್ರೈನ್ ಪ್ಲಗ್ ನಲ್ಲಿ ಸೋರಿಕೆಗಳಿಗಾಗಿ ಜಾಗರೂಕವಾಗಿ ಗಮನಿಸಿ. ಇಂಜಿನ್ ಅನ್ನು ವಿವಿಧ ವೇಗಗಳಲ್ಲಿ ಕನಿಷ್ಠ 5 ನಿಮಿಷಗಳ ಕಾಲ ಚಲಾಯಿಸಿ.
3) ಇಂಜಿನ್ ನಿಲ್ಲಿಸಿ ಮತ್ತು 5 ನಿಮಿಷಗಳ ಕಾಲ ಕಾಯಿರಿ. ಆಯಿಲ್ ಮಟ್ಟವನ್ನು ಮತ್ತೊಮ್ಮೆ ಪರೀಕ್ಷಿಸಿ ಮತ್ತು ಅಗತ್ಯ ಆಯಿಲನ್ನು ಸೇರಿಸಿ. ಸೋರಿಕೆಗಾಗಿ ಮತ್ತೊಮ್ಮೆ ಪರೀಕ್ಷಿಸಿ.

| *ಸೂಚನೆ* |
|---|
| **• ಆಯಿಲ್ ಫಿಲ್ಟರನ್ನು ಬದಲಿಸುವಾಗ, ನೀವು ಮಾರುತಿ ಮಾನ್ಯತೆ ಹೊಂದಿದ ಫಿಲ್ಟರನ್ನೇ ಬಳಸಲು ಶಿಫಾರಸು ಮಾಡಲಾಗಿದೆ. ಹೊರಗಿನ ಮಾರ್ಕೆಟ್ ಫಿಲ್ಟರನ್ನುಬಳಸುವುದಾದಲ್ಲಿ, ಸಮಾನ ಗುಣಮಟ್ಟದನ್ನು ಅರಿಸುವುದನ್ನು ಮತ್ತು ತಯಾರಕರ ಸೂಚನೆಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿ.** |
| **• ಆಯಿಲ್ ಫಿಲ್ಟರ್ ಅಥವಾ ಡ್ರೈನ್ ಪ್ಲಗ್ ಸುತ್ತ ಆಯಿಲ್ ಸೋರಿಕೆಗಳು ಅಸಮರ್ಪಕವಾದ ಅಳವಡಿಕೆಯನ್ನು ಅಥವಾ ಗ್ಯಾಸ್ಕೆಟ್ ಹಾನಿಯನ್ನು ಸೂಚಿಸುತ್ತದೆ. ನಿಮಗೆ ಏನಾದರೂ ಸೋರಿಕೆ ಕಂಡಲ್ಲಿ ಅಥವಾ ಫಿಲ್ಟರ್ ಅನ್ನು ಸರಿಯಾಗಿ ಬಿಗಿಯಲಾಗಿದೆ ಎನ್ನುವ ಖಾತರಿ ಇಲ್ಲದಿದ್ದಲ್ಲಿ, ವಾಹನವನ್ನು ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ತಪಾಸಣೆ ಮಾಡಿಕೊಳ್ಳಿ.** |

## ಇಂಜಿನ್ ಕೂಲಂಟ್

### ಕೂಲಂಟ್ ಆಯ್ಕೆ

ಅತ್ಯಧಿಕ ಕಾರ್ಯವೈಖರಿಯನ್ನು ನಿಭಾಯಿಸಲು ಮತ್ತು ಇಂಜಿನ್ ಬಾಳಿಕೆಯನ್ನು ನಿಭಾಯಿಸಲು, ಮಾರುತಿ ಮಾನ್ಯತೆ ಹೊಂದಿದ ಕೂಲಂಟ್ ಅಥವಾ ಸಮಾನವಾದುದನ್ನು ನಿಭಾಯಿಸಿ.

ಈ ರೀತಿಯ ಕೂಲಂಟ್ ನಿಮ್ಮ ಕೂಲಿಂಗ್ ಸಿಸ್ಟಂಗೆ ಅತ್ಯುತ್ತಮ:

- ಇದು ಸೂಕ್ತವಾದ ಇಂಜಿನ್ ಉಷ್ಣತೆಯನ್ನು ನಿಭಾಯಿಸಲು ನೆರವಾಗುತ್ತದೆ.
- ಶೀತಲೀಕರಣ ಬಿಂದು ಮತ್ತು ಕುದಿಯುವ ಬಿಂದು ವಿರುದ್ಧ ಸೂಕ್ತ ರಕ್ಷಣೆಯನ್ನು ಕೊಡುತ್ತದೆ.
- ತುಕ್ಕು ಹಿಡಿಯುವುದು ಮತ್ತು ಕೊರೆತದಿಂದ ಸೂಕ್ತ ರಕ್ಷಣೆ ಕೊಡುತ್ತದೆ.

ಸೂಕ್ತ ಕೂಲಂಟ್ ಬಳಸಲು ವಿಫಲವಾದಲ್ಲಿ ನಿಮ್ಮ ಕೂಲಿಂಗ್ ಸಿಸ್ಟಂ ಗೆ ಹಾನಿ ತರಬಹುದು. ನಿಮ್ಮ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ನಿಮಗೆ ಸೂಕ್ತ ಕೂಲಂಟ್ ಆರಿಸಲು ನೆರವಾಗಬಹುದು.

*ಸೂಚನೆ*

**ನಿಮ್ಮ ಕೂಲಿಂಗ್ ಸಿಸ್ಟಂಗೆ ಹಾನಿಯಾಗುವುದನ್ನು ತಪ್ಪಿಸಲು:**

- **ಯಾವಾಗಲೂ ಅಧಿಕ ಗುಣಮಟ್ಟದ ಎಥೀಲೀನ್ ಗ್ಲೈಕಾಲ್ ಆಧಾರಿತ ನಾನ್ ಸಿಲಿಕೇಟ್ ಟೈಪ್ ಕೂಲಂಟ್ ಅನ್ನು ಕರಗಿದ ಡಿಸ್ಟಿಲ್ಡ್ ನೀರಿನಲ್ಲಿ ಸೂಕ್ತ ಮಿಶ್ರಣದ ಸಾರದಲ್ಲಿ ಬಳಸಿ.**
- **ಸೂಕ್ತ ಮಿಶ್ರಣವು 30/70 ಕೂಲಂಟ್ ಗೆ ಡಿಸ್ಟಿಲ್ ನೀರು ಮತ್ತು ಯಾವುದೇ ಸಂದರ್ಭದಲ್ಲೂ 70/30 ಕ್ಕಿಂತ ಅಧಿಕ ಆಗದಿರುವುದನ್ನು ಖಾತರಿಪಡಿಸಿ. 70/30 ಕೂಲಂಟ್ ಗೆ ಡಿಸ್ಟಿಲ್ಡ್ ನೀರಿಗಿಂತ ಹೆಚ್ಚು ಸಾರ ಇದ್ದಲ್ಲಿ ಅಧಿಕ ಬಿಸಿಯಾಗುವ ಸ್ಥಿತಿ ಉಂಟಾಗುತ್ತದೆ.**
- **ನೇರ ಕೂಲಂಟ್ ಅಥವಾ ಸಾಮಾನ್ಯ ನೀರು ಬಳಸಬೇಡಿ.**
- **ಹೆಚ್ಚುವರಿ ಇನ್ ಹಿಬಿಟರ್ ಗಳು ಅಥವಾ ಅಡಿಟಿವ್ ಗಳನ್ನು ಬೆರೆಸಬೇಡಿ. ಅವುಗಳು ಕೂಲಿಂಗ್ ಸಿಸ್ಟಂ ಜೊತೆಗೆ ಹೊಂದಿಕೊಳ್ಳದೆ ಇರಬಹುದು.**
- **ವಿಭಿನ್ನ ವಿಧಗಳ ಬೇಸ್ ಕೂಲಂಟ್ ಗಳನ್ನು ಮಿಶ್ರ ಮಾಡಬೇಡಿ. ಹಾಗೆ ಮಾಡುವುದು ಸೀಲ್ ಸವೆತ ಮತ್ತು/ಅಥವಾ ಅತೀ ಬಿಸಿಯೇರುವ ಸಾಧ್ಯತೆ ಮತ್ತು ಅತಿಯಾದ ಇಂಜಿನ್ ಹಾದಿಗೆ ಕಾರಣವಾಗಬಹುದು.**

### ಕೂಲಂಟ್ ಮಟ್ಟ ಪರೀಕ್ಷೆ

ಕೂಲಂಟ್ ಮಟ್ಟವನ್ನು ರಿಸರ್ವಾಯರ್ ಟ್ಯಾಂಕ್ ನಲ್ಲಿ ಪರೀಕ್ಷಿಸಿ, ರೇಡಿಯೇಟರ್ ನಲ್ಲಿ ಅಲ್ಲ. ಇಂಜಿನ್ ಕೂಲ್ ಮೂಲಕ ಕೂಲಂಟ್ ಮಟ್ಟವು "ಪೂರ್ಣ" ಮತ್ತು "ಕಡಿಮೆ" ಗುರುತುಗಳ ನಡುವೆ ಇರಬೇಕು. ಹ್ಯಾಂಡ್ ಲೈಟ್ ಅನ್ನು ಅಗತ್ಯವಿದ್ದಲ್ಲಿ ಬಳಸಿ.

### ಕೂಲಂಟ್ ಸೇರಿಸುವುದು


**⚠ ಎಚ್ಚರಿಕೆ**

**ನುಂಗಿದರೆ ಅಥವಾ ಹೊಟ್ಟೆಗೆ ಹೋದರೆ ಇಂಜಿನ್ ಕೂಲಂಟ್ ಹಾನಿಕರ ಅಥವಾ ಮಾರಕವಾಗಬಹುದು. ಆಂಟಿಫ್ರೀಜ್ ಅಥವಾ ಕೂಲಂಟ್ ದ್ರವವನ್ನು ಕುಡಿಯಬೇಡಿ. ನುಂಗಿದಲ್ಲಿ ವಾಂತಿ ಮಾಡಲು ಒತ್ತಡ ಹೇರಬೇಡಿ. ತಕ್ಷಣವೇ ವಿಷ ನಿಯಂತ್ರಣ ಕೇಂದ್ರ ಅಥವಾ ವೈದ್ಯರನ್ನು ಸಂಪರ್ಕಿಸಿ. ಮಂಜು ಅಥವಾ ಬಿಸಿ ಆವಿಯನ್ನು ಸೇವಿಸಬೇಡಿ. ಸೇವಿಸಿದಲ್ಲಿ ತಾಜಾ ಗಾಳಿಗೆ ಬಿಡಿ. ಕೂಲಂಟ್ ಕಣ್ಣಿಗೆ ಬಿದ್ದಲ್ಲಿ ಕಣ್ಣನ್ನು ನೀರಿನಲ್ಲಿ ತೊಳೆಯಿರಿ ಮತ್ತು ವೈದ್ಯಕೀಯ ಪರೀಕ್ಷೆ ಮಾಡಿಕೊಳ್ಳಿ. ನಿಭಾಯಿಸಿದ ನಂತರ ಪೂರ್ಣವಾಗಿ ತೊಳೆಯಿರಿ. ದ್ರವವು ಪ್ರಾಣಿಗಳಿಗೂ ವಿಷಕಾರಿಯಾಗಬಹುದು. ಮಕ್ಕಳು ಮತ್ತು ಪ್ರಾಣಿಗಳಿಗೆ ಸಿಗದಂತೆ ದೂರವಿಡಿ.**

*ಸೂಚನೆ*


- **ನೀವು ಬಳಸುವ ಮಿಶ್ರಣ ಶೇ 30% ಆಂಟಿಫ್ರೀಜ್ ಸಾರ ಹೊಂದಿರಬೇಕು.**
- **ನಿಮ್ಮ ಏರಿಯಾದ ಅತೀ ಕಡಿಮೆ ಪರಿಸರ ಉಷ್ಣತೆಯನ್ನು –35°C (–31°F) ಅಥವಾ ಕಡಿಮೆ ಎಂದು ನಿರೀಕ್ಷಿಸಲಾಗಿದೆ. ಆಂಟಿ ಫ್ರೀಜ್ ಕಂಟೇನರ್ ಸೂಚನೆಗಳನ್ನು ಆಧರಿಸಿ ಅಧಿಕ ಸಾರಗಳನ್ನು ಶೇ. 60% ಬಳಸಿ.**

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**




77PM07010

**(ಡೀಸೆಲ್ ಇಂಜಿನ್ ಮಾಡೆಲ್ ಗೆ)**




77PH039

ಕೂಲಂಟ್ ಮಟ್ಟವು "L" (ಕಡಿಮೆ) ಗುರುತಿಗಿಂತ ಕೆಳಗಿದ್ದಲ್ಲಿ ಹೆಚ್ಚು ಕೂಲಂಟ್ ಬೆರೆಸಬೇಕು.
ರಿಸರ್ವಾಯರ್ ಟ್ಯಾಂಕ್ ಕ್ಯಾಪ್ ಕಳಚಿ ಮತ್ತು ಕೂಲಂಟ್ ಅನ್ನು ರಿಸರ್ವಾಯರ್ ಟ್ಯಾಂಕ್ ಮಟ್ಟವು "F" (ಪೂರ್ಣ) ಗುರುತನ್ನು ತಲುಪುವವರೆಗೆ ಸೇರಿಸಿ. ರಿಸರ್ವಾಯರ್ ಟ್ಯಾಂಕ್ ಅನ್ನು ಯಾವತ್ತೂ "F" (ಪೂರ್ಣ) ಗುರುತನ್ನು ಮೀರಿ ತುಂಬಬೇಡಿ.

| ***ಸೂಚನೆ*** |
| --- |
| **ರಿಸರ್ವಾಯರ್ ಟ್ಯಾಂಕ್ ನ ಕ್ಯಾಪನ್ನು ಹಾಕುವಾಗ ಕ್ಯಾಪ್ ಮೇಲೆ ಗುರುತನ್ನು ಮಾಡಿ ಮತ್ತು ಟ್ಯಾಂಕ್ ಮೇಲೂ ಗುರುತು ಮಾಡಿ. ಹೀಗೆ ಮಾಡಲು ವಿಫಲವಾದಲ್ಲಿ ಕೂಲಂಟ್ ಸೋರಿಕೆಯಾದೀತು.** |


### ಕೂಲಂಟ್ ಬದಲಿ

ವಿಶೇಷ ವಿಧಾನಗಳು ಅಗತ್ಯವಿರುವ ಕಾರಣ, ನಾವು ನಿಮ್ಮ ವಾಹನವನ್ನು ಸಮೀಪದ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಕೂಲಂಟ್ ಬದಲಿಗೆ ತೆಗೆದುಕೊಂಡು ಹೋಗುವಂತೆ ಶಿಫಾರಸು ಮಾಡುತ್ತೇವೆ.

## ಏರ್ ಕ್ಲೀನರ್


ಏರ್ ಕ್ಲೀನರ್ ದೂಳಿನಿಂದ ಕಟ್ಟಿಕೊಂಡಿದ್ದಲ್ಲಿ ಇನ್ಟೇಕ್ ನಿರೋಧಕತೆ ಹೆಚ್ಚಿರುತ್ತದೆ. ಪವರ್ ಔಟ್ಪುಟ್ ಕಡಿತಗೊಂಡಿರುತ್ತದೆ ಮತ್ತು ಫ್ಯೂಯೆಲ್ ಬಳಕೆ ಹೆಚ್ಚಾಗುತ್ತದೆ.

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**





77PM07011

**(ಡೀಸೆಲ್ ಇಂಜಿನ್ ಮಾಡೆಲ್ ಗೆ)**




77PH040

ಸೈಡ್ ಕ್ಲಾಂಪ್ಸ್ ಅನ್ನು ಅನ್ಲಾಕ್ ಮಾಡಿ ಮತ್ತು ಎಲಿಮೆಂಟ್ ಅನ್ನು ಏರ್ ಕ್ಲೀನರ್ ಕೇಸ್ ನಿಂದ ಕಳಚಿ.





60A183

ಇದು ಕೊಳೆಯಾಗಿರುವುದು ಕಂಡಲ್ಲಿ, ಏರ್ ಕ್ಲೀನರ್ ಅನ್ನು ಸ್ವಚ್ಛ ಮಾಡಿ ಅಥವಾ ಹೊಸತರೊಂದಿಗೆ ಬದಲಿಸಿ.


## ಸ್ಪಾರ್ಕ್ ಪ್ಲಗ್

**(ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್ ಗೆ)**




77PM07003

ಇಂಗಾಲದ ಶೇಖರಣೆ ಇದೆಯೇ ಎಂದು ಸ್ಪಾರ್ಕ್ ಪ್ಲಗ್ಗಳನ್ನು ಕಾಲ ಕಾಲಕ್ಕೆ ತಪಾಸಣೆ ಮಾಡಬೇಕು. ಸ್ಪಾರ್ಕ್ ಪ್ಲಗ್ ಮೇಲೆ ಇಂಗಾಲದ ಶೇಖರಣೆಯಾದಾಗ, ಬಲಿಷ್ಠವಾದ ಸ್ಪಾರ್ಕ್ ಉತ್ಪಾದನೆಯಾಗುವುದಿಲ್ಲ. ಇಂಗಾಲದ ಶೇಖರಣೆಯನ್ನು ತಂತಿ ಅಥವಾ ಪಿನ್ ಬಳಸಿ ನಿವಾರಿಸಿ ಮತ್ತು ಸ್ಪಾರ್ಕ್ ಪ್ಲಗ್ ಗ್ಯಾಪ್ ಅನ್ನು ಹೊಂದಿಸಿ.





77PM07004

ಸ್ಪಾರ್ಕ್ ಪ್ಲಗ್ಗಳಿಗೆ ಪ್ರವೇಶ ಪಡೆಯಲು

1. ರಿಲೀಸ್ ಲಿವರ್ ಅನ್ನು ದೂಡುವ ಮೂಲಕ ಕಪ್ಲರ್‌ಸಂಪರ್ಕ ಕಳಚಿ.
2. ಬೋಲ್ಟ್‌ಗಳನ್ನು ನಿವಾರಿಸಿ, ಮತ್ತು
3. ಸ್ಪಾರ್ಕ್ ಪ್ಲಗ್ ಬೂಟ್‌ಗಳನ್ನು ಎಳೆಯಿರಿ

***ಸೂಚನೆ***


- **ಸ್ಪಾರ್ಕ್ ಪ್ಲಗ್ ಕೇಬಲ್ಗಳನ್ನು ಸಂಪರ್ಕ ಕಳಚುವಾಗ, ಬೂಟ್ ಮೇಲೆ ಎಳೆಯಿರಿ, ಸ್ವತಃ ಕೇಬಲ್ ಮೇಲೆ ಎಳೆಯಬೇಡಿ. ಕೇಬಲ್ ಮೇಲೆ ಎಳೆಯುವುದರಿಂದ ಹಾನಿಯಾಗಬಹುದು.**




77PM07017

***ಸೂಚನೆ***

- **ಸ್ಪಾರ್ಕ್ ಪ್ಲಗ್ಗಳನ್ನು ಜೋಡಿಸುವಾಗ, ಥ್ರೆಡ್ಗಳು ಜಾರುವುದನ್ನು ತಪ್ಪಿಸಲು ನಿಮ್ಮ ಬೆರಳುಗಳಿಂದ ಅವುಗಳನ್ನು ತಿರುಗಿಸಿ. ಸ್ಪಾರ್ಕ್ ಪ್ಲಗ್ಗಳನ್ನು 20.0 - 30.0 Nm (2.0 - 3.0 kg-m, 15.0 - 22.0 lb-ft) ಗೆ ಟಾರ್ಕ್ ರೆಂಚ್ನಿಂದ ಬಿಗಿಮಾಡಿ. ಪ್ಲಗ್ಗಳನ್ನು ಕಳಚಿರುವಾಗ ಸ್ಪಾರ್ಕ್ ಪ್ಲಗ್ಗಳ ರಂಧ್ರದಿಂದ ಕಶ್ಮಲಗಳನ್ನು ಎಂಜಿನ್ಗೆ ಪ್ರವೇಶಿಸಲು ಅವಕಾಶ ಕೊಡಬೇಡಿ.**
- **ತಪ್ಪಾದ ಥ್ರೆಡ್ ಗಾತ್ರದಿಂದ ಸ್ಪಾರ್ಕ್ ಪ್ಲಗ್ಗಳನ್ನು ಎಂದಿಗೂ ಬಳಸಬೇಡಿ.**




77PM07018

**ಸ್ಪಾರ್ಕ್ ಪ್ಲಗ್ ಗ್ಯಾಪ್ "a":**
**BOSCH-FR6DC**
**0.8 – 0.9 mm (0.031 – 0.035 in.)**


| *ಸೂಚನೆ* |
|---|
| ಸ್ಪಾರ್ಕ್ ಪ್ಲಗ್ಗಳನ್ನು ಬದಲಿಸುವಾಗ, ನಿಮ್ಮ ವಾಹನಕ್ಕೆ ನಿರ್ದಿಷ್ಟಪಡಿಸಿದ ಬ್ರಾಂಡ್ ಮತ್ತು ವಿಧವನ್ನು ನೀವು ಬಳಸಬೇಕಾಗುತ್ತದೆ. ನಿರ್ದಿಷ್ಟಪಡಿಸಿದ ಪ್ಲಗ್ಗಳಿಗೆ, "ನಿರ್ದಿಷ್ಟತೆಗಳು" ವಿಭಾಗವನ್ನು ಈ ಪುಸ್ತಕದ ಕೊನೆಯಲ್ಲಿ ಓದಿ. ನಿರ್ದಿಷ್ಟಪಡಿಸಿದ ಪ್ಲಗ್ಗಳಿಗೆ ಹೊರತಾದ ಸ್ಪಾರ್ಕ್ ಪ್ಲಗ್ನ ಬ್ರಾಂಡ್ ಬಳಸಲು ನೀವು ಬಯಸಿದಲ್ಲಿ, ನಿಮ್ಮ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ಶಾಪ್ ಅನ್ನು ಸಂಪರ್ಕಿಸಿ. |

## ಗೇರ್ ಆಯಿಲ್

### ಮ್ಯಾನುವಲ್ ಟ್ರಾನ್ಸ್ ಮಿಶನ್ ಆಯಿಲ್/ ಡಿಫರೆನ್ಷಿಯಲ್ ಆಯಿಲ್

ಗೇರ್ ಆಯಿಲನ್ನು ಸೇರಿಸುವಾಗ, ಚಾರ್ಟ್ ನಲ್ಲಿ ತೋರಿಸಿರುವಂತೆ ಗೇರ್ ಆಯಿಲನ್ನು ಸೂಕ್ತ ವಿಸ್ಕಾಸಿಟಿಯಲ್ಲಿ ಮತ್ತು ಗ್ರೇಡ್ ನಲ್ಲಿ ಬಳಸಿ.


**ಮ್ಯಾನುವಲ್ ಟ್ರಾನ್ಸ್ ಮಿಶನ್ ಆಯಿಲ್**




68LM728

ನಾವು ಬಳಸಲು ಶಿಫಾರಸು ಮಾಡುತ್ತೇವೆ:
ಮ್ಯಾನುವಲ್ ಟ್ರಾನ್ಸ್ ಮಿಶನ್ ಗೇರ್ ಆಯಿಲ್ ಗೆ "ಮಾರುತಿ ಜೆನ್ಯೂನ್ ಗೇರ್ ಆಯಿಲ್ **75W-80**".

**ರೇರ್ ಡಿಫರೆನ್ಷಿಯಲ್ ಆಯಿಲ್**





77PH075

ನಾವು ಬಳಸಲು ಶಿಫಾರಸು ಮಾಡುತ್ತೇವೆ:
ರೇರ್ ಡಿಫರೆನ್ಷಿಯಲ್ ಆಯಿಲ್ ಗೆ "ಟೋಟಲ್ ಫಿನಾಲ್ಫ್ ಟ್ರಾನ್ಸೆಲ್ಫ್ ಎಲ್ ಎಲ್ **85W-140**".


### ಗೇರ್ ಆಯಿಲ್ ಮಟ್ಟ ಪರೀಕ್ಷೆ

**ಮ್ಯಾನುವಲ್ ಟ್ರಾನ್ಸ್ ಮಿಶನ್**




77PH078

**ರೇರ್ ಡಿಫರೆನ್ಷಿಯಲ್**




77PH047

1. ಆಯಿಲ್ ಫಿಲ್ಲರ್ ಮತ್ತು ಲೆವೆಲ್ ಪ್ಲಗ್ (ಮರಳಿ ಬಳಸಬೇಡಿ).
2. ಆಯಿಲ್ ಡ್ರೈನ್ ಪ್ಲಗ್.

ಗೇರ್ ಆಯಿಲ್ ಪರೀಕ್ಷಿಸಲು ಈ ಕೆಳಗಿನ ವಿಧಾನ ಅನುಸರಿಸಿ:

1) ವಾಹನವನ್ನು ಪಾರ್ಕಿಂಗ್ ಬ್ರೇಕ್ ಗಳನ್ನು ಹಾಕಿ ಸಮತಟ್ಟಾದ ಹೊರಮೈನಲ್ಲಿ ಪಾರ್ಕ್ ಮಾಡಿ. ನಂತರ, ಇಂಜಿನ್ ನಿಲ್ಲಿಸಿ.
2) ಆಯಿಲ್ ಫಿಲ್ಲರ್ ಮತ್ತು ಲೆವೆಲ್ ಪ್ಲಗ್ (1) ಕಳಚಿ.
3) ಹೋಲ್ ಒಳಗೆ ನಿಮ್ಮ ಬೆರಳಿನಿಂದ ಪರೀಕ್ಷಿಸಿ. ಆಯಿಲ್ ಪ್ಲಗ್ ಹೋಲ್ ನ ಬಾಟಂನಿಂದ ಹೊರಗೆ ಬಂದಲ್ಲಿ, ಆಯಿಲ್ ಮಟ್ಟವು ಸರಿಯಾಗಿದೆ. ಹಾಗಾದಲ್ಲಿ, ಪ್ಲಗ್ ಅನ್ನು ಮರಳಿ ಅಳವಡಿಸಿ.
4) ಆಯಿಲ್ ಮಟ್ಟವು ಕಡಿಮೆ ಇದ್ದಲ್ಲಿ, ಗೇರ್ ಆಯಿಲನ್ನು ಆಯಿಲ್ ಫಿಲ್ಲರ್ ಪ್ಲಗ್ ಹೋಲ್ (1) ಮೂಲಕ ಆಯಿಲ್ ಮಟ್ಟವು ಫಿಲ್ಲರ್ ಹೋಲ್ ನ ಬಾಟಂಗೆ ಬರುವವರೆಗೂ ತುಂಬಿ. ನಂತರ ಪ್ಲಗ್ ಮರಳಿ ಅಳವಡಿಸಿ.

**ಆಯಿಲ್ ಫಿಲ್ಲರ್ ಮತ್ತು ಲೆವೆಲ್ ಪ್ಲಗ್ ಗೆ ಟಾರ್ಕ್ ಹೊಂದಿಸುವುದು.**
**ಮ್ಯಾನುವಲ್ ಟ್ರಾನ್ಸ್ ಮಿಶನ್ (1):**
**23 Nm (2.3 kgf-m, 17.0 lbf-ft)**
**ರೇರ್ ಡಿಫರೆನ್ಷಿಯಲ್ (1):**
**25 Nm (2.5 kgf-m, 18.5 lbf-ft)**

*ಸೂಚನೆ:*

*ರೇರ್ ಡಿಫರೆನ್ಷಿಯಲ್ ಯಾವಾಗಲೂ ಒಂದು ಹೊಸ ಆಯಿಲ್ ಫಿಲ್ಲರ್ ಮತ್ತು ಲೆವೆಲ್ ಪ್ಲಗ್ (1) ಬಳಸುತ್ತದೆ.*

**⚠ ಜಾಗ್ರತೆ**

**ವಾಹನವನ್ನು ಚಾಲನೆ ಮಾಡಿದ ಮೇಲೆ, ಗೇರ್ ಆಯಿಲ್ ಉಷ್ಣತೆ ನಿಮ್ಮ ಚರ್ಮವನ್ನು ಸುಡುವಷ್ಟು ಹೆಚ್ಚಾಗಿರಬಹುದು. ಗೇರ್ ಆಯಿಲನ್ನು ತಪಾಸಣೆ ಮಾಡುವವರೆಗೆ ನಿಮ್ಮ ಖಾಲಿ ಕೈಯಿಂದ ಸ್ಪರ್ಶಿಸಲು ಆಯಿಲ್ ಫಿಲ್ಲರ್ ಪ್ಲಗ್ ತಂಪಾಗುವಷ್ಟು ಕಾಯಿರಿ.**

***ಸೂಚನೆ***

**ಪ್ಲಗ್ ಬಿಗಿಮಾಡುವಾಗ, ಈ ಕೆಳಗಿನ ಸೀಲಿಂಗ್ ಸಂಯುಕ್ತ ಅಥವಾ ಸಮಾನವಾದುದನ್ನು ಪ್ಲಗ್ ಥ್ರೆಡ್ ಗಳಿಗೆ ಆಯಿಲ್ ಸೋರಿಕೆಯನ್ನು ತಡೆಯಲು ಹಚ್ಚಿ.**

**ಮಾರುತಿ ಸುಜುಕಿ ಬಾಂಡ್ ನಂ. "1216E" ಅಥವಾ "1217G"**


### ಗೇರ್ ಆಯಿಲ್ ಬದಲಾವಣೆ

ವಿಶೇಷ ವಿಧಾನಗಳು, ಮೆಟೀರಿಯಲ್ ಗಳು ಮತ್ತು ಟೂಲ್ ಗಳು ಅಗತ್ಯವಿರುವ ಕಾರಣದಿಂದ, ಈ ಕೆಲಸವನ್ನು ಮಾಡಲು ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಅವರೇ ವಿಶ್ವಾಸಾರ್ಹರು ಎಂದು ನಾವು ಶಿಫಾರಸು ಮಾಡುತ್ತೇವೆ.

## ಕ್ಲಚ್ ಪೆಡಲ್

### ಕೇಬಲ್ ಕಂಟ್ರೋಲ್ ಕ್ಲಚ್

ಉದಾಹರಣೆ





54G274

**ಕ್ಲಚ್ ಪೆಡಲ್ ಪ್ಲೇ (Clutch pedal play) "ಈ":**
**10 - 15 mm (0.4 - 0.6 in.)**

ಕ್ಲಚ್ ಪೆಡಲ್ ಅನ್ನು ನಿಮ್ಮ ಕೈಯಿಂದ ಚಲಿಸಿ ಸ್ವಲ್ಪ ವಿರೋಧ ವ್ಯಕ್ತವಾಗುವವರೆಗೂ ಅದು ಚಲಿಸುವ ಅಂತರವನ್ನು ಅಳೆಯುವ ಮೂಲಕ ಕ್ಲಚ್ ಪೆಡಲ್ ಪ್ಲೇಯನ್ನು ಅಳತೆ ಮಾಡಿ. ಕ್ಲಚ್ ಪೆಡಲ್ ನಲ್ಲಿ ಪ್ಲೇಯು ಸೂಚಿಸಿದ ಮೌಲ್ಯಗಳ ನಡುವೆ ಇರಬೇಕು. ಪ್ಲೇ ಮೇಲ್ಮಟ್ಟಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದಲ್ಲಿ, ಅಥವಾ ಪೆಡಲ್ ಪೂರ್ಣವಾಗಿ ಕಳಚಿದಾಗ ಕ್ಲಚ್ ಎಳೆಯುವ ಅನುಭವವಾದಲ್ಲಿ, ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಸಿ ಕ್ಲಚ್ ತಪಾಸಣೆ ಮಾಡಿಕೊಳ್ಳಿ.

## ಫ್ಯೂಯೆಲ್ ಫಿಲ್ಟರ್ (ಡೀಸೆಲ್ ಇಂಜಿನ್ ಮಾಡೆಲ್ ಗೆ)

ಉದಾಹರಣೆ




77PH089

ಫ್ಯೂಯೆಲ್ ಫಿಲ್ಟರ್ ನೀರು ಸೆಡಿಮೆಂಟರ್ ಆಗಿ ಕೆಲಸ ಮಾಡುತ್ತಿದೆ.

ಕಾಲಾವಧಿ ನಿರ್ವಹಣಾ ವೇಳಾಪಟ್ಟಿಗೆ ಅನುಗುಣವಾಗಿ ನೀರನ್ನು ಬಸಿಯಿರಿ. ನೀರನ್ನು ಬಸಿಯಲು:

1) ಪ್ಯಾನ್ ಅಥವಾ ಆಂಪಲ್ ರಾಗ್ ಅನ್ನು ಫ್ಯೂಯೆಲ್ ಫಿಲ್ಟರ್ ಡ್ರೈನ್ ನಾಜಲ್ ಬಳಿ ಇಡಿ.
2) ಡ್ರೈನ್ ಸ್ಕ್ರೂ (1) ಸಡಿಲಿಸಿ. ನೀರನ್ನು ಬಸಿಯಲಾಗುತ್ತದೆ.


3) ನೀರು ಡೀಸಲ್ ಫ್ಯೂಯೆಲ್ ಗೆ ಬದಲಾದಾಗ ಡ್ರೈನ್ ಸ್ಕ್ರೂವನ್ನು ಬಿಗಿಮಾಡಿ.

ಡ್ರೈನ್ ಸ್ಕ್ರೂಗೆ ಟಾರ್ಕ್ ಹೊಂದಿಸುವುದು
**1.0 Nm (0.10 kgf-m, 0.74 lbf-ft)**

# ಬ್ರೇಕ್ ಗಳು

## ಬ್ರೇಕ್ ಫ್ಲೂಯಿಡ್

ಉದಾಹರಣೆ




77PM706

ಬ್ರೇಕ್ ಫ್ಲೂಯಿಡ್ ಮಟ್ಟವನ್ನು ಇನ್ ಸ್ಟ್ರುಮೆಂಟ್ ಪ್ಯಾನಲ್ ನಲ್ಲಿ ರಿಸರ್ವಾಯರ್ ಕಡೆಗೆ ನೋಡಿ ಪರೀಕ್ಷಿಸಿ. ಬಲಬದಿಯ ಸ್ಟೀರಿಂಗ್ ವೀಲ್ ನಲ್ಲಿ ಕವರ್ ಕಳಚಿ ಬ್ರೇಕ್ ಫ್ಲೂಯಿಡ್ ರಿಸರ್ವಾಯರ್ ಮಟ್ಟವನ್ನು ಕಳಚಿ. ಫ್ಲೂಯಿಡ್ ಮಟ್ಟವು "MAX" (ಕನಿಷ್ಠ) ಮತ್ತು "MIN" (ಗರಿಷ್ಠ) ನಡುವೆ ಇದೆ ಎನ್ನುವುದನ್ನು ಪರೀಕ್ಷಿಸಿ. ಬ್ರೇಕ್ ಫ್ಲೂಯಿಡ್ ಮಟ್ಟವು "MAX" (ಕನಿಷ್ಠ) ಗೆರೆಯ ಸಮೀಪವಿದ್ದಲ್ಲಿ, ಅದನ್ನು "MIN" (ಗರಿಷ್ಠ) ಮಟ್ಟದವರೆಗೆ ಮಾರುತಿ ಜೆನ್ಯೂನ್ ಬ್ರೇಕ್ ಫ್ಲೂಯಿಡ್ ನಿಂದ ತುಂಬಿ.

**⚠ ಎಚ್ಚರಿಕೆ**

ಕೆಳಗಿನ ಮಾರ್ಗದರ್ಶಿಗಳನ್ನು ಪಾಲಿಸಲು ವಿಫಲವಾದಲ್ಲಿ ವೈಯಕ್ತಿಕ ಗಾಯಗಳಾಗಬಹುದು ಅಥವಾ ಬ್ರೇಕ್ ಸಿಸ್ಟಂಗೆ ಗಂಭೀರ ಹಾನಿ ಸಂಭವಿಸಬಹುದು.

- ರಿಸರ್ವಾಯರ್ ನಲ್ಲಿ ಬ್ರೇಕ್ ಫ್ಲೂಯಿಡ್ ನಿರ್ದಿಷ್ಟ ಮಟ್ಟಕ್ಕಿಂತ ಕೆಳಗೆ ಇಳಿದಲ್ಲಿ, ಇನ್ ಸ್ಟ್ರುಮೆಂಟ್ ಪ್ಯಾನಲ್ ನಲ್ಲಿ ಬ್ರೇಕ್ ವಾರ್ನಿಂಗ್ ಲೈಟ್ "ಆನ್" ಆಗುತದೆ.(ಆಗ ಪಾರ್ಕಿಂಗ್ ಬ್ರೇಕ್ ಪೂರ್ಣವಾಗಿ ಕಳಚಿದ ಸ್ಥಿತಿಯಲ್ಲಿ ಇಂಜಿನ್ ಓಡುತಿರುತ್ತದೆ) ಬೆಳಕು ಆನ್ ಆದಲ್ಲಿ, ತಕ್ಷಣವೇ ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಅನ್ನು ಬ್ರೇಕ್ ಸಿಸ್ಟಂ ತಪಾಸಣೆ ಮಾಡುವಂತೆ ಹೇಳಿ.
- ವೇಗದಲ್ಲಿ ಫ್ಲೂಯಿಡ್ ನಷ್ಟವು ಬ್ರೇಕ್ ಸಿಸ್ಟಂನಲ್ಲಿ ಸೋರಿಕೆಯನ್ನು ಸೂಚಿಸುತ್ತದೆ. ಅದನ್ನು ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರಿಂದ ತಕ್ಷಣವೇ ತಪಾಸಣೆ ನಡೆಸಬೇಕು.
- ಮಾರುತಿ ಜೆನ್ಯೂನ್ ಬ್ರೇಕ್ ಫ್ಲೂಯಿಡ್ ಹೊರತುಪಡಿಸಿ ಯಾವುದೇ ಫ್ಲೂಯಿಡ್ ಅನ್ನು ಬಳಸಬೇಡಿ. ಮರುಪಡೆದುಕೊಂಡ ಫ್ಲೂಯಿಡ್ ಅಥವಾ ಸಂಗ್ರಹಿಸಿದ ಫ್ಲೂಯಿಡ್ ಅನ್ನು ಹಳೇ ಅಥವಾ ತೆರೆದ ಕಂಟೇನರ್ ಗಳಲ್ಲಿ ಬಳಸಬೇಡಿ. ಹೊರಗಿನ ವಸ್ತುಗಳು ಮತ್ತು ಇತರ ದ್ರವಗಳನ್ನು ಬ್ರೇಕ್ ಫ್ಲೂಯಿಡ್ ರಿಸರ್ವಾಯರ್ ನಿಂದ ಹೊರಗೆ ಇಡುವುದು ಅತೀ ಅಗತ್ಯ.

**⚠ ಜಾಗ್ರತೆ**

ಬ್ರೇಕ್ ಫ್ಲೂಯಿಡ್ ನಿಮ್ಮ ಕಣ್ಣುಗಳಿಗೆ ಹಾನಿಯುಂಟು ಮಾಡಬಹುದು ಮತ್ತು ಪೈಂಟ್ ಮಾಡಿರುವ ಹೊರಮೈಗಳಿಗೆ ಹಾನಿ ತರಬಹುದು. ರಿಸರ್ವಾಯರ್ ಮರಳಿ ತುಂಬುವಾಗ ಜಾಗರೂಕತೆ ವಹಿಸಿ.

**⚠ ಎಚ್ಚರಿಕೆ**

- ವಾಹನವನ್ನು ಅತಿಯಾಗಿ ಲೋಡ್ ಇರುವ ಸ್ಥಿತಿಯಲ್ಲಿ ಚಲಾಯಿಸಿದಲ್ಲಿ ಬ್ರೇಕಿಗ್ ಅಂತರವು ಹೆಚ್ಚಾಗಿರಬಹುದು ಮತ್ತು ಅಧಿಕ ಪೆಡಲ್ ಫೋರ್ಸ್ ನ ಅಗತ್ಯ ಬೀಳಬಹುದು.


**⚠ ಎಚ್ಚರಿಕೆ**

ಬ್ರೇಕ್ ಫ್ಲೂಯಿಡ್ ನುಂಗಿದಲ್ಲಿ ಹಾನಿಕರ ಅಥವಾ ಮಾರಕವಾಗಿ ಪರಿಣಮಿಸಬಹುದು. ಕಣ್ಣು ಅಥವಾ ಚರ್ಮದ ಮೇಲೆ ಬಿದ್ದರೂ ಹಾನಿಕರ. ನುಂಗಿದಲ್ಲಿ ವಾಂತಿ ಮಾಡಲು ಒತ್ತಡ ಹೇರಬೇಡಿ. ತಕ್ಷಣವೇ ವಿಷ ನಿಯಂತ್ರಣ ಕೇಂದ್ರ ಅಥವಾ ವೈದ್ಯರನ್ನು ಸಂಪರ್ಕಿಸಿ. ಬ್ರೇಕ್ ಫ್ಲೂಯಿಡ್ ಕಣ್ಣುಗಳಿಗೆ ಬಿದ್ದಲ್ಲಿ ನೀರಿನಿಂದ ಕಣ್ಣು ತೊಳೆಯಿರಿ ಮತ್ತು ತಕ್ಷಣವೇ ವೈದ್ಯಕೀಯ ಚಿಕಿತ್ಸೆ ಮಾಡಿಸಿಕೊಳ್ಳಿ. ನಿಭಾಯಿಸಿದ ನಂತರ ಪೂರ್ಣವಾಗಿ ತೊಳೆಯಿರಿ. ದ್ರವವು ಪ್ರಾಣಿಗಳಿಗೂ ವಿಷಕಾರಿಯಾಗಬಹುದು. ಮಕ್ಕಳು ಮತ್ತು ಪ್ರಾಣಿಗಳಿಗೆ ಸಿಗದಂತೆ ದೂರವಿಡಿ.

*ಸೂಚನೆ:*
*ಡಿಸ್ಕ್ ಬ್ರೇಕ್ ಗಳ ಜೊತೆಗೆ ಫ್ಲೂಯಿಡ್ ಮಟ್ಟವು ನಿಧಾನವಾಗಿ ಬ್ರೇಕ್ ಪ್ಯಾಡ್ಸ್ ಸವೆತಕ್ಕೆ ಇಳಿಯುವ ನಿರೀಕ್ಷೆ ಇದೆ.*

## ಬ್ರೇಕ್ ಪೆಡಲ್

ಕಳಚಿದಾಗ ಬ್ರೇಕ್ ಪೆಡಲ್ ಹೆಚ್ಚು ಸ್ಪಾಂಜೀ ಅನುಭವವಿಲ್ಲದೆ ನಿತ್ಯದ ಎತ್ತರದಲ್ಲಿ ನಿಲ್ಲುತ್ತದೆಯೇ ಎಂದು ಪರೀಕ್ಷಿಸಿ. ಇಲ್ಲದಿದ್ದಲ್ಲಿ, ಬ್ರೇಕ್ ಸಿಸ್ಟಂ ಅನ್ನು ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ತಪಾಸಣೆ ಮಾಡಿಸಿಕೊಳ್ಳಿ. ಬ್ರೇಕ್ ಪಡಲ್ ನಿತ್ಯದ ಎತ್ತರದಲ್ಲಿಲ್ಲ ಎಂದು ಸಂಶಯ ಬಂದಲ್ಲಿ ಈ ಕೆಳಗಿನ ವಿವರ ಪರೀಕ್ಷಿಸಿ:





54G108S

**ಪೆಡಲ್ ನಿಂದ ಫ್ರಂಟ್ ಪ್ಯಾನಲ್ ಕನಿಷ್ಠ ಅಂತರ “ಅ”:**
**ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ ಇಂಜಿನ್ ಮಾಡೆಲ್:**
**150 mm (6 in.)**
**ಡೀಸೆಲ್ ಇಂಜಿನ್ ಮಾಡೆಲ್:**
**180 mm (7.1 in.)**

ಇಂಜಿನ್ ಓಡಾಟದಲ್ಲಿರುವಾಗ, ಬ್ರೇಕ್ ಪೆಡಲ್ ಮತ್ತು ಫ್ರಂಟ್ ಪ್ಯಾನಲ್ ನಡುವಿನ ಅಂತರವನ್ನು ಪೆಡಲ್ ಕಳಚಿದಾಗ, ಅಂದಾಜು ಬಲ 30 kg (66 lbs) ಇರುವುದನ್ನು ಅಳೆಯಿರಿ. ಅಗತ್ಯವಿರುವ ಕನಿಷ್ಠ ಅಂತರ ಸೂಚಿಸಿರುವಂತೆ ಇರಬೇಕು. ನಿಮ್ಮ ವಾಹನದ ಬ್ರೇಕ್ ಸಿಸ್ಟಂ ಸ್ವಯಂ ಆಗಿ ಹೊಂದಿಸಿಕೊಳ್ಳುತ್ತಿರುವ ಕಾರಣದಿಂದ ಪೆಡಲ್ ಹೊಂದಿಸುವ ಅಗತ್ಯವಿರುವುದಿಲ್ಲ.
ಪೆಡಲ್ ನಿಂದ ಫ್ರಂಟ್ ಪ್ಯಾನಲ್ ಅಂತರವನ್ನು ಮೇಲಿನಂತೆ ಅಂದಾಜಿಸಿದಾಗ ಕನಿಷ್ಠ ಅಂತರಕ್ಕಿಂತ ಕಡಿಮೆ ಅಗತ್ಯವಿರುವುದು ಕಂಡಲ್ಲಿ, ನಿಮ್ಮ ವಾಹನವನ್ನು ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ತಪಾಸಣೆ ಮಾಡಿಸಿ.

*ಸೂಚನೆ:*
*ಬ್ರೇಕ್ ಪೆಡಲ್ ಮತ್ತು ಫ್ರಂಟ್ ಪೆಡಲ್ ನಡುವಿನ ಅಂತರವನ್ನು ಅಂದಾಜಿಸುವಾಗ,ಫ್ಲೋರ್ ಮ್ಯಾಟ್ ಅಥವಾ ರಬ್ಬರ್ ಅನ್ನು ನಿಮ್ಮ ಅಳತೆಯ ಫ್ರಂಟ್ ಪ್ಯಾನಲ್ ನಲ್ಲಿ ಸೇರಿಸದೆ ಇರುವುದು ಖಚಿತಪಡಿಸಿ.*





77PM07013

**⚠ ಎಚ್ಚರಿಕೆ**

**ವಾಹನದ ಬ್ರೇಕಿಂಗ್ ವ್ಯವಸ್ಥೆಯಲ್ಲಿ ಈ ಕೆಳಗಿನ ಯಾವುದೇ ಸಮಸ್ಯೆಗಳನ್ನು ನೀವು ಎದುರಿಸಿದಲ್ಲಿ, ವಾಹನವನ್ನು ತಕ್ಷಣವೇ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಸಿ ತಪಾಸಣೆ ಮಾಡಿಕೊಳ್ಳಿ**
- **ದುರ್ಬಲ ಬ್ರೇಕಿಂಗ್ ಪ್ರದರ್ಶನ**
- **ಅಸಮ ಬ್ರೇಕಿಂಗ್ (ಎಲ್ಲಾ ವೀಲ್ ಗಳ ಮೇಲೆ ಬ್ರೇಕ್ ಗಳು ಸಮಾನವಾಗಿ ಕಾರ್ಯ ನಿರ್ವಹಿಸುತ್ತಿಲ್ಲ)**
- **ಮಿತಿ ಮೀರಿದ ಪೆಡಲ್ ಟ್ರಾವೆಲ್**
- **ಬ್ರೇಕ್ ಎಳೆಯುತ್ತಿದೆ**
- **ಮಿತಿ ಮೀರಿದ ಧ್ವನಿ**
- **ಪೆಡಲ್ ಪಲ್ಸೇಶನ್ (ಪೆಡಲ್ ಕಳಚಿದಾಗ ನಾಡಿ ಬಡಿಯುತ್ತಿದೆ)**

## ಪಾರ್ಕಿಂಗ್ ಬ್ರೇಕ್




77PM702

**ರಾಚೆಟ್ ಟೂತ್ ನಿರ್ದಿಷ್ಟತೆಗಳು**
**6ನೇ – 9ನೇ ಟೀತ್**
**ಲೆವೆಲ್ ಫುಲ್ ಫೋರ್ಸ್ (1):**
**200 N (20 kgf, 44 lbf)**


ಪಾರ್ಕಿಂಗ್ ಬ್ರೇಕ್ ಲಿವರ್ ಅನ್ನು ನಿಧಾನವಾಗಿ ಪೂರ್ಣವಾಗಿ ಹಾಕುವತ್ತ ಮೇಲಕ್ಕೆ ಬಿಡುತ್ತಿರುವಾಗ ರಾಚೆಟ್ ಟೀತ್ ನಲ್ಲಿ ಮಾಡಿರುವ ಕ್ಲಿಕ್ ಗಳ ಸಂಖ್ಯೆಯನ್ನು ಲೆಕ್ಕ ಹಾಕುವ ಮೂಲಕ ಪಾರ್ಕಿಂಗ್ ಬ್ರೇಕ್ ಅನ್ನು ಸೂಕ್ತ ಹೊಂದಿಕೆಗಾಗಿ ಪರೀಕ್ಷಿಸಿ.
ಪಾರ್ಕಿಂಗ್ ಬ್ರೇಕ್ ಲಿವರ್ ನಿರ್ದಿಷ್ಟ ರಾಚೆಟ್ ಟೀತ್ ಮತ್ತು ರೇರ್ ವೀಲ್ ಗಳ ನಡುವೆ ನಿಲ್ಲಬೇಕು ಮತ್ತು ಭದ್ರವಾಗಿ ಲಾಕ್ ಆಗಬೇಕು. ಪಾರ್ಕಿಂಗ್ ಬ್ರೇಕ್ ಲಿವರ್ ಅನ್ನು ಸೂಕ್ತವಾಗಿ ಹೊಂದಿಸದೆ ಇದ್ದಲ್ಲಿ ಅಥವಾ ಲಿವರ್ ಅನ್ನು ಪೂರ್ಣವಾಗಿ ಬಿಟ್ಟ ಮೇಲೆ ಬ್ರೇಕ್ ಗಳು ಎಳೆಯುತ್ತಿದ್ದಲ್ಲಿ ಪಾರ್ಕಿಂಗ್ ಬ್ರೇಕ್ ಅನ್ನು ತಪಾಸಣೆ ಮಾಡಿ ಮತ್ತು/ಅಥವಾ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಹೊಂದಿಸಿಕೊಳ್ಳಿ.

**⚠ ಎಚ್ಚರಿಕೆ**

- **ವಾಹನವನ್ನು ಅತಿಯಾಗಿ ಲೋಡ್ ಮಾಡಿದಲ್ಲಿ ಪಾರ್ಕಿಂಗ್ ಬ್ರೇಕ್ ಹೆಚ್ಚು ಪರಿಣಾಮಕಾರಿಯಾಗಿರದು. ಹೆಚ್ಚುವರಿ ಚೋಕ್ ಗಳನ್ನು ವಾಹನವನ್ನು ಹಿಡಿಯಲು ಬಳಸಿ.**

## ಸ್ಟೀರಿಂಗ್

ಉದಾಹರಣೆ




77PH042


**ಸ್ಟೀರಿಂಗ್ ವೀಲ್ ಪ್ಲೇ "C":**
**0-30 mm (0.0 – 1.2 in.)**

ಸ್ಟೀರಿಂಗ್ ವೀಲ್ ಅನ್ನು ನಿಧಾನವಾಗಿ ಕೇಂದ್ರೀಯ ಪೊಸಿಷನ್ ನಿಂದ ಎಡದಿಂದ ಬಲಕ್ಕೆ ತಿರುಗಿಸುತ್ತಾ ಪ್ಲೇಯನ್ನು ಪರೀಕ್ಷಿಸಿ ಮತ್ತು ಸ್ವಲ್ಪ ವಿರೋಧ ವ್ಯಕ್ತವಾಗುವವರೆಗೂ ಅದು ಚಲಿಸುವ ಅಂತರವನ್ನು ಅಳೆಯಿರಿ. ಪ್ಲೇಯು ಸೂಚಿಸಿದ ಮೌಲ್ಯಗಳ ನಡುವೆಯೇ ಇರಬೇಕು.
ತೆರೆದ ಪ್ರದೇಶದಲ್ಲಿ ನಿಧಾನವಾಗಿ ಚಲಿಸುತ್ತಾ ಸ್ಟೀರಿಂಗ್ ವೀಲ್ ಅನ್ನು ಪೂರ್ಣವಾಗಿ ಬಲ ಮತ್ತು ಎಡದ ಕಡೆಗೆ ತಿರುಗಿಸಿ ಸರಳವಾಗಿ ಮತ್ತು  ಸರಾಗವಾಗಿ ಯಾವುದೇ ಲಟಲಟ ಸದ್ದಿಲ್ಲದೆ ತಿರುಗುತ್ತಿದೆಯೇ ಎಂದು ಪರೀಕ್ಷಿಸಿ. ಫ್ರೀ ಪ್ಲೇಯ ಪ್ರಮಾಣವು ಸೂಚಿಸಿರುವುದಕ್ಕಿಂತ ಹೊರಗಿದ್ದಲ್ಲಿ ಅಥವಾ ಏನಾದರೂ ತಪ್ಪು ಕಂಡಲ್ಲಿ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ತಪಾಸಣೆ ನಡೆಸುವುದು ಅಗತ್ಯವಿದೆ.

## ಪ್ರೊಪೆಲ್ಲರ್ ಶಾಫ್ಟ್ ಯುನಿವರ್ಸಲ್ ಜಾಯಿಂಟ್

ಫ್ರಂಟ್


ಉದಾಹರಣೆ




77PM703

ರೇರ್

ಉದಾಹರಣೆ





77PM704

ಪ್ರೊಪೆಲ್ಲರ್ ಶಾಫ್ಟ್ ಯುನಿವರ್ಸಲ್ ಜಾಯಿಂಟ್ (1) (ಫ್ರಂಟ್ & ರೇರ್) ಅನ್ನು ಸರ್ವಿಸ್ ವೇಳಾಪಟ್ಟಿಗೆ ಅನುಗುಣವಾಗಿ ಲುಬ್ರಿಕೇಟ್ ಮಾಡಿ.

ಪ್ರೊಪೆಲ್ಲರ್ ಶಾಫ್ಟ್ ಯುನಿವರ್ಸಲ್ ಜಾಯಿಂಟ್ ಅನ್ನು ಲುಬ್ರಿಕೇಟ್ ಮಾಡಲು ನೀವು ಗ್ರೀಸ್ ಗನ್ (2) ಮತ್ತು ಸೂಚಿತ ಗ್ರೀಸ್ ಎನ್ ಎಲ್ ಜಿ ಐ ಗ್ರೇಡ್ 2 ಬಳಸಬೇಕು.

## ಟೈರ್ ಗಳು

ಉದಾಹರಣೆ



77PM705

ನಿಮ್ಮ ವಾಹನಕ್ಕೆ ಫ್ರಂಟ್ ಮತ್ತು ರೇರ್ ಟೈರ್ ಪ್ರೆಶರ್ ನಿರ್ದಿಷ್ಟತೆಗಳನ್ನು ಟೈರ್ ಮಾಹಿತಿ ಲೇಬಲ್ ನಲ್ಲಿ ಪಟ್ಟಿ ಮಾಡಲಾಗಿದೆ. ಫ್ರಂಟ್ ಮತ್ತು ರೇರ್ ಟೈರ್ ಗಳು ಎರಡೂ ಸೂಚಿತ ಟೈರ್ ಪ್ರೆಶರ್ ಇರಬೇಕು.
ಇದ್ದಲ್ಲಿ, ಕಾಂಪಾಕ್ಟ್ ಸ್ಪೇರ್ ಟೈರ್ ಗೆ ಮೌಲ್ಯ ಅನ್ವಯವಾಗುವುದಿಲ್ಲ ಎನ್ನುವುದನ್ನು ಗುರುತಿಸಿ.

### ಟೈರ್ ತಪಾಸಣೆ


ಈ ಕೆಳಗಿನ ಪರೀಕ್ಷೆಗಳನ್ನು ನಡೆಸುವ ಮೂಲಕ ನಿಮ್ಮ ವಾಹನಗಳ ಟೈರ್ ಗಳನ್ನು ಕನಿಷ್ಠ ತಿಂಗಳಿಗೆ ಒಮ್ಮೆ ತಪಾಸಣೆ ಮಾಡಿ.

1) ಏರ್ ಪ್ರೆಶರ್ ಅನ್ನು ಟೈರ್ ಪ್ರೆಶರ್ ಗೇಜ್ ಜೊತೆಗೆ ಅಳೆಯಿರಿ. ಅಗತ್ಯವಿದ್ದಲ್ಲಿ ಪ್ರೆಶರ್ ಹೊಂದಿಸಿ. ಸ್ಪೇರ್ ಟೈರ್ ಅನ್ನೂ ಪರೀಕ್ಷಿಸಲು ನೆನಪಿಡಿ.

**⚠ ಎಚ್ಚರಿಕೆ**

- **ಟೈರ್ ತಂಪಾಗಿದ್ದಾಗ ಏರ್ ಪ್ರೆಶರ್ ಗಳನ್ನು ಅಳತೆ ಮಾಡಬೇಕು. ಇಲ್ಲದಿದ್ದಲ್ಲಿ ಅಸಮರ್ಪಕ ರೀಡಿಂಗ್ ಗಳು ಸಿಗಬಹುದು.**
- **ಉಬ್ಬರ ಪ್ರೆಶರ್ ಅನ್ನು ಕಾಲ ಕಾಲಕ್ಕೆ ಟೈರ್ ಅನ್ನು ನಿಧಾನವಾಗಿ ಉಬ್ಬಿಸುವಾಗ ಪರೀಕ್ಷಿಸಿ. ಸೂಚಿತ ಪ್ರೆಶರ್ ಲಭಿಸುವವರೆಗೂ ಹೀಗೆ ಮಾಡಿ.**
- **ಟೈರ್ ಗಳನ್ನು ಎಂದಿಗೂ ಕಡಿಮೆ ಉಬ್ಬಿಸುವುದು ಅಥವಾ ಅಧಿಕ ಉಬ್ಬಿಸಬೇಡಿ.**
- **ಕಡಿಮೆ ಉಬ್ಬಿಸುವುದರಿಂದ ಅಸಹಜವಾದ ಹ್ಯಾಂಡ್ಲಿಂಗ್ ಶೈಲಿಗೆ ಕಾರಣವಾಗಬಹುದು ಅಥವಾ ರಿಮ್ ಟೈರ್ ಬೆಡ್ ಮೇಲೆ ಜಾರಲೂ ಕಾರಣವಾಗಬಹುದು. ಇದರಿಂದ ಅಪಘಾತ ಅಥವಾ ಟೈರ್ ಅಥವಾ ರಿಮ್ ಗೆ ಹಾನಿಯಾಗಬಹುದು.**
- **ಅತಿಯಾಗಿ ಉಬ್ಬಿಸುವುದರಿಂದ ಟೈರ್ ಒಡೆದು ಹೋಗಿ ಗಾಯಗಳಾಗಬಹುದು. ಅತಿಯಾಗಿ ಉಬ್ಬಿಸುವುದರಿಂದ ಅಸಹಜವಾದ ಹ್ಯಾಂಡ್ಲಿಂಗ್ ಗೆ ಕಾರಣವಾಗಿ ಅಪಘಾತವಾಗಬಹುದು.**

ಉದಾಹರಣೆ




52KM110

(1) ಟ್ರೆಡ್ ವೇರ್ ಇಂಡಿಕೇಟರ್
(2) ಇಂಡಿಕೇಟರ್ ಸ್ಥಳ ಗುರುತು

2) ಟ್ರೆಡ್ ಗ್ರೂವ್ ಆಳವು 1.6 ಎಂಎಂ (0.06 ಇಂಚು) ಗಿಂತ ಹೆಚ್ಚಿರುವುದನ್ನು ಪರೀಕ್ಷಿಸಿ. ನೀವು ಇದನ್ನು ಪರೀಕ್ಷಿಸಲು ಟೈರ್ ಗಳನ್ನು ಟ್ರೆಡ್ ವೇರ್ ಇಂಡಿಕೇಟರ್ ಗಳಲ್ಲಿ ಗ್ರೂವ್ ಗಳಲ್ಲಿ ಮೋಲ್ಡ್ ಮಾಡಲಾಗಿದೆ. ಇಂಡಿಕೇಟರ್ ಗಳು ಟ್ರೆಡ್ ಹೊರಮೈ ಮೇಲೆ ಕಂಡಾಗ ಉಳಿದ ಟ್ರೆಡ್ ಆಳ 1.6 ಎಂಎಂ (0.06 ಇಂಚು) ಅಥವಾ ಕಡಿಮೆ ಇರಬೇಕು. ಇಲ್ಲದಿದ್ದಲ್ಲಿ ಟೈರ್ ಬದಲಿಸಬೇಕು.
3) ಅಸಹಜವಾದ ಸವೆತ, ಮುರಿತಗಳು ಮತ್ತು ಹಾನಿಯನ್ನು ಪರೀಕ್ಷಿಸಿ ಮುರಿತಗಳಿರುವ ಮತ್ತು ಇತರ ಹಾನಿ ಇರುವ ಯಾವುದೇ ಟೈರ್ ಬದಲಿಸಬೇಕು. ಟೈರ್ ಗಳು ಅಸಹಜವಾದ ಸವೆತ ತೋರಿಸಿದಲ್ಲಿ, ಅವುಗಳನ್ನು ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ತಪಾಸಣೆ ಮಾಡಿ.

**⚠ ಜಾಗ್ರತೆ**

**ತಡೆಗಳಿಗೆ ಬಡಿಯುವುದು ಮತ್ತು ಕಲ್ಲಿನ ಮೇಲೆ ಚಲಿಸುವುದರಿಂದ ಟೈರ್ ಗಳಿಗೆ ಹಾನಿಯಾಗಬಹುದು ಮತ್ತು ವೀಲ್ ಸಾಲುಜೋಡಣೆಗೆ ಸಮಸ್ಯೆಯಾಗಬಹುದು. ಟೈರ್ ಗಳು ಮತ್ತು ವೀಲ್ ಸಾಲು ಜೋಡಣೆಯನ್ನು ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಕಾಲ ಕಾಲಕ್ಕೆ ಪರೀಕ್ಷಿಸಿರುವುದನ್ನು ಖಚಿತಪಡಿಸಿ.**

4) ಸಡಿಲವಾದ ವೀಲ್ ನಟ್ಟುಗಳನ್ನು ಪರೀಕ್ಷಿಸಿ.
5) ಮೊಳೆಗಳು, ಕಲ್ಲುಗಳು ಅಥವಾ ಇತರ ವಸ್ತುಗಳು ಟೈರ್ ಗಳಿಗೆ ಅಂಟಿಕೊಂಡಿರದೆ ಇರುವುದನ್ನು ಪರೀಕ್ಷಿಸಿ.

**⚠ ಎಚ್ಚರಿಕೆ**


- ನಿಮ್ಮ ವಾಹನವು ಒಂದೇ ರೀತಿಯ ಮತ್ತು ಗಾತ್ರದ ಟೈರ್ ಗಳನ್ನು ಹೊಂದಿದೆ. ವಾಹನವನ್ನು ಸೂಕ್ತವಾಗಿ ಸ್ಟೀರಿಂಗ್ ಮಾಡಿರುವುದು ಮತ್ತು ಹ್ಯಾಂಡ್ಲಿಂಗ್ ಬಹಳ ಮುಖ್ಯವಾಗಿದೆ. ವಿಭಿನ್ನ ಗಾತ್ರದ ಮತ್ತು ವಿಧದ ಟೈರ್ ಗಳನ್ನು ನಿಮ್ಮ ವಾಹನದ ನಾಲ್ಕು ವೀಲ್ ಗಳಿಗೆ ಮಿಶ್ರ ಮಾಡಬೇಡಿ. ಮಾರುತಿ ಸುಜುಕಿ ಅಂಗೀಕರಿಸಿದ ಗುಣಮಟ್ಟ ಅಥವಾ ಆಯ್ಕೆಯ ಟೈರ್ ಗಳ ಗಾತ್ರ ಮತ್ತು ವಿಧವನ್ನೇ ನಿಮ್ಮ ವಾಹನಗಳಿಗೆ ಬಳಸಬೇಕು.
- ನಿಮ್ಮ ವಾಹನಕ್ಕೆ ಬಳಸಿರುವ ವೀಲ್ ಗಳು ಮತ್ತು ಟೈರ್ ಗಳನ್ನು ಹೊರಗಿನ ಮಾರುಕಟ್ಟೆಯ ಕೆಲವು ಸಂಯೋಜನೆಗಳೊಂದಿಗೆ ಬದಲಿಸುವಾಗ ನಿಮ್ಮ ವಾಹನದ ಸ್ಟೀರಿಂಗ್ ಮತ್ತು ಹ್ಯಾಂಡ್ಲಿಂಗ್ ವಿಷಯಗಳನ್ನೂ ಬದಲಿಸಬೇಕು.
- ಹೀಗಾಗಿ, ಮಾರುತಿ ಸುಜುಕಿ ಗುಣಮಟ್ಟ ಮತ್ತು ಆಯ್ಕೆಯಾಗಿ ನಿಮ್ಮ ವಾಹನಕ್ಕೆ ಅಂಗೀಕರಿಸಿರುವ ವೀಲ್ ಮತ್ತು ಟೈರ್ ಗಳನ್ನೇ ಬಳಸಿ.

***ಸೂಚನೆ***

ಮೂಲ ಟೈರ್ ಗಳನ್ನು ವಿಭಿನ್ನ ಗಾತ್ರದ ಟೈರ್ ಗಳ ಜೊತೆಗೆ ಬದಲಿಸುವುದು ಅಸಮರ್ಪಕ ಸ್ಪೀಡೋಮೀಟರ್ ಅಥವಾ ಓಡೋಮೀಟರ್ ಗೆ ಕಾರಣವಾಗಬಹುದು. ಮೂಲ ಟೈರ್ ಗಳ ಗಾತ್ರಕ್ಕಿಂತ ವಿಭಿನ್ನವಾಗಿರುವ ಬದಲಿ ಟೈರ್ ಗಳನ್ನು ಖರೀದಿಸುವ ಮೊದಲು ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಪರೀಕ್ಷಿಸಿಕೊಳ್ಳಿ.

## ಟೈರ್ ರೊಟೇಶನ್

**ಉದಾಹರಣೆ**




80JK7001

ನಿಮ್ಮ ಟೈರ್ ಗಳ ಅಸಮ ಸವೆತವನ್ನು ತಡೆಯಲು ಮತ್ತು ಅವುಗಳ ಬಾಳಿಕೆಯನ್ನು ಧೀರ್ಘಗೊಳಿಸಲು ವಿವರಿಸಿರುವಂತೆ ಟೈರ್ ಗಳನ್ನು ರೊಟೇಟ್ ಮಾಡಿ. ಟೈರ್ ಅನ್ನು ಪ್ರತೀ 10000 ಕಿಮೀಗೆ ಒಮ್ಮೆ ಬದಲಿಸಬೇಕು. ರೊಟೇಶನ್ ನಂತರ, ಫ್ರಂಟ್ ಮತ್ತು ರೇರ್ ಟೈರ್ ಪ್ರೆಶರ್ ಗಳನ್ನು ನಿಮ್ಮ ವಾಹನದ ಟೈರ್ ಮಾಹಿತಿ ಲೇಬಲ್ ನಲ್ಲಿ ಪಟ್ಟಿ ಮಾಡಿದ ನಿರ್ದಿಷ್ಟತೆಗಳಿಗೆ ಹೊಂದಿಸಿ.

### ವೀಲ್ ಸಮತೋಲನ

ವಾಹನವು ಸಹಜವಾದ ರಸ್ತೆಯಲ್ಲಿ ಅಸಹಜವಾಗಿ ಕಂಪಿಸಿದಲ್ಲಿ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ಬಳಿ ವೀಲ್ ಸಮತೋಲನ ಮಾಡಿಕೊಳ್ಳಿ.

### ವೀಲ್ ಸಾಲು ಜೋಡಣೆ


ಅಸಹಜವಾದ ಟೈರ್ ಸವೆತ ಅಥವಾ ಒಂದು ಕಡೆಗೆ ಎಳೆಯುತ್ತಿದ್ದಲ್ಲಿ ವೀಲ್ ಅನ್ನು ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ನಲ್ಲಿ ಸಾಲು ಜೋಡಿಸಿಕೊಳ್ಳಿ.

## ಬ್ಯಾಟರಿ

**⚠ ಎಚ್ಚರಿಕೆ**

- ಬ್ಯಾಟರಿಗಳು ಜ್ವಾಲೆ ತರುವ ಹೈಡ್ರೋಜನ್ ಗ್ಯಾಸ್ ಉತ್ಪಾದಿಸುತ್ತವೆ. ಜ್ವಾಲೆಗಳು ಮತ್ತು ಕಿಡಿಗಳನ್ನು ಬ್ಯಾಟರಿಯಿಂದ ದೂರವಿಡಿ. ಇಲ್ಲದಿದ್ದಲ್ಲಿ ಸ್ಫೋಟವಾಗಬಹುದು. ಬ್ಯಾಟರಿ ಪರಿಸರದಲ್ಲಿ ಕೆಲಸ ಮಾಡುವಾಗ ಯಾವತ್ತೂ ಧೂಮಪಾನ ಮಾಡಬೇಡಿ.
- ಬ್ಯಾಟರಿ ಪರೀಕ್ಷಿಸುವಾಗ ಅಥವಾ ಸರ್ವಿಸ್ ಮಾಡುವಾಗ ನೆಗೆಟಿವ್ ಕೇಬಲ್ ಸಂಪರ್ಕ ಕಳಚಿ. ಲೋಹದ ವಸ್ತುಗಳು ಬ್ಯಾಟರಿ ಪೋಸ್ಟ್ ಗಳಿಗೆ ಮತ್ತು ವಾಹನಕ್ಕೆ ಒಂದೇ ಸಮಯಕ್ಕೆ ಸಂಪರ್ಕಿಸಿ ಶಾರ್ಟ್ ಸರ್ಕ್ಯೂಟ್ ಆಗದಂತೆ ಜಾಗರೂಕತೆವಹಿಸಿ.
- ನಿಮಗೆ ಹಾನಿ ಅಥವಾ ವಾಹನಕ್ಕೆ ಅಥವಾ ಬ್ಯಾಟರಿಗೆ ಹಾನಿಯಾಗದಂತೆ ತಡೆಯಲು, ಈ ಮ್ಯಾನುವಲ್ ನಲ್ಲಿರುವ “ತುರ್ತು ಸರ್ವಿಸ್” ವಿಭಾಗದ ಜಂಪ್ ಸ್ಟಾರ್ಟಿಂಗ್ ಸೂಚನೆಗಳನ್ನು ಪಾಲಿಸಿ. ಅಗತ್ಯವಿದ್ದಲ್ಲಿ ನಿಮ್ಮ ವಾಹನವನ್ನು ಜಂಪ್ ಸ್ಟಾರ್ಟ್ ಮಾಡಿ.

ಉದಾಹರಣೆ




54GM701

ನಿರ್ವಹಣೆಗೆ- ಉಚಿತ ಬ್ಯಾಟರಿ (ಕ್ಯಾಪ್ ಇಲ್ಲದ ವಿಧ), ನೀವು ನೀರು ಬೆರೆಸಬೇಕಾಗಿಲ್ಲ. ವಾಟರ್ ಫಿಲ್ಲರ್ ಕ್ಯಾಪ್ಸ್ ಇರುವ ಸಾಂಪ್ರದಾಯಿಕ ವಿಧದ ಬ್ಯಾಟರಿಗೆ, ಬ್ಯಾಟರಿ ದ್ರವದ ಮಟ್ಟವನ್ನು ಮೇಲ್ಮಟ್ಟದ ಗೆರೆಗೆ (1) ಮತ್ತು ಕೆಳಮಟ್ಟದ ಗೆರೆಗೆ (2) ಪ್ರತೀ ಬಾರಿ ಇಡಬೇಕು. ನೀವು ಆಗಾಗ್ಗೆ ಬ್ಯಾಟರಿಯನ್ನು ಪರೀಕ್ಷಿಸಬೇಕು. ಕೇಸ್ ಬ್ಯಾಟರಿ ಟರ್ಮಿನಲ್ ಗಳು ಮತ್ತು ಬ್ಯಾಟರಿ ಹೋಲ್ಡ್ ಡೌನ್ ಬ್ರಾಕೆಟ್ ಗೆ ಹಾನಿ ಅಥವಾ ತುಕ್ಕು ಹಿಡಿದಿದೆಯೇ ಪರೀಕ್ಷಿಸಬೇಕು. ಕಠಿಣ ಬ್ರಷ್ ಮತ್ತು ಅಮೋನಿಯ ಮಿಶ್ರ ಮಾಡಿದ ನೀರು ಅಥವಾ ಬೇಕಿಂಗ್ ಸೋಡಾ ಮಿಶ್ರ ಮಾಡಿದ ನೀರು ಬಳಸಿ ತುಕ್ಕು ಹಿಡಿದಿರುವುದನ್ನು ನಿವಾರಿಸಿ. ತುಕ್ಕು ನಿವಾರಿಸಿದ ಮೇಲೆ ಸ್ವಚ್ಛ ನೀರಿನಿಂದ ತೊಳೆಯಿರಿ.

ನಿಮ್ಮ ವಾಹನವು ಒಂದು ತಿಂಗಳವರೆಗೆ ಚಾಲನೆ ಮಾಡಿರದೆ ಇದ್ದಲ್ಲಿ ಬ್ಯಾಟರಿಯ ನೆಗೆಟಿವ್ ಟರ್ಮಿನಲ್ ನಿಂದ ಕೇಬಲ್ ಸಂಪರ್ಕ ಕಳಚಿ ಡಿಸ್ ಚಾರ್ಜ್ ತಪ್ಪಿಸಲು ನೆರವಾಗಿ.

**⚠ ಎಚ್ಚರಿಕೆ**

**ಬ್ಯಾಟರಿ ಮಟ್ಟವು ಕೆಳಮಟ್ಟದ ಲೈನ್ಗಿಂತ (2) ಕಡಿಮೆ ಇರುವ ಬ್ಯಾಟರಿಯನ್ನು ಬಳಸಿದಲ್ಲಿ, ಅದರಿಂದ ಬ್ಯಾಟರಿ ಬಾಳಿಕೆ ಕಡಿಮೆಯಾಗಬಹುದು. ಬಾಹ್ಯ ಉಷ್ಣತೆ ಅಥವಾ ಬ್ಯಾಟರಿಯಿಂದ ಹೈಡ್ರೋಜನ್ ಅನಿಲ ಸೃಷ್ಟಿಯಾಗಿ ಸ್ಫೋಟಗೊಳ್ಳುವ ಸಾಧ್ಯತೆಯಿದೆ. ಬ್ಯಾಟರಿ ಮಟ್ಟವು ಕೆಳಮಟ್ಟದ ಲೈನ್ಗಿಂತ (2) ಕಡಿಮೆ ಇರುವ ಬ್ಯಾಟರಿಯನ್ನು ಬಳಸಬೇಡಿ.**

***ಸೂಚನೆ***

**ಮೇಲ್ಮಟ್ಟದ ಲೈನ್ಗಿಂತ (1) ಹೆಚ್ಚು ಇರುವ ಬ್ಯಾಟರಿ ದ್ರವವನ್ನು ಸೇರಿಸಿದಲ್ಲಿ, ವಾಹನ ಚಲಾಯಿಸುವಾಗಿನ ಕಂಪನದ ಕಾರಣದಿಂದ ದ್ರವವು ಸೋರಿಕೆಯಾಗಬಹುದು. ಕೆಲವೊಂದು ಪ್ರಕರಣದಲ್ಲಿ ಬ್ಯಾಟರಿಯ ಚಾರ್ಜಿಂಗ್ ಸ್ಥಿತಿಗೆ ಅನುಗುಣವಾಗಿ ದ್ರವವು ಹೊರಗೆ ಸಿಂಪಡನೆಯಾಗಬಹುದು. ಅದು ಬ್ಯಾಟರಿಯ ಬಳಿ ಇರುವ ಭಾಗಗಳಿಗೆ ಹಾನಿ ಉಂಟು ಮಾಡಬಹುದು. ಬ್ಯಾಟರಿಯಲ್ಲಿರುವ ದ್ರವವು ಅತಿಯಾಗಿ ಸೋರಿಕೆಯಾದಲ್ಲಿ, ತಕ್ಷಣವೇ ಅದನ್ನು ನೀರಿನಿಂದ ತೊಳೆಯಿರಿ. ಮೇಲಿನ ಮಟ್ಟದ ಲೈನ್ಗಿಂತ (1) ಹೆಚ್ಚಿನ ಪ್ರಮಾಣದಲ್ಲಿ ಬ್ಯಾಟರಿ ದ್ರವವನ್ನು ಸೇರಿಸಬೇಡಿ.**

*ಸೂಚನೆ:*

*ಬ್ಯಾಟರಿಯನ್ನು ಬಳಸಿದಾಗ ಬ್ಯಾಟರಿ ದ್ರವವು ಬಳಕೆಯಾಗುತ್ತದೆ. ಮಟ್ಟವು ಮೇಲ್ಮಟ್ಟದ (1) ಮತ್ತು ಕೆಳಮಟ್ಟದ (2) ಕೇಂದ್ರದಿಂದ ಕಡಿಮೆ ಇದ್ದಲ್ಲಿ, ಅದು ಮೇಲ್ಮಟ್ಟದ ಲೈನ್ (1) ತಲುಪುವವರೆಗೂ ಡಿಸ್ಟಿಲ್ಡ್ ವಾಟರ್ ಸೇರಿಸಿ.*

## ಫ್ಯೂಸ್ ಗಳು


ಕೆಳಗೆ ವಿವರಿಸಿದಂತೆ, ನಿಮ್ಮ ವಾಹನಕ್ಕೆ ಮೂರು ವಿಧದ ಫ್ಯೂಸ್ ಗಳಿವೆ.

**ಫ್ಯೂಸಿಯೇಬಲ್ ಲಿಂಕ್ ವೈರ್ ಮತ್ತು ಮೈನ್ ಫ್ಯೂಸ್**
ಮುಖ್ಯ ಫ್ಯೂಸ್ ಕರೆಂಟ್ ಅನ್ನು ನೇರವಾಗಿ ಬ್ಯಾಟರಿಯಿಂದ ತೆಗೆದುಕೊಳ್ಳುತ್ತದೆ.

**ಪ್ರಾಥಮಿಕ ಫ್ಯೂಸ್ ಗಳು**
ಈ ಫ್ಯೂಸ್ ಗಳು ಮೈನ್ ಫ್ಯೂಸ್ ಮತ್ತು ಪ್ರತ್ಯೇಕ ಫ್ಯೂಸ್ ಗಳ ನಡುವೆ ಇವೆ ಮತ್ತು ಇಲೆಕ್ಟ್ರಿಕಲ್ ಲೋಡ್ ಗ್ರೂಪ್ ಗಳು.

**ಪ್ರತ್ಯೇಕ ಫ್ಯೂಸ್ ಗಳು**
ಈ ಫ್ಯೂಸ್ ಗಳು ಪ್ರತ್ಯೇಕ ಇಲೆಕ್ಟ್ರಿಕಲ್ ಸರ್ಕ್ಯೂಟ್ ಗಳು


ಫ್ಯೂಸ್ ಕಳಚಲು, ರಿಲೇ ಬಾಕ್ಸ್ ನಲ್ಲಿ ಒದಗಿಸಿರುವ ಫ್ಯೂಸ್ ಪುಲ್ಲರ್ (1) ಅನ್ನು ಬಳಸಿ.





ಉದಾಹರಣೆ

77PM07012

## ಇಂಜಿನ್ ಭಾಗದಲ್ಲಿ ಫ್ಯೂಸ್ ಗಳು




77PH076





77PH077

**ಮೈನ್ ಫ್ಯೂಸ್ / ಪ್ರೈಮರಿ ಫ್ಯೂಸ್ / ರಿಲೇ**

| ಕ್ರಮ ಸಂಖ್ಯೆ | ರೇಟಿಂಗ್ | ಫ್ಯೂಸ್/ ರಿಲೇ |
|---|---|---|
| (1) | - | ಸ್ಟಾರ್ಟಿಂಗ್ ಮೋಟಾರ್ ರಿಲೇ (ಡೀಸೆಲ್) |
| | | ಸಿ.ಎನ್.ಜಿ. ವಾಲ್ವ್ ರಿಲೇ (ಬೈ ಫ್ಯೂಯೆಲ್) |
| (2) | - | ರೇಡಿಯೇಟರ್ ಫ್ಯಾನ್ ರಿಲೇ |
| (3) | - | ಗ್ಲೋ ಪ್ಲಗ್ 2 ರಿಲೇ (ಡೀಸೆಲ್) |
| | | ಫ್ಯೂಯೆಲ್ ಪಂಪ್ ರಿಲೇ (ಬೈ ಫ್ಯೂಯೆಲ್) |
| (4) | - | ಫ್ಯೂಯೆಲ್ ಪಂಪ್ ರಿಲೇ (ಡೀಸೆಲ್) |
| | | ಸ್ಟಾರ್ಟಿಂಗ್ ಮೋಟಾರ್ ರಿಲೇ (ಬೈ ಫ್ಯೂಯೆಲ್) |
| (5) | 20A | ಫ್ಯೂಯೆಲ್ ಪಂಪ್ (ಡೀಸೆಲ್) |
| | 7.5A | ಸಿ.ಎನ್.ಜಿ. ವಾಲ್ವ್ (ಬೈ ಫ್ಯೂಯೆಲ್) |
| (6) | 30A | ಫ್ಯೂಯೆಲ್ ಇಂಜೆಕ್ಟರ್ (ಡೀಸೆಲ್) |
| | 15A | ಫ್ಯೂಯೆಲ್ ಇಂಜೆಕ್ಟರ್ (ಬೈ ಫ್ಯೂಯೆಲ್) |
| (7) | 30A | ಸ್ಟಾರ್ಟಿಂಗ್ ಮೋಟಾರ್ |
| (8) | 15A | ಹಾರ್ನ್/ಹಜಾರ್ಡ್ |
| (9) | 70A | ಆಲ್ಟ್ ಆಲ್ಟರ್ನೇಟರ್ |
| (10) | 20A | ಗ್ಲೋ ಪ್ಲಗ್ (ಡೀಸೆಲ್) |
| (11) | 20A | ಗ್ಲೋ ಪ್ಲಗ್ 2 (ಡೀಸೆಲ್) |
| (12) | 40A | ಬ್ಯಾಟರಿ |
| (13) | 40A | ಇಗ್ನಿಷನ್ ಸ್ವಿಚ್ |
| (14) | 30A | ರೇಡಿಯೇಟರ್ ಫ್ಯಾನ್ |
| (15) | - | ಗ್ಲೋ ಪ್ಲಗ್ ರಿಲೇ (ಡೀಸೆಲ್) |
| | | ಫ್ಯೂಯೆಲ್ ಇಂಜೆಕ್ಟರ್ ರಿಲೇ (ಬೈ ಫ್ಯೂಯೆಲ್) |
| (16) | - | ಬ್ಲಾಂಕ್ (ಡೀಸೆಲ್) |
| (17) | - | ಬ್ಲಾಂಕ್ (ಡೀಸೆಲ್) |
| (18) | - | ಫ್ಯೂಯೆಲ್ ಇಂಜೆಕ್ಟರ್ ಮೈನ್ ರಿಲೇ (ಡೀಸೆಲ್) |
| (19) | 15A | ಫ್ಯೂಯೆಲ್ ಇಂಜೆಕ್ಟರ್ 2 (ಡೀಸೆಲ್) |
| (20) | 20A | ಇಂಜೆಕ್ಟರ್ ಡ್ರೈವರ್ (ಡೀಸೆಲ್) |
| (21) | 7.5A | ಸಿ.ಎನ್.ಜಿ. |

ಮೈನ್ ಫ್ಯೂಸ್, ಪ್ರೈಮರಿ ಫ್ಯೂಸ್ ಗಳು ಮತ್ತು ಕೆಲವು ಪ್ರತ್ಯೇಕ ಫ್ಯೂಸ್ ಗಳನ್ನು ಇಂಜಿನ್ ವಿಭಾಗದಲ್ಲಿ ಪತ್ತೆ ಮಾಡಲಾಗಿದೆ. ಮೈನ್ ಫ್ಯೂಸ್ ಸ್ಫೋಟಗೊಂಡಲ್ಲಿ ಯಾವುದೇ ಇಲೆಕ್ಟ್ರಿಕಲ್ ಭಾಗವು ಕಾರ್ಯ ನಿರ್ವಹಿಸುವುದಿಲ್ಲ. ಪ್ರೈಮರಿ ಫ್ಯೂಸ್ ಸ್ಫೋಟಗೊಂಡಲ್ಲಿ, ಸಂಬಂಧಿಸಿದ ಲೋಡ್ ಗ್ರೂಪ್ ನ ಯಾವುದೇ ಇಲೆಕ್ಟ್ರಿಕಲ್ ಭಾಗವು ಕೆಲಸ ಮಾಡುವುದಿಲ್ಲ. ಮೈನ್ ಫ್ಯೂಸ್, ಪ್ರಾಥಮಿಕ ಫ್ಯೂಸ್ ಅಥವಾ ಪ್ರತ್ಯೇಕ ಫ್ಯೂಸ್ ಅನ್ನು ಬದಲಿಸುವಾಗ ಮಾರುತಿ ಜೆನ್ಯೂನ್ ಬದಲಿಯನ್ನು ಬಳಸಿ. ಫ್ಯೂಸ್ ಕಳಚಲು, ರಿಲೇ ಬಾಕ್ಸ್ ನಲ್ಲಿ ಒದಗಿಸಿರುವ ಫ್ಯೂಸ್ ಪುಲ್ಲರ್ (1) ಅನ್ನು ಬಳಸಿ. ಪ್ರತೀ ಫ್ಯೂಸ್ ನ ಆಂಪರೇಜ್ ಅನ್ನು ಫ್ಯೂಸ್ ಬಾಕ್ಸ್ ಕವರ್ ನಲ್ಲಿ ತೋರಿಸಲಾಗಿದೆ.

ಉದಾಹರಣೆ




60G111

**⚠ ಎಚ್ಚರಿಕೆ**


ಮೈನ್ ಫ್ಯೂಸ್ ಅಥವಾ ಪ್ರಾಥಮಿಕ ಫ್ಯೂಸ್ ಸ್ಫೋಟಗೊಂಡಲ್ಲಿ, ನಿಮ್ಮ ವಾಹನವನ್ನು ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ನಲ್ಲಿ ತಪಾಸಣೆ ಮಾಡಿಕೊಂಡಿರುವುದನ್ನು ಖಚಿತಪಡಿಸಿ. ಯಾವಾಗಲೂ ಮಾರುತಿ ಜೆನ್ಯೂನ್ ಬದಲಿ ಭಾಗವನ್ನೇ ಬಳಸಿ. ತಾತ್ಕಾಲಿಕ ರಿಪೇರಿಗೂ ವೈರ್ ಅನ್ನು ಉಪಭಾಗವಾಗಿ ಬಳಸಬೇಡಿ. ಅಥವಾ ವಿಸ್ತರಿತ ಇಲೆಕ್ಟ್ರಿಕಲ್ ಹಾನಿ / ಅಗ್ನಿ ದುರಂತವಾಗಲಿದೆ.

*ಸೂಚನೆ:*


*ಫ್ಯೂಸ್ ಬಾಕ್ಸ್ ಯಾವಾಗಲೂ ಸ್ಪೇರ್ ಫ್ಯೂಸ್ ಗಳು ಮತ್ತು ಫ್ಯೂಸ್ ಪುಲ್ಲರ್ ಕೊಂಡೊಯ್ಯುವುದನ್ನು ಖಚಿತಪಡಿಸಿ.*

## ಡ್ಯಾಷ್ ಬೋರ್ಡ್ ಅಡಿ ಫ್ಯೂಸ್ ಗಳು

ಉದಾಹರಣೆ



77PH048





77PH049

| ಮೈನ್ ಫ್ಯೂಸ್ / ಪ್ರೈಮರಿ ಫ್ಯೂಸ್ | | |
|---|---|---|
| (1) | 10A | ಹೆಡ್ ಲೈಟ್ (ಬಲ) |
| (2) | 10A | ಹೆಡ್ ಲೈಟ್ (ಎಡ) |
| (3) | 10A | ಟೈಲ್ ಲೈಟ್ |
| (4) | 10A | ಸ್ಟಾಪ್ ಲೈಟ್ |
| (5) | 15A | ರೇಡಿಯೋ / ಡೋಮ್ |
| (6) | 10A | ಎಸ್‌ಟಿ ಎಸ್‌ಐಜಿ |
| (7) | 10A | ಮೀಟರ್ |
| (8) | 10A | ಇಗ್ನಿಷನ್ (ಡೀಸೆಲ್) |
| | 15A | ಇಗ್ನಿಷನ್ (ಪೆಟ್ರೋಲ್ ಮತ್ತು ಬೈ ಫ್ಯೂಯೆಲ್) |
| (9) | 10A | ಬ್ಯಾಕಪ್ ಲೈಟ್ |
| (10) | 15A | ವೈಪರ್ |
| (11) | 15A | ಅಕ್ಸೆಸರಿ |

ಫ್ಯೂಸ್ ಬಾಕ್ಸ್ ಡ್ಯಾಷ್ ಬೋರ್ಡ್ ಅಡಿಯಲ್ಲಿದೆ.

ಉದಾಹರಣೆ




65D046

**⚠ ಎಚ್ಚರಿಕೆ**

ಸ್ಫೋಟಗೊಂಡ ಫ್ಯೂಸ್ ಅನ್ನು ಸರಿಯಾದ ಆಂಪರೇಜ್ ಇರುವ ಫ್ಯೂಸ್ ಜೊತೆಗೆ ಬದಲಿಸಿರುವುದನ್ನು ಖಚಿತಪಡಿಸಿ. ಅಲ್ಯುಮಿನಿಯಂ ಫಾಯ್ಲ್ ಅಥವಾ ವೈರ್ ಅನ್ನು ಸ್ಫೋಟಗೊಂಡ ಫ್ಯೂಸ್ ಬದಲಿಸಲು ಬಳಸಬೇಡಿ. ಫ್ಯೂಸ್ ಬದಲಿಸಿದಲ್ಲಿ ಮತ್ತು ಹೊಸತು ಕಡಿಮೆ ಅವಧಿಯಲ್ಲಿ ಸ್ಫೋಟಗೊಂಡಲ್ಲಿ, ದೊಡ್ಡ ಇಲೆಕ್ಟ್ರಿಕಲ್ ಸಮಸ್ಯೆ ಆಗಬಹುದು. ನಿಮ್ಮ ವಾಹನವನ್ನು ತಕ್ಷಣವೇ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ನಲ್ಲಿ ತಪಾಸಣೆ ಮಾಡಿ.

## ಬಲ್ಬ್ ಬದಲಿ

**⚠ ಜಾಗ್ರತೆ**

- ಲೈಟ್ ಬಲ್ಬ್ ಗಳನ್ನು ಆಫ್ ಮಾಡಿದ ಕೂಡಲೇ ಬದಲಿಸುವುದರಿಂದ ಬಿಸಿ ಬಲ್ಬ್ ಕೈಗೆ ಸುಡಬಹುದು. ಮುಖ್ಯವಾಗಿ ಹ್ಯಾಲೋಜನ್ ಹೆಡ್ ಲೈಟ್ ಬಲ್ಬ್ ಗಳ ವಿಷಯದಲ್ಲಿ ಇದು ನಿಜ. ಬಲ್ಬ್ ಗಳು ತಂಪಾದ ಮೇಲೆ ಬದಲಿಸಿ.
- ಹೆಡ್ ಲೈಟ್ ಬಲ್ಬ್ ಗಳನ್ನು ಪ್ರೆಶರೈಸ್ಡ್ ಹ್ಯಾಲೋಜೆನ್ ಗ್ಯಾಸ್ ನಿಂದ ತುಂಬಿರಲಾಗುತ್ತದೆ. ಅವುಗಳು ಸ್ಫೋಟಗೊಳ್ಳಬಹುದು ಮತ್ತು ಅವುಗಳಿಗೆ ಬಡಿದಲ್ಲಿ ಅಥವಾ ಕೆಳಗೆ ಬಿದ್ದಲ್ಲಿ ಗಾಯಗಳಾಗಬಹುದು. ಅವುಗಳನ್ನು ಜಾಗರೂಕವಾಗಿ ನಿಭಾಯಿಸಿ.

***ಸೂಚನೆ***

ನಿಮ್ಮ ಚರ್ಮದಿಂದ ಆಯಿಲ್ ಗಳು ಹ್ಯಾಲೋಜನ್ ಬಲ್ಬ್ ಅಧಿಕ ಬಿಸಿಯಾಗುವಂತೆ ಮಾಡಬಹುದು ಮತ್ತು ಲೈಟ್ ಗಳು ಆನ್ ಆಗಿದ್ದಾಗ ಸ್ಫೋಟಗೊಳ್ಳಬಹುದು. ಹೊಸ ಬಲ್ಬ್ ಅನ್ನು ಸ್ವಚ್ಛ ಬಟ್ಟೆಯಲ್ಲಿ ಹಿಡಿದುಕೊಳ್ಳಿ.

***ಸೂಚನೆ***


ಆಗಾಗ್ಗೆ ಬಲ್ಬ್ ಬದಲಿಸುವುದು ಇಲೆಕ್ಟ್ರಿಕ್ ಸಿಸ್ಟಂ ತಪಾಸಣೆಯ ಅಗತ್ಯವನ್ನು ಹೇಳುತ್ತದೆ. ಇದನ್ನು ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ನಲ್ಲಿ ನಡೆಸಬೇಕು.

*ಸೂಚನೆ:*

*ಮಳೆಯಲ್ಲಿ ಅಥವಾ ಮಳೆಯ ಬಳಿಕ ಅಥವಾ ಕಾರು ತೊಳೆದ ಬಳಿಕ ಹೊರಗಿನ ಲೈಟ್ ಗಳ ಲೆನ್ಸ್ ಗಳಲ್ಲಿ (ಹೆಡ್ ಲೈಟ್, ರಿಯರ್ ಕಾಂಬಿನೇಶನ್ ಲೈಟ್ ಗಳು ಇತ್ಯಾದಿಗಳಲ್ಲಿ) ಇಬ್ಬನಿಗಳು ತುಂಬಿಕೊಳ್ಳುತ್ತವೆ. ಇದೊಂದು ಪ್ರಾಕೃತಿಕ ಕ್ರಿಯೆಯಾಗಿದೆ. ಒಳಗಿನ ಲ್ಯಾಂಪ್ ಮತ್ತು ಹೊರಗಿನ ಟೆಂಪರೇಚರ್ ನಡುವೆ ವೆತ್ಯಾಸ ಉಂಟಾಗಿರುವ ಕಾರಣ ಇದು ಉಂಟಾಗುತ್ತದೆ. ಆದ್ದರಿಂದ, ತಾತ್ಕಾಲಿಕವಾಗಿ ಲೆನ್ಸ್ ನಲ್ಲಿ ಇಬ್ಬನಿ ತುಂಬಿಕೊಂಡಿರುವುದು ವಾಹನದ ನ್ಯೂನತೆಯಲ್ಲ ಹಾಗೂ ವಾಹನ ಚಾಲನೆ ಮಾಡುವಾಗ ಇದು ಯಾವುದೇ ರೀತಿಯ ಅನಾನುಕೂಲತೆ ಉಂಟು ಮಾಡುವುದಿಲ್ಲ. ವಾತಾವರಣ ಉಷ್ಣತೆ ಬದಲಾಗಿ ಬಿಸಿಲು ಬಂದಾಗ ಅಥವಾ ಹೆಡ್ ಲೈಟ್ ಆನ್ ಮಾಡಿಕೊಂಡಿದ್ದಲ್ಲಿ, ಇಬ್ಬನಿ ಎಲ್ಲವೂ ಕರಗಿ ಸ್ವಷ್ಟವಾಗುತ್ತದೆ. ಹಾಗಿದ್ದರೂ ಲ್ಯಾಂಪ್ ಒಳಗೆ ನೀರಿನ ಲೀಕೇಜ್ ಉಂಟಾಗಿದ್ದಲ್ಲಿ, ದಯವಿಟ್ಟು ಅಧಿಕೃತ ಮಾರುತಿ ಸುಜುಕಿ ವರ್ಕ್ ಶಾಪ್ ಸಂಪರ್ಕಿಸಿ.*


### ಹೆಡ್ ಲೈಟ್ ಗಳು

ಉದಾಹರಣೆ





77PH050

1) ಸ್ಕ್ರೂಗಳು (1) ಕಳಚಿ ಮತ್ತು ಏರ್ ಇನ್ಲೆಟ್ ಬಾಕ್ಸ್ (2) ಕಳಚಿ.




77PH051

2) ಕಪ್ಲರ್ (3) ಸಂಪರ್ಕ ಕಳಚಿ. ಸೀಲಿಂಗ್ ರಬ್ಬರ್ (4) ಕಳಚಿ.





77PH052

3) ರಿಟೇನಿಂಗ್ ಸ್ಪ್ರಿಂಗ್ (5) ಅನ್ನು ಮುಂದಕ್ಕೆ ದೂಡಿ ಮತ್ತು ಹುಕ್ ಕಳಚಿ. ನಂತರ ಬಲ್ಬ್ (6) ಕಳಚಿ. ಹೊಸ ಬಲ್ಬ್ ಅನ್ನು ಕಳಚಿದ ರಿವರ್ಸ್ ಆರ್ಡರ್ ನಲ್ಲಿ ಜೋಡಿಸಿ.

## ಫ್ರಂಟ್ ಟರ್ನ್ ಸಿಗ್ನಲ್ ಲೈಟ್
## ಫ್ರಂಟ್ ಪೊಸಿಷನ್ ಲೈಟ್


ವಿಶೇಷ ವಿಧಾನಗಳು ಅಗತ್ಯವಿರುವ ಕಾರಣ, ಬಲ್ಬ್ ಬದಲಿಗೆ ನಿಮ್ಮ ವಾಹನವನ್ನು ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ಗೆ ಕೊಂಡೊಯ್ಯಲು ನಾವು ಶಿಫಾರಸು ಮಾಡುತ್ತೇವೆ.

## ರೇರ್ ಕಾಂಬಿನೇಶನ್ ಲೈಟ್





77PH055

1) ಸ್ಕ್ರೂಗಳು (1) ಕಳಚಿ ಮತ್ತು ಕವರ್ (2) ಕಳಚಿ.




77PH056





76MH0A123

(6) ಕಳಚುವುದು

(7) ಜೋಡಿಸುವುದು


2) ಟರ್ನ್ ಸಿಗ್ನಲ್ ಲೈಟ್ (3), ಟೈಲ್ / ಬ್ರೇಕ್ ಲೈಟ್ (4) ಅಥವಾ ರಿವರ್ಸಿಂಗ್ ಲೈಟ್ (5) ಬಲ್ಬ್ ಹೋಲ್ಡರ್ ನ ಬಲ್ಬ್ ಗಳನ್ನು ಕಳಚಿ. ಬಲ್ಬ್ ನಲ್ಲಿ ದೂಡಿ ಮತ್ತು ಬಲದಿಂದ ಎಡಕ್ಕೆ ತಿರುಗಿಸಿ. ಹೊಸ ಬಲ್ಬ್ ಜೋಡಿಸಲು ಅದನ್ನು ದೂಡಿ ಮತ್ತು ಎಡದಿಂದ ಬಲಕ್ಕೆ ತಿರುಗಿಸಿ.

## ಲೈಸೆನ್ಸ್ ಪ್ಲೇಟ್ ಲೈಟ್




77PH066

1) ಸ್ಕ್ರೂಗಳು (1) ಕಳಚಿ ಮತ್ತು ಕವರ್ (2) ಕಳಚಿ.





77PH063

(4) ಕಳಚುವುದು
(5) ಜೋಡಿಸುವುದು

2) ಲೈಸೆನ್ಸ್ ಪ್ಲೇಟ್ ಲೈಟ್ ನ ಬಲ್ಬ್ ಅನ್ನು ಕಳಚಲು ಮತ್ತು ಜೋಡಿಸಲು (3), ಬಲ್ಬ್ ಅನ್ನು ಸುಮ್ಮನೆ ಹೊರಗೆಳೆಯಿರಿ ಮತ್ತು ದೂಡಿ.


### ಇಂಟೀರಿಯರ್ ಲೈಟ್

ತೋರಿಸಿರುವಂತೆ ಮೃದುವಾದ ಬಟ್ಟೆಯಲ್ಲಿ ಮುಚ್ಚಿದ ಫ್ಲಾಟ್ ಬ್ಲೇಡ್ ಸ್ಕ್ರೂಡ್ರೈವರ್ ಬಳಸಿ ಲೆನ್ಸ್ ಗಳನ್ನು ಕಳಚಿ. ಅವುಗಳನ್ನು ಜೋಡಿಸಲು, ಸುಮ್ಮನೆ ದೂಡಿ ಮತ್ತು ಹಿಂದಕ್ಕೆ ದೂಡಿ.




77PH057

## ವೈಪರ್ ಬ್ಲೇಡ್ ಗಳು




77PM07028


ವೈಪರ್ ಬ್ಲೇಡ್ ಗಳು ಗಟ್ಟಿಯಾದಲ್ಲಿ ಅಥವಾ ಹಾನಿಯಾದಲ್ಲಿ ಅಥವಾ ಒರೆಸುವಾಗ ಗೆರೆಗಳನ್ನು ತೋರಿಸಿದಲ್ಲಿ ವೈಪರ್ ಬ್ಲೇಡ್ ಗಳನ್ನು ಬದಲಿಸಿ.

ಹೊಸ ವೈಪರ್ ಬ್ಲೇಡ್ ಗಳನ್ನು ಜೋಡಿಸಲು ಕೆಳಗಿನ ವಿಧಾನಗಳನ್ನು ಅನುಸರಿಸಿ

| *ಸೂಚನೆ* |
| --- |
| **ವಿಂಡೋಗೆ ಗೀರುಗಳಾಗುವುದು ಅಥವಾ ಮುರಿಯುವುದನ್ನು ತಪ್ಪಿಸಲು, ವೈಪರ್ ಆರ್ಮ್ ಅನ್ನು ಬದಲಿಸುವಾಗ ಅದು ವಿಂಡೋಗೆ ಗೀರು ಮಾಡಲು ಬಿಡಬೇಡಿ.** |

*ಸೂಚನೆ:*
*ಕೆಲವು ವೈಪರ್ ಬ್ಲೇಡ್ ಗಳು ವಾಹನದ ನಿರ್ದಿಷ್ಟತೆಗಳನ್ನು ಅನುಸರಿಸಿ ವಿವರಿಸಿದಕ್ಕಿಂತ ವಿಭಿನ್ನವಾಗಿರಬಹುದು. ಹೀಗಿದ್ದಲ್ಲಿ, ನಿಮ್ಮ ಸೂಕ್ತ ಬದಲಿ ವಿಧಾನಕ್ಕಾಗಿ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ವರ್ಕ್ ಶಾಪ್ ವನ್ನು ಸಂಪರ್ಕಿಸಿ.*


*ವಿಂಡ್ ಶೀಲ್ಡ್ ವೈಪರ್ ಗಳು:*




70G119

1) ವೈಪರ್ ಆರ್ಮ್ ಅನ್ನು ವಿಂಡ್ ಶೀಲ್ಡ್ ನಿಂದ ದೂರ ಹಿಡಿಯಿರಿ.


*ಸೂಚನೆ:*
*ಫ್ರಂಟ್ ವೈಪರ್ ಆರ್ಮ್ಗಳೆರಡನ್ನೂ ರೈಸ್ ಮಾಡುವಾಗ ಮೊದಲು ಡ್ರೈವರ್ ಬದಿಯ ವೈಪರ್ ಆರ್ಮ್ ಅನ್ನು ಎಳೆಯಿರಿ. ವೈಪರ್ ಆರ್ಮ್ಗಳನ್ನು ರಿಟರ್ನ್ ಮಾಡುವಾಗ, ಪ್ಯಾಸೆಂಜರ್ ಸೈಡ್ ವೈಪರ್ ಆರ್ಮ್ ಅನ್ನು ಮೊದಲು ಇಳಿಸಿ. ಇಲ್ಲವಾದರೆ ವೈಪರ್ಗಳು ಒಂದಕ್ಕೊಂದು ಸೇರಿಕೊಳ್ಳಬಹುದು.*



54G130


2) ವೈಪರ್ ಆರ್ಮ್ (2) ಕಡೆಗೆ ಸ್ಕ್ವೀಜ್ ಲಾಕ್ (1) ಮಾಡಿ.ವೈಪರ್ ಫ್ರೇಮ್ ಅನ್ನು ಆರ್ಮ್ ನಿಂದ ತೋರಿಸಿದಂತೆ ಕಳಚಿ.
3) ವೈಪರ್ ಬ್ಲೇಡ್ ನ ಲಾಕ್ ಎಂಡ್ ನಲ್ಲಿ ಅನ್ಲಾಕ್ ಮಾಡಿ ಮತ್ತು ತೋರಿಸಿದಂತೆ ಬ್ಲೇಡ್ ಜಾರಿಸಿ.

ಕಳಚುವುದು




60A260

ಅಳವಡಿಕೆ



54G132


(1) ಲಾಕ್ ಮಾಡಿದ ಎಂಡ್




68PH00754

(3) ರಿಟೇನರ್

4) ಹೊಸ ಬ್ಲೇಡ್ ಅನ್ನು ಎರಡು ಲೋಹದ ರಿಟೇನರ್ ಗಳನ್ನು ಹೊರತುಪಡಿಸಿ ಒದಗಿಸಿದಲ್ಲಿ ಅವುಗಳನ್ನು ಹಳೇ ಬ್ಲೇಡ್ ನಿಂದ ಹೊಸತಕ್ಕೆ ಚಲಿಸಿ.



60MH071




60MH072

(ಅ) ಮೇಲೆ
(ಆ) ಕೆಳಗೆ

*ಸೂಚನೆ:*
*ಲೋಹದ ರಿಟೇನರ್ ಗಳನ್ನು (3) ಜೋಡಿಸುವಾಗ, ಲೋಹದ ರಿಟೇನರ್ ಗಳ ದಿಕ್ಕು ಮೇಲಿನ ಚಿತ್ರಗಳಲ್ಲಿ ತೋರಿಸಿರುವಂತೆ ಇರುವುದನ್ನು ಖಚಿತಪಡಿಸಿ.*

5) ಹೊಸ ಬ್ಲೇಡ್ ಅನ್ನು ಲಾಕ್ ಆಗಿರುವ ಎಂಡ್ ವೈಪರ್ ಆರ್ಮ್ ಕಡೆಗೆ ಪೊಸಿಷನ್ ಆಗಿರುವಂತೆ ರಿವರ್ಸ್ ಆರ್ಡರ್ ನಲ್ಲಿ ಕಳಚಲು ಜೋಡಿಸಿ. ಬ್ಲೇಡ್ ಎಲ್ಲಾ ಹುಕ್ ಗಳಲ್ಲೂ ಸೂಕ್ತವಾಗಿ ಆಗಿರುವುದನ್ನು ಖಚಿತಪಡಿಸಿ. ಬ್ಲೇಡ್ ಎಂಡ್ ಅನ್ನು ಸ್ಥಳಕ್ಕೆ ಲಾಕ್ ಮಾಡಿ.
6) ವೈಪರ್ ಫ್ರೇಮ್ ನಿಂದ ಆರ್ಮ್ ಗೆ ಮರಳಿ ಜೋಡಿಸಿ, ಲಾಕ್ ಲಿವರ್ ಅನ್ನು ಆರ್ಮ್ ಗೆ ಭದ್ರವಾಗಿ ಸ್ನಾಪ್ ಮಾಡಿರುವುದನ್ನು ಖಚಿತಪಡಿಸಿ.

## ವಿಂಡ್ ಶೀಲ್ಡ್ ವಾಷರ್ ದ್ರವ (ಅಳವಡಿಸಿದಲ್ಲಿ)



77PM07027

ಟ್ಯಾಂಕ್  ನಲ್ಲಿ ವಾಷರ್ ಫ್ಲುಯಿಡ್ ಇರುವುದನ್ನು ನೋಡಿ ಪರೀಕ್ಷಿಸಿ. ಅಗತ್ಯವಿದ್ದಲ್ಲಿ ಮರುಭರ್ತಿ ಮಾಡಿ. ಉತ್ತಮ ಗುಣಮಟ್ಟದ ವಿಂಡ್ ಶೀಲ್ಡ್ ವಾಷರ್ ಫ್ಲುಯಿಡ್ ಬಳಸಿ, ಅಗತ್ಯಕ್ಕೆ ಅನುಗುಣವಾಗಿ ನೀರಿನೊಂದಿಗೆ ಬೆರೆಸಿ.

**⚠ ಎಚ್ಚರಿಕೆ**

ವಿಂಡ್ ಶೀಲ್ಡ್ ವಾಶರ್ ರಿಸರ್ವಾಯರ್ ನಲ್ಲಿ ರೇಡಿಯೇಟರ್ ಆಂಟಿಫ್ರೀಜರ್ ಬಳಸಬೇಡಿ. ಇದನ್ನು ವಿಂಡ್ ಶೀಲ್ಡ್ ಮೇಲೆ ಸಿಂಪಡಿಸಿದಾಗ ದೃಷ್ಟಿಗೋಚರ ತೀವ್ರವಾಗಿ ಅಸಹಜವಾಗುತ್ತದೆ ಮತ್ತು ಇದು ನಿಮ್ಮ ವಾಹನದ ಪೇಂಟ್ ಹಾಳು ಮಾಡುತ್ತದೆ.


***ಸೂಚನೆ***

ವಾಶರ್ ಟ್ಯಾಂಕಿನಲ್ಲಿ ದ್ರವವಿಲ್ಲದೇ ವಾಶರ್ ಮೋಟರ್ ನಡೆಸಿದಲ್ಲಿ ಹಾನಿಯುಂಟಾಗಬಹುದು.

# ತುರ್ತು ಸರ್ವಿಸ್

ಟೈರ್ ಬದಲಿ ಸಾಧನ ........ 8-1
ಜಾಕಿಂಗ್ ಸೂಚನೆಗಳು ........ 8-2
ವೀಲ್ಸ್ ಬದಲಿ ........ 8-5
ಜಂಪ್ ಸ್ಟಾರ್ಟಿಂಗ್ ಸೂಚನೆಗಳು ........ 8-5
ಎಳೆದೊಯ್ಯುವುದು ........ 8-7
ಸ್ಟಾರ್ಟರ್ ಕೆಲಸ ಮಾಡದೆ ಇದ್ದಲ್ಲಿ ........ 8-7
ಇಂಜಿನ್ ನಲ್ಲಿ ನೀರು ತುಂಬಿದಲ್ಲಿ ........ 8-7
ಇಂಜಿನ್ ಅತಿಯಾಗಿ ಬಿಸಿಯಾಗಿದ್ದಲ್ಲಿ ........ 8-8
ಢಿಕ್ಕಿಯಿಂದಾಗಿ ಬಾಡಿಯ ಅಡಿಯಲ್ಲಿ ಸಮಸ್ಯೆ ........ 8-8
ವಾರ್ನಿಂಗ್ ಟ್ರಯಾಂಗಲ್ ........ 8-9
ಅಗ್ನಿ ಶಾಮಕ ಸಲಕರಣೆ (ಅಳವಡಿಸಿದಲ್ಲಿ) ........ 8-9

## ಟೈರ್ ಬದಲಿಸುವ ಸಾಧನ





77PH202

(1) ಜಾಕ್
(2) ವೀಲ್ ಬ್ರೇಸ್
(3) ಜಾಕ್ ಹ್ಯಾಂಡಲ್
(4) ಸ್ಪಾನರ್

ಟೈರ್ ಬದಲಿಸುವ ಸಾಧನಗಳನ್ನು ಚಾಲಕನ ಸೀಟಿನ ಹಿಂದೆ ಸ್ಟೋವ್ ಮಾಡಲಾಗಿದೆ.
ಜಾಕ್ ಕಳಚಲು ಅದರ ಶಾಫ್ಟ್ ಅನ್ನು ಬಲದಿಂದ ಎಡಕ್ಕೆ ತಿರುಗಿಸಿ ಮತ್ತು ಜ್ಯಾಕ್ ಅನ್ನು ಸಂಗ್ರಹ ಬ್ರಾಕೆಟ್ ನಿಂದ ಎಳೆಯಿರಿ. ಜಾಕ್ ಅನ್ನು ಸ್ಟೋ ಮಾಡಲು, ಅದನ್ನು ಸಂಗ್ರಹ ಬ್ರಾಕೆಟ್ ನಲ್ಲಿಡಿ ಮತ್ತು ಜಾಕ್ ಭದ್ರವಾಗಿ ಸ್ಥಳದಲ್ಲಿ ನಿಲ್ಲುವಂತೆ ಶಾಫ್ಟ್ ಅನ್ನು ಎಡದಿಂದ ಬಲಕ್ಕೆ ತಿರುಗಿಸಿ.

ಸ್ಪೇರ್ ಟೈರ್ ಅನ್ನು ಬೆಡ್ ಅಡಿಯಲ್ಲಿ ಸ್ಟೋ ಮಾಡಲಾಗಿದೆ.
ಸ್ಪೇರ್ ಟೈರ್ ಕಳಚಲು:




77PH099

1) ಸ್ಪೇರ್ ಟೈರ್ ಹೋಲ್ಡರ್ ಹುಕ್ ನಟ್ (1) ಅನ್ನು ಸಡಿಲಿಸಿ.
2) ಸ್ಪೇರ್ ಟೈರ್ ಹೋಲ್ಡರ್ ಹುಕ್ ಕಳಚಿ ಮತ್ತು ನಿಧಾನವಾಗಿ ಅದನ್ನು ಕೆಳಗಿಳಿಸಿ.
3) ಸ್ಕ್ರೂವನ್ನು ಸ್ಪೇರ್ ಟೈರ್ ನ ಕೇಂದ್ರಭಾಗದಲ್ಲಿ ಕಳಚಿ ಮತ್ತು ಟೈರ್ ಕಳಚಿ.

**⚠ ಎಚ್ಚರಿಕೆ**


ಟೈರ್ ಬದಲಿಸುವ ಸಾಧನಗಳನ್ನು ಬಳಸಿದ ನಂತರ, ಅವುಗಳನ್ನು ಭದ್ರವಾಗಿ ಸ್ಟೋ ಮಾಡುವುದು ಮರೆಯಬೇಡಿ. ಇಲ್ಲದಿದ್ದಲ್ಲಿ ಅಪಘಾತವಾದಲ್ಲಿ ಅವುಗಳು ಗಾಯಗಳನ್ನು ಮಾಡಬಹುದು.

**⚠ ಜಾಗ್ರತೆ**

ಜಾಕ್ ಅನ್ನು ವೀಲ್ ಗಳನ್ನು ಬದಲಿಸಲು ಮಾತ್ರ ಬಳಸಬೇಕು. ಈ ವಿಭಾಗದಲ್ಲಿ ಜಾಕ್ ಬಳಸಲು ಪ್ರಯತ್ನಿಸುವ ಮೊದಲು ಜಾಕಿಂಗ್ ಸೂಚನೆಗಳನ್ನು ಓದುವುದು ಮುಖ್ಯ.

## ಜಾಕಿಂಗ್ ಸೂಚನೆಗಳು

ಉದಾಹರಣೆ




77PH054

1) ಸಮತಟ್ಟಾದ, ಗಡಸಾದ ನೆಲದಲ್ಲಿ ವಾಹನವನ್ನು ನಿಲ್ಲಿಸಿ.
2) ಪಾರ್ಕಿಂಗ್ ಬ್ರೇಕ್ ಅನ್ನು ದೃಢವಾಗಿ ಸೆಟ್ ಮಾಡಿ ಮತ್ತು "R" (ಆರ್) (ರಿವರ್ಸ್) ಗೆ ಬದಲಾಗಿ.

**⚠ ಎಚ್ಚರಿಕೆ**

- **ನೀವು ವಾಹನವನ್ನು ಜಾಕ್ ಹಾಕುವಾಗ "R" (ಆರ್) (ರಿವರ್ಸ್) ಗೆ ಬದಲಾಗುವುದನ್ನು ಖಾತ್ರಿಪಡಿಸಿ.**
- **ಟ್ರಾನ್ಸ್ ಮಿಶನ್ "N" (ಎನ್) ನಲ್ಲಿ ಇರುವಂತೆ ವಾಹನವನ್ನು ಎಂದಿಗೂ ಜಾಕ್ ಹಾಕಬೇಡಿ. ಇಲ್ಲದೆ ಇದ್ದಲ್ಲಿ, ಅಸ್ಥಿರ ಜಾಕ್ ನಿಂದ ಅಪಘಾತವಾಗುವ ಸಾಧ್ಯತೆಯಿದೆ.**


3) ಹಜಾರ್ಡ್ ವಾರ್ನಿಂಗ್ ಫ್ಲಾಷರ್ ಆನ್ ಮಾಡಿ.
4) ಮೇಲೆತ್ತಿದ ವೀಲ್ ಗೆ ಪರಸ್ಪರ ವಿರುದ್ಧ ರೀತಿಯಲ್ಲಿ ವೀಲ್ ನ ಫ್ರಂಟ್ ಮತ್ತು ರೇರ್ ಅನ್ನು ಬ್ಲಾಕ್ ಮಾಡಿ.
5) ಚಿತ್ರದಲ್ಲಿ ತೋರಿಸಿರುವಂತೆ ಜಾಕ್ ಸ್ಲಿಪ್ಸ್ ವಿಚಾರದಲ್ಲಿ ಸ್ಪೇರ್ ವೀಲ್ ಅನ್ನು ವೀಲ್ ಬಳಿ ಇಡಿ.




ಉದಾಹರಣೆ

77PH802


ಉದಾಹರಣೆ



54G253

### ಫ್ರಂಟ್ ಜಾಕಿಂಗ್ ಪಾಯಿಂಟ್


ಉದಾಹರಣೆ



77PH084


### ರೇರ್ ಜಾಕಿಂಗ್ ಪಾಯಿಂಟ್

ಉದಾಹರಣೆ



77PH106

ಉದಾಹರಣೆ



77PS052

6) ಜಾಕ್ ಅನ್ನು ನೇರವಾಗಿ ಪೊಸಿಷನ್ ಮಾಡಿ ಮತ್ತು ಜಾಕ್ ಹ್ಯಾಂಡಲ್ ಅನ್ನು ಎಡದಿಂದ ಬಲಕ್ಕೆ ತಿರುಗಿಸಿ ಜಾಕ್ ಹೆಡ್ ಗ್ರೂವ್ ಜಾಕಿಂಗ್ ಬಾರ್ ಸುತ್ತ ವಾಹನದ ಬಾಡಿ ಕೆಳಗೆ ಕೂರುವಂತೆ ಮೇಲೆತ್ತಿ. ವಿವರಗಳನ್ನು ನೋಡಿ.
7) ನಿಧಾನವಾಗಿ ಮತ್ತು ಮೃದುವಾಗಿ ಟೈರ್ ನೆಲವನ್ನು ಕ್ಲಿಯರ್ ಮಾಡುವವರೆಗೆ ಜಾಕ್ ಅನ್ನು ಮೇಲೆತ್ತುವುದನ್ನು ಮುಂದುವರಿಸಿ. ವಾಹನವನ್ನು ಅಗತ್ಯಕ್ಕಿಂತ ಹೆಚ್ಚು ಮೇಲೆತ್ತಬೇಡಿ.


**⚠ ಎಚ್ಚರಿಕೆ**

- ಜಾಕ್ ಅನ್ನು ವೀಲ್ ಗಳನ್ನು ಸಮತಟ್ಟಾದ, ಕಠಿಣ ನೆಲದಲ್ಲಿ ಬದಲಿಸಲು ಮಾತ್ರ ಬಳಸಿ.
- ಏರುತಗ್ಗಿರುವ ಹೊರಮೈ ಮೇಲೆ ಎಂದೂ ಜಾಕ್ ಹಾಕಬೇಡಿ.
- ನಿರ್ದಿಷ್ಟಪಡಿಸಿರುವ ಬದಲಿಸಬೇಕಾದ ವೀಲ್ ಬಳಿಯ ಜಾಕಿಂಗ್ ಪಾಯಿಂಟ್ (ಚಿತ್ರದಲ್ಲಿ ತೋರಿಸಿರುವಂತೆ) ಹೊರತಾದ ಸ್ಥಳದಲ್ಲಿ ಜಾಕ್ ಇರುವಂತೆ ವಾಹನವನ್ನು ಎಂದಿಗೂ ಮೇಲೆತ್ತಬೇಡಿ.
- ಜಾಕ್ ನಿಂದ ಬಲ ಪಡೆದುಕೊಂಡ ವಾಹನದ ಅಡಿಗೆ ಎಂದೂ ಹೋಗಬೇಡಿ.
- ವಾಹನವು ಜಾಕ್ ನಿಂದ ಬಲ ಪಡೆದಿರುವಾಗ ಇಂಜಿನ್ ಅನ್ನು ಚಲಾಯಿಸಬೇಡಿ ಮತ್ತು ಪ್ರಯಾಣಿಕರನ್ನು ವಾಹನದಲ್ಲಿ ಇರಲು ಬಿಡಬೇಡಿ.

**ಗ್ಯಾರೇಜ್ ಜಾಕ್ ಮೂಲಕ ವಾಹನ ಮೇಲೆತ್ತಲು**


- ಕೆಳಗೆ ಸೂಚಿಸಲಾಗಿರುವ ಒಂದು ಬಿಂದುಗಳಿಗೆ ಗ್ಯಾರೇಜ್ ಜಾಕ್ ಅನ್ನು ಅಳವಡಿಸಿ.
- ಯಾವಾಗಲೂ ಮೇಲೆತ್ತಿರುವ ವಾಹನವನ್ನು ಜಾಕ್ ಸ್ಟಾಂಡ್ ಗಳ (ವಾಣಿಜ್ಯವಾಗಿ ಲಭ್ಯವಿರುವ) ಮೂಲಕ ಕೆಳಗೆ ಸೂಚಿಸಿರುವ ಪಾಯಿಂಟ್ ಗಳಲ್ಲಿ ಬಲ ನೀಡಿ:

**ಗ್ಯಾರೇಜ್ ಜಾಕ್ (1) ನ ಫ್ರಂಟ್ ಜಾಕಿಂಗ್ ಪಾಯಿಂಟ್**





77PH060

**ಗ್ಯಾರೇಜ್ ಜಾಕ್ (2) ನ ರೇರ್ ಜಾಕಿಂಗ್ ಪಾಯಿಂಟ್**




77PH101

**ಜಾಕ್ ಸ್ಟಾಂಡ್ (3) ಗೆ ಅಪ್ಲಿಕೇಶನ್ ಪಾಯಿಂಟ್ ಅಥವಾ ಟು-ಕಾಲಂ ಲಿಫ್ಟ್**




77PS055 (2)

**ಸೂಚನೆ**


- ಎಕ್ಸಾಸ್ಟ್ ಪೈಪ್ ಗೆ ಗ್ಯಾರೇಜ್ ಜಾಕ್ ಅನ್ನು ಎಂದಿಗೂ ಅಳವಡಿಸಬೇಡಿ.
- ಜಾಕ್ ಸ್ಟಾಂಡ್ ಅಳವಡಿಸುವಾಗ ಅಥವಾ ರೇರ್ ಸೈಡ್ ನ ಅಪ್ಲಿಕೇಶನ್ ಪಾಯಿಂಟ್ ಗೆ ಟು ಕಾಲಂ ಲಿಫ್ಟ್, ಪಾರ್ಕಿಂಗ್ ಕೇಬಲ್ ಅಥವಾ ಫ್ಯೂಯಲ್ ಟ್ಯಾಂಕ್ ನ ಫ್ಲಾಂಜ್ ಹೀಗೆ ಸುತ್ತಲಿನ ಭಾಗಗಳಲ್ಲಿ ಮಧ್ಯಪ್ರವೇಶಿಸದಂತೆ ಜಾಗರೂಕತೆ ವಹಿಸಿ.

*ಸೂಚನೆ:*
*ಹೆಚ್ಚಿನ ವಿವರಗಳಿಗೆ, ದಯವಿಟ್ಟು ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರನ್ನು ಸಂಪರ್ಕಿಸಿ.*

## ವೀಲ್ ಗಳನ್ನು ಬದಲಿಸುವುದು

ವೀಲ್ ಅನ್ನು ಬದಲಿಸಲು, ಈ ಕೆಳಗಿನ ವಿಧಾನವನ್ನು ಬಳಸಿ:

1) ಎಲ್ಲಾ ಪ್ಯಾಸೆಂಜರ್ ಗಳನ್ನು ಮತ್ತು ಸರಕನ್ನು ವಾಹನದಿಂದ ಕ್ಲಿಯರ್ ಮಾಡಿ.
2) ಜ್ಯಾಕ್, ಸಾಧನಗಳು ಮತ್ತು ಸ್ಪೇರ್ ವೀಲ್ ಅನ್ನು ವಾಹನದಿಂದ ಕಳಚಿ.
3) ಸಡಿಲಿಸಿ, ಆದರೆ ವೀಲ್ ನಟ್ಟುಗಳನ್ನು ಕಳಚಬೇಡಿ.
4) ವಾಹನಕ್ಕೆ ಜಾಕ್ ಹಾಕಿ.
5) ವೀಲ್ ನಟ್ಟುಗಳು ಮತ್ತು ವೀಲ್ ಕಳಚಿ.
6) ಹೊಸ ವೀಲ್ ಜೋಡಿಸುವ ಮೊದಲು, ಯಾವುದೇ ಕೆಸರು ಅಥವಾ ಕೊಳೆ ಇದ್ದಲ್ಲಿ ವೀಲ್ ಹೊರಮೈನಿಂದ ಮತ್ತು ಹಬ್ ನಿಂದ ಸ್ವಚ್ಛ ಬಟ್ಟೆಯಲ್ಲಿ ಒರೆಸಿ. ಹಬ್ ಅನ್ನು ಜಾಗರೂಕವಾಗಿ ಸ್ವಚ್ಛಮಾಡಿ; ಚಾಲನೆಯಿಂದ ಅದು ಬಿಸಿಯಾಗಿರಬಹುದು.
7) ಹೊಸ ವೀಲ್ ಜೋಡಿಸಿ ಮತ್ತು ವೀಲ್ ನಟ್ಟುಗಳನ್ನು ತಮ್ಮ ಕೋನ್ ಆಕಾರದ ತುದಿ ವೀಲ್ ಕಡೆಗೆ ಮುಖ ಮಾಡಿರುವಂತೆ ಬದಲಿಸಿ. ವೀಲ್ ಭದ್ರವಾಗಿ ಹಬ್ ನಲ್ಲಿ ಸೀಟ್ ಆಗಿರುವಂತೆ ಪ್ರತಿ ನಟ್ ಅನ್ನು ಕೈಯಿಂದ ಬಿಗಿಮಾಡಿ.




54G116

ವೀಲ್ ನಟ್ಟಿಗೆ ಟಾರ್ಕ್ ಬಿಗಿಮಾಡುವುದು
**100 ನ್ಯಾನೋಮೀಟರ್ (10.2 ಕೇಜಿ-ಮೀ, 73.8 ಎಲ್ ಬಿ-ಅಡಿ)**

8) ಜಾಕ್ ಕೆಳಗೆ ಮಾಡಿ ಮತ್ತು ನಟ್ಟುಗಳನ್ನು ಕ್ರಿಸ್ ಕ್ರಾಸ್ ಫ್ಯಾಷನ್ ನಲ್ಲಿ ರೆಂಚ್ ಸಹಾಯದಿಂದ ಚಿತ್ರದಲ್ಲಿ ತೋರಿಸಿದಂತೆ ಪೂರ್ಣಗೊಳಿಸಿ.

**⚠ ಎಚ್ಚರಿಕೆ**

ಮಾನ್ಯತೆ ಪಡೆದ ವೀಲ್ ನಟ್ಟುಗಳನ್ನು ಬಳಸಿ ಮತ್ತು ವೀಲ್ ಗಳನ್ನು ಬದಲಿಸಿದ ತಕ್ಷಣ ನಿರ್ದಿಷ್ಟ ಟಾರ್ಕ್ ಗೆ ಅವುಗಳನ್ನು ಬಿಗಿಮಾಡಿ. ಅಸಮರ್ಪಕ ವೀಲ್ ನಟ್ಟುಗಳನ್ನು ಅಥವಾ ಅಸಮರ್ಪಕವಾಗಿ ಬಿಗಿಮಾಡಿದ ವೀಲ್ ನಟ್ಟುಗಳು ಸಡಿಲವಾಗಬಹುದು ಅಥವಾ ಬೀಳಬಹುದು. ಅದರಿಂದ ಅವಘಡಗಳು ಸಂಭವಿಸಬಹುದು. ನಿಮ್ಮ ಬಳಿ ಟಾರ್ಕ್ ರೆಂಚ್ ಇಲ್ಲದಿದ್ದಲ್ಲಿ, ವೀಲ್ ನಟ್ ಟಾರ್ಕ್ ಅನ್ನು ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ಪರೀಕ್ಷಿಸಿಕೊಳ್ಳಿ.

## ಜಂಪ್ ಸ್ಟಾರ್ಟಿಂಗ್ ಸೂಚನೆಗಳು

**⚠ ಎಚ್ಚರಿಕೆ**


- ಬ್ಯಾಟರಿ ಜಡವಾಗಿದ್ದಂತೆ ಕಂಡಲ್ಲಿ ನಿಮ್ಮ ವಾಹನವನ್ನು ಜಂಪ್ ಸ್ಟಾರ್ಟ್ ಮಾಡಲು ಎಂದೂ ಪ್ರಯತ್ನಿಸಬೇಡಿ. ಜಂಪ್ ಸ್ಟಾರ್ಟಿಂಗ್ ಪ್ರಯತ್ನಿಸಿದಲ್ಲಿ ಈ ಸ್ಥಿತಿಯಲ್ಲಿ ಬ್ಯಾಟರಿಗಳು ಸ್ಫೋಟಗೊಳ್ಳಬಹುದು ಅಥವಾ ಛಿದ್ರವಾಗಬಹುದು.
- ಜಂಪ್ ಲೆಡ್ ಕನೆಕ್ಷನ್ ಗಳನ್ನು ಮಾಡುವಾಗ, ನಿಮ್ಮ ಕೈಗಳು ಮತ್ತು ಜಂಪ್ ಸತುಗಳು ಪುಲ್ಲೆಗಳು, ಬೆಲ್ಟ್ ಗಳು ಅಥವಾ ಫ್ಯಾನ್ ಗಳಿಂದ ಸ್ವತಂತ್ರವಾಗಿರುವಂತೆ ಖಚಿತಪಡಿಸಿ.
- ಬ್ಯಾಟರಿಗಳು ಉರಿಯುವ ಹೈಡ್ರೋಜನ್ ಗ್ಯಾಸ್ ಉತ್ಪಾದಿಸುತ್ತವೆ. ಉರಿ ಜ್ವಾಲೆಗಳು ಮತ್ತು ಕಿಡಿಗಳನ್ನು ಬ್ಯಾಟರಿಯಿಂದ ದೂರವೇ ಇಡಿ ಅಥವಾ ಸ್ಫೋಟವಾಗುವ ಸಾಧ್ಯತೆಯಿದೆ. ಬ್ಯಾಟರಿಯ ಪರಿಸರದಲ್ಲಿ ಕೆಲಸ ಮಾಡುವಾಗ ಧೂಮಪಾನ ಮಾಡಬೇಡಿ.
- ಜಂಪ್ ಸ್ಟಾರ್ಟಿಂಗ್ ಗೆ ನೀವು ಬಳಸುವ ಬೂಸ್ಟರ್ ಬ್ಯಾಟರಿ ಮತ್ತೊಂದು ವಾಹನದಲ್ಲಿ ಅಳವಡಿಸಲಾಗಿದ್ದಲ್ಲಿ, ಎರಡು ವಾಹನಗಳು ಪರಸ್ಪರರನ್ನು ಸ್ಪರ್ಶಿಸುವುದಿಲ್ಲ ಎನ್ನುವುದು ಖಚಿತಪಡಿಸಿ.
- ಸೂಕ್ತ ಕಾರಣವಿಲ್ಲದೆ ನಿಮ್ಮ ಬ್ಯಾಟರಿ ಪದೇ ಪದೇ ಡಿಸ್ಚಾರ್ಜ್ ಆಗುತ್ತಿದ್ದಲ್ಲಿ, ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರಿಂದ ನಿಮ್ಮ ವಾಹನವನ್ನು ತಪಾಸಣೆ ಮಾಡಿಕೊಳ್ಳಿ.
- ನಿಮಗೆ ಗಾಯವಾಗುವುದು ಅಥವಾ ನಿಮ್ಮ ವಾಹನಕ್ಕೆ ಅಥವಾ ಬ್ಯಾಟರಿಗೆ ಹಾನಿಯಾಗುವುದು ತಪ್ಪಿಸಲಿ ಜಂಪ್ ಸ್ಟಾರ್ಟಿಂಗ್ ಮಾಹಿತಿಗಳನ್ನು ಕೆಳಗೆ ಹೇಳಿದಂತೆ ಕರಾರುವಕ್ಕಾಗಿ ಮತ್ತು ವ್ಯವಸ್ಥೆಯಲ್ಲಿ ಪಾಲಿಸಿ. ನಿಮಗೆ ಸಂಶಯವಿದ್ದಲ್ಲಿ, ಪರಿಣತ ರಸ್ತೆ ಸರ್ವಿಸ್ ಗೆ ಕರೆನೀಡಿ.

**ಸೂಚನೆ**

**ನಿಮ್ಮ ವಾಹನವನ್ನು ದೂಡುವುದು ಅಥವಾ ಎಳೆದೊಯ್ಯುವ ಮೂಲಕ ಸ್ಟಾರ್ಟ್ ಮಾಡಬೇಡಿ. ಈ ಸ್ಟಾರ್ಟಿಂಗ್ ವಿಧಾನದಿಂದ ಕ್ಯಾಟಲಿಟಿಕ್ ಕನ್ವರ್ಟರ್ ಗೆ ಶಾಶ್ವತ ಹಾನಿಯಾಗುವ ಸಾಧ್ಯತೆಯಿದೆ. ದುರ್ಬಲ ಅಥವಾ ಫ್ಲಾಟ್ ಬ್ಯಾಟರಿಯಿಂದ ಜಂಪ್ ಸತು ಗಳನ್ನು ವಾಹನವನ್ನು ಸ್ಟಾರ್ಟ್ ಮಾಡಲು ಬಳಸಿ.**

**ನಿಮ್ಮ ವಾಹನವನ್ನು ಜಂಪ್ ಸ್ಟಾರ್ಟಿಂಗ್ ಮಾಡುವಾಗ, ಈ ಕೆಳಗಿನ ವಿಧಾನ ಅನುಸರಿಸಿ:**

1) ನಿಮ್ಮ ವಾಹನವನ್ನು ಜಂಪ್ ಸ್ಟಾರ್ಟ್ ಮಾಡಲು 12 ವೋಲ್ಟ್ ಬ್ಯಾಟರಿಯನ್ನೇ ಬಳಸಿ. ಉತ್ತಮ 12 ವೋಲ್ಟ್ ಬ್ಯಾಟರಿಯನ್ನು ನಿಮ್ಮ ವಾಹನದ ಸಮೀಪ ಪೊಸಿಷನ್ ಮಾಡಿ. ಹಾಗೆ ಜಂಪ್ ಸತುಗಳು ನಿಮ್ಮ ಎರಡೂ ಬ್ಯಾಟರಿಗಳನ್ನು ತಲುಪಲಿವೆ. ಮತ್ತೊಂದು ವಾಹನದಲ್ಲಿ ಅಳವಡಿಸಿರುವ ಬ್ಯಾಟರಿಯನ್ನು ಬಳಸುವಾಗ ವಾಹನಗಳು ಸ್ಪರ್ಶಿಸದೆ ಇರುವಂತೆ ಗಮನಹರಿಸಿ. ಪಾರ್ಕಿಂಗ್ ಬ್ರೇಕ್ ಗಳನ್ನು ಪೂರ್ಣವಾಗಿ ಎರಡೂ ವಾಹನಗಳಲ್ಲಿ ಸೆಟ್ ಮಾಡಿ.
2) ಸುರಕ್ಷೆಯ ಕಾರಣದಿಂದ ಅಗತ್ಯವಿರುವುದು ಹೊರತುಪಡಿಸಿ (ಉದಾಹರಣೆಗೆ, ಹೆಡ್ ಲೈಟ್ಸ್ ಅಥವಾ ಹಜಾರ್ಡ್ ಲೈಟ್ಸ್) ವಾಹನದ ಅಕ್ಸಸರಿಗಳನ್ನು ಆಫ್ ಮಾಡಿ.




77PS056

3) ಜಂಪ್ ಸತು ಕನೆಕ್ಷನ್ ಗಳನ್ನು ಈ ಕೆಳಗಿನಂತೆ ಮಾಡಿ:

1. ಫಸ್ಟ್ ಜಂಪ್ ಲೀಡ್ ನ ಒಂದ ಎಂಡ್ ಅನ್ನು ಫ್ಲಾಟ್ ಬ್ಯಾಟರಿಯ (1) ಪಾಸಿಟಿವ್ (+) ಟರ್ಮಿನಲ್ ಗೆ ಸಂಪರ್ಕಿಸಿ.
2. ಮತ್ತೊಂದು ಎಂಡ್ ಅನ್ನು ಬೂಸ್ಟರ್ ಬ್ಯಾಟರಿಯ (2) ಪಾಸಿಟಿವ್ (+) ಟರ್ಮಿನಲ್ ಗೆ ಸಂಪರ್ಕಿಸಿ.
3. ಸೆಕೆಂಡ್ ಜಂಪ್ ಸತುವಿನ ಒಂದು ಎಂಡ್ ಅನ್ನು ಬೂಸ್ಟರ್ ಬ್ಯಾಟರಿಯ (2) ನೆಗೆಟಿವ್ (-) ಟರ್ಮಿನಲ್ ಗೆ ಸಂಪರ್ಕಿಸಿ.
4. ಫೈನಲ್ ಕನೆಕ್ಷನ್ ಅನ್ನು ವಾಹನದ ಪೈಂಟ್ ಮಾಡದೆ ಇರುವ, ಭಾರವಾದ ಲೋಹದ ಭಾಗ (ಅಂದರೆ ಡೋರ್ ಲ್ಯಾಚ್ ಸ್ಟ್ರೈಕರ್ (3)) ವನ್ನು ಫ್ಲಾಟ್ ಬ್ಯಾಟರಿಗೆ (1) ಮಾಡಿ.

**⚠ ಎಚ್ಚರಿಕೆ**

**ಜಂಪ್ ಸತುವನ್ನು ನೇರವಾಗಿ ಡಿಸ್ಚಾರ್ಜ್ ಬ್ಯಾಟರಿಯ ನೆಗೆಟಿವ್ (-) ಟರ್ಮಿನಲ್ ಗೆ ಎಂದಿಗೂ ಸಂಪರ್ಕಿಸಬೇಡಿ. ಇಲ್ಲದಿದ್ದಲ್ಲಿ ಸ್ಫೋಟವಾಗಬಹುದು.**

4) ನೀವು ಬಳಸಿದ ಬೂಸ್ಟರ್ ಬ್ಯಾಟರಿ ಮತ್ತೊಂದು ವಾಹನಕ್ಕೆ ಜೋಡಿಸಿದ್ದಲ್ಲಿ, ಬೂಸ್ಟರ್ ಬ್ಯಾಟರಿ ಇರುವ ವಾಹನದ ಇಂಜಿನ್ ಸ್ಟಾರ್ಟ್ ಮಾಡಿ. ಇಂಜಿನ್ ಅನ್ನು ಸಾಧಾರಣ ವೇಗದಲ್ಲಿ ಚಲಾಯಿಸಿ.
5) ವಾಹನದ ಇಂಜಿನ್ ಅನ್ನು ಫ್ಲಾಟ್ ಬ್ಯಾಟರಿ ಜೊತೆಗೆ ಸ್ಟಾರ್ಟ್ ಮಾಡಿ.
6) ಜಂಪ್ ಸತುಗಳನ್ನು ಸಂಪರ್ಕಿಸಿರುವುದಕ್ಕಿಂತ ಸಂಪೂರ್ಣ ವಿರುದ್ಧ ವ್ಯವಸ್ಥೆಯಲ್ಲಿ ಕಳಚಿ.

## ಎಳೆದೊಯ್ಯುವುದು

ನಿಮ್ಮ ವಾಹನವನ್ನು ಎಳೆದೊಯ್ಯುವ ಅಗತ್ಯವಿದ್ದಲ್ಲಿ, ವೃತ್ತಿಪರ ಸರ್ವಿಸ್ ಅನ್ನು ಸಂಪರ್ಕಿಸಿ. ನಿಮ್ಮ ಡೀಲರ್ ನಿಮಗೆ ವಿವರವಾದ ಎಳೆದೊಯ್ಯುವ ಸೂಚನೆಗಳನ್ನು ಒದಗಿಸಬಹುದು.

| *ಸೂಚನೆ* |
|---|
| **ನಿಮ್ಮ ವಾಹನಕ್ಕೆ ಎಳೆದೊಯ್ಯುವಾಗ ಆಗಬಹುದಾದ ಹಾನಿಯನ್ನು ತಪ್ಪಿಸಲು ಸೂಕ್ತ ಸಾಧನ ಮತ್ತು ಎಳೆದೊಯ್ಯುವ ವಿಧಾನಗಳನ್ನು ಬಳಸತಕ್ಕದ್ದು.** |

**2-ವೀಲ್ ಡ್ರೈವ್ (2ಡಬ್ಲ್ಯು ಡಿ) ಮ್ಯಾನುವಲ್ ಟ್ರಾನ್ಸ್ ಮಿಶನ್**

ಈ ಕೆಳಗಿನ ವಿಧಾನಗಳನ್ನು ಬಳಸಿಕೊಂಡು ಮ್ಯಾನುವಲ್ ಟ್ರಾನ್ಸ್ ಮಿಶನ್ ವಾಹನಗಳನ್ನು ಎಳೆದೊಯ್ಯಬಹುದು.

1) ಫ್ರಂಟ್ ನಿಂದ ಫ್ರಂಟ್ ವೀಲ್ ಗಳನ್ನು ಮೇಲೆತ್ತಬೇಕು ಮತ್ತು ರೇರ್ ವೀಲ್ ಗಳು ನೆಲದ ಮೇಲಿರಬೇಕು. ಎಳೆದೊಯ್ಯುವ ಮೊದಲು ಟ್ರಾನ್ಸ್ ಮಿಶನ್ ನ್ಯೂಟ್ರಲ್ ನಲ್ಲಿರುವುದು ಮತ್ತು ಪಾರ್ಕಿಂಗ್ ಬ್ರೇಕ್ ರಿಲೀಸ್ ಆಗಿರುವುದು ಖಚಿತಪಡಿಸಿ.
2) ರೇರ್ ನಿಂದ, ರೇರ್ ವೀಲ್ ಗಳನ್ನು ಮೇಲೆತ್ತಬೇಕು ಮತ್ತು ಫ್ರಂಟ್ ವೀಲ್ ಗಳು ನೆಲದ ಮೇಲಿರಬೇಕು. ಸ್ಟೀರಿಂಗ್ ಮತ್ತು ಡ್ರೈವ್ ಟ್ರೈನ್ ಕಾರ್ಯಕಾರಿ ಸ್ಥಿತಿಯಲ್ಲಿರಬೇಕು. ಎಳೆದೊಯ್ಯುವ ಮೊದಲು ಸ್ಟೀರಿಂಗ್ ವೀಲ್ ಅನ್ ಲಾಕ್ ಆಗಿರುವುದು ಖಚಿತಪಡಿಸಿ (ಇಗ್ನಿಷನ್ ಕೀ "ACC" (ಎ.ಸಿ.ಸಿ) ಪೊಸಿಷನ್ ನಲ್ಲಿರಬೇಕು), ಮತ್ತು ಸ್ಟೀರಿಂಗ್ ವೀಲ್ ಅನ್ನು ಎಳೆದೊಯ್ಯುವ ಸರ್ವಿಸ್ ಗೆ ವಿನ್ಯಾಸ ಮಾಡಲಾಗಿರುವ ಕ್ಲಾಂಪಿಂಗ್ ಡಿವೈಸ್ ಗೆ ಭದ್ರಪಡಿಸಬೇಕು.

| *ಸೂಚನೆ* |
|---|
| **ಎಳೆದೊಯ್ಯುವಾಗ ಫ್ರಂಟ್ ವೀಲ್ ನಿಂದ ವರ್ಗಾವಣೆ-ಗೊಂಡಿರುವ ಆಘಾತಗಳನ್ನು ಸ್ಟೀರಿಂಗ್ ಕಾಲಂ ಶಾಕ್ ಗಳನ್ನು ಸಹಿಸುವಷ್ಟು ಸಾಕಷ್ಟು ಬಲಿಷ್ಠವಾಗಿಲ್ಲ. ಸ್ಟೀರಿಂಗ್ ವೀಲ್ ಅನ್ನು ಎಳೆದೊಯ್ಯುವ ಮೊದಲು ಯಾವಾಗಲೂ ಅನ್ಲಾಕ್ ಮಾಡಿ.** |

## ಸ್ಟಾರ್ಟರ್ ಕಾರ್ಯ ನಿರ್ವಹಿಸದೆ ಇದ್ದಲ್ಲಿ

1) ಬ್ಯಾಟರಿ ಸ್ಥಿತಿಯನ್ನು ನಿರ್ಧರಿಸಲು ಹೆಡ್ ಲೈಟ್ ಗಳನ್ನು ತಿರುಗಿಸಿ ಇಗ್ನಿಷನ್ ಸ್ವಿಚ್ ಅನ್ನು "START" (ಸ್ಟಾರ್ಟ್) ಪೊಸಿಚನ್ ಗೆ ತಿರುಗಿಸಲು ಪ್ರಯತ್ನಿಸಿ. ಹೆಡ್ ಲೈಟ್ ಗಳು ಅತಿಯಾಗಿ ಡಿಮ್ ಆಗಿದ್ದಲ್ಲಿ ಅಥವಾ ಆಫ್ ಆದಲ್ಲಿ, ಅದು ಸಾಮಾನ್ಯವಾಗಿ ಬ್ಯಾಟರಿ ಫ್ಲಾಟ್ ಆಗಿರುತ್ತದೆ ಅಥವಾ ಬ್ಯಾಟರಿ ಟರ್ಮಿನಲ್ ಸಂಪರ್ಕ ದುರ್ಬಲವಾಗಿರುತ್ತದೆ. ಬ್ಯಾಟರಿಯನ್ನು ರಿಚಾರ್ಜ್ ಮಾಡಿ ಅಥವಾ ಬ್ಯಾಟರಿ ಟರ್ಮಿನಲ್ ಸಂಪರ್ಕವನ್ನು ಅಗತ್ಯವಿದ್ದಂತೆ ಸರಿಪಡಿಸಿ.
2) ಹೆಡ್ ಲೈಟ್ ಗಳು ಹೊಳೆಯುತ್ತಿದ್ದಲ್ಲಿ, ಫ್ಯೂಸ್ ಗಳನ್ನು ಪರೀಕ್ಷಿಸಿ. ಸ್ಟಾರ್ಟರ್ ವೈಫಲ್ಯಕ್ಕೆ ಕಾರಣ ಸಾಮಾನ್ಯವಾಗಿರದೆ ಇದ್ದಲ್ಲಿ, ಪ್ರಮುಖ ಇಲೆಕ್ಟ್ರಿಕಲ್ ಸಮಸ್ಯೆ ಆಗಿರುವ ಸಾಧ್ಯತೆಯಿದೆ. ವಾಹನವನ್ನು ನಿಮ್ಮ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ಬಳಿ ತಪಾಸಣೆ ಮಾಡಿಕೊಳ್ಳಿ.

## ಇಂಜಿನ್ ನ ತುಂಬಿದಲ್ಲಿ

ಇಂಜಿನ್ ಗೆ ಫ್ಯೂಯೆಲ್ ತುಂಬಿದಲ್ಲಿ, ಸ್ಟಾರ್ಟ್ ಮಾಡುವುದು ಕಷ್ಟವಾಗಬಹುದು. ಇದು ನಡೆದಲ್ಲಿ, ಅಕ್ಸಲರೇಟರ್ ಪೆಡಲ್ ಅನ್ನು ಒಟ್ಟಾಗಿ ಫ್ಲೋರ್ ಗೆ ಒತ್ತಿ ಮತ್ತು ಇಂಜಿನ್ ಕ್ರಾಂಕಿಂಗ್ ಮಾಡುವಾಗ ಅಲ್ಲೇ ಹಿಡಿದಿಡಿ.

- ಸ್ಟಾರ್ಟರ್ ಮೋಟಾರ್ ಅನ್ನು 30 ಸೆಕೆಂಡುಗಳಿಗಿಂತ ಹೆಚ್ಚು ಕಾಲ ಕಾರ್ಯನಿರ್ವಹಿಸಬೇಡಿ.

## ಇಂಜಿನ್ ಅತಿಯಾಗಿ ಬಿಸಿಯಾದಲ್ಲಿ

ಗಂಭೀರ ಚಾಲನಾ ಸ್ಥಿತಿಗಳಲ್ಲಿ ಇಂಜಿನ್ ತಾತ್ಕಾಲಿಕವಾಗಿ ಅತಿ ಬಿಸಿಯಾಗಬಹುದು. ಅಧಿಕ ಇಂಜಿನ್ ಕೂಲಂಟ್ ತಾಪಮಾನದ ವಾರ್ನಿಂಗ್ ಲೈಟ್ ಚಾಲನೆ ಸಂದರ್ಭ ಆನ್ ಆದಲ್ಲಿ:

1) ವಾಹನವನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಿರಿ ಮತ್ತು ಪಾರ್ಕ್ ಮಾಡಿ.
2) ಅಧಿಕ ಇಂಜಿನ್ ಕೂಲಂಟ್ ತಾಪಮಾನ ವಾರ್ನಿಂಗ್ ಲೈಟ್ ಆಫ್ ಆಗುವವರೆಗೆ ಇಂಜಿನ್ ಅನ್ನು ಸಾಮಾನ್ಯ ಐಡಲ್ ವೇಗದಲ್ಲಿ ಕೆಲವು ನಿಮಿಷಗಳ ಕಾಲ ಓಡಲು ಬಿಡಿ.


**⚠ ಎಚ್ಚರಿಕೆ**

**ಆವಿ ಹೊರ ಹೋಗುವುದು ನಿಮಗೆ ಕಂಡಲ್ಲಿ ವಾಹನವನ್ನು ಸುರಕ್ಷಿತ ಸ್ಥಳದಲ್ಲಿ ನಿಲ್ಲಿಸಿ ಮತ್ತು ತಕ್ಷಣವೇ ಇಂಜಿನ್ ಆಫ್ ಮಾಡಿ ತಂಪಾಗಲು ಬಿಡಿ. ಇಂಜಿನ್ ಕಂಪಾರ್ಟ್ ಮೆಂಟ್ ಅನ್ನು ಹೊಗೆ ಇರುವಾಗ ತೆರೆಯಬೇಡಿ. ಹೊಗೆ ಕಾಣದೆ ಮತ್ತು ಕೇಳದೆ ಇರುವಾಗ ಇಂಜಿನ್ ಕಂಪಾರ್ಟ್ ಮೆಂಟ್ ತೆರೆಯಿರಿ ಮತ್ತು ಕೂಲಂಟ್ ಇನ್ನೂ ಕುದಿಯುತ್ತಿದೆಯೇ ಎಂದು ನೋಡಿ. ಹಾಗಿದ್ದಲ್ಲಿ, ಅದು ಕುದಿಯುವುದು ನಿಲ್ಲಿಸುವವರೆಗೂ ಕಾದು ನಂತರ ಮುಂದುವರಿಯಬೇಕು.**

ಅಧಿಕ ಇಂಜಿನ್ ಕೂಲಂಟ್ ತಾಪಮಾನ ವಾರ್ನಿಂಗ್ ಲೈಟ್ ಆಫ್ ಆಗದೆ ಇದ್ದಾಗ:

1) ಇಂಜಿನ್ ಆಫ್ ಮಾಡಿ ಮತ್ತು ವಾಟರ್ ಪಂಪ್ ಬೆಲ್ಟ್ ಮತ್ತು ಪುಲೇಗಳು ಹಾನಿಯಾಗಿಲ್ಲ ಮತ್ತು ಜಾರುತ್ತಿಲ್ಲ ಎನ್ನುವುದು ಪರೀಕ್ಷಿಸಿ. ಏನಾದರೂ ಅಸಹಜತೆ ಕಂಡಲ್ಲಿ ಸರಿಪಡಿಸಿ.
2) ರಿಸರ್ವಾಯರ್ ನಲ್ಲಿ ಕೂಲಂಟ್ ಮಟ್ಟವನ್ನು ಪರೀಕ್ಷಿಸಿ. "ಕಡಿಮೆ" ಲೈನ್ ಗಿಂತಲೂ ಕಡಿಮೆ ಇರುವುದು ಕಂಡಲ್ಲಿ, ರೇಡಿಯೇಟರ್, ವಾಟರ್ ಪಂಪ್ ಮತ್ತು ರೇಡಿಯೇಟರ್ ಮತ್ತು ಹೀಟರ್ ಹೋಸ್ ಗಳಲ್ಲಿ ಸೋರಿಕೆಗಾಗಿ ಪರೀಕ್ಷಿಸಿ. ಅತೀ ಬಿಸಿಯಿಂದ ಯಾವುದೇ ಸೋರಿಕೆಯನ್ನು ಪತ್ತೆ ಹಚ್ಚಿದಲ್ಲಿ, ಈ ಸಮಸ್ಯೆಗಳನ್ನು ಸರಿಪಡಿಸುವವರೆಗೂ ಇಂಜಿನ್ ಚಲಾಯಿಸಬೇಡಿ.
3) ಯಾವುದೇ ಲೀಕ್ ನಿಮಗೆ ಕಂಡು ಬರದೆ ಇದ್ದಲ್ಲಿ, ಜಾಗರೂಕವಾಗಿ ಕೂಲಂಟ್ ಅನ್ನು ರಿಸರ್ವಾಯರಿಗೆ ಸೇರಿಸಿ ಮತ್ತು ನಂತರ ರೇಡಿಯೇಟರಿಗೆ ಅಗತ್ಯವಿದ್ದಲ್ಲಿ ಬೆರೆಸಿ. ("ತಪಾಸಣೆ ಮತ್ತು ನಿಭಾಯಿಸುವುದು" ವಿಭಾಗದಲ್ಲಿ "ಇಂಜಿನ್ ಕೂಲಂಟ್" ಓದಿ)

***ಸೂಚನೆ:***
*ನಿಮ್ಮ ಇಂಜಿನ್ ಅತಿಯಾಗಿ ಬಿಸಿಯಾಗಿದ್ದಲ್ಲಿ, ನಿಮಗೆ ಏನು ಮಾಡಬೇಕು ಎನ್ನುವುದು ಖಚಿತವಾಗಿರದೆ ಇದ್ದಲ್ಲಿ ನಿಮ್ಮ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರನ್ನು ಸಂಪರ್ಕಿಸಿ.*



ಉದಾಹರಣೆ

65D350d

**⚠ ಎಚ್ಚರಿಕೆ**


- **ತಾಪಮಾನ ಅಧಿಕವಾಗಿದ್ದಾಗ ರೇಡಿಯೇಟರ್ ಕ್ಯಾಪ್ ಅನ್ನು ಕಳಚುವುದು (ಅಥವಾ ಡೀಸಲ್ ಇಂಜಿನ್ ಟ್ಯಾಂಕ್ ಕ್ಯಾಪ್ ಅನ್ನು ತೆಗೆಯುವುದು) ಅಪಾಯಕಾರಿ. ಏಕೆಂದರೆ ಸ್ಕಾಲ್ಡಿಂಗ್ ಫ್ಲೂಯಿಡ್ ಮತ್ತು ಹೊಗೆ ಒತ್ತಡದಲ್ಲಿ ಹೊರಬರಬಹುದು. ಕೂಲಂಟ್ ತಾಪಮಾನ ಕಡಿಮೆಯಾದಾಗಲೇ ಕ್ಯಾಪ್ ತೆಗೆಯಬೇಕು.**
- **ವೈಯಕ್ತಿಕ ಗಾಯಗಳನ್ನು ತಡೆಯಲು ಕೈಗಳು, ಸಾಧನಗಳು ಮತ್ತು ಬಟ್ಟೆಗಳನ್ನು ಇಂಜಿನ್ ಕೂಲಿಂಗ್ ಫ್ಯಾನ್ ನಿಂದ ದೂರವಿಡಬೇಕು. ಈ ಇಲೆಕ್ಟ್ರಿಕ್ ಫ್ಯಾನ್ ಗಳನ್ನು ಯಾಂತ್ರಿಕವಾಗಿ ಎಚ್ಚರಿಕೆ ಇಲ್ಲದೆಯೇ ಆನ್ ಮಾಡಬೇಕು.**

## ಹೊಡೆತದಿಂದ ಬಾಡಿ ಅಡಿಯಲ್ಲಿ ಸಮಸ್ಯೆ

ವಾಹನದ ಅಡಿಯಲ್ಲಿ ಹೊಡೆದು ಹೋದಲ್ಲಿ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರಿಂದ ತಪಾಸಣೆ ಮಾಡಿಸಿಕೊಳ್ಳಿ. ಇಲ್ಲದೆ ಇದ್ದಲ್ಲಿ ಸ್ಟೀರಿಂಗ್, ಸಸ್ಪೆನ್ಷನ್, ಡ್ರೈವ್ ಲೈನ್ ಮತ್ತು ಬ್ರೇಕ್ ಇತ್ಯಾದಿಗೆ ಹಾನಿಯಾಗಲಿದೆ ಮತ್ತು ನೀವು ಸುರಕ್ಷಿತ ಚಾಲನೆ ಮಾಡಲು ಸಾಧ್ಯವಾಗದು.

## ಎಚ್ಚರಿಕೆ ಟ್ರಯಾಂಗಲ್


ಉದಾಹರಣೆ




MHO-07-001

ವಾಹನ ಹಾಳಾದಲ್ಲಿ ಅಥವಾ ತುರ್ತಾಗಿ ನಿಲುಗಡೆ ಮಾಡಿದಾಗ, ನಿಮ್ಮ ವಾಹನ ಇತರ ಸಾರಿಗೆಗೆ ಅಪಾಯಕಾರಿಯಾಗಿ ಪರಿಣಮಿಸಬಹುದು. ವಾಹನದ ಜೊತೆಗೆ ಸಿಗುವ ವಾರ್ನಿಂಗ್ ಟ್ರಯಾಂಗಲ್ ಅನ್ನು ರಸ್ತೆಯ ಮೇಲೆ ಇಡಿ. ಹೀಗೆ ಸರಿ ಸುಮಾರು 50-100 ಮೀಟರ್ ಅಂತರದಲ್ಲಿ ಬರುವ ಇತರ ವಾಹನಗಳಿಗೆ ನಿಮ್ಮ ವಾಹನ ತಡೆಯೊಡ್ಡುವುದನ್ನು ತಪ್ಪಿಸಬಹುದು. ಟ್ರಯಾಂಗಲ್ ನ ಹೊಳೆಯುವ ಬದಿಯು ಬರುತ್ತಿರುವ ಸಾರಿಗೆಯ ಕಡೆಗೆ ಇರಬೇಕು. ವಾಹನವನ್ನು ವಾರ್ನಿಂಗ್ ಟ್ರಯಾಂಗಲ್ ಇಡಲು ಸಿದ್ಧಪಡಿಸುವ ಮೊದಲು ಹಜಾರ್ಡ್ ವಾರ್ನಿಂಗ್ ಲ್ಯಾಂಪ್ ಗಳನ್ನು ಬೆಳಗುವ ಮೊದಲು ಸಕ್ರಿಯಗೊಳಿಸಿ.


ಉದಾಹರಣೆ




MHO-07-014-1

- ವಾರ್ನಿಂಗ್ ಟ್ರಯಾಂಗಲ್ ಅನ್ನು ಬಾಣ 1ರಲ್ಲಿ ತೋರಿಸಿರುವಂತೆ ಜಾಗರೂಕವಾಗಿ ಕಳಚಿ.
- ಎರಡೂ ರಿಫ್ಲೆಕ್ಟರ್ ಆರ್ಮ್ ಗಳನ್ನು ಬಾಣದಲ್ಲಿ ತೋರಿಸಿದಂತೆ ತೆರೆಯಿರಿ ಮತ್ತು ಆರ್ಮ್ ಗಳನ್ನು ಬಲ ಆರ್ಮ್ ನಲ್ಲಿ ಕೊಟ್ಟಿರುವ ಕ್ಲಿಪ್ ನೆರವಿನಿಂದ ಪರಸ್ಪರರ ಜೊತೆಗೆ ಲಾಕ್ ಮಾಡಿ. ಬಾಟಂ ಸ್ಟಾಂಡ್ ಅನ್ನು ಬಲದಿಂದ ಎಡ ದಿಕ್ಕಿನಲ್ಲಿ ಬಾಣ 3ರಲ್ಲಿ ತೋರಿಸಿರುವಂತೆ ತೆರೆಯಿರಿ. ವಾರ್ನಿಂಗ್ ಟ್ರಯಾಂಗಲ್ ಅನ್ನು ವಾಹನದ ಹಿಂದೆ ಸಮತಟ್ಟಾದ ನೆಲದ ಮೇಲಿಡಿ.
- ಕವರ್ ಒಳಗೆ ಇಡಲು ಕಳಚುವ ವಿಧಾನವನ್ನು ರಿವರ್ಸ್ ಮಾಡಿ,


ಉದಾಹರಣೆ




MHO-07-014

## ಅಗ್ನಿ ಶಾಮಕ ಸಲಕರಣೆ (ಅಳವಡಿಸಿದಲ್ಲಿ)


ಉದಾಹರಣೆ



77PM08009

ಅಗ್ನಿಶಾಮಕವನ್ನು ಸೀಟ್ಗಳ ಹಿಂದೆ ಅಳವಡಿಸಲಾಗಿರುತ್ತದೆ (ಡ್ರೈವರ್ ಸೀಟ್ ಮತ್ತು ಪ್ಯಾಸೆಂಜರ್ ಸೀಟ್ ಮಧ್ಯೆ)

ಉದಾಹರಣೆ




77PM08003

(1) ಅಗ್ನಿ ಶಾಮಕ ಸಿಲಿಂಡರ್

(2) ಸೀಲ್

(3) ಸೇಫ್ಟಿ ಪಿನ್


(4) ಲಿವರ್

(5) ನಾಜಲ್

## ಅಗ್ನಿಶಾಮಕ ಸಲಕರಣೆಯ ತೆಗೆಯುವುದು ಮತ್ತು ಮರು ಅಳವಡಿಸುವುದು

### ಅಗ್ನಿಶಾಮಕ ಸಲಕರಣೆಯನ್ನು ತೆಗೆಯಲು

ಉದಾಹರಣೆ





77PM08004

ಅಗ್ನಿಶಾಮಕ ಸಲಕರಣೆಯ ಲಿಫ್ಟ್ ಲಿವರ್ (1) ಸ್ವಲ್ಪ ಮೇಲ್ಮುಖವಾಗಿಸಿ ಮತ್ತು ಚಿತ್ರದಲ್ಲಿ ತೋರಿಸಿದ ದಿಕ್ಕಿಗೆ ಅಗ್ನಿ ಶಾಮಕ ಸಲಕರಣೆಯನ್ನು ಎಳೆದು ಕ್ಲಾಂಪ್ನಿಂದ ಹೊರತೆಗೆಯಿರಿ (2).

### ಅಗ್ನಿಶಾಮಕ ಸಲಕರಣೆಯನ್ನು ಮರು ಅಳವಡಿಸುವುದು

ಉದಾಹರಣೆ




77PM08005


ಅಗ್ನಿಶಾಮಕ ಸಲಕರಣೆಯ (1) ಬಾಡಿಯನ್ನು ಕ್ಲಾಂಪ್ (3) ಒಳಗೆ ಸೇರಿಸಿ ಮತ್ತು ಎಚ್ಚರಿಕೆಯಿಂದ ಕ್ಲಾಂಪ್ನಲ್ಲಿ ಕೆಳಮುಖವಾಗಿ ನಾಜಲ್ (2) ಇಡಿ.

***ಸೂಚನೆ:***

*ಅಗ್ನಿ ಶಾಮಕ ಸಲಕರಣೆಯ ನಾಜಲ್ ಅನ್ನು ಸರಿಯಾಗಿ ಕ್ಲಾಂಪ್ನಲ್ಲಿ ಕೂರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಿ.*

### ಕಾರ್ಯನಿರ್ವಹಣೆಯ ಕ್ರಮ

ಉದಾಹರಣೆ





77PM08006

1) ಅಗ್ನಿ ಶಾಮಕ ಸಲಕರಣೆಯನ್ನು (1) ಮೇಲ್ಮುಖವಾಗಿ ಹಿಡಿದುಕೊಳ್ಳಿ.

2) ಸೇಫ್ಟಿ ಪಿನ್ (3) ಅನ್ನು ತಿರುಗಿಸುವ ಮೂಲಕ ಸೀಲ್ (2) ಒಡೆಯಿರಿ.

ಉದಾಹರಣೆ




77PM08007

3) ಸೇಫ್ಟಿ ಪಿನ್ (3) ಎಳೆಯಿರಿ.

4) ಲಿವರ್ ಸ್ಕ್ವೀಜ್ (4) ಮಾಡಿ ಮತ್ತು ತ್ವರಿತ ಸ್ವೀಪಿಂಗ್ ಚಲನೆಯೊಂದಿಗೆ ಅಗ್ನಿಯ ಸಮೀಪಕ್ಕೆ ನಾಜಲ್ (5) ಜೆಟ್ ಅನ್ನು ಗುರಿಯಾಗಿಸಿ.

ಉದಾಹರಣೆ



77PM08008


5) ಜ್ವಾಲೆಗಳು ಆರುವವರೆಗೂ ಆ ಅಂಚಿನ ಕಡೆಗೇ ಬೆಂಕಿಯನ್ನು ನಂದಿಸುತ್ತಿರಿ.

***ಸೂಚನೆ:***

*ಬಾಹ್ಯ ಮೂಲದಿಂದ ವಾಹನಕ್ಕೆ ಉಂಟಾದ ಸಣ್ಣ ಬೆಂಕಿಯನ್ನು ನಂದಿಸಲು ಮಾತ್ರ ಅಗ್ನಿ ಶಾಮಕ ಸಲಕರಣೆಯನ್ನು ವಿನ್ಯಾಸ ಮಾಡಲಾಗಿದೆ.*

## ಮಾಡಬೇಕಿರುವುದು ಮತ್ತು ಮಾಡಬಾರದ್ದು

ಉದಾಹರಣೆ




77PM08001

## ಮಾಡಬೇಕಿರುವುದು

1) ಪ್ರೆಶರ್ ಗಾಜ್ ಅನ್ನು ಕಾಲಕಾಲಕ್ಕೆ ಪರಿಶೀಲಿಸಿ. ಗರಿಷ್ಠ ಚಾರ್ಜಿಂಗ್ ಒತ್ತಡವು 15 ಕೆಜಿಎಫ್/ಸಿಎಂ2 (ಗ್ರೀನ್ ವಲಯದಲ್ಲಿ (2))

2) ಪ್ರೆಶರ್ ಇಳಿದಾಗ ಇಂಡಿಕೇಟರ್ ನೀಡಲ್ (1) ರೆಡ್ ಜೋನ್‌ಗೆ (3) ಗೆ ತಿರುಗುತ್ತದೆ. ತಕ್ಷಣವೇ ಅಗ್ನಿ ಶಾಮಕ ಸಲಕರಣೆಯ ಉತ್ಪಾದಕರನ್ನು ಅಗ್ನಿ ಶಾಮಕ ಸಲಕರಣೆಯ ಮೇಲೆ ನೀಡಿದ ಮಾಹಿತಿಗೆ ಅನುಗುಣವಾಗಿ ಸಂಪರ್ಕಿಸಿ.

3) ಸರ್ವೀಸ್ ಸೆಂಟರ್‌ನ ಮೂಲಕ ಮಾತ್ರವೇ ಅಗ್ನಿ ಶಾಮಕ ಸಲಕರಣೆಯನ್ನು ಸರ್ವೀಸ್ ಮಾಡಿ. ಅಗ್ನಿ ಶಾಮಕ ಸಲಕರಣೆಯಲ್ಲಿ ನೀಡಲಾದ ಮಾಹಿತಿ ನೋಡಿ, ಸಮೀಪದ ಸರ್ವೀಸ್ ಸೆಂಟರ್ ಅನ್ನು ಕಂಡುಕೊಳ್ಳಿ.

4) ವಾಹನದಲ್ಲಿ ಶಿಫಾರಸು ಮಾಡಿದ ಸ್ಥಾನದಲ್ಲೇ ಎಂದಿಗೂ ಅಗ್ನಿ ಶಾಮಕ ಸಲಕರಣೆಯನ್ನು ಇಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಿ.

5) ಬಳಕೆಯ ನಂತರ ತಕ್ಷಣವೇ ಅಗ್ನಿ ಶಾಮಕ ಸಲಕರಣೆಯನ್ನು ರಿಫಿಲ್ ಮಾಡಿ.

## ಮಾಡಬಾರದ್ದು

1) ಅಗ್ನಿ ಶಾಮಕ ಸಲಕರಣೆಯನ್ನು ಸ್ವಚ್ಛಗೊಳಿಸಲು ನೀರು ಬಳಸಬೇಡಿ.
(ಧೂಳು ಒರೆಸಲು ಸ್ವಚ್ಛ ಬಟ್ಟೆಯನ್ನು ಬಳಸಿ)

2) ಬಳಸಿದ ಅಥವಾ ಚಾರ್ಜ್ ಇಲ್ಲದ ಅಗ್ನಿ ಶಾಮಕ ಸಲಕರಣೆಯನ್ನು ಅವಲಂಬಿಸಬೇಡಿ.

***ಸೂಚನೆ:***

- *ಪ್ರತಿ ಬಳಕೆಯ ನಂತರ ರಿಫಿಲ್ ಮಾಡುವುದು ಅಗತ್ಯ.*
- *ಬಳಸಿದ ನಂತರ ಅಗ್ನಿ ಶಾಮಕವನ್ನು ರಿಫಿಲ್ ಮಾಡಬೇಕು.*

# ದೃಶ್ಯಗೋಚರ ಆರೈಕೆ

ತುಕ್ಕು ತಡೆ ........ 9-1
ವಾಹನದ ಸ್ವಚ್ಛತೆ ........ 9-2

# ತುಕ್ಕು ತಡೆ

ತುಕ್ಕು ಹಿಡಿಯುವುದರಿಂದ ರಕ್ಷಿಸಲು ನಿಮ್ಮ ವಾಹನವನ್ನು ಚೆನ್ನಾಗಿ ಗಮನಿಸುವುದು ಅತೀ ಮುಖ್ಯ. ನಿಮ್ಮ ವಾಹನವನ್ನು ತುಕ್ಕು ಹಿಡಿಯುವುದರಿಂದ ರಕ್ಷಿಸಲು ಹೇಗೆ ನಿರ್ವಹಣೆ ಮಾಡಬೇಕು ಎನ್ನುವ ಸೂಚನೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ. ಈ ಸೂಚನೆಗಳನ್ನು ಜಾಗರೂಕವಾಗಿ ಓದಿ ಮತ್ತು ಪಾಲಿಸಿ.

## ಪ್ರಮುಖ ಮಾಹಿತಿ ತುಕ್ಕು

### ತುಕ್ಕಿಗೆ ಸಾಮಾನ್ಯ ಕಾರಣಗಳು

1) ವಾಹನದ ಬಾಡಿ ಅಡಿ ಅಥವಾ ಫ್ರೇಮ್ ನಂತಹ ಕೈ ತಲುಪದೆ ಇರುವ ಜಾಗಗಳಲ್ಲಿ ರಸ್ತೆ ಉಪ್ಪು, ದೂಳು, ತೇವಾಂಶ ಅಥವಾ ರಾಸಾಯನಿಕಗಳು ಸಂಗ್ರಹ.
2) ಸಣ್ಣಪುಟ್ಟ ಅವಘಡಗಳು ಅಥವಾ ಕಲ್ಲು ಮತ್ತಿತರ ತರಚುವಿಕೆಯಿಂದ ಮೂಲೆ ತರಚಿ ಹೋಗುವುದು, ಗೀರು ಮತ್ತು ಪಾಲಿಶ್ ಮಾಡಿರುವ ಅಥವಾ ಪೈಂಟ್ ಮಾಡಿರುವ ಮೆಟಲ್ ಹೊರಮೈಗಳಿಗೆ ಯಾವುದೇ ಹಾನಿ.

### ಪರಿಸರ ಸ್ಥಿತಿಯು ತುಕ್ಕು ಹಿಡಿಯುವುದನ್ನು ವೇಗಗೊಳಿಸುತ್ತದೆ

1) ರಸ್ತೆ ಉಪ್ಪು, ದೂಳು ನಿಯಂತ್ರಣ ರಾಸಾಯನಿಕಗಳು, ಸಮುದ್ರದ ಗಾಳಿ ಅಥವಾ ಔದ್ಯಮಿಕ ಮಾಲಿನ್ಯ ಕೂಡ ಲೋಹದ ತುಕ್ಕು ಹಿಡಿಯುವಿಕೆಯನ್ನು ವೇಗಗೊಳಿಸುತ್ತದೆ.
2) ಉಷ್ಣತೆ ರೇಂಜ್ ಫ್ರೀಜಿಂಗ್ ಪಾಯಿಂಟ್ ಗೆ ಸ್ವಲ್ಪವೇ ಮೇಲಿದ್ದಾಗ ಮುಖ್ಯವಾಗಿ ಅಧಿಕ ತೇವಾಂಶವು ತುಕ್ಕು ಹಿಡಿಯುವುದನ್ನು ವೇಗಗೊಳಿಸುತ್ತದೆ.
3) ಉಳಿದ ವಾಹನದ ಬಾಡಿ ಸಂಪೂರ್ಣ ಒಣಗಿದ್ದರೂ ವಾಹನದ ನಿರ್ದಿಷ್ಟ ಭಾಗಗಳಲ್ಲಿ ವಿಸ್ತರಿತ ಸಮಯದಲ್ಲಿಯೂ ತುಕ್ಕು ಹಿಡಿಯಬಹುದು.
4) ತ್ವರಿತವಾಗಿ ಒಣಗಲು ಗಾಳಿ ಹರಿಯಲು ಅವಕಾಶವಿಲ್ಲದೆ ಭಾಗಗಳಲ್ಲಿ ಅಧಿಕ ಉಷ್ಣತೆಗಳು ವಾಹನದ ಕೆಲವು ಭಾಗದಲ್ಲಿ ತುಕ್ಕಿನ ಪ್ರಮಾಣವನ್ನು ಏರಿಸಬಹುದು.

ಈ ಮಾಹಿತಿಯು ನಿಮ್ಮ ವಾಹನವನ್ನು (ಮುಖ್ಯವಾಗಿ ಬಾಡಿ ಅಡಿ) ಸಾಧ್ಯವಾದಷ್ಟು ಸ್ವಚ್ಛ ಮತ್ತು ಒಣಗಿರುವಂತೆ ಇಡುವ ಅಗತ್ಯವನ್ನು ಹೇಳುತ್ತದೆ. ಪೈಂಟ್ ಮತ್ತು ರಕ್ಷಣಾ ಕೋಟಿಂಗ್ ಗಳಿಗೆ ಹಾನಿಯಾದಲ್ಲಿ ಸಾಧ್ಯವಾದಷ್ಟು ಬೇಗನೇ ರಿಪೇರಿ ಮಾಡುವುದೂ ಅಷ್ಟೇ ಮುಖ್ಯ.

## ತುಕ್ಕು ರಕ್ಷಣೆಗೆ ಹೇಗೆ ನೆರವಾಗುವುದು

### ನಿಮ್ಮ ವಾಹನವನ್ನು ಆಗಾಗ ತೊಳೆಯಿರಿ

ನಿಮ್ಮ ವಾಹನದ ಫಿನಿಶ್ ಅನ್ನು ರಕ್ಷಿಸುವ ಮತ್ತು ತುಕ್ಕನ್ನು ತಪ್ಪಿಸುವ ಅತ್ಯುತ್ತಮ ವಿಧಾನವೆಂದರೆ ಕಾಲ ಕಾಲಕ್ಕೆ ತೊಳೆದು ಸ್ವಚ್ಛವಾಗಿಡುವುದು.
ಚಳಿಗಾಲದಲ್ಲಿ ಮತ್ತು ಚಳಿಗಾಲದ ನಂತರ ತಕ್ಷಣವೇ ನಿಮ್ಮ ವಾಹನವನ್ನು ಕನಿಷ್ಠ ಒಮ್ಮೆಯಾದರೂ ತೊಳೆಯಿರಿ. ನಿಮ್ಮ ವಾಹನವನ್ನು, ಮುಖ್ಯವಾಗಿ ಅಡಿಭಾಗವನ್ನು ಸಾಧ್ಯವಾದಷ್ಟು ಸ್ವಚ್ಛ ಮತ್ತು ಒಣಗಿರುವಂತೆ ಗಮನಹರಿಸಿ.
ಉಪ್ಪು ತುಂಬಿದ ರಸ್ತೆಗಳಲ್ಲಿ ನೀವು ಆಗಾಗ್ಗೆ ಪ್ರಯಾಣಿಸಿದಲ್ಲಿ, ನಿಮ್ಮ ವಾಹನವನ್ನು ಚಳಿಗಾಲದಲ್ಲಿ ಕನಿಷ್ಠ ತಿಂಗಳಿಗೆ ಒಮ್ಮೆ ತೊಳೆಯಬೇಕು. ನೀವು ಸಮುದ್ರದ ಬಳಿಯಲ್ಲಿ ವಾಸಿಸುತ್ತಿದ್ದಲ್ಲಿ, ನಿಮ್ಮ ವಾಹನವನ್ನು ವರ್ಷವಿಡೀ ತಿಂಗಳಿಗೊಮ್ಮೆಯಾದರೂ ತೊಳೆಯಬೇಕು.

ತೊಳೆಯುವ ಮಾಹಿತಿಗಳಿಗೆ, “ವಾಹನ ಸ್ವಚ್ಛಗೊಳಿಸುವುದು” ಭಾಗವನ್ನು ಓದಿ.

### ನೆಲೆ ನಿಂತಿರುವ ಹೊರಗಿನ ವಸ್ತುಗಳನ್ನು ನಿವಾರಿಸಿ

ಉಪ್ಪು, ರಾಸಾಯನಿಕ, ರಸ್ತೆ ಆಯಿಲ್ ಅಥವಾ ಟಾರ್ ಟ್ರೀ ಸ್ಯಾಪ್, ಹಕ್ಕಿ ಹಿಕ್ಕೆಗಳು ಮತ್ತು ಕೈಗಾರಿಕೆ ಹೊರ ಸೂಸುವ ಕಶ್ಮಲಗಳು ವಾಹನದ ಹೊರಮೈ ಮೇಲೆ ಬಾಕಿ ಉಳಿದಲ್ಲಿ ಅದರ ಫಿನಿಶಿಂಗ್ ಹಾನಿ ಮಾಡಬಹುದು. ಈ ರೀತಿಯ ಸಂಗ್ರಹವನ್ನು ಸಾಧ್ಯವಾದಷ್ಟು ಬೇಗನೇ ನಿವಾರಿಸಿ. ಈ ಠೇವಣಿಗಳನ್ನು ತೊಳೆಯುವುದು ಕಷ್ಟವಾದಲ್ಲಿ, ಹೆಚ್ಚುವರಿಯಾಗಿ ಸ್ವಚ್ಛ ಮಾಡುವುದು ಅಗತ್ಯವಿದೆ. ನೀವು ಬಳಸುವ ಯಾವುದೇ ಕ್ಲೀನರ್ ಗಳು ಪೈಂಟ್ ಮಾಡಿದ ಹೊರಮೈಗಳಿಗೆ ಹಾನಿ ಮಾಡುವುದಿಲ್ಲ ಎಂದು ಖಚಿತಪಡಿಸಿ. ಮುಖ್ಯವಾಗಿ ನಿಮ್ಮ ಉದ್ದೇಶ ಮಾತ್ರ ಈಡೇರುವಂತೆ ಗಮನಹರಿಸಿ. ಈ ವಿಶೇಷ ಕ್ಲೀನರ್ ಗಳನ್ನು ಬಳಸುವಾಗ ತಯಾರಕರ ನಿರ್ದೇಶನಗಳನ್ನು ಅನುಸರಿಸಿ.

### ಫಿನಿಶ್ ಹಾನಿಯನ್ನು ರಿಪೇರಿ ಮಾಡಿ

ಪೈಂಟೆಡ್ ಹೊರಮೈಗಳಿಗೆ ಆದ ಹಾನಿಗಾಗಿ ನಿಮ್ಮ ವಾಹನವನ್ನು ಜಾಗರೂಕವಾಗಿ ಪರೀಕ್ಷಿಸಿ. ಪೈಂಟ್ ನಲ್ಲಿ ಚೂರುಗಳು ಅಥವಾ ಗೀರುಗಳನ್ನು ಕಂಡಲ್ಲಿ, ತಕ್ಷಣವೇ ಅದನ್ನು ಸರಿಪಡಿಸಿಕೊಂಡು ತುಕ್ಕು ಹಿಡಿಯಲು ಆರಂಭವಾಗುವುದನ್ನು ತಡೆಯಿರಿ. ಚೂರುಗಳು ಅಥವಾ ಗೀರುಗಳು ಖಾಲಿ ಲೋಹದ ಒಳ ತೂರಿದಲ್ಲಿ, ಗುಣಮಟ್ಟದ ಬಾಡಿ ಶಾಪ್ ನಲ್ಲಿ ರಿಪೇರಿ ಮಾಡಿಸಿಕೊಳ್ಳಿ.

### ಪ್ರಯಾಣಿಕರು ಮತ್ತು ಲಗೇಜ್ ಕಂಪಾರ್ಟ್ ಮೆಂಟ್ ಗಳನ್ನು ಸ್ವಚ್ಛವಾಗಿಡಿ

ತೇವಾಂಶ, ದೂಳು ಅಥವಾ ಮಣ್ಣು ಫ್ಲೋರ್ ಮ್ಯಾಟ್ ಗಳ ಅಡಿಯಲ್ಲಿ ಸೇರಿಕೊಂಡು ತುಕ್ಕು ಹಿಡಿಯಬಹುದು. ಆಗಾಗ್ಗೆ, ಈ ಮ್ಯಾಟ್ ಗಳ ಒಳಗೆ ಪರಿಶೀಲಿಸಿ ಈ ಜಾಗ ಸ್ವಚ್ಛ ಮತ್ತು ಒಣಗಿರುವುದನ್ನು ಖಚಿತಪಡಿಸಿ. ವಾಹನವನ್ನು ರಸ್ತೆ ಚೆನ್ನಾಗಿಲ್ಲದ ಕಡೆ ಓಡಿಸುವುದು ಅಥವಾ ತೇವಾಂಶವಿರುವ ಹವಾಮಾನದಲ್ಲಿ ಬಳಸಿದಲ್ಲಿ ಆಗಾಗ್ಗೆ ಪರಿಶೀಲನೆ ನಡೆಸುವುದು ಅಗತ್ಯ.
ರಾಸಾಯನಿಕಗಳು, ಗೊಬ್ಬರಗಳು, ಕ್ಲೀನರ್ ಗಳು, ಉಪ್ಪು ಇತ್ಯಾದಿ ನಿರ್ದಿಷ್ಟ ಸರಕುಗಳು ಸಹಜವಾಗಿಯೇ ಬಹಳ ಕೊರೆಯುವ ಶಕ್ತಿ ಹೊಂದಿರುತ್ತವೆ. ಈ ಉತ್ಪನ್ನಗಳನ್ನು ಸೀಲ್ ಮಾಡಿದ ಕಂಟೇನರ್ ಗಳಲ್ಲಿಟ್ಟು ಸಾಗಾಟ ಮಾಡಬೇಕು. ಚೆಲ್ಲಿದಲ್ಲಿ ಅಥವಾ ಸೋರಿಕೆಯಾದಲ್ಲಿ ಸ್ವಚ್ಛ ಮಾಡಿ ಮತ್ತು ಪ್ರಾಂತವನ್ನು ತಕ್ಷಣವೇ ಒಣಗಿಸಿ.

### ನಿಮ್ಮ ವಾಹನವನ್ನು ಒಣ, ಚೆನ್ನಾಗಿ ಗಾಳಿಯಾಡುವ ಜಾಗದಲ್ಲಿ ಸಂಗ್ರಹಿಸಿಡಿ

ನಿಮ್ಮ ವಾಹನವನ್ನು ತೇವ, ಕಡಿಮೆ ಗಾಳಿ ಬೀಸುವ ಜಾಗದಲ್ಲಿ ಪಾರ್ಕ್ ಮಾಡಬೇಡಿ. ನೀವು ನಿಮ್ಮ ವಾಹನವನ್ನು ಗ್ಯಾರೇಜ್ ನಲ್ಲಿ ತೊಳೆಯುತ್ತಿದ್ದಲ್ಲಿ ಅಥವಾ ತೇವವಾಗಿದ್ದಾಗ ಆಗಾಗ್ಗೆ ಚಾಲನೆ ಮಾಡುತ್ತಿದ್ದಲ್ಲಿ ನಿಮ್ಮ ಗ್ಯಾರೇಜ್ ಕೂಡ ತೇವವಾಗಬಹುದು. ಗ್ಯಾರೇಜ್ ನಲ್ಲಿರುವ ಅತಿಯಾದ ತೇವಾಂಶವು ತುಕ್ಕು ತರಬಹುದು ಅಥವಾ ತುಕ್ಕು


ವೇಗಗೊಳಿಸಬಹುದು. ತೇವಗೊಂಡ ವಾಹನವು ಗಾಳಿಯಾಡದೆ ಇದ್ದಲ್ಲಿ ಬಿಸಿಯಾದ ಗ್ಯಾರೇಜ್ ನಲ್ಲೂ ತುಕ್ಕು ಹಿಡಿಯಬಹುದು.

**⚠ ಎಚ್ಚರಿಕೆ**

**ಹೆಚ್ಚುವರಿ ಅಂಡರ್ ಕೋಟಿಂಗ್ ಅಥವಾ ರಕ್ಷಣಾ ಕೋಟಿಂಗ್ ಅನ್ನು ಕ್ಯಾಟಲಿಟಿಕ್ ಕನ್ವರ್ಟರ್, ಎಕ್ಸಾಸ್ಟ್ ಪೈಪ್ ಗಳು ಇತ್ಯಾದಿ ಎಕ್ಸಾಸ್ಟ್ ಸಿಸ್ಟಂ ಭಾಗಗಳ ಸುತ್ತ ಹಚ್ಚಬೇಡಿ. ಅಂಡರ್ ಕೋಟಿಂಗ್ ವಸ್ತುಗಳು ಅತಿಯಾಗಿ ಬಿಸಿಯಾದಲ್ಲಿ ಬೆಂಕಿಯೂ ತಗಲಬಹುದು.**

## ವಾಹನ ಸ್ವಚ್ಛಗೊಳಿಸುವುದು

**ಉದಾಹರಣೆ**



77PM09001

**⚠ ಎಚ್ಚರಿಕೆ**

**ವಾಹನದ ಒಳಾಂಗಣ ಮತ್ತು ಹೊರಾಂಗಣವನ್ನು ಸ್ವಚ್ಛಗೊಳಿಸುವಾಗ ಉರಿ ಹತ್ತಬಹುದಾದ ದ್ರವಗಳಾದ ಲಾಕ್ವೆರ್ ತಿನ್ನರ್ ಗಳು, ಪೆಟ್ರೋಲ್, ಬೆನ್ಜೀನ್ ಅಥವಾ ಸ್ವಚ್ಛ ಮಾಡುವ ಮೆಟೀರಿಯಲ್ ಗಳನ್ನು ಅಥವಾ ಕಠಿಣ ಮನೆಯಲ್ಲಿ ಬಳಸುವ ಸಾಬೂನುಗಳನ್ನು ಎಂದೂ ಬಳಸಬೇಡಿ. ಈ ವಸ್ತುಗಳು ಖಾಸಗಿ ಗಾಯ ಅಥವಾ ಹಾನಿಯನ್ನು ವಾಹನಕ್ಕೆ ತರಬಹುದು.**

### ಒಳಾಂಗಣ ಸ್ವಚ್ಛಗೊಳಿಸುವುದು

**ವಿನ್ಯೈಲ್ ಅಪ್ಹೋಲೆಸ್ಟ್ರಿ**

ಸಾಬೂನು ಅಥವಾ ಮೆದುವಾದ ಡಿಟರ್ಜೆಂಟ್ ಮಿಶ್ರಣ ಮಾಡಿದ ಬಿಸಿ ನೀರಿನ ದ್ರವವನ್ನು ಸಿದ್ಧಗೊಳಿಸಿ. ದ್ರವವನ್ನು ವಿನ್ಯೈಲ್ಗೆ ಸ್ಪಾಂಜ್ ಅಥವಾ ಮೃದು ಬಟ್ಟೆಯಿಂದ ಹಚ್ಚಿ ಮತ್ತು ಅದನ್ನು ಕೆಲವು ನಿಮಿಷಗಳ ಕಾಲ ದೂಳು ಸಡಿಲವಾಗುವವರೆಗೂ ಒದ್ದೆಯಾಗಲು ಬಿಡಿ.

ಹೊರಮೈಯನ್ನು ಸ್ವಚ್ಛ, ಒದ್ದೆ ಬಟ್ಟೆಯಿಂದ ಉಜ್ಜಿ ದೂಳು ಮತ್ತು ಸಾಬೂನು ದ್ರವವನ್ನು ನಿವಾರಿಸಿ. ಇನ್ನೂ ಕೆಲವು ಕೊಳೆಗಳು ಹೊರಮೈ ಮೇಲೆ ಉಳಿದಲ್ಲಿ ಇದೇ ವಿಧಾನವನ್ನು ಮರುಕಳಿಸಿ.

**ಫ್ಯಾಬ್ರಿಕ್ ಅಪ್ಹೋಲೆಸ್ಟ್ರಿ (ಮುಂಭಾಗದ ಪ್ರಯಾಣಿಕರ ಸೀಟ್ ಹೊರತುಪಡಿಸಿ)**

ಸಡಿಲವಾದ ದೂಲನ್ನು ವ್ಯಾಕ್ಯೂಮ್ ಕ್ಲೀನರ್ನಿಂದ ನಿವಾರಿಸಿ. ಮೆದುವಾದ ಸಾಬೂನು ದ್ರವವನ್ನು ಬಳಸಿಕೊಂಡು, ಕೊಳೆಯಾದ ಏರಿಯಾಗಳನ್ನು ಸ್ವಚ್ಛ ಒದ್ದೆ ಬಟ್ಟೆಯಿಂದ ಉಜ್ಜಿ. ಸಾಬೂನನ್ನು ನಿವಾರಿಸಲು, ನೀರಿನಲ್ಲಿ ಒದ್ದೆ ಮಾಡಿದ ಬಟ್ಟೆಯಿಂದ ಏರಿಯಾಗಳನ್ನು ಉಜ್ಜಿ. ಕೊಳೆ ನಿವಾರಣೆಯಾಗುವವರೆಗೆ ಇದನ್ನು ಮರುಕಳಿಸಿ ಅಥವಾ ಕಠಿಣ ಕೊಳೆಗಳಿಗೆ ವಾಣಿಜ್ಯ ಫ್ಯಾಬ್ರಿಕ್ ಕ್ಲೀನರ್ಗಳನ್ನು ಬಳಸಿ. ನೀವು ಫ್ಯಾಬ್ರಿಕ್ ಕ್ಲೀನರ್ ಬಳಸಿದಲ್ಲಿ, ಜಾಗರೂಕವಾಗಿ ತಯಾರಕರ ಸೂಚನೆಗಳು ಮತ್ತು ಮುಂಜಾಗ್ರತೆಗಳನ್ನು ಅನುಸರಿಸಿ.

**⚠ ಜಾಗ್ರತೆ**

- **ದ್ರವ ಅಥವಾ ಅರೆಘನವನ್ನು ಮುಂಭಾಗದ ಪ್ರಯಾಣಿಕರ ಸೀಟಿನ ಮೇಲೆ ಚೆಲ್ಲಬೇಡಿ. ಮುಂಭಾಗದ ಪ್ರಯಾಣಿಕರ ಸೀಟಿನ ಮೇಲೆ ಚೆಲ್ಲಿದಲ್ಲಿ, ತಕ್ಷಣವೇ ಅದನ್ನು ಮೃದು ಬಟ್ಟೆಯಿಂದ ಒರೆಸಿ ಒಣಗಿಸಿ. ಸೆನ್ಸರ್ಗೆ ದ್ರವವು ಸಂಪರ್ಕಿಸಿದಲ್ಲಿ ಸೀಟ್ ಬೆಲ್ಟ್ ರಿಮೈಂಡರ್ ಸೆನ್ಸರ್ ಮೇಲೆ ಪರಿಣಾಮ ಬೀರಬಹುದು.**
- **ತೀಕ್ಷ್ಣವಾದ ಅಥವಾ ಭಾರವಾದ ವಸ್ತುವನ್ನು ಪ್ರಯಾಣಿಕರ ಸೀಟಿನ ಮೇಲೆ ಇಡಬೇಡಿ. ಅದು ಸೀಟು ಅಪ್ಹೋಲೆಸ್ಟ್ರಿ ಮೂಲಕವಾಗಿ ತೂರಿಕೊಳ್ಳಬಹುದು ಮತ್ತು ಸೆನ್ಸರ್ಗೆ ಹಾನಿಯುಂಟು ಮಾಡಬಹುದು.**

**ಫ್ಯಾಬ್ರಿಕ್ ಅಪ್ಹೋಲೆಸ್ಟ್ರಿ (ಮುಂಭಾಗದ ಪ್ರಯಾಣಿಕರ ಸೀಟಿಗೆ)**

ಸ್ವಚ್ಛಗೊಳಿಸಲು ದ್ರವವನ್ನು ಬಳಸಿದಲ್ಲಿ ಅದು ಫ್ಯಾಬ್ರಿಕ್ ಮೂಲಕ ಒಳತೂರಿ ಸೀಟ್ ಸೆನ್ಸರ್ಗೆ ಹಾನಿ ಮಾಡಬಹುದು.

**ಲೆದರ್ ಅಪ್ಹೋಲೆಸ್ಟ್ರಿ**

ಸಡಿಲವಾದ ದೂಳನ್ನು ವ್ಯಾಕ್ಯೂಮ್ ಕ್ಲೀನರ್ನಿಂದ ಕಳಚಬೇಕು. ಮೆದುವಾದ ಸಾಬೂನು ಅಥವಾ ಸ್ಯಾಡಲ್ ಸಾಬೂನು ದ್ರವವನ್ನು ಬಳಸಿಕೊಂಡು ದೂಳದನ್ನು ಸ್ವಚ್ಛ ಒದ್ದೆ ಮಾಡಿದ ಮೃದುಬಟ್ಟೆಯಿಂದ ಒರೆಸಿ. ಸಾಬೂನನ್ನು ನಿವಾರಿಸಲು, ಏರಿಯಾಗಳನ್ನು ಮೃದುವಾದ ನೀರಿನಲ್ಲಿ ಮುಳುಗಿಸಿದ ಬಟ್ಟೆಯಿಂದ ಒರೆಸಿ. ಮೃದುವಾದ ಒಣಗಿದ ಬಟ್ಟೆಯಿಂದ ಏರಿಯಾವನ್ನು ಒಣಗಿಸಲು ಒರೆಸಿ. ದೂಳು ಅಥವಾ ಕೊಳೆ ನಿವಾರಣೆಯಾಗುವವರೆಗೂ ಇದನ್ನು ಮರುಕಳಿಸಿ ಅಥವಾ ಕಠಿಣ ಕೊಳೆಗಳು ಅಥವಾ ದೂಳು ನಿವಾರಿಸಲು ವಾಣಿಜ್ಯ ಲೆದರ್ ಕ್ಲೀರ್ ಅನ್ನು ಬಳಸಿ. ನೀವು ಲೆದರ್ ಕ್ಲೀನರ್ ಬಳಸುವುದಾದಲ್ಲಿ, ಜಾಗರೂಕವಾಗಿ ತಯಾರಕರ ಸೂಚನೆಗಳು ಮತ್ತು ಮುಂಜಾಗ್ರತೆಗಳನ್ನು ಅನುಸರಿಸಿ. ದ್ರವರೂಪದ ಕ್ಲೀನರ್ಗಳು ಅಥವಾ ಉಜ್ಜಕಗಳ ಕ್ಲೀನರ್ಗಳನ್ನು ಬಳಸಬೇಡಿ.

*ಗಮನಿಸಿ :*

- ಲೆದರ್ ಅಪ್ಹೊಲೆಸ್ಟ್ರಿಯನ್ನು ಸುಂದರವಾಗಿ ಕಾಣಿಸುವಂತೆ ಇಡಲು, ಅದನ್ನು ಕನಿಷ್ಠ ವರ್ಷಕ್ಕೆ ಎರಡು ಬಾರಿ ಸ್ವಚ್ಛಗೊಳಿಸಬೇಕು.
- ಲೆದರ್ ಅಪ್ಹೊಲೆಸ್ಟ್ರಿ ತೇವವಾದಲ್ಲಿ, ತಕ್ಷಣವೇ ಅದನ್ನು ಟಿಶ್ಯೂ ಪೇಪರ್ ಅಥವಾ ಮೃದು ಬಟ್ಟೆಯಲ್ಲಿ ಒರೆಸಿ ಒಣಗಿಸಿ. ನೀರು ಲೆದರ್‌ನ್ನು ಕಠಿಣಗೊಳಿಸಬಹುದು ಮತ್ತು ಅದನ್ನು ಒರೆಸದೆ ಇದ್ದಲ್ಲಿ ಮುರುಟಿಕೊಳ್ಳಬಹುದು.
- ಬೇಸಗೆಯ ದಿನಗಳಲ್ಲಿ ಪಾರ್ಕ್ ಮಾಡುವಾಗ ನೆರಳಿರುವ ಜಾಗಗಳನ್ನು ಆರಿಸಿ ಅಥವಾ ಸೂರ್ಯನ ಬೆಳಕು ಬೀಳದಂತೆ ಜಾಗರೂಕತೆವಹಿಸಿ. ಲೆದರ್ ಅಪ್ಹೊಲೆಸ್ಟ್ರಿ ಮೇಲೆ ಧೀರ್ಘ ಸಮಯ ನೇರವಾದ ಸೂರ್ಯನ ಬೆಳಕು ಬಿದ್ದಲ್ಲಿ, ಅದು ಬಣ್ಣ ಮಾಸಬಹುದು ಮತ್ತು ಮುರುಟಿಕೊಳ್ಳಬಹುದು.

ಪ್ರಾಕೃತಿಕ ವಸ್ತುಗಳ ವಿಚಾರದಲ್ಲಿ ಸಾಮಾನ್ಯವಾಗಿರುವಂತೆ, ಲೆದರ್ ಮೂಲತಃ ಧಾನ್ಯರೂಪದಲ್ಲಿ ಅನಿಯಮಿತವಾಗಿರುತ್ತದೆ ಮತ್ತು ಚರ್ಮವು ತನ್ನ ನೈಸರ್ಗಿಕ ಸ್ಥಿತಿಯಲ್ಲಿ ಕಲೆಗಳನ್ನು ಹೊಂದಿರುತ್ತದೆ. ಆದರೆ ಅವುಗಳು ಲೆದರ್‌ನ ಕಾರ್ಯ ನಿರ್ವಹಣೆಯಲ್ಲಿ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲ.

### ಸೀಟ್ ಬೆಲ್ಟ್ ಗಳು

ಸ್ವಚ್ಛ ಸೀಟ್ ಬೆಲ್ಟ್ ಗಳು ಮೃದುವಾದ ಸಾಬೂನು ಮತ್ತು ನೀರು. ಬ್ಲೀಚ್ ಅಥವಾ ಡೈ ಯನ್ನು ಬೆಲ್ಟ್ ಗಳ ಮೇಲೆ ಬಳಸಬೇಡಿ. ಅವುಗಳು ಬೆಲ್ಟ್ ಗಳಲ್ಲಿ ಫ್ಯಾಬ್ರಿಕ್ ಅನ್ನು ದುರ್ಬಲಗೊಳಿಸಬಹುದು.

### ವಿನಿಲ್ ಫ್ಲೋರ್ ಮ್ಯಾಟ್ಸ್

ಸಾಮಾನ್ಯ ದೂಳನ್ನು ನೀರು ಅಥವಾ ಮೃದು ಸೋಪ್ ನಿಂದ ವಿನಿಲ್ ಮೇಲಿನಿಂದ ನಿವಾರಿಸಬಹುದು. ದೂಳು ಸಡಿಲಗೊಳಿಸಲು ನೆರವಾಗಲು ಬ್ರಷ್ ಬಳಸಿ. ದೂಳು ಸಡಿಲಗೊಂಡ ಮೇಲೆ ಮ್ಯಾಟ್ ಅನ್ನು ನೀಟಾಗಿ ನೀರಿನಿಂದ ತೊಳೆಯಿರಿ ಮತ್ತು ಅದನ್ನು ನೆರಳಲ್ಲಿ ಒಣಗಿಸಿ.

### ಕಾರ್ಪೆಟ್ ಗಳು

ದೂಳು ಮತ್ತು ಮಣ್ಣನ್ನು ಸಾಧ್ಯವಾದಷ್ಟು ವ್ಯಾಕ್ಯೂಮ್ ಕ್ಲೀನರ್ ಮೂಲಕ ನಿವಾರಿಸಿ. ಮೃದು ಸಾಬೂನು ದ್ರವ ಬಳಸಿ ಕಲೆ ಇರುವ ಜಾಗಗಳನ್ನು ಸ್ವಚ್ಛ ತೇವ ಬಟ್ಟೆಯಿಂದ ಉಜ್ಜಿ. ಸಾಬೂನು ನಿವಾರಿಸಲು ಜಾಗವನ್ನು ಮತ್ತೆ ನೀರಿನಲ್ಲಿ ತೋಯಿಸಿದ ಬಟ್ಟೆಯಲ್ಲಿ ಉಜ್ಜಿ. ಕಲೆಯನ್ನು ನಿವಾರಿಸುವವರೆಗೂ ಇದನ್ನು ಪುನರಾವರ್ತಿಸಿ ಅಥವಾ ಕಮರ್ಶಿಯಲ್ ಕಾರ್ಪೆಟ್ ಕ್ಲೀನರ್ ಅನ್ನು ಕಠಿಣ ಕಲೆಗಳಿಗೆ ಬಳಸಿ.  ನೀವು ಕಾರ್ಪೆಟ್ ಕ್ಲೀನರ್ ಬಳಸುವುದಾದಲ್ಲಿ, ಜಾಗರೂಕವಾಗಿ ತಯಾರಕರ ಸೂಚನೆಗಳನ್ನು ಮತ್ತು ಮುಂಜಾಗ್ರತೆಗಳನ್ನು ಪಾಲಿಸಿ.

### ಇನ್ ಸ್ಟ್ರುಮೆಂಟ್ ಪ್ಯಾನಲ್ ಮತ್ತು ಕನ್ಸೋಲ್

ಸಡಿಲವಾದ ದೂಳನ್ನು ವ್ಯಾಕ್ಯೂಮ್ ಕ್ಲೀನರ್ ನಲ್ಲಿ ನಿವಾರಿಸಿ. ಗಟ್ಟಿಯಾಗಿ ತಿರುಚಿ ನೀರು ತೆಗೆದ ಸ್ವಚ್ಛ ಒದ್ದೆ ಬಟ್ಟೆಯಿಂದ ನಿಧಾನವಾಗಿ ದೂಳನ್ನು ತೆಗೆಯಿರಿ. ದೂಳು ನಿವಾರಣೆಯಾಗುವವರೆಗೂ ಇದನ್ನು ಪುನರಾವರ್ತಿಸಿ.

**_ಸೂಚನೆ_**

**ಇಲೆಕ್ಟ್ರಿಕಲ್ ಭಾಗಗಳಾದ ಸ್ವಿಚ್ ಗಳನ್ನು ಒರೆಸಲು ಸಿಲಿಕಾನ್ ಇರುವ ರಾಸಾಯನಿಕ ಉತ್ಪನ್ನಗಳನ್ನು ಬಳಸಬೇಡಿ. ಇವು ಭಾಗಗಳಿಗೆ ಹಾನಿಯುಂಟು ಮಾಡಲಿವೆ.**

## ಹೊರಾಂಗಣ ಸ್ವಚ್ಛ ಮಾಡುವುದು

**_ಸೂಚನೆ_**

**ನಿಮ್ಮ ವಾಹನವನ್ನು ದೂಳಿನಿಂದ ಸ್ವತಂತ್ರವಾಗಿ ಸ್ವಚ್ಛವಾಗಿ ಇಡುವುದು ಅಗತ್ಯ. ನಿಮ್ಮ ವಾಹನವನ್ನು ಸ್ವಚ್ಛವಾಗಿಡಲು ವಿಫಲವಾದಲ್ಲಿ ಪೈಂಟ್ ಮಾಸಿ ಹೋಗಬಹುದು ಅಥವಾ ವಾಹನದ ಬಾಡಿಯ ವಿವಿಧ ಭಾಗಗಳಲ್ಲಿ ತುಕ್ಕು ಹಿಡಿಯಬಹುದು.**

## ತೊಳೆಯುವುದು

**ಉದಾಹರಣೆ**



82DY09

**⚠ ಎಚ್ಚರಿಕೆ**

- **ಇಂಜಿನ್ ಚಾಲನೆಯಲ್ಲಿದ್ದಾಗ ನಿಮ್ಮ ವಾಹನವನ್ನು ತೊಳೆಯಲು ಮತ್ತು ವ್ಯಾಕ್ಸ್ ಮಾಡಲು ಯಾವತ್ತೂ ಪ್ರಯತ್ನಿಸಬೇಡಿ.**
- **ಬಾಡಿ ಮತ್ತು ಫೆಂಡರ್ ಅಡಿಯಲ್ಲಿ ಸ್ವಚ್ಛ ಮಾಡುವಾಗ, ತೀಕ್ಷ್ಣ ತುದಿಯ ಭಾಗಗಳು ಇರಬಹುದು, ನೀವು ಗ್ಲವ್ ಗಳನ್ನು ಧರಿಸಬೇಕು ಮತ್ತು ಕೈಯನ್ನು ಮತ್ತು ತೋಳುಗಳು ಕತ್ತರಿಸಿ ಹೋಗದಂತೆ ರಕ್ಷಿಸಲು ದೀರ್ಘ ಸ್ಲೀವ್ ಇರುವ ಶರ್ಟ್ ಗಳನ್ನು ಧರಿಸಬೇಕು.**
- **ನಿಮ್ಮ ವಾಹನವನ್ನು ತೊಳೆದ ಮೇಲೆ, ಚಾಲನೆಗೆ ಮೊದಲು ಜಾಗರೂಕವಾಗಿ ಬ್ರೇಕ್ ಗಳನ್ನು ಪರೀಕ್ಷಿಸಿ ಅವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಾತರಿಪಡಿಸಿ.**

ವಾಹನವನ್ನು ತೊಳೆಯುವಾಗ,ನೇರವಾಗಿ ಸೂರ್ಯನ ಬೆಳಕು ಇಲ್ಲದೆ ಇದ್ದಲ್ಲಿ ಪಾರ್ಕ್ ಮಾಡಿ ಮತ್ತು ಕೆಳಗಿನ ಸೂಚನೆಗಳನ್ನು ಪಾಲಿಸಿ:

1) ಬಾಡಿಯ ಅಡಿಯಲ್ಲಿ ಫ್ಲಷ್ ಮಾಡಿ ಮತ್ತು ಪ್ರೆಶರೈಸ್ಡ್ ನೀರು ಜೊತೆಗೆ ವೀಲ್ ಹೌಸಿಂಗ್ ಗಳ ಮಣ್ಣು ಮತ್ತು ಅವಶೇಷಗಳನ್ನು ನಿವಾರಿಸಿ. ಸಾಕಷ್ಟು ನೀರು ಬಳಸಿ.

***ಸೂಚನೆ***

**ವಾಹನವನ್ನು ತೊಳೆಯುವಾಗ:**

- **ಪ್ಲಾಸ್ಟಿಕ್ ಭಾಗಗಳ ಮೇಲ್ ಸ್ಟೀಮ್ ಅಥವಾ 80° ಸೆಲ್ಸಿಯಸ್ (176° ಫ್ಯಾರನ್ಹೀಟ್) ಗಿಂತ ಹೆಚ್ಚಿನ ಬಿಸಿ ನೀರನ್ನು ತಪ್ಪಿಸಿ.**
- **ಇಂಜಿನ್ ಭಾಗಗಳಿಗೆ ಹಾನಿ ಮಾಡುವುದನ್ನು ತಪ್ಪಿಸಲು ಪ್ರೆಶರೈಸ್ಡ್ ನೀರನ್ನು ಇಂಜಿನ್ ಭಾಗದಲ್ಲಿ ಬಳಸಬೇಡಿ.**

2) ದೂಳನ್ನು ಸಡಿಲಗೊಳಿಸಲು ಬಾಡಿಯನ್ನು ತೊಳೆಯಿರಿ. ದೂಳು ಮತ್ತು ಕೊಳೆಯನ್ನು ಬಾಡಿ ಹೊರಾಂಗಣಕ್ಕೆ ನೀರು ಬಿಟ್ಟು ನಿವಾರಿಸಿ. ನೀವು ಮೃದುವಾದ ಸ್ಪಾಂಜ್ ಅಥವಾ ಬ್ರಷ್ ಬಳಸಬಹುದು. ಪೈಂಟ್ ಅಥವಾ ಪ್ಲಾಸ್ಟಿಕ್ ಗೆ ಗೀರು ಬೀಳುವ ಕಠಿಣ ವಸ್ತುಗಳನ್ನು ಬಳಸಬೇಡಿ. ಹೆಡ್ ಲೈಟ್ ಕವರ್ ಗಳು ಅಥವಾ ಲೆನ್ಸ್ ಗಳನ್ನು ಬಹುತೇಕ ಪ್ಲಾಸ್ಟಿಕ್ ನಲ್ಲಿ ಮಾಡಲಾಗುತ್ತದೆ ಎನ್ನುವುದನ್ನು ನೆನಪಿಟ್ಟುಕೊಳ್ಳಿ.

***ಸೂಚನೆ***

**ಪೈಂಟ್ ಮತ್ತು ಪ್ಲಾಸ್ಟಿಕ್ ಹೊರಮೈಗೆ ಹಾನಿಯನ್ನು ತಪ್ಪಿಸಲು ಸಾಕಷ್ಟು ನೀರಿಲ್ಲದೆ ದೂಳನ್ನು ಕೊಡವಬೇಡಿ. ಮೇಲಿನ ವಿಧಾನ ಅನುಸರಿಸುವ ಬಗ್ಗೆ ಖಾತರಿ ಪಡಿಸಿ.**

3) ಸಂಪೂರ್ಣ ಹೊರಾಂಗಣವನ್ನು ಮೃದುವಾದ ಡಿಟರ್ಜೆಂಟ್ ನಿಂದ ಅಥವಾ ಕಾರ್ ವಾಶ್ ಸೋಪ್ ಬಳಸಿ ಸ್ಪಾಂಜ್ ಅಥವಾ ಮೃದು ಬಟ್ಟೆಯಿಂದ ತೊಳೆಯಿರಿ. ಸ್ಪಾಂಜ್ ಅಥವಾ ಬಟ್ಟೆಯನ್ನು ಕಾಲ ಕಾಲಕ್ಕೆ ಸೋಪ್ ದ್ರವದಲ್ಲಿ ತೋಯಿಸಬೇಕು.

***ಸೂಚನೆ***

**ಕಮರ್ಶಿಯಲ್ ಕಾರ್ ವಾಷ್ ಉತ್ಪನ್ನವನ್ನು ಬಳಸಿದಾಗ, ತಯಾರಕರು ಸೂಚಿಸಿದ ಜಾಗ್ರತೆಯನ್ನು ಗಮನಿಸಿ. ಕಠಿಣ ಮನೆಯಲ್ಲಿ ಬಳಸುವ ಡಿಟರ್ಜೆಂಟ್ ಗಳು ಅಥವಾ ಸೋಪ್ ಗಳನ್ನು ಯಾವತ್ತೂ ಬಳಸಬೇಡಿ.**

4) ದೂಳನ್ನು ಸಂಪೂರ್ಣವಾಗಿ ನಿವಾರಿಸಿದ ಮೇಲೆ, ನೀರು ಹರಿಸಿ ಡಿಟರ್ಜೆಂಟ್ ತೊಳೆಯಿರಿ.

5) ತೊಳೆದ ಮೇಲೆ, ತೇವವಾದ ಚಾಮಾಯ್ಸ್ ಅಥವಾ ಬಟ್ಟೆಯಿಂದ ವಾಹನದ ಬಾಡಿಯನ್ನು ಒರೆಸಿ ಮತ್ತು ನೆರಳಿನಲ್ಲಿ ಒಣಗಲು ಬಿಡಿ.

6) ಜಾಗರೂಕವಾಗಿ ಪೈಂಟ್ ಮಾಡಿರುವ ಹೊರಮೈಗೆ ಆಗಿರುವ ಹಾನಿಯನ್ನು ಪರೀಕ್ಷಿಸಿ. ಏನಾದರೂ ಹಾನಿಯಾದಲ್ಲಿ, ಈ ಕೆಳಗಿನ ವಿಧಾನದಲ್ಲಿ ಹಾನಿಯನ್ನು ಸರಿಪಡಿಸಿ:

   1. ಎಲ್ಲಾ ಹಾನಿಗೊಳಗಾದ ಸ್ಥಳಗಳನ್ನು ಸ್ವಚ್ಛಮಾಡಿ ಮತ್ತು ಅವುಗಳನ್ನು ಒಣಗಲು ಬಿಡಿ.
   2. ಪೈಂಟ್ ಅನ್ನು ಒರೆಸಿ ಮತ್ತು ಹಾನಿಗೊಳಗಾದ ಭಾಗಗಳನ್ನು ಹಗುರವಾಗಿ ಸಣ್ಣ ಬ್ರಷ್ ಬಳಸಿ ಟಚ್ ಅಪ್ ಕೊಡಿ.
   3. ಪೈಂಟ್ ಪೂರ್ಣವಾಗಿ ಒಣಗಲು ಬಿಡಿ.

***ಸೂಚನೆ***

**ನೀವು ಆಟೋಮ್ಯಾಟಿಕ್ ಕಾರ್ ವಾಶ್ ಬಳಸುತ್ತಿದ್ದಲ್ಲಿ, ನಿಮ್ಮ ವಾಹನದ ಬಾಡಿ ಭಾಗಗಳಾದ ಸ್ಪಾಯ್ಲರ್ ಗಳು ಹಾನಿಯಾಗದೆ ಇರುವುದನ್ನು ಖಚಿತಪಡಿಸಿ. ನೀವು ಸಂಶಯದಲ್ಲಿದ್ದಲ್ಲಿ, ಕಾರ್ ವಾಶ್ ಆಪರೇಟರ್ ರನ್ನು ಸಲಹೆ ಕೇಳಿ.**

## ವಾಕ್ಸಿಂಗ್

**ಉದಾಹರಣೆ**



77PM09002

ವಾಹನವನ್ನು ತೊಳೆದ ಮೇಲೆ, ವ್ಯಾಕ್ಸಿಂಗ್ ಮತ್ತು ಪಾಲಿಶಿಂಗ್ ಮಾಡುವ ಮೂಲಕ ಪೈಂಟ್ ಅನ್ನು ಸುಂದರಗೊಳಿಸುವುದು ಮತ್ತು ರಕ್ಷಿಸುವುದನ್ನು ಶಿಫಾರಸು ಮಾಡಲಾಗಿದೆ.


- ಉತ್ತಮ ಗುಣಮಟ್ಟದ ವ್ಯಾಕ್ಸ್ ಗಳು ಮತ್ತು ಪಾಲಿಶ್ ಗಳನ್ನು ಮಾತ್ರ ಬಳಸಿ.
- ವ್ಯಾಕ್ಸ್ ಗಳನ್ನು ಮತ್ತು ಪಾಲಿಶ್ ಗಳನ್ನು ಬಳಸುವಾಗ, ತಯಾರಕರು ನಿರ್ದಿಷ್ಟಪಡಿಸಿದ ಮುಂಜಾಗ್ರತೆ ಗಮನಿಸಿ.

# ಸಾಮಾನ್ಯ ಮಾಹಿತಿ

ವಾಹನದ ಗುರುತು ........ 10-1
ಫಾಸ್ಟ್ಯಾಗ್ (ಅಳವಡಿಸಿದಲ್ಲಿ) ........ 10-2
ಸಿ.ಎನ್.ಜಿ. ಕಿಟ್ ನಂಬರ್ ಐಡೆಂಟಿಫಿಕೇಶನ್ (ಅಳವಡಿಸಿದಲ್ಲಿ) ........ 10-2
ಅಧಿಕ ಭದ್ರತೆಯ ನೋಂದಣಿ ಪ್ಲೇಟ್ (ಎಚ್ಎಸ್ಆರ್ಪಿ) (ಅಳವಡಿಸಿದಲ್ಲಿ) ........ 10-3

## ವಾಹನದ ಗುರುತಿಸುವಿಕೆ


### ಚಾಸಿ ಸೀರಿಯಲ್ ನಂಬರ್




77PH059

ಚಾಸಿ ಮತ್ತು/ಅಥವಾ ಇಂಜಿನ್ ಸೀರಿಯಲ್ ನಂಬರ್ ಗಳನ್ನು ವಾಹನವನ್ನು ನೋಂದಣಿ ಮಾಡಲು ಬಳಸಲಾಗುವುದು. ವಿಶೇಷ ಸರ್ವಿಸ್ ಮಾಹಿತಿಯನ್ನು ಆದೇಶಿಸುವಾಗ ಅಥವಾ ಉಲ್ಲೇಖಿಸುವಾಗ ಅವುಗಳನ್ನು ನಿಮ್ಮ ಡೀಲರ್ ಗೆ ನೆರವಾಗಲು ಬಳಸಬಹುದು. ನಿಮ್ಮ ಬಳಿ ಸಂದರ್ಭವಿದ್ದಾಗ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರನ್ನು ಸಂಪರ್ಕಿಸಿ, ನಿಮ್ಮ ವಾಹನವನ್ನು ಈ ಸಂಖ್ಯೆಯ ಜೊತೆಗೆ ಗುರುತಿಸಲಿ ನೆನಪಿಡಿ. ನಂಬರ್ ಓದಲು ಕಷ್ಟವಾದಲ್ಲಿ, ಅದನ್ನು ಗುರುತು ಪ್ಲೇಟ್ ಮೇಲೂ ನೀವು ಕಾಣಬಹುದು.

### ಇಂಜಿನ್ ಸೀರಿಯಲ್ ನಂಬರ್





54G082

ಇಂಜಿನ್ ಸೀರಿಯಲ್ ನಂಬರ್ ಅನ್ನು ಸಿಲಿಂಡರ್ ಬ್ಲಾಕ್ ಮೇಲೆ ಚಿತ್ರದಲ್ಲಿ ತೋರಿಸಿರುವಂತೆ ಸ್ಟಾಂಪ್ ಮಾಡಲಾಗಿದೆ.

## ಫಾಸ್ಟ್ಯಾಗ್ (ಅಳವಡಿಸಿದಲ್ಲಿ)

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದಂತೆ ಫಾಸ್ಟ್ಯಾಗ್ (1) ಪ್ರತೀ ವಾಹನಕ್ಕೂ ಕಡ್ಡಾಯವಾಗಿದ್ದು, ಇಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ ಗೆ ಬಳಸಲಾಗುತ್ತದೆ ಅಥವಾ ಭಾರತ ಸರ್ಕಾರ ವ್ಯಾಖ್ಯಾನಿಸಿದ ಇನ್ನೂ ಬೇರೆ ಕಾರಣಗಳಿಗೆ ಬಳಕೆಯಾಗುತ್ತದೆ.

ಫಾಸ್ಟ್ಯಾಗ್ ಗೆ ಏನಾದರೂ ಹಾನಿಯಾದಲ್ಲಿ ಅಥವಾ ಫ್ರಂಟ್ ವಿಂಡ್ ಸ್ಕ್ರೀನ್ ಬದಲಿಸಿದಲ್ಲಿ ದಯವಿಟ್ಟು ಸಮೀಪದ ಅಧಿಕೃತ ಮಾರುತಿ ಸುಜುಕಿ ಕಮರ್ಶಿಯಲ್ ಡೀಲರ್ ರನ್ನು ಸಂಪರ್ಕಿಸಿ.




66MM01001

### ವಾಹನದ ಒಳಗೆ ಕಂಡಿರುವಂತೆ

ಉದಾಹರಣೆ





64MM01002

*ಸೂಚನೆ:*
*ತೋರಿಸಿರುವ ಚಿತ್ರವು ಸೂಚನೆಯ ಉದ್ದೇಶವನ್ನಷ್ಟೇ ಹೊಂದಿದೆ. ವಾಹನದ ಮೇಲೆ ಮೌಂಟ್ ಆಗಿರುವ ವಾಸ್ತವಿಕ ಸಾಧನದ ಆಂತರಿಕ ರಚನೆ ಭಿನ್ನವಾಗಿರಬಹುದು.*

### ವಾಹನದ ಹೊರಗಿನಿಂದ ಕಂಡಂತೆ

ಉದಾಹರಣೆ





64MM01003

*ಸೂಚನೆ:*
*ತೋರಿಸಿರುವ ಚಿತ್ರವು ಸೂಚನೆಯ ಉದ್ದೇಶವನ್ನಷ್ಟೇ ಹೊಂದಿದೆ. ವಾಹನದ ಮೇಲೆ ಮೌಂಟ್ ಆಗಿರುವ ವಾಸ್ತವಿಕ ಸಾಧನದ ಆಂತರಿಕ ರಚನೆ ಭಿನ್ನವಾಗಿರಬಹುದು.*

*ಸೂಚನೆ:*
- *ಟ್ಯಾಗ್ ಅನ್ನು ವಿಂಡ್ ಸ್ಕ್ರೀನ್ ನಿಂದ ಕಳಚುವ ಯಾವುದೇ ಪ್ರಯತ್ನವು ಟ್ಯಾಗ್ ಗೆ ಶಾಶ್ವತವಾಗಿ ಹಾನಿ ಮಾಡಬಹುದು.*
- *ಟ್ಯಾಗ್ ಮೌಂಟ್ ಆದಲ್ಲಿ ಟ್ಯಾಗ್ ಗೆ ಹಾನಿಯಾಗದಂತೆ ರಾಸಾಯನಿಕ ಕ್ಲೀನರ್ ಗಳನ್ನು ವಿಂಡ್ ಸ್ಕ್ರೀನ್ ಏರಿಯಾವನ್ನು ಸ್ವಚ್ಛಗೊಳಿಸಲು ಬಳಸಿ.*
- *ಯಾವುದೇ ತೀಕ್ಷ್ಣವಾದ ವಸ್ತುಗಳನ್ನು ಟ್ಯಾಗ್ ಮೇಲೆ ಬಳಸುವುದರಿಂದ ಟ್ಯಾಗ್ ಗೆ ಹಾನಿಯಾಗಬಹುದು.*

### ಸಿ.ಎನ್.ಜಿ. ಕಿಟ್ ನಂಬರ್ ಐಡೆಂಟಿಫಿಕೇಶನ್ (ಅಳವಡಿಸಿದಲ್ಲಿ)

ಉದಾಹರಣೆ




77PM10002

ಸಿ.ಎನ್.ಜಿ. ಸಿಲಿಂಡರ್ ಐಡೆಂಟಿಫಿಕೇಶನ್ ನಂಬರ್ ಮತ್ತು ಸಿ.ಎನ್.ಜಿ. ಕಿಟ್ ಇನ್ಸ್ಟಾಲೇಶನ್ ಡೇಟ್ ಈ ಕೆಳಗೆ ತೋರಿಸಿದಂತೆ ಕಾರ್ಗೋ ಬಾಡಿ ಬಲ ಬದಿಯಲ್ಲಿ ಇರುತ್ತದೆ.

## ಅಧಿಕ ಭದ್ರತಾ ನೋಂದಣಿ ಪ್ಲೇಟ್ (ಎಚ್‌ಎಸ್‌ಆರ್‌ಪಿ) (ಅಳವಡಿಸಿದಲ್ಲಿ)

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಪ್ರಕಾರ, ಪ್ರತೀ ಹೊಸ ವಾಹನದಲ್ಲಿ ಎಚ್‌ಎಸ್‌ಆರ್‌ಪಿ ಇರಬೇಕು.

ಎಚ್‌ಎಸ್‌ಆರ್‌ಪಿ ಹೊಂದಿರುತ್ತದೆ,

- ಫ್ರಂಟ್ ಮತ್ತು ರೇರ್ ಎಚ್‌ಎಸ್‌ಆರ್‌ಪಿ, ನಂಬರ್ ಪ್ಲೇಟ್ ಏರಿಯಾದಲ್ಲಿ ತಲಾ 2ಸ್ನಾಪ್ ಲಾಕ್ಗಳ ಜೊತೆ ಜೋಡಿಸಬೇಕಾಗುತ್ತದೆ.
- ಫ್ರಂಟ್ ವಿಂಡ್ಶೀಲ್ಡ್ ಮೇಲೆ ಮೂರನೇ ಲೈಸನ್ಸ್ ಪ್ಲೇಟ್

## ಮೂರನೇ ಲೈಸನ್ಸ್ ಪ್ಲೇಟ್

ಉದಾಹರಣೆ





64MM01005

(1) ಮೂರನೇ ಲೈಸನ್ಸ್ ಪ್ಲೇಟ್

## ಮೂರನೇ ಲೈಸನ್ಸ್ ಪ್ಲೇಟ್- ವಾಹನದ ಹೊರಗಿನಿಂದ ಕಾಣುವಂತೆ

ಉದಾಹರಣೆ




64MM01008


(a) ಎಚ್‌ಎಸ್‌ಆರ್‌ಪಿ ನೀಡುವ ಪ್ರಾಧಿಕಾರದ ಹೆಸರು
(b) ವಾಹನ ನೋಂದಣಿ ಸಂಖ್ಯೆ
(c) ವಿಶೇಷ ಲೇಸರ್ ಸಂಖ್ಯೆ - ಫ್ರಂಟ್ ಪ್ಲೇಟ್
(d) ವಿಶೇಷ ಲೇಸರ್ ಸಂಖ್ಯೆಂ ರೇರ್ ಪ್ಲೇಟ್
(e) ಮೊದಲನೇ ನೋಂದಣಿ ದಿನಾಂಕ (ದಿದಿ-ತಿತಿ-ವವವವ ಶೈಲಿ)

*ಸೂಚನೆ:*
*ಇಲ್ಲಿ ತೋರಿಸಲಾಗಿರುವ ಚಿತ್ರವನ್ನು ಪ್ರಾತಿನಿಧಿಕ ಉದ್ದೇಶದಿಂದ ಮಾತ್ರವೇ ನೀಡಲಾಗಿದೆ. ವಾಹನದ ಮೇಲೆ ಜೋಡಿಸಲಾಗಿರುವ ವಾಸ್ತವದ ಲೇಬಲ್ನ ಆಂತರಿಕ ರಚನೆಯು ಭಿನ್ನವಾಗಿರಬಹುದು.*

*ಸೂಚನೆ:*
- *ವಿಂಡ್ಸ್ಕ್ರೀನ್ನಿಂದ ಮೂರನೇ ಲೈಸೆನ್ಸ್ ಪ್ಲೇಟ್ ಅನ್ನು ಕಳಚುವ ಯಾವುದೇ ಪ್ರಯತ್ನವು ಲೇಬಲ್ಗೆ ಶಾಶ್ವತವಾದ ಹಾನಿಯನ್ನು ತರಬಹುದು.*
- *ಲೇಬಲ್ ಮೌಂಟ್ ಆಗಿರುವ ವಿಂಡ್ಸ್ಕ್ರೀನ್ ಏರಿಯಾದಲ್ಲಿ ಸ್ವಚ್ಛ ಮಾಡಲು ರಾಸಾಯನಿಕ ಸ್ವಚ್ಛಕಗಳನ್ನು ಬಳಸುವುದು ಅದಕ್ಕೆ ಹಾನಿಯನ್ನು ತರಬಹುದು.*
- *ಲೇಬಲ್ ಮೇಲೆ ಯಾವುದೇ ತೀಕ್ಷ್ಣವಾದ ವಸ್ತುವನ್ನು ಬಳಸುವುದು ಲೇಬಲ್ಗೆ ಹಾನಿ ತರಬಹುದು.*
- *ಮೂರನೇ ಲೈಸೆನ್ಸ್ ಪ್ಲೇಟ್ ಅನ್ನು ಬದಲಿಸಬೇಕಾದ ಸಂದರ್ಭ ಬಂದಲ್ಲಿ, ಅಂಗೀಕರಿಸುವ ಪ್ರಾಧಿಕಾರವನ್ನು ದಯವಿಟ್ಟು ಸಂಪರ್ಕಿಸಿ.*

## ಮೂರನೇ ಲೈಸೆನ್ಸ್ ಪ್ಲೇಟ್- ವಾಹನದ ಒಳಗಿನಿಂದ ಕಾಣುವಂತೆ

ಉದಾಹರಣೆ




64MM01009

*ಸೂಚನೆ:*
*ಚಿತ್ರವನ್ನು ಪ್ರಾತಿನಿಧಿಕ ಉದ್ದೇಶದಿಂದ ಮಾತ್ರವೇ ನೀಡಲಾಗಿದೆ.*

*ಸೂಚನೆ:*
*ಮೂರನೇ ಲೈಸೆನ್ಸ್ ಪ್ಲೇಟ್ (ಕಪ್ಪು) ಬಣ್ಣವನ್ನು ಎಚ್‌ಎಸ್‌ಆರ್‌ಪಿ ನಿಯಮಗಳಿಗೆ ತಕ್ಕಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವ್ಯಾಖ್ಯಾನದಂತೆ ನೀಡಲಾಗಿದೆ.*

# ನಿರ್ದಿಷ್ಟತೆಗಳು

*ಸೂಚನೆ:*
*ನಿರ್ದಿಷ್ಟತೆಗಳು ಹೆಚ್ಚು ಸೂಚನೆ ಇಲ್ಲದೆಯೇ ಬದಲಾಗಬಹುದು.*

ಪೆಟ್ರೋಲ್: ಪೆಟ್ರೋಲ್ ಇಂಜಿನ್ ಮಾಡೆಲ್
ಬೈ ಫ್ಯೂಯೆಲ್: ಬೈ ಫ್ಯೂಯೆಲ್ (ಪೆಟ್ರೋಲ್ + ಸಿ.ಎನ್.ಜಿ.) ಇಂಜಿನ್ ಮಾಡೆಲ್

ಡೀಸಲ್: ಡೀಸಲ್ ಇಂಜಿನ್ ಮಾಡೆಲ್

| **ಐಟಿಇಎಂ: ಆಯಾಮಗಳು** | **ಯುನಿಟ್: ಎಂಎಂ** | |
|---|---|---|
| ಒಟ್ಟಾರೆ ಉದ್ದ | | 3800 |
| ಒಟ್ಟಾರೆ ಅಗಲ | | 1562 |
| ಒಟ್ಟಾರೆ ಎತ್ತರ | | 1883 |
| ವೀಲ್ ಬೇಸ್ | | 2110 |
| ಟ್ರಾಕ್ | ಫ್ರಂಟ್ | 1345 |
| | ರೇರ್ | 1330 |

| **ಐಟಿಇಎಂ: ಮಾಸ್ (ತೂಕ)** | **ಯುನಿಟ್: ಕೇಜಿ** | |
|---|---|---|
| ಕ್ರಬ್ ಮಾಸ್ (ತೂಕ) | ಪೆಟ್ರೋಲ್ | 860 |
| | ಬೈ ಫ್ಯೂಯೆಲ್ | 975 |
| | ಡೀಸಲ್ | 860 |
| ಒಟ್ಟು ವಾಹನ ಮಾಸ್ (ತೂಕ) ರೇಟಿಂಗ್ | | 1600 |
| ಅವಕಾಶವಿರುವ ಗರಿಷ್ಠ ಆಕ್ಸಲ್ ತೂ | ಫ್ರಂಟ್ | 900 |
| | ರೇರ್ | 1020 |

| ಐಟಿಇಎಂ: ಇಂಜಿನ್ | ಡೀಸಲ್ | ಪೆಟ್ರೋಲ್ ಮತ್ತು ಬೈ ಫ್ಯೂಯೆಲ್ |
|---|---|---|
| ವಿಧ | E08A (DOHC) | G12B (DOHC) |
| ಸಿಲಿಂಡರ್ ಗಳ ನಂಬ್ರ | 2 | 4 |
| ಬೋರ್ | 77.0 mm | 71 mm |
| ಸ್ಟ್ರೋಕ್ | 85.1 mm | 75.5 mm |
| ಪಿಸ್ಟನ್ ಸ್ಥಳಾಂತರ | 793 $cm^3$ | 1196 cm3 |
| ಕಂಪ್ರೆಶನ್ ಅನುಪಾತ | 15.1 ± 0.4 : 1 | 9.9: 1 |

| ಐಟಿಇಎಂ: ಇಲೆಕ್ಟ್ರಿಕಲ್ | | |
|---|---|---|
| ಸ್ಪಾರ್ಕ್ ಪ್ಲಗ್ | ಪೆಟ್ರೋಲ್ | BOSCH-FR6DC |
| | ಬೈ ಫ್ಯೂಯೆಲ್ | |
| ಬ್ಯಾಟರಿ | | 12V 38B20R |
| ಫ್ಯೂಸ್ ಗಳು | | ನೋಡಿ “ತಪಾಸಣೆ ಮತ್ತು ನಿರ್ವಹಣೆ” ವಿಭಾಗ |

| ಐಟಿಇಎಂ: ಲೈಟ್ ಗಳು | | ವಾಟೇಜ್ | ಬಲ್ಬ್ ನಂಬ್ರ |
|---|---|---|---|
| ಹೆಡ್ ಲೈಟ್ | | 12V 60/55W | H4 |
| ಪೊಸಿಷನ್ ಲೈಟ್ | | 12V 5W | W5W |
| ಟರ್ನ್ ಸಿಗ್ನಲ್ ಲೈಟ್ | ಫ್ರಂಟ್ | 12V 21W | PY21W |
| | ರೇರ್ | 12V 21W | P21W |
| ಬ್ರೇಕ್/ ಟೈಲ್ ಲೈಟ್ | | 12V 21/5W | P21/5W |
| ರಿವರ್ಸಿಂಗ್ ಲೈಟ್ | | 12V 21W | P21W |
| ಲೈಸೆನ್ಸ್ ಪ್ಲೇಟ್ ಲೈಟ್ | | 12V 5W | W5W |
| ಇಂಟೀರಿಯರ್ ಲೈಟ್ | | 12V 5W | C5W |

| ಐಟಿಇಎಂ: ವೀಲ್ ಗಳು ಮತ್ತು ಟೈರ್ ಗಳು | |
|---|---|
| ಟೈರ್ ಗಾತ್ರ, ಮುಂಭಾಗ, ಹಿಂಭಾಗ ಮತ್ತು ಬಿಡಿ | 155R13 LT 8PR 90/89Q* |
| ರಿಮ್ ಗಾತ್ರ | 13X4J |
| ಟೈರ್ ಒತ್ತಡಗಳು | ಸೂಚಿತ ಟೈರ್ ಪ್ರೆಶರ್ ಗೆ, ಟೈರ್ ಮಾಹಿತಿಯನ್ನುಚಾಲಕನ ಡೋರ್ ಲಾಕ್ ಪಿಲ್ಲರ್ ನಲ್ಲಿರುವ ಲೇಬಲ್ ನಲ್ಲಿ ನೋಡಿ. |

* ಸೂಚಿತ ಲೋಡ್ ಇಂಡೆಕ್ಸ್ ರೇಟ್ ಮತ್ತು ವೇಗದ ಚಿಹ್ನೆಯಲ್ಲಿ ನೀವು ಟೈರ್ ಅನ್ನು ಸಿದ್ಧಪಡಿಸಲು ಸಾಧ್ಯವಾಗದೆ ಇದ್ದಲ್ಲಿ, ಟೈರ್ ಅನ್ನು ಹೆಚ್ಚಿನ ಲೋಡ್ ಇಂಡೆಕ್ಸ್ ರೇಟ್ ಮತ್ತು ವೇಗದ ಚಿಹ್ನೆಗೆ ಸಿದ್ಧಪಡಿಸಿ.


| ಐಟಿಇಎಂ: ಶಿಫಾರಸು ಮಾಡಿದ ಫ್ಯೂಯೆಲ್/ ಲುಬ್ರಿಕಂಟ್ಸ್ ಮತ್ತು ಸಾಮರ್ಥ್ಯಗಳು (ಅಂದಾಜು) | | | | |
|---|---|---|---|---|
| ಫ್ಯೂಯೆಲ್ | ಪೆಟ್ರೋಲ್ | | "ಇಂಧನ ಶಿಫಾರಸುಗಳು" ವಿಭಾಗವನ್ನು ನೋಡಿ | 30 ಲೀಟರ್ # |
| | ಬೈ ಫ್ಯೂಯೆಲ್ | ಪೆಟ್ರೋಲ್ | | 5 ಲೀಟರ್ # |
| | | ಸಿ.ಎನ್.ಜಿ | | 35 ಲೀಟರ್ × 2 tanks# |
| | ಡೀಸಲ್ | | | 30 ಲೀಟರ್# |
| ಇಂಜಿನ್ ಆಯಿಲ್ | ಪೆಟ್ರೋಲ್ | | ವರ್ಗೀಕರಣ : SG+, SH, SJ, SL, SM or SN<br>ವಿಸ್ಕಾಸಿಟಿ: SAE 5W-30 | 5.2 ಲೀಟರ್ (ಆಯಿಲ್ ಫಿಲ್ಟರ್‌ನಿಂದ ಬದಲಿಸಿ) |
| | ಬೈ ಫ್ಯೂಯೆಲ್ | | | |
| | ಡೀಸಲ್ | | ಸಿಂಥೆಟಿಕ್ ಆಯಿಲ್, ಗುಣಮಟ್ಟ: ACEA A5/B5<br>ವಿಸ್ಕಾಸಿಟಿ: SAE 5W-30 | 3.4 ಲೀಟರ್ (ಆಯಿಲ್ ಫಿಲ್ಟರ್ ಜತೆ ಬದಲಿ) |
| ಇಂಜಿನ್ ಕೂಲಂಟ್ | | | ನೋಡಿ "ತಪಾಸಣೆ ಮತ್ತು ನಿರ್ವಹಣೆ" ವಿಭಾಗ | 3.5 ಲೀಟರ್ (ರಿಸರ್ವಾಯರ್ ಟ್ಯಾಂಕ್ ಸೇರಿಸಿ) |
| ಮ್ಯಾನುವಲ್ ಟ್ರಾನ್ಸ್ ಮಿಶನ್ ಆಯಿಲ್ | ಪೆಟ್ರೋಲ್ | | "ಎಂಜಿಜಿಓ 75W-80" | 1.4 ಲೀಟರ್ |
| | ಡೀಸಲ್ | | | 1.3 ಲೀಟರ್ |
| ರೇರ್ ಡಿಫರೆನ್ಷಿಯಲ್ ಆಯಿಲ್ | | | "ಟೋಟಲ್ ಫಿನಾಲ್ಫ್ ಟ್ರಾನ್ಸೆಲ್ಫ್ ಎಲ್ ಎಲ್ 85W-140" | 1.6 ಲೀಟರ್ |
| ಬ್ರೇಕ್ ಫ್ಲೂಯಿಡ್ | | | ಮಾರುತಿ ಮಾನ್ಯತೆ ಹೊಂದಿದ ಬ್ರೇಕ್ ಫ್ಲೂಯಿಡ್ | "ತಪಾಸಣೆ ಮತ್ತು ನಿರ್ವಹಣೆ" ವಿಭಾಗದ ಸೂಚನೆಗಳಿಗೆ ಅನುಗುಣವಾಗಿ ಸೂಕ್ತ ಆಯಿಲ್ ಮಟ್ಟವನ್ನು ಮರಳಿ ತುಂಬಿ. |

# ಫ್ಯೂಯೆಲ್ ಟ್ಯಾಂಕ್ ಸಾಮರ್ಥ್ಯವು ನೀವು ತುಂಬಲು ಶಿಫಾರಸು ಮಾಡಿರುವ ಪ್ರಮಾಣದ ಫ್ಯೂಯೆಲ್‌ಗಿಂತ ಸ್ವಲ್ಪವೇ ಹೆಚ್ಚಾಗಿರುತ್ತದೆ. ಹೆಚ್ಚುವರಿ ಪ್ರಮಾಣದ ಜಾಗವನ್ನು ಸುರಕ್ಷೆ ಮತ್ತು ವೈಜ್ಞಾನಿಕ ಕಾರಣಗಳಿಂದ ಒದಗಿಸಲಾಗಿದೆ.

# ಬಾಡಿ ಫ್ಯಾಬ್ರಿಕೇಶನ್ಗೆ ಸೂಚನೆ (ಚಾಸಿ ವೇರಿಯಂಟ್ಗೆ) (ಪೆಟ್ರೋಲ್ ಇಂಜಿನ್ ಮಾಡೆಲ್ಗೆ)

ಕ್ಯಾಬ್-ಚಾಸಿ ವಾಹನದ ಮೇಲೆ ಬಾಡಿ ಫ್ಯಾಬ್ರಿಕೇಶನ್ ಅನ್ನು ನಡೆಸುವ ಮೂಲಕ ಈ ಕೆಳಗಿನ ಶಿಫಾರಸುಗಳು ಮತ್ತು ಸೀಮಾ ಸ್ಥಿತಿಗಳನ್ನು ಅನುಸರಿಸುವುದನ್ನು ಖಚಿತಪಡಿಸಬೇಕು:

(ಅ) ಆಯಾಮಗಳು: ಲೋಡ್ ಬಾಡಿ/ ಅಪ್ಲಿಕೇಶನ್ ಅನ್ನು ತಯಾರಕರು ಸರಬರಾಜು ಮಾಡಿದ ಕ್ಯಾಬ್ ಚಾಸಿ ವಾಹನದ ಮೇಲೆ ನಿರ್ಮಾಣ ಮಾಡಬೇಕಾಗುತ್ತದೆ. ಅದನ್ನು ಕೆಳಗಿನ ವಿವರಣೆಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಕನಿಷ್ಠ ಅಥವಾ ಗರಿಷ್ಠ ವಿಸ್ತಾರದ ಒಳಗೆ ವಿನ್ಯಾಸಗೊಳಿಸಬೇಕು.




77PM12003

(ಬಿ) **ತೂಕ ಮತ್ತು ಅದರ ವಿತರಣೆ:** ಲೋಡ್ ಬಾಡಿ/ ಅಪ್ಲಿಕೇಶನ್ ಅನ್ನು ಸಂಪೂರ್ಣ ವಾಹನದ ಕನಿಷ್ಠ ಕರ್ಬ್ ತೂಕವನ್ನು 860 ಕೇಜಿ ಮತ್ತು ಗರಿಷ್ಠ ಕರ್ಬ್ ತೂಕವು 1140 ಕೇಜಿ ಎಂದು ಎಂದು ಗಮನದಲ್ಲಿರಿಸಿಕೊಂಡು ಫ್ಯಾಬ್ರಿಕೇಟ್ ಮಾಡಬೇಕು. ಫ್ರಂಟ್ ಆಕ್ಸಲ್ ಮತ್ತು ರೇರ್ ಆಕ್ಸಲ್ ಕರ್ಬ್ ತೂಕದ ಅನುಪಾತವು 1.46 ಅನ್ನು ಮೀರಬಾರದು.
ಬಾಡಿ ಬಿಲ್ಡರ್ ಪ್ಲೇಟ್ ಅನ್ನು ಬಾಡಿ ಬಿಲ್ಡರ್ ಅನ್ಲಾಡೆನ್ ತೂಕವನ್ನು ನಿರ್ದಿಷ್ಟಪಡಿಸುವ ಮೂಲಕ ಇಡಬೇಕು ಮತ್ತು ಪೇಲೋಡ್ ಅನ್ನು CMVR ನಿಯಮ 122 ಅಡಿಯಲ್ಲಿ ಅಗತ್ಯವಿರುವಂತೆ ಇರಿಸಬೇಕು.

(ಸಿ) **ಬಾಡಿ ಹೊರಭಾಗಗಳು:** ವಾಹನದ ಹೊರಗಿನ ಹೊರಮೈಯಲ್ಲಿ ದೇಹದ ಭಾಗಕ್ಕೆ ವ್ಯಕ್ತಿಯು ಢಿಕ್ಕಿ ಹೊಡೆದಾಗ ಅಥವಾ ಢಿಕ್ಕಿಯ ಸಂದರ್ಭದಲ್ಲಿ ಅದಕ್ಕೆ ಒರೆಸಿ ಹೋದಾಗ ಗಂಭೀರವಾದ ಗಾಯ ಅಥವಾ ಅಪಾಯವನ್ನು ತರಬಹುದಾದ ತೀಕ್ಷ್ಣವಾದ ತುದಿಗಳು ಇರದಂತೆ ಅಥವಾ ತೀಕ್ಷ್ಣವಾದ ಹೊರಬಂದಿರುವ ಭಾಗಗಳು ಇರದಂತೆ ಲೋಡ್ ಬಾಡಿ/ ಅಪ್ಲಿಕೇಶನ್ಗಳನ್ನು ಫ್ಯಾಬ್ರಿಕೇಟ್ ಮಾಡಬೇಕು. ಇದು ಸಂಪೂರ್ಣ ವಾಹನವು ಸ್ಥಿರವಾಗಿ ನಿಂತಾಗ ಅಥವಾ ಚಾಲನೆಯಲ್ಲಿರುವಾಗ ಎರಡೂ ಸಂದರ್ಭದಲ್ಲೂ ಅನ್ವಯವಾಗುತ್ತದೆ. ಹೊರಗಿನ ತುದಿಗಳು ಮತ್ತು ಹೊರ ಬಂದಿರುವ ಭಾಗಗಳ ಮೇಲೆ ಕನಿಷ್ಠ 2.5mm ತ್ರಿಜ್ಯದ ವಕ್ರಾಕೃತಿಯು ಇರುವಂತೆ ಗಮನಿಸುವುದನ್ನು ಶಿಫಾರಸು ಮಾಡಲಾಗಿದೆ. CMVR ನಿಯಮ 124(1)-11ದ ಅಡಿಯಲ್ಲಿ ವ್ಯಾಖ್ಯಾನಿಸಲಾಗಿರುವಂತೆ ಬಾಡಿಯು ಸೂಚಿತ ಅಗತ್ಯಗಳನ್ನು ತಲುಪಬೇಕಾಗುತ್ತದೆ.

(ಡಿ) **ಬೆಳಕಿನ ವ್ಯವಸ್ಥೆ ಮತ್ತು ಸಾಧನಗಳ ಸಿಗ್ನಲಿಂಗ್:** ಕ್ಯಾಬ್ ಚಾಸಿಯನ್ನು ಕ್ಯಾಬ್ನಲ್ಲಿ ನಿರ್ಮಿಸಲಾಗಿರುವ ಹೆಡ್ ಲ್ಯಾಂಪ್ ಅಸೆಂಬ್ಲಿ ಮತ್ತು ರೇರ್ ಕಾಂಬಿನೇಶನ್ ಲ್ಯಾಂಪ್ಗಳಿರುವ ತಾತ್ಕಾಲಿಕ ಪ್ಯಾನೆಲ್ ಮತ್ತು ನೋಂದಾಯಿತ ಪ್ಲೇಟ್ ಲ್ಯಾಂಪ್ಗಳ ಜೊತೆಗೆ ಸರಬರಾಜು ಮಾಡಲಾಗುತ್ತದೆ. ಹೆಡ್ ಲ್ಯಾಂಪ್ ಅಸೆಂಬ್ಲಿಯ ಸ್ಥಾನಕ್ಕೆ ಯಾವುದೇ ಮಾರ್ಪಾಡು ಮಾಡುವಂತಿಲ್ಲ. ರಿಯರ್ ಕಾಂಬಿನೇಷನ್ ಲ್ಯಾಂಪ್ ಗಳು, ನೋಂದಣಿ ಪ್ಲೇಟ್ ಲ್ಯಾಂಪ್ ಗಳು ಮತ್ತು ಪಾರ್ಕಿಂಗ್ ಸೆನ್ಸಾರ್ ಗಳನ್ನು (ಗ್ಲವ್ ಬಾಕ್ಸ್ ನಲ್ಲಿ ವಾಹನದೊಂದಿಗೆ ನೀಡಲಾಗಿರುತ್ತದೆ) ಕೆಳಗೆ ನೀಡಿರುವ ಉದಾಹರಣೆಯಲ್ಲಿ ಸೂಚಿಸಿರುವಂತೆ ಶಿಫಾರಸಿಗೆ ಅನುಗುಣವಾದ ಸ್ಥಿತಿಯಲ್ಲಿ ಲೋಡ್ ಬಾಡಿ/ಅಪ್ಲಿಕೇಶನ್ ಗೆ ಜೋಡಿಸಬೇಕು.



77PM12004

(ಇ) **ರಿಫ್ಲೆಕ್ಟಿವ್ ಟೇಪ್:** ರೇರ್ ವೆಹಿಕಲ್ ಮೇಲೆ ಬಾಡಿಯ ಅಗಲದ ಉದ್ದಕ್ಕೂ ಆವರಿಸುವಂತೆ ಕೆಂಪು ರಿಫ್ಲೆಕ್ಟಿವ್ ಟೇಪ್ (20mm ಅಗಲಕ್ಕೆ ಕಡಿಮೆ ಇಲ್ಲದಂತೆ) ಅನ್ನು ಬಾಡಿ ಬಿಲ್ಡರ್ ಅಂಟಿಸಬೇಕಾಗುತ್ತದೆ ಮತ್ತುCMVR ನಿಯಮ ಸಂಖ್ಯೆ 104 ಅಡಿಯಲ್ಲಿರುವ ಅಗತ್ಯಗಳಿಗೆ ಬದ್ಧವಾಗಿರಬೇಕಾಗುತ್ತದೆ.

(ಎಫ್) **ಫಾರ್ಮ್ 22A ಭಾಗ II:** CMVR ನಿಯಮ 47ರ ಅಡಿಯಲ್ಲಿ ಅಗತ್ಯವಿರುವಂತೆ ಬಾಡಿಬಿಲ್ಡರ್ ಫಾರ್ಮ್ 22A ಭಾಗ II ಅನ್ನು ಒದಗಿಸಬೇಕಾಗುತ್ತದೆ.

(ಜಿ) ಬಾಡಿ ಬಿಲ್ಡರ್ನಲ್ಲಿ ಎಲೆಕ್ಟ್ರಿಕಲ್ ವೈರಿಂಗ್, ಎಲೆಕ್ಟ್ರಿಕಲ್ ಸಲಕರಣೆ, ಬ್ರೇಕ್ ಸಂಪರ್ಕಗಳು, ಬ್ರೇಕ್ ಪೈಪಿಂಗ್, ಫ್ಯೂಯೆಲ್ ಸಂಪರ್ಕ, ಎಕ್ಸಾಸ್ಟ್ ವ್ಯವಸ್ಥೆ ಮತ್ತು ಚಾಸಿ ಭಾಗಗಳನ್ನು ಬಾಡಿ ಫ್ಯಾಬ್ರಿಕೇಶನ್ ಸಂದರ್ಭದಲ್ಲಿ ಬದಲಿಸಬಾರದು.

**ಹಕ್ಕುತ್ಯಾಗ:** ಮಾಲೀಕ/ಬಾಡಿ ತಯಾರಕರು ಅನ್ವಯಿಸುವ CMVR ಅಗತ್ಯಗಳಿಗೆ ಮತ್ತು ಸೂಪರ್ ಕ್ಯಾರಿ ಚಾಸಿ ವೇರಿಯಂಟ್ ಬಾಡಿ ಫ್ಯಾಬ್ರಿಕೇಶನ್ಗೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನ್ವಯಿಸುವ ರಾಷ್ಟ್ರೀಯ ಮೋಟಾರು ವಾಹನ ನಿಯಮಗಳಿಗೆ ಬದ್ಧರಾಗಿರಬೇಕಾಗುತ್ತದೆ.
ತಯಾರಕರ ಶಿಫಾರಸುಗಳಿಗೆ ಮತ್ತು ಸಂಬಂಧಿತ ನಿಯಂತ್ರಣಗಳಿಗೆ ವ್ಯತಿರಿಕ್ತವಾಗಿರುವ ಬಾಡಿ/ಅಪ್ಲಿಕೇಶನ್ನ ಫ್ಯಾಬ್ರಿಕೇಶನ್ ಕಾರಣದಿಂದ ಉಂಟಾಗಬಹುದಾದ ಅನ್ವಯಿಸುವ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ವಾಹನ ತಯಾರಕರು ಬಾಧ್ಯಸ್ಥರಲ್ಲ.


**⚠ ಜಾಗ್ರತೆ**

**ನಿಮ್ಮ ಸೂಪರ್ ಕ್ಯಾರಿ ವಾಹನವನ್ನು ಡೆಸ್ಕ್/ ಬಾಡಿ ಫ್ಯಾಬ್ರಿಕೇಶನ್ ಮಾಡದೆ ಇಟ್ಟುಕೊಳ್ಳಬೇಡಿ.**

**(ಡೀಸೆಲ್ ಇಂಜಿನ್ ಮಾಡೆಲ್ಗೆ)**

ಕ್ಯಾಬ್-ಚಾಸಿ ವಾಹನದ ಮೇಲೆ ಬಾಡಿ ಫ್ಯಾಬ್ರಿಕೇಶನ್ ಅನ್ನು ನಡೆಸುವ ಮೂಲಕ ಈ ಕೆಳಗಿನ ಶಿಫಾರಸುಗಳು ಮತ್ತು ಸೀಮಾ ಸ್ಥಿತಿಗಳನ್ನು ಅನುಸರಿಸುವುದನ್ನು ಖಚಿತಪಡಿಸಬೇಕು:

(ಅ) **ಆಯಾಮಗಳು**: ಲೋಡ್ ಬಾಡಿ/ ಅಪ್ಲಿಕೇಶನ್ ಅನ್ನು ತಯಾರಕರು ಸರಬರಾಜು ಮಾಡಿದ ಕ್ಯಾಬ್ ಚಾಸಿ ವಾಹನದ ಮೇಲೆ ನಿರ್ಮಾಣ ಮಾಡಬೇಕಾಗುತ್ತದೆ. ಅದನ್ನು ಕೆಳಗಿನ ವಿವರಣೆಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಕನಿಷ್ಠ ಅಥವಾ ಗರಿಷ್ಠ ವಿಸ್ತಾರದ ಒಳಗೆ ವಿನ್ಯಾಸಗೊಳಿಸಬೇಕು.





77PM12001

(ಬಿ) **ತೂಕ ಮತ್ತು ಅದರ ವಿತರಣೆ:** ಲೋಡ್ ಬಾಡಿ/ ಅಪ್ಲಿಕೇಶನ್ ಅನ್ನು ಸಂಪೂರ್ಣ ವಾಹನದ ಕನಿಷ್ಠ ಕರ್ಬ್ ತೂಕವನ್ನು 860 ಕೇಜಿ ಮತ್ತು ಗರಿಷ್ಠ ಕರ್ಬ್ ತೂಕವು 930 ಕೇಜಿ ಎಂದು ಎಂದು ಗಮನದಲ್ಲಿರಿಸಿಕೊಂಡು ಫ್ಯಾಬ್ರಿಕೇಟ್ ಮಾಡಬೇಕು. ಫ್ರಂಟ್ ಆಕ್ಸಲ್ ಮತ್ತು ರೇರ್ ಆಕ್ಸಲ್ ಕರ್ಬ್ ತೂಕದ ಅನುಪಾತವು 1.389 ಅನ್ನು ಮೀರಬಾರದು.
ಬಾಡಿ ಬಿಲ್ಡರ್ ಪ್ಲೇಟ್ ಅನ್ನು ಬಾಡಿ ಬಿಲ್ಡರ್ ಅನ್ಲಾಡೆನ್ ತೂಕವನ್ನು ನಿರ್ದಿಷ್ಟಪಡಿಸುವ ಮೂಲಕ ಇಡಬೇಕು ಮತ್ತು ಪೇಲೋಡ್ ಅನ್ನು CMVR ನಿಯಮ 122 ಅಡಿಯಲ್ಲಿ ಅಗತ್ಯವಿರುವಂತೆ ಇರಿಸಬೇಕು.

(ಸಿ) **ಬಾಡಿ ಹೊರಭಾಗಗಳು:** ವಾಹನದ ಹೊರಗಿನ ಹೊರಮೈಯಲ್ಲಿ ದೇಹದ ಭಾಗಕ್ಕೆ ವ್ಯಕ್ತಿಯು ಢಿಕ್ಕಿ ಹೊಡೆದಾಗ ಅಥವಾ ಢಿಕ್ಕಿಯ ಸಂದರ್ಭದಲ್ಲಿ ಅದಕ್ಕೆ ಒರೆಸಿ ಹೋದಾಗ ಗಂಭೀರವಾದ ಗಾಯ ಅಥವಾ ಅಪಾಯವನ್ನು ತರಬಹುದಾದ ತೀಕ್ಷ್ಣವಾದ ತುದಿಗಳು ಇರದಂತೆ ಅಥವಾ ತೀಕ್ಷ್ಣವಾದ ಹೊರಬಂದಿರುವ ಭಾಗಗಳು ಇರದಂತೆ ಲೋಡ್ ಬಾಡಿ/ ಅಪ್ಲಿಕೇಶನ್ಗಳನ್ನು ಫ್ಯಾಬ್ರಿಕೇಟ್ ಮಾಡಬೇಕು. ಇದು ಸಂಪೂರ್ಣ ವಾಹನವು ಸ್ಥಿರವಾಗಿ ನಿಂತಾಗ ಅಥವಾ ಚಾಲನೆಯಲ್ಲಿರುವಾಗ ಎರಡೂ ಸಂದರ್ಭದಲ್ಲೂ ಅನ್ವಯವಾಗುತ್ತದೆ. ಹೊರಗಿನ ತುದಿಗಳು ಮತ್ತು ಹೊರ ಬಂದಿರುವ ಭಾಗಗಳ ಮೇಲೆ ಕನಿಷ್ಠ 2.5mm ತ್ರಿಜ್ಯದ ವಕ್ರಾಕೃತಿಯು ಇರುವಂತೆ ಗಮನಿಸುವುದನ್ನು ಶಿಫಾರಸು ಮಾಡಲಾಗಿದೆ. CMVR ನಿಯಮ 124(1)-11ದ ಅಡಿಯಲ್ಲಿ ವ್ಯಾಖ್ಯಾನಿಸಲಾಗಿರುವಂತೆ ಬಾಡಿಯು ಸೂಚಿತ ಅಗತ್ಯಗಳನ್ನು ತಲುಪಬೇಕಾಗುತ್ತದೆ.

(ಡಿ) **ಬೆಳಕಿನ ವ್ಯವಸ್ಥೆ ಮತ್ತು ಸಾಧನಗಳ ಸಿಗ್ನಲಿಂಗ್:** ಕ್ಯಾಬ್ ಚಾಸಿಯನ್ನು ಕ್ಯಾಬ್ನಲ್ಲಿ ನಿರ್ಮಿಸಲಾಗಿರುವ ಹೆಡ್ ಲ್ಯಾಂಪ್ ಅಸೆಂಬ್ಲಿ ಮತ್ತು ರೇರ್ ಕಾಂಬಿನೇಶನ್ ಲ್ಯಾಂಪ್ಗಳಿರುವ ತಾತ್ಕಾಲಿಕ ಪ್ಯಾನೆಲ್ ಮತ್ತು ನೋಂದಾಯಿತ ಪ್ಲೇಟ್ ಲ್ಯಾಂಪ್ಗಳ ಜೊತೆಗೆ ಸರಬರಾಜು ಮಾಡಲಾಗುತ್ತದೆ. ಹೆಡ್ ಲ್ಯಾಂಪ್ ಅಸೆಂಬ್ಲಿಯ ಸ್ಥಾನಕ್ಕೆ ಯಾವುದೇ ಮಾರ್ಪಾಡು ಮಾಡುವಂತಿಲ್ಲ. ರೇರ್ ಕಾಂಬಿನೇಶನ್ ಲ್ಯಾಂಪ್ಗಳು ಮತ್ತು ನೋಂದಾಯಿತ ಪ್ಲೇಟ್ ಲ್ಯಾಂಪ್ಗಳನ್ನು ಲೋಡ್ಬಾಡೊ/ ಅಪ್ಲಿಕೇಶನ್ ಮೇಲೆ ಶಿಫಾರಸು ಮಾಡಿರುವ ಸ್ಥಾನದಲ್ಲಿ (ಎತ್ತರ ಮತ್ತು ಅಗಲ) ಕೆಳಗಿನ ವಿವರಣೆಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಜೋಡಿಸಬೇಕಾಗುತ್ತದೆ.




77PM12002

(ಇ) **ರಿಫ್ಲೆಕ್ಟಿವ್ ಟೇಪ್:** ರೇರ್ ವೆಹಿಕಲ್ ಮೇಲೆ ಬಾಡಿಯ ಅಗಲದ ಉದ್ದಕ್ಕೂ ಆವರಿಸುವಂತೆ ಕೆಂಪು ರಿಫ್ಲೆಕ್ಟಿವ್ ಟೇಪ್ (20mm ಅಗಲಕ್ಕೆ ಕಡಿಮೆ ಇಲ್ಲದಂತೆ) ಅನ್ನು ಬಾಡಿ ಬಿಲ್ಡರ್ ಅಂಟಿಸಬೇಕಾಗುತ್ತದೆ ಮತ್ತುCMVR ನಿಯಮ ಸಂಖ್ಯೆ 104 ಅಡಿಯಲ್ಲಿರುವ ಅಗತ್ಯಗಳಿಗೆ ಬದ್ಧವಾಗಿರಬೇಕಾಗುತ್ತದೆ.

(ಎಫ್) **ಫಾರ್ಮ್ 22A ಭಾಗ II:** CMVR ನಿಯಮ 47ರ ಅಡಿಯಲ್ಲಿ ಅಗತ್ಯವಿರುವಂತೆ ಬಾಡಿಬಿಲ್ಡರ್ ಫಾರ್ಮ್ 22A ಭಾಗ II ಅನ್ನು ಒದಗಿಸಬೇಕಾಗುತ್ತದೆ.

(ಜಿ) ಬಾಡಿ ಬಿಲ್ಡರ್ನಲ್ಲಿ ಎಲೆಕ್ಟ್ರಿಕಲ್ ವೈರಿಂಗ್, ಎಲೆಕ್ಟ್ರಿಕಲ್ ಸಲಕರಣೆ, ಬ್ರೇಕ್ ಸಂಪರ್ಕಗಳು, ಬ್ರೇಕ್ ಪೈಪಿಂಗ್, ಫ್ಯೂಯೆಲ್ ಸಂಪರ್ಕ, ಎಕ್ಸಾಸ್ಟ್ ವ್ಯವಸ್ಥೆ ಮತ್ತು ಚಾಸಿ ಭಾಗಗಳನ್ನು ಬಾಡಿ ಫ್ಯಾಬ್ರಿಕೇಶನ್ ಸಂದರ್ಭದಲ್ಲಿ ಬದಲಿಸಬಾರದು.

**ಹಕ್ಕುತ್ಯಾಗ:** ಮಾಲೀಕ/ಬಾಡಿ ತಯಾರಕರು ಅನ್ವಯಿಸುವ CMVR ಅಗತ್ಯಗಳಿಗೆ ಮತ್ತು ಸೂಪರ್ ಕ್ಯಾರಿ ಚಾಸಿ ವೇರಿಯಂಟ್ ಬಾಡಿ ಫ್ಯಾಬ್ರಿಕೇಶನ್ಗೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನ್ವಯಿಸುವ ರಾಷ್ಟ್ರೀಯ ಮೋಟಾರು ವಾಹನ ನಿಯಮಗಳಿಗೆ ಬದ್ಧರಾಗಿರಬೇಕಾಗುತ್ತದೆ. ತಯಾರಕರ ಶಿಫಾರಸುಗಳಿಗೆ ಮತ್ತು ಸಂಬಂಧಿತ ನಿಯಂತ್ರಣಗಳಿಗೆ ವ್ಯತಿರಿಕ್ತವಾಗಿರುವ ಬಾಡಿ/ಅಪ್ಲಿಕೇಶನ್ನ ಫ್ಯಾಬ್ರಿಕೇಶನ್ ಕಾರಣದಿಂದ ಉಂಟಾಗಬಹುದಾದ ಅನ್ವಯಿಸುವ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ವಾಹನ ತಯಾರಕರು ಬಾಧ್ಯಸ್ಥರಲ್ಲ.

**⚠ ಜಾಗ್ರತೆ**

**ನಿಮ್ಮ ಸೂಪರ್ ಕ್ಯಾರಿ ವಾಹನವನ್ನು ಡೆಸ್ಕ್/ ಬಾಡಿ ಫ್ಯಾಬ್ರಿಕೇಶನ್ ಮಾಡದೆ ಇಟ್ಟುಕೊಳ್ಳಬೇಡಿ.**